ಬುಧವಾರ, ಡಿಸೆಂಬರ್ 3, 2025 | ₹ 7.00

prajavani.net prajavani

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮಲ್ಲಕಂಬ
ಹೈದರಾಬಾದ್‌ನಲ್ಲಿ ಮಂಗಳವಾರ ನಡೆದ ಸೇನಾ ಅಗ್ನಿವೀರರ ಕಾರ್ಯಕ್ರಮದಲ್ಲಿ ಕೆಡೆಟ್‌ಗಳು ಮಲ್ಲಕಂಬ ಪ್ರದರ್ಶಿಸಿದರು

ಸೂರ್ಯವಂಶಿ ಶತಕ
ಬಿಹಾರ ತಂಡದ 14 ವರ್ಷದ ವೈಭವ್ ಸೂರ್ಯವಂಶಿ (108 ರನ್;68ಎ) ಅವರು ಸೈಯದ್ ಮುಷ್ತಾಕ್ ಅಲಿ ಕ್ರಿಕೆಟ್ ಟೂರ್ನಿಯಲ್ಲಿ ಶತಕ ದಾಖಲಿಸಿದ ಅತಿ ಕಿರಿಯ ಬ್ಯಾಟರ್ ಎಂಬ ಹಿರಿಮೆಗೆ ಪಾತ್ರವಾದರು

ಪ್ರಿಯಾ ದೋಶಿ | ಮಿಥಿಲೇಶ್ ಗುಪ್ತಾ | ರಾಖಿ ತವಾಲೆ | ಗೀತಾ ದೇವಿ | ಜ್ಯೋತಿ ಕರಣ್ | ರೀಟಾ ಮೈನಿ | ಅರ್ಚನಾ ಪಾಂಡೆ | ಸುಶ್ಮಿತಾ ಘೋಷ್ | ಸುಪ್ರಿತಿ ಚೋಂಗ್ದಾರ್ | ಉಮಾ ಚವನ್ | ಸಂಗೀತಾ ಲಲ್ಲಾ | ಅಫ್ಸರ್ ತಯ್ಯಬ್ ಶೇಖ್ | ಸರೋಜ್ ಝಾ | ಇಂದ್ರಾಣಿ ದಾಸ್‌ಗುಪ್ತಾ | ಸೆಲ್ವಕುಮಾರಿ ಟಿ ಎಲ್ | ದೇವಿ ಪ್ರಸೂನಾ | ಅನಿತಾ ಘಾಟಿಯಾ | ಸಂಧ್ಯಾ ವರದ್ | ಶಿಪ್ರಾ ಭಾರದ್ವಜ್ | ದೀಪಾಲಿ ಜೈನ್ | ಸುನಿತಾ ಸಿಂಘಲ್ | ಸೀಮಾ ಪ್ರಸಾದ್ | ರಂಜೀತಾ ಅಗರ್‌ವಾಲ್ | ಶಾರದಾ ಗಿರಿಜಾರಾಮ್ ಘಂಘಾವ್ | ನಿರ್ಮಲಾ ಶೆಟ್ಟಿ | ವಲ್ಲಿ | ಜಯಂತಿ ಕೃಷ್ಣ ರಾವ್ | ಹೇಮಾ ಮಾಲಿನಿ ತಯಾಲ್ | ಕವಿತಾ | ಜಯಸುಧಾ ಮನ್ನಾನಿ | ರೇವತಿ | ಪುಶಾ ಮಹೇಂದ್ರ ಬಾಗುಲ್ / ಉಷಾ ಮಹೇಂದ್ರ ಬಾಗುಲ್ | ಜಸಿಂಥಾ ಡಿ ಸೋಜಾ | ಅಲ್ಕಾ ಮಾಥುರ್ | ದೇವಯಂತಿ ದೇವಿ | ನಿಪಾ ಜಗೇಶ್ ಶಾಹ | ಕುಮಾರಿ ರೀನಾ ಗುಪ್ತಾ | ಹಾವನೂರ್ ಆಶಾ ಲತಾ | ಕವಿತಾ ಪನ್ವಾರ್ | ರಂಜೂ | ಮಾಲಾ ಠಾಕೂರ್ | ರೇಖಾ ಎಮ್ ವಿ | ಜನಪತಿ ಶಾಂತಿ | ಸಾಯಿರಾ ಇಕ್ಬಾಲ್ | ರೇಖಾ ಗೋಯಲ್ | ಗುರ್ಮೀತ್ ಕೌರ್ | ಮಂಜುಳಾ ಡಿ ಎಮ್ | ಸುನಿತಾ | ರಜನಿ | ಮಂಜುಳಾ ಪತಿದಾರ್ | ಸುನಿತಾ ಸಿಂಗ್ | ದೇವಿ ಪ್ರಸೂನಾ | ಶ್ರೀದೇವಿ ಚೆನ್ನುಪಾಟಿ | ಲಲಿತಾ ಕುಮಾರಿ | ಬಬಿತಾ ಕುಮಾರಿ | ಚಂಚಲ್ ಸೇನ್ | ರೇಖಾ ಚೌಹಾಣ್ | ಕವಿತಾ ಶುಕ್ಲಾ ದ್ವಿಕ್ಷಿತ್ | ಶುಭಾ ಪ್ರದಾ | ಗೀತಾ ಗುಪ್ತಾ | ಶಾಂತಿದೇವಿ | ಚಿಂತಮ್ ಸುಜಾತಾ | ರೇವತಿ ಕೇಸರಿ | ಸೀಮಾ ಝಾ | ನೀರ್ಜಾ ನಿಗಾನಿಯಾ | ವಂದನಾ ಸಿಂಗ್ | ರಾಜಲಕ್ಷ್ಮೀ ನಾಯ್ಕ್ | ಉಷಾ ಕುಮಾರಿ | ಭಾರತಿ ಜೋಶಿ | ಸಂತೋಷ್ ಮಾಳಿ | ವಿನಿತಾ ಜೈನ್ | ಜಯಲಕ್ಷ್ಮೀ ಕೆ ಎಸ್ | ಮಾಲಿನಿ ರಮಣ್ | ಶೈಲಾ ಶೆಲಾರ್ | ಪ್ರೇಮಲತಾ ಪಸ್ಸಿ | ಪ್ರಿಯಂಕಾ ಸಿಂಗ್ | ಸಮೀನಾ ಬಾನು | ವೈಶಾಲಿ ಭಂಡಾಳ್ಕರ್ | ನಲ್ಲೂರಿ ಸುಧಾ ರಾಣಿ | ವಿಶ್ವನಾಥುನಿ ರಾಜಾಮಣಿ | ಚಂದ್ರಮ್ಮಾ | ಬಿಭಾ ಸಿಂಗ್ | ಸೋಮಾ ಸಿನ್ಹಾ | ವಸಂತಾ ಕುಮಾರಿ | ನೇಹಾ ಪಾಂಡೆ | ರಾಜಬಾಲಾ | ಪರಮ್‌ಜೀತ್ ಕೌರ್ | ಸುಮನ್ | ಕ್ಲಾರಾ ಲಿಲ್ಲಿ ಪುಷ್ಪಮ್ | ಪ್ರತಿಭಾ ಪ್ರಹ್ಲಾದ್ ಪಾಟೀಲ್ | ನಿಲಿಮಾ ಜೈನ್ | ಸೀಮಾ ಶ್ರೀವಾಸ್ತವ | ರೀನಾ ಗುಪ್ತಾ | ಉಷಾ ಟಿ | ಸಿಮನ್ ಪ್ರೇಮಣಿ | ಲಲಿತಾ ಸಿಂಗ್ | ಶುಭಲಕ್ಷ್ಮಿ | ಸಂಗೀತಾ ಅಗರ್‌ವಾಲ್ | ಲಕ್ಷ್ಮೀ ಮುತ್ತುಸ್ವಾಮಿ | ಕಾಮಿನಿ ಯಾದವ್ | ವಿಜಯಲಕ್ಷ್ಮಿ | ಅಂಜು ದೇವಿ | ರೀನಾ ಶ್ರೀವಾಸ್ತವ | ಶಾಲಿನಿ ... ಲ ಶ್ರೀದೇವಿ | ರೇಖಾ ಬರ್ನ್‌ವಾಲ್ | ಮಂಜು ಭಾಟಿ | ರಂಜನಾ ಗುಪ್ತಾ | ಸಾರಮ್ಮಾ ಚೆರಿಯನ್ | ರೋಲಿ ಅಗರ್‌ವಾಲ್ | ಅಲ್ಕಾ ಬನ್ಸಾಲ್ | ಸ್ವಾಯಿ ಅಹಿ... ...ಟ್ | ಉಷಾ ರವೀಂದ್ರನ್ | ವೃಶು | ಶಾಲನ್ ಗಾಯಕ್ವಾಡ್ | ಮಂಗಲ್ ಕೈಲಾಶ್ ಬಂಗಾರ್ | ಸರಸ್ವತಿ ಪಾಲ್ | ಸುಕಾಂತಿ ಪಟ್ನಾಯಕ್ | ಗೀತಾ ಮೆಹ್ತಾ | ... | ಕೃಷ್ಣಾ ಶರ್ಮಾ | ವಂದನಾ | ಲೀನಾ ಪಟೇಲ್ | ಕವಿತಾ ಖನ್ನಾ | ಜ್ವಲಾ ಮನೋಜ್ ಕಾಟೆ | ಶ್ಯಾಮಾ ಸಿಂಗ್ | ಹೇಮಾ ಓಸ್ವಾಲ್ | ಆರ್ಶಿಯಾ ... ...ಮಾ ಪಾತ್ರ | ಪ್ರಜ್ಞಾ ಪ್ರಕಾಶ್ ಶೆಣೈ | ಕಾರಣ್ ಖಾಂಡೇಲ್ವಾಲ್ | ರೇಣು ಸಿನ್ಹಾ | ಚಿನ್ಮಯಿ ಮೊಹಾಂತಿ | ರೇಖಾ ಪಾಟೀಲ್ | ರೇಖಾ ಥೋಪ್ರಾ | ಸುನಿತಾ | ... | ಸಾಕ್ಷಿ ದತ್ವಾನಿ | ಸ್ಮಿತಾ ಕ್ಷೀರಸಾಗರ್ | ಸುರ್ಸತಿ ದೇವಿ | ತೇಜಶ್ರೀ | ನಿರ್ಮಲಾ | ಸುಮನ್ ಆರ್ಯಾದ್ | ಮಯೂರಾ ಜಗ್ತಾಪ್ | ರೇಖಾ ಸಿಂಗ್ | ... ...ಶರ್ಮಾ | ಜಯಶ್ರೀ ರಾಜೇಂದ್ರ ಚೌವಾಣ್ | ಸುನಿತಾ ಚಂದ್ರವಂಶಿ | ನರಿಂದರ್ ಕೌರ್ | ಪುಷ್ಪಲತಾ ತಾಂಬೆ | ಮೀನಾ | ವಿಜಯ ಲಕ್ಷ್ಮೀ | ... ...ಮ್ ಪಾಟೀಲ್ | ಸಂಧ್ಯಾ ಟಗ್ವಾಲೆ | ಸಂಧ್ಯಾ ರೆಪಾಕಾ | ವಿದ್ಯಾ | ಚಂಪಿ ಕೇಶ್ರಿ | ವಿಮಲಾ ಪಾಂಡೆ | ಊರ್ಮಿಳಾ | ಕಮಲೇಶ್ ಕುಮಾರಿ | ರೇಖಾ ಅಗರ್... ...ಶ್ರೀ ಶರದ್ ಶಿರೋಳ್ಕರ್ | ರೇಖಾ ಪಾಂಡುರಂಗ ಬೊರುಡೆ | ಸಬಿಹಾ ಮಮ್ತಾಜ್ | ರೀನಾ | ನಿರ್ಮಲಾ ಪಾಟೀಲ್ | ವೀರ್ ಬಾಲಾ | ಖುಷ್ಬೂ ಪ್ರಕಾಶ್ ಗನ್ವಾನಿ ... ...ಲ್ | ನೀತಾ ಕರ್ಮಾಕರ್ | ಮೀರಾ ದುರ್ಯೋಧನ್ ಮೇಶ್ರಾಮ್ | ಪ್ರೇಮಾ | ಸೇಜಲ್ | ವಂದನಾ ಜೈನ್ | ಸುನಿತಾ ಲಖಾನಿ | ರೀಟಾ ದೇವಿ | ಕು... ...ಲ್ | ಸುಮನ್ ಮುರಲೀಧರ್ ಪವಾರ್ | ಅಂಜು ಸಂಕ್ಷಿ | ಗೀತಾ ಕೋಟಿಯಾನ್ | ಆಶಾ ಪಟೇಲ್ | ಪೂಜಾ ಕೇಸ್ವಾನಿ | ಗಂಗಾ | ಶಕುಂ... ...ದೈತನ್ಕರ್ | ಶಾನ್ | ಭಾವನಾ ಕಾಂಟ್ರಾಕ್ಟರ್ | ಸುರಸತಿ ದೇವಿ | ಪಲ್ಲವಿ ಸೀತಾರಾಮ್ ಕರ್ಮಾಕರ್ | ಕುಸುಮ್ ಸಿಂಗ್ | ಸುನಿತಾ ತುಕಾರಾಮ್ ಪಟೋ... ...ಕೇತನ್ ಶಾಹ | ಶ್ರೀದೇವಿ | ಸರೋಜ್ ಜೈಸ್ವಾಲ್ | ಬಿರ್ಮಾ ದೇವಿ | ಉಷಾ ಚಂದ್ರಕಾಂತ್ ಲಾಲ್ಗೆ | ಜಯಶ್ರೀ ಪಾಟೀಲ್ | ಮಾಲತಿ ಶರ್ಮಾ | ಸುಶೀಲಾ ಮು... ...ರಾಜು ಜೈನ್ | ಸುಮನ್ ದೇವಿ | ಸ್ವಾತಿ ಆಶೀಶ್ ಅಹಿವಲೆ | ಶಶಿ ತಂಗುರಿಯಾ | ಬೀನಾ ರಾಜೇಂದ್ರ ಠಾಕುರ್ | ಗೌಸಿಯಾ ಬೇಗಮ್ ಮೊ... ...ನ್ | ಅನ್ನಪೂರ್ಣಾ | ಕಲ್ಪನಾ ದಿಲೀಪ್ ಪಾಟೀಲ್ | ಅಂಜನಾ ಸದಾಶಿವ್ ಸುತಾರ್ | ಮಾಧುರಿ ಸಂಜಯ್ ಮಾಂಡೇಗಾಂವ್‌ಕರ್ | ವೈಶಾಲಿ ಕಿರ್ವೆ | ... ...ನಾಥ್ ಲಾಯಿಕ್ | ರಾಜಶ್ರೀ ನಾರ್ಖಡೆ | ಸಲೀನಾ | ಶಶಿ ತ್ಯಾಗಿ | ಮನೋರಮಾ | ಲೊರೇನ್ ವಾರ್ಝ್ | ವಂದನಾ ಸಾಹು | ಶೋಭಾ ಪ್ರಭಾಕರ್ ಪ... ...ಭೋವಾಲ್ | ಚೆಲ್ಲಮ್ಮಲ್ | ಲಿಲಿ | ಶಶಿಕಲಾ ಹಿರೇಮಠ | ಯಮುನಾ ಸಿಂಗ್ ಐ ಎಸ್ | ಪದ್ಮಾ ಕೆ | ಶಾಹಿನ್ ತಾಜ್ | ಅಂಜುಮ್ ಸೈಯದ್ | ಶ... ...ಸಂಗೀತಾ ಮೊಹಂತಿ | ಗುರ್ಮೀತ್ ಕೌರ್ ಬಿಂದ್ರಾ | ಶಾಮೀಮ್ | ಸುವಾಸಿನಿ | ರಾಜಲಕ್ಷ್ಮಿ ಗುಪ್ತಾ | ಕುಂಜನ್ ದುಬೆ | ಕಮಲಾ | ಲಲಿತಾ | ಗುರ್ಪ್ರೀತ್ ... ...ಹೀದಾ | ಹರ್ಷಾ ಧಿರೇನ್ ಶಾಹ | ಸ್ನೇಹಲತಾ ಲಿಮ್ಕರ್ | ಶಿಲ್ಪಿ ಚಕ್ರವರ್ತಿ | ಕಂಚನ್ ಚೇರಾ | ಸಾಧನಾ ಪಾಂಡೆ | ಬುಶ್ರಾ ಬೇಗಮ್ | ಸುನಿತಾ ಸಿಂಗ್ | ನಹೀದಾ ... ...ಗೀತಾ ವಿಧ್ಲಾನಿ | ಸ್ವಾತಿ ಸೂಪರ್ ಸೂದ್ | ಸಂಗೀತಾ ಜೈನ್ | ಇಂದಿರಾ ಬೊದ್ದೆಪಳ್ಳಿ | ಯನೆಟ್ ಫೆರ್ನಾಂಡಿಸ್ | ಸಿಂಧು ಗಣಪತ್ ಕದಮ್ | ಪ್ರೀತಿ ಸಲೂಜಾ | ಕೌಸೇರ್ ಖಾನ್ | ವಿಜಯಮಾಲಾ | ವಿಜಯ ಲಕ್ಷ್ಮಿ | ಎಸ್. ತನ್ವೀರ್ ಬಾನು | ಮಂಜೂ ಕುಮಾರಿ | ನಿಶಾ ಕದಮ್ | ರೇಖಾ ಮೋರ್ಲೆ | ಜ್ಯೋತಿ ಸಂತಪುರ್ಕರ್ | ಅಲ್ಕಾ ಜಲಿಂದರ್ ಹರಾಲ್ | ಬಿಂತು ಎ ನಾಯರ್ | ಕವಿತಾ ಕೋಲೆ | ಕಲ್ಪನಾ ಮೋರೆ | ದಮಯಂತಿ ಅಪದಂಡ ಮೇದಪ್ಪ | ಶುಷ್ಮಾ ದೇವಿ ಬಲ್ಬೀರ್ ಸಿಂಗ್ ಚೌಹಾಣ್ | ನಿರ್ಮಲಾ ದೇವಿ | ಉಮಾ ದೇವಿ | ಲಕ್ಷ್ಮಿ ವಿ | ಎಮ್ ರಮಾ ದೇವಿ | ಕೀರ್ತಿ | ಪ್ರಿಯಾ ಬರ್ದಾನ್ | ಜುಬೇದಾ ನಾಜ್ | ರಾಧಾ ಟಿ | ಸಂಗೀತಾ ಯಾದವ್ | ನಜ್ಮಾ ಖಾತೂನ್ | ತಾಯಕ್ಕಾ ಖೋತ್ | ಸುಕನ್ಯಾ ಶೆಟ್ಟಿ | ಕಲ್ಯಾಣಿ ಘೋಷ್ | ಆಲೊ ಚಕ್ರಬೋರ್ತಿ | ಮನಿಶಾ ಬನ್ಸಾಲ್ | ಕವಿತಾ | ಸುನಿತಾ ಪಾರೀಕ್ | ಆಶಾ | ಮಮ್ತಾಜ್ | ಕವಿತಾ | ಗಂಗಾ ಕೃಷ್ಣ ಚಾರಿ | ಸಂಗೀತಾ | ಸುಶೀಲಾ ಭೋಜರಾಜ್ | ರೇಖಾ ದೇವಿ | ಹರ್ಮತಿ ಚೌಧರಿ | ಮೊಬೀನಾ ಸೈಫ್ | ಜೀಡಿಗುಂಟ ಉಷಾ ರಾಣಿ | ಅರ್ಚನಾ | ತಾಯಮ್ಮ | ತುಳಸಿ ಬಾಯಿ ಎಮ್ | ಪ್ರೇಮಾ ಪಾಂಡೆ | ರಾಜೇಶ್ವರಿ ಮಿಶ್ರಾ | ಪಿಯಾಲಿ ದಾಸ್ | ಸಂಗೀತಾ | ಶಾರದಾ ವೊಡೆಯರ್ | ದರ್ಶನಾ ರಾಜೇಂದ್ರ ಜೋಶಿ | ಕಿರಣ್ ದೇವಿ | ಅಂಜನಾ ಗಿರಿ | ಸಜಿತಾ ಭಾಸ್ಕರನ್ | ಪದ್ಮಾ ಶಂಕರರಾಜ | ಲತಾ ಶರ್ಮಾ | ಮಂಜುಶ್ರೀ ಘೋಷ್ | ಸಂಮೃದ್ಧಿ ಮಿಶ್ರಾ | ಶೋಭಾ ಆರ್ | ವೀಣಾ ಎಸ್ ಶಾನುಭಾಗ್ | ಹರ್ಜಿಂದರ್ ಕೌರ್ ಗಿಲ್ | ವಂದನಾ ಕಾಳೆ | ಸುಕ್ಲಾ | ಝುಮಾ ಚಕ್ರಬೋರ್ತಿ | ಸ್ವಾತಿ ಟಿ |

ನಮ್ಮ ಅಮ್ಮಂದಿರ ಹೆಸರು ಈ ಆ್ಯಡ್‌ನಲ್ಲಿ ಯಾಕಿದೆ ?

ಯಾಕೆಂದ್ರೆ ನಾವು 'ತಾಯಿಯ ಆಣೆ' ಹಾಕಿ ಹೇಳ್ತೀವಿ, **ಅತ್ಯಂತ ಕಡಿಮೆ ಬೆಲೆಯ*** ಹೆಲ್ತ್ ಇನ್ಶುರೆನ್ಸ್ ಪ್ರೀಮಿಯಂ ನಮ್ಮಲ್ಲಿ ಮಾತ್ರ ಸಿಗುತ್ತೆ.

ನಮ್ಮ ಪಾಲಿಗೆ 'ತಾಯಿ ಆಣೆ' ಅಂದ್ರೆ ಫೈನಲ್. ಅಮ್ಮನ ಹೆಸರು ಹೇಳಿ ಸುಳ್ಳು ಹೇಳೋ ಧೈರ್ಯ ನಮಗಿಲ್ಲ. ಯಾಕಂದ್ರೆ ಅಮ್ಮ ನಮ್ಮನ್ನು ಸುಮ್ಮನೆ ಬಿಡಲ್ಲ! ಅದಕ್ಕೆ ನಾವು ಮಾರ್ಕೆಟ್‌ನಲ್ಲಿರೋ ಎಲ್ಲಾ ಪ್ಲಾನ್‌ಗಳ ಜೊತೆ ನಮ್ಮ ಬೆಲೆ ಹೋಲಿಸ್ತಾನೇ ಇರ್ತೀವಿ. ನೀವು ಜಾಸ್ತಿ ಪ್ರೀಮಿಯಂ ಕಟ್ಟೋದು ನಮಗೆ ಇಷ್ಟ ಇಲ್ಲ. **ಒಂದು ವೇಳೆ ನಮಗಿಂತ ಕಡಿಮೆ ಬೆಲೆಗೆ ಬೇರೆ ಕಡೆ ಇನ್ಶುರೆನ್ಸ್ ಸಿಕ್ಕರೆ ? ಆ ವ್ಯತ್ಯಾಸದ ಮೊತ್ತವನ್ನು ನಾವೇ ಕೊಡ್ತೀವಿ. ಇದು ತಾಯಿ ಆಣೆ !**

11 ಮಂಚೂಣಿಯ ಇನ್ಶುರರ್ಸ್

ಇನ್ಶುರೆನ್ಸ್‌ಗಾಗಿ 1 ಕೋಟಿ+ ಬಳಕೆದಾರರ ವಿಶ್ವಾಸಪಾತ್ರ

ಕ್ಲೇಮ್‌ಗಳ ಸಂದರ್ಭದಲ್ಲಿ 24X7 ಬೆಂಬಲ

20-ನಿಮಿಷದಲ್ಲಿ ಕಾಲ್‌ಬ್ಯಾಕ್ ಸಹಾಯ^

LOWEST PRICE PROMISE

Health Insurance on PhonePe

niva Bupa Health Insurance | STAR Health Insurance | ADITYA BIRLA CAPITAL HEALTH INSURANCE | care HEALTH INSURANCE | HDFC ERGO | RELIANCE GENERAL INSURANCE | ICICI Lombard | digit INSURANCE | THE NEW INDIA ASSURANCE CO. LTD | United India | BAJAJ GENERAL

ನಿಯಮ ಹಾಗೂ ಷರತ್ತುಗಳು ಅನ್ವಯ – ಫೋನ್‌ಪೇ ಇನ್ಶುರೆನ್ಸ್ ಬ್ರೋಕಿಂಗ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ (ಫೋನ್‌ಪೇ ಇನ್ಶುರೆನ್ಸ್) IRDAI ರಿಜಿ. 766 ಮತ್ತು ಬ್ರೋಕರ್ ರಿಜಿಸ್ಟ್ರೇಶನ್ ಕೋಡ್ IRDA/DB 822/20 ಡೈರೆಕ್ಟ್ ಬ್ರೋಕರ್ – (ಲೈಫ್ ಹಾಗೂ ಜನರಲ್) 10/8/2027 ವರೆಗೆ ಮಾನ್ಯ. ರಿಜಿ. ಆಫೀಸು – ಆಫೀಸ್–2, ಮಹಡಿ 4,5,6, 7, ವಿಂಗ್ ಎ, ಬ್ಲಾಕ್ ಎ, ಸಲಾರ್‌ಪುರಿಯಾ ಸಾಫ್ಟ್‌ಝೋನ್, ಸರ್ವಿಸ್ ರೋಡ್, ಗ್ರೀನ್ ಗ್ಲೆನ್ ಲೇಔಟ್ , ಬೆಳ್ಳಂದೂರ್, ಬೆಂಗಳೂರು, ಕರ್ನಾಟಕ– KA, ಪಿನ್-560103 - CIN: U66000KA2020PTC132814. ಫೋನ್‌ಪೇ ಇನ್ಶುರೆನ್ಸ್, ಇದು ಥರ್ಡ್ ಪಾರ್ಟಿ ಇನ್ಶುರೆನ್ಸ್ ಪ್ರಾಡಕ್ಟ್‌ಗಳ ಬ್ರೋಕರ್ ಆಗಿದೆ ಮತ್ತು ವಿಮೆ ನೀಡುವವರ ರೂಪದಲ್ಲಿ ಅಪಾಯವನ್ನು ಅಂಡರ್‌ರೈಟ್ ಮಾಡುವುದಿಲ್ಲ ಅಥವಾ ಕಾರ್ಯವೆಸಗುತ್ತಿಲ್ಲ. ಮಾರಾಟವನ್ನು ಪೂರ್ತಿಗೊಳಿಸುವ ಮೊದಲು ದಯವಿಟ್ಟು ಪ್ರಾಡಕ್ಟ್ ಸೇಲ್ಸ್ ಬ್ರೋಶರನ್ನು ಎಚ್ಚರಿಕೆಯಿಂದ ಓದಿಕೊಳ್ಳಿರಿ. *ಅತಿ ಕಡಿಮೆ ಬೆಲೆಯ ವಾಗ್ದಾನವು ಅನ್ವಯಿಸುವ ನಿಯಮ ಹಾಗೂ ಷರತ್ತುಗಳಿಗೆ ಬದ್ಧವಾಗಿರುತ್ತದೆ. ಗರಿಷ್ಠ ಮೊಬಲಗು ಮತ್ತು ಇತರ ವಿವರಗಳನ್ನು ಭಾಗವಹಿಸುವ ಮೊದಲೇ ದಯವಿಟ್ಟು ನಿಯಮ ಹಾಗೂ ಷರತ್ತುಗಳನ್ನು ಎಚ್ಚರಿಕೆಯಿಂದ ಓದಿ ಅರಿತುಕೊಳ್ಳಿರಿ. ^ಕೋರಿಕೆಯನ್ನು ಸಲ್ಲಿಸಿದ ನಂತರ ಗ್ರಾಹಕರೊಂದಿಗೆ ಮೊದಲ ಬಾರಿಯ ಸಂಪರ್ಕವನ್ನು ಸೂಚಿಸುತ್ತದೆ. ಆದರೆ ನೆಟ್‌ವರ್ಕ್ ಔಟೇಜ್‌ಗಳು, ಡೌನ್‌ಟೈಮ್ ಅಥವಾ ಇನ್ಯಾವುದೇ ಕನೆಕ್ಟಿವ್ / ಟೆಕ್ನಿಕಲ್ ಸಮಸ್ಯೆ ಇಲ್ಲದಿರುವುದನ್ನು ಅವಲಂಬಿಸಿ. Ad/code PM/2155.

‘ಇಂದಲ್ಲ, ಮೊನ್ನೆಯಲ್ಲ ಎಂದೆಂದೂ ಒಗ್ಗಟ್ಟು’

ಮುಖ್ಯಮಂತ್ರಿ ಜೊತೆಯಲ್ಲಿ ಉಪಾಹಾರ ಸಭೆ ನಡೆಸಿದ ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಒಗ್ಗಟ್ಟಿನಿಂದ ಇದ್ದೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದರೆ, ‘ನಮ್ಮದು ಒಂದೇ ಧ್ವನಿ. ಯಾವುದೇ ಗೊಂದಲ ಇಲ್ಲ. ಇಬ್ಬರೂ ಜೊತೆಯಾಗಿ ಸರ್ಕಾರವನ್ನು ಮುನ್ನಡೆಸುತ್ತೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದನಿಗೂಡಿಸಿದರು.

ಮುಖ್ಯಮಂತ್ರಿ ಜೊತೆಯಲ್ಲಿ ಮಂಗಳವಾರ ಉಪಾಹಾರ ಸಭೆ ನಡೆಸಿದ ನಂತರ ಅವರು ಮಾತನಾಡಿದರು.

ಹೀಗೆ ಹೇಳುವ ಮೂಲಕ, ‘ನಾಯಕತ್ವ ವಿಚಾರದಲ್ಲಿ ನಮ್ಮ ನಡುವೆ ಯಾವುದೇ ಒಡಕು ಇಲ್ಲ. ರಾಹುಲ್ ಗಾಂಧಿ ಏನು ತೀರ್ಮಾನ ಮಾಡುತ್ತಾರೊ ಅದರಂತೆ, ಹೈಕಮಾಂಡ್ ಹೇಳಿದಂತೆ ಇಬ್ಬರೂ ನಡೆದುಕೊಳ್ಳುತ್ತೇವೆ. ಸಮಯ ಸಿಕ್ಕಿದರೆ, ಹೈಕಮಾಂಡ್ ಅವಕಾಶ ನೀಡಿದರೆ ಹೋಗಿ ಭೇಟಿ ಮಾಡುತ್ತೇವೆ’ ಎಂದು ಹೇಳುವ ಮೂಲಕ ಮತ್ತೊಮ್ಮೆ ಒಗ್ಗಟ್ಟು ತೋರಿಸಿದರು.

‘ನಾನು ಮತ್ತು ಉಪ ಮುಖ್ಯಮಂತ್ರಿ ಸಹೋದರರಿದ್ದಂತೆ. ಇವತ್ತು ಒಗ್ಗಟ್ಟಾಗಿ ಇರುವುದಲ್ಲ, ಮೊನ್ನೆಯೂ ಒಗ್ಗಟ್ಟಾಗಿದ್ದಲ್ಲ. ನಾವು ಯಾವಾಗಲೂ ಒಗ್ಗಟ್ಟಾಗಿದ್ದೇವೆ. ಒಂದೇ ಪಕ್ಷದಲ್ಲಿದ್ದು, ಒಂದೇ ಸಿದ್ಧಾಂತ ನಂಬಿದ್ದೇವೆ. 2028ರ ವಿಧಾನಸಭಾ ಚುನಾವಣೆಯಲ್ಲಿಯೂ ಒಟ್ಟಿಗೆ ಕೆಲಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತರುತ್ತೇವೆ’ ಎಂದು ಹೇಳಿದರು.

ಅಧಿಕಾರ ಹಸ್ತಾಂತರದ ವಿಷಯದಲ್ಲಿ ಎದ್ದಿದ್ದ ಗೊಂದಲ ನಿವಾರಿಸಿಕೊಳ್ಳುವಂತೆ ಉಭಯ ನಾಯಕರಿಗೆ ಆ ಪಕ್ಷದ ಹೈಕಮಾಂಡ್ ಸೂಚನೆ ನೀಡಿತ್ತು.

ಸಿದ್ದರಾಮಯ್ಯ ಅವರ ನಿವಾಸದಲ್ಲಿ ನ. 29ರಂದು ನಡೆದ ಉಪಾಹಾರ ಸಭೆಯ ಮುಂದುವರಿದ ಭಾಗವಾಗಿ ಡಿ.ಕೆ. ಶಿವಕುಮಾರ್ ಅವರ ಸದಾಶಿವ ನಗರದಲ್ಲಿರುವ ಮನೆಯಲ್ಲಿ ಸಿದ್ದರಾಮಯ್ಯ ಮಂಗಳವಾರ ಬೆಳಿಗ್ಗೆ ಉಪಾಹಾರ ಸೇವಿಸಿದರು. ಒಂದು ಗಂಟೆಗೂ ಹೆಚ್ಚು ತಾಸು ಉಭಯ ನಾಯಕರು ವಿಚಾರವಿನಿಮಯ ನಡೆಸಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯಮಂತ್ರಿ, ‘ಕಾಂಗ್ರೆಸ್‌ನ ಯಾವ ಶಾಸಕರಲ್ಲಿಯೂ ಭೇದವಿಲ್ಲ. ಶಾಸಕರು ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ ಅಷ್ಟೇ. ಕಾಂಗ್ರೆಸ್‌ನ ಎಲ್ಲ ಶಾಸಕರೂ ಅಧಿವೇಶನದಲ್ಲಿ ಭಾಗವಹಿಸಿ, ವಿರೋಧ ಪಕ್ಷಗಳನ್ನು ಒಗ್ಗಟ್ಟಿನಿಂದ ಎದುರಿಸಲಿದ್ದಾರೆ’ ಎಂದು ಸಿದ್ದರಾಮಯ್ಯ ತಿಳಿಸಿದರು.

ಸಚಿವ ಸಂಪುಟ ಪುನರ್‌ರಚನೆ ಬಗ್ಗೆ ಕೇಳಿದ ಪ್ರಶ್ನೆಗೆ, ‘ಪಕ್ಷದ ವರಿಷ್ಠರು ತೀರ್ಮಾನಿಸಬೇಕಾಗಿದೆ’ ಎಂದರು. ‘ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುವುದು ಯಾವಾಗ’ ಎಂದು ಕೇಳಿದಾಗ, ‘ಹೈಕಮಾಂಡ್ ತೀರ್ಮಾನಿಸಿದಾಗ’ ಎಂದರು.

‘ಬೆಳಗಾವಿ ಅಧಿವೇಶನ ಇದೇ 8ರಂದು ಆರಂಭವಾಗಲಿದೆ. ವಿಪಕ್ಷಗಳು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವ ಮಾಹಿತಿ ಗೊತ್ತಾಗಿದೆ. ವಿಪಕ್ಷಗಳನ್ನು ಎದುರಿಸುವ ರಣನೀತಿಗಳ ಬಗ್ಗೆ ನಾವು ಚರ್ಚಿಸಿದ್ದೇವೆ’ ಎಂದ ಅವರು, ‘ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ನಾನು ಬುಧವಾರ ಮಂಗಳೂರಿನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಜೊತೆಯಲ್ಲಿರುತ್ತೇವೆ’ ಎಂದರು.

‘ನಮ್ಮದು ಒಂದೇ ಧ್ವನಿ’

‘ನಮ್ಮದು ಒಂದೇ ಧ್ವನಿ. ಒಂದೇ ಆಚಾರ, ವಿಚಾರ. ನಾವಿಬ್ಬರೂ ಪಕ್ಷ, ಅಧಿವೇಶನ ವಿಷಯವನ್ನು ಚರ್ಚೆ ಮಾಡಿದ್ದೇವೆ. ಅವರು (ಬಿಜೆಪಿ, ಜೆಡಿಎಸ್) ಅವಿಶ್ವಾಸ ನಿರ್ಣಯವಲ್ಲ, ಏನೇ ತಂದರೂ ನಾವು ಅದನ್ನು ಸಮರ್ಥವಾಗಿ ಎದುರಿಸುತ್ತೇವೆ’ ಎಂದು ಶಿವಕುಮಾರ್ ಹೇಳಿದರು.

‘ಅಧಿವೇಶನದಲ್ಲಿ ವಿರೋಧ ಪಕ್ಷಗಳು ಎತ್ತಬಹುದಾದ ವಿಚಾರಗಳನ್ನು ಮುಖ್ಯಮಂತ್ರಿ ಮತ್ತು ನಾನು ಒಗ್ಗಟ್ಟಿನಿಂದ ಎದುರಿಸಲಿದ್ದೇವೆ’ ಎಂದರು.

‘ಉಪಾಹಾರ ಕೂಟಕ್ಕೆ ಬರುವಂತೆ ಮುಖ್ಯಮಂತ್ರಿಯನ್ನು ನಾನು ಕರೆದಿದ್ದೆ. ಅವರು, ನೀವೇ ಮೊದಲು ನಮ್ಮ ಮನೆಗೆ ಬನ್ನಿ, ಆಮೇಲೆ ನಾನು ಬರುತ್ತೇನೆ ಎಂದಿದ್ದರು. ಅದರಂತೆ ಅವರ ಮನೆಗೆ ಹೋಗಿದ್ದೆ. ಇಂದು ನಮ್ಮ ಮನೆಗೆ ಆಹ್ವಾನಿಸಿದ್ದೆ. ನಾವಿಬ್ಬರೂ ಬಹಳ ಸಂತೋಷದಿಂದ ಉಪಾಹಾರ ಸೇವಿಸಿದ್ದೇವೆ. ಈ ವೇಳೆ ರಾಜಕೀಯವಾಗಿಯೂ ಚರ್ಚೆ ಮಾಡಿದ್ದೇವೆ. ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಿಂದ ನಡೆಯಲಿರುವ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಕುರಿತು ಚರ್ಚೆ ಮಾಡಿದ್ದೇವೆ’ ಎಂದರು.

ಇದೇ 8ಕ್ಕೆ ದೆಹಲಿಯಲ್ಲಿ ಸಂಸದರ ಸಭೆ

‘ವಿಧಾನ ಮಂಡಲ ಅಧಿವೇಶನದ ಮೊದಲ ದಿನ (ಡಿ. 8) ಸಂತಾಪ ಸೂಚನೆಯ ಬಳಿಕ ಕಲಾಪವು ಮಾರನೆ ದಿನಕ್ಕೆ ಮುಂದೂಡಿಕೆಯಾಗಬಹುದು. ಹೀಗಾಗಿ, ಅದೇ ದಿನ ರಾಜ್ಯದ ಸಂಸದರ ಸಭೆಯನ್ನು ದೆಹಲಿಯಲ್ಲಿ ಕರೆಯಲು ತೀರ್ಮಾನಿಸಿದ್ದೇವೆ’ ಎಂದು ಸಿದ್ದರಾಮಯ್ಯ ತಿಳಿಸಿದರು.

‘ದೆಹಲಿಗೆ ಹೋಗಿ ಸರ್ವಪಕ್ಷ ಸಂಸದರ ಸಭೆ ನಡೆಸುವ ಬಗ್ಗೆ ನಾವಿಬ್ಬರೂ ಚರ್ಚಿಸಿದ್ದೇವೆ. 8ರಂದು ದೆಹಲಿಗೆ ಹೋಗಿ, ಅಂದೇ ವಾಪಸ್ ಬರಲಿದ್ದೇವೆ. ಮೇಕೆದಾಟು, ಮೆಕ್ಕೆಜೋಳ ದರ, ಕೇಂದ್ರ ಸರ್ಕಾರದಿಂದ ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ನೀರಾವರಿ ಯೋಜನೆಗಳಿಗೆ ಅನುದಾನ ಬಾರದಿರುವ ವಿಚಾರವಾಗಿ ಸಂಸದರ ಜತೆ ಚರ್ಚಿಸುತ್ತೇವೆ. ವಿಧಾನಸಭೆ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರನ್ನು ಮತ್ತು ಜೆಡಿಎಸ್ ನಾಯಕರನ್ನು ಸಭೆಗೆ ಕರೆದುಕೊಂಡು ಹೋಗಲು ತೀರ್ಮಾನಿಸಿದ್ದೇವೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿ 2 ನಿಮಿಷ

‘ಬಸವ ತಾಲಿಬಾನಿಗಳು’ ಎಂದು ಟೀಕಿಸಿದ ಕನೇರಿ ಸ್ವಾಮೀಜಿ

ರಾಯಬಾಗ (ಬೆಳಗಾವಿ ಜಿಲ್ಲೆ): ‘ಹನುಮ ಮಾಲಾಧಾರಣೆ ಮಾಡಿ ಯುವಜನರನ್ನು ದುಶ್ಚಟಗಳಿಂದ ದೂರ ಇರುವಂತೆ ಮಾಡುತ್ತೇವೆ. ಈ ಸಂಪ್ರದಾಯ ಸಹಿಸದ ಕೆಲ ಬಸವ ತಾಲಿಬಾನಿಗಳು, ಕಮ್ಯುನಿಸ್ಟರು ಟೀಕಿಸುತ್ತಾರೆ’ ಎಂದು ಮಹಾರಾಷ್ಟ್ರದ ಕೊಲ್ಹಾಪುರದ ಕಣೇರಿ ಮಠಾಧೀಶ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ಹೇಳಿದರು.

ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳ ರಾಯಬಾಗ ತಾಲ್ಲೂಕು ಘಟಕ ಪಟ್ಟಣದಲ್ಲಿ ಈಚೆಗೆ ಆಯೋಜಿಸಿದ್ದ ಹನುಮ ಮಾಲಾ ದೀಕ್ಷಾ ಕಾರ್ಯಕ್ರಮದಲ್ಲಿ ಈ ಮಾತು ಹೇಳಿದ್ದಾರೆ.

‘ಕೆಲ ಸ್ವಾಮೀಜಿಗಳು ನಮ್ಮ ಪದ್ಧತಿ ಸಹಿಸುವುದಿಲ್ಲ. ಆರ್‌ಎಸ್‌ಎಸ್‌ನವರು ಬಡಿಗೆ ಹಿಡಿದು ಏಕೆ ಅಡ್ಡಾಡುತ್ತೀರಿ ಎಂದು ಪ್ರಶ್ನಿಸುತ್ತಾರೆ. ನಮ್ಮ ಹೆಣ್ಣುಮಕ್ಕಳನ್ನು ಎತ್ತಿಕೊಂಡು ಹೋಗುವವರ ವಿರುದ್ಧ ಬಡಿಗೆ ಹಿಡಿಯದೇ, ಆರತಿ ಎತ್ತಿ ಕರೆಯಬೇಕೇ?’ ಎಂದು ಪ್ರಶ್ನಿಸಿದರು.

‘ಇಂಥವರಿಗೆ ಯಾವ ಭಾಷೆಯಲ್ಲಿ ಹೇಳಿದರೆ ತಿಳಿಯುತ್ತದೆಯೋ ಅಂಥದ್ದೇ ಭಾಷೆಯನ್ನು ಈಚೆಗೆ ಬಳಸಿದ್ದೇನೆ. ಅಲ್ಲಿಯವರೆಗೂ ಅವರಿಗೆ ತಿಳಿದಿರಲಿಲ್ಲ. ನಾನು ಬಳಸಿದ ‘ಆ ಭಾಷೆ’ ಬೇಗ ತಿಳಿಯಿತು. ಜನರೇ ಈಗ ಅವರನ್ನು ಚೀ– ಥೂ ಎಂದು ಉಗಿಯುತ್ತಿದ್ದಾರೆ’ ಎಂದರು.

‘ಕಮ್ಯುನಿಸ್ಟರು ಎಂದರೆ ದೇಶದ ಮೇಲೆ ಕಮ್ಮಿ–ನಿಷ್ಠೆ ಇರುವವರು. ಬರೀ ಚೀನಾ, ರಷ್ಯಾ ದೇಶಗಳ ಉದಾಹರಣೆ ಕೊಟ್ಟು ನಮ್ಮ ದೇಶದ ಯುವಜನರನ್ನು ಹಾಳು ಮಾಡುತ್ತಿದ್ದರು. ಈಗ ಅವರ ಉಪಟಳ ಕಡಿಮೆ ಆಗಿದೆ. ಕೆಲ ಕಾವಿಧಾರಿಗಳು ಶುರು ಮಾಡಿದ್ದಾರೆ’ ಎಂದರು.

ಜಾನಪದ ವಿ.ವಿ ಕುಲಸಚಿವ ರಾಜೀನಾಮೆ

ಹಾವೇರಿ: ಜಿಲ್ಲೆಯ ಗೊಟಗೋಡಿಯಲ್ಲಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ನ. 24ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಜಟಾಪಟಿ ನಡೆದಿದ್ದು, ಇದರ ಬೆನ್ನಲ್ಲೇ ಕುಲಸಚಿವ (ಪ್ರಭಾರ) ಕೆ.ಶಿವಶಂಕರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅವರನ್ನು ಈಚೆಗಷ್ಟೇ ಆಡಳಿತ ಕುಲಸಚಿವರನ್ನಾಗಿ ಪ್ರಭಾರ ವಹಿಸಲಾಗಿತ್ತು.

‘ವಿಶ್ವವಿದ್ಯಾಲಯದ ಸಹಾಯಕ ಕುಲಸಚಿವ ಶಹಜಹಾನ ಮುದಕವಿ ಅವರು ಖೊಟ್ಟಿ ಅಂಕಪಟ್ಟಿ ಕೊಟ್ಟು ಅಕ್ರಮವಾಗಿ ನೇಮಕವಾಗಿರುವ ಆರೋಪವಿದೆ. ಅವರ ವಿದ್ಯಾರ್ಹತೆಯ ದಾಖಲೆಗಳನ್ನು ಒದಗಿಸಿ’ ಎಂದು ಸಿಂಡಿಕೇಟ್ ಸದಸ್ಯರು ಸಭೆಯಲ್ಲಿ ಪ್ರಸ್ತಾಪಿಸಿದ್ದರು. ಇದೇ ವಿಚಾರವಾಗಿ ಶಹಜಹಾನ್ ಮತ್ತು ಸದಸ್ಯರ ನಡುವೆ ಜಟಾಪಟಿ ನಡೆದಿತ್ತು.

ಸದಸ್ಯರ ಜೊತೆ ಶಹಜಹಾನ್ ದುರ್ನಡತೆ ತೋರಿದ್ದಾರೆ. ನೋಟಿಸ್ ನೀಡಿ ಶಿಸ್ತುಕ್ರಮ ಕೈಗೊಳ್ಳಿ’ ಎಂದು ಸದಸ್ಯರು ಕುಲಪತಿ, ಕುಲಸಚಿವರನ್ನು ಕೋರಿದ್ದರು. ಇದರ ಹಿಂದೆಯೇ ಅವರು ಕುಲಪತಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ‘ರಾಜೀನಾಮೆ ಪತ್ರವನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ. ಸರ್ಕಾರದ ಉತ್ತರದ ನಿರೀಕ್ಷೆಯಲ್ಲಿದ್ದೇನೆ’ ಎಂದು ಕುಲಪತಿ ಪ್ರೊ.ಟಿ.ಎಂ. ಭಾಸ್ಕರ್ ತಿಳಿಸಿದರು.

ಚಟಿಕೆ ಸುದ್ದಿ

ಎಟಿಎಂ ಯಂತ್ರ ಕಳವು; ಹಣ ಪಡೆಯಲು ವಿಫಲ ಯತ್ನ

ಬೆಳಗಾವಿ: ತಾಲ್ಲೂಕಿನ ಹೊಸ ವಂಟಮೂರಿ ಗ್ರಾಮದಲ್ಲಿ ಹೆದ್ದಾರಿ ಪಕ್ಕದಲ್ಲಿದ್ದ ‘ಇಂಡಿಯಾ ಬ್ಯಾಂಕ್ 1’ಗೆ ಸೇರಿದ ಎಟಿಎಂ ಯಂತ್ರವನ್ನು ಸೋಮವಾರ ತಡರಾತ್ರಿ ಕಳವು ಮಾಡಿದ್ದಾರೆ. ಅದನ್ನು ಒಡೆದು ಹಣ ತೆಗೆಯಲು ಸಾಧ್ಯವಾಗದೇ ಊರ ಹೊರಗೆ ಎಸೆದು ಹೋಗಿದ್ದಾರೆ. ಮೂವರು ಆರೋಪಿಗಳು ಕೃತ್ಯ ಎಸಗಿದ್ದು, ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆ ಆಗಿದೆ.

‘ಎಟಿಎಂ ಕೇಂದ್ರಕ್ಕೆ ನುಗ್ಗಿದ ಕಳ್ಳರು, ಸೆನ್ಸರ್ ಶಬ್ದ ಮಾಡದಂತೆ ತಡೆದಿದ್ದಾರೆ. ಯಂತ್ರವನ್ನು ಇಡಿಯಾಗಿ ತಳ್ಳುವ ಗಾಡಿಯಲ್ಲಿ ಇಟ್ಟುಕೊಂಡು ಒಯ್ದಿದ್ದಾರೆ. 300 ಮೀಟರ್ ದಾಟಿದ ಬಳಿಕ ವಾಹನದಲ್ಲಿ ಒಯ್ದಿದ್ದು, ಕ್ಯಾಮೆರಾದಲ್ಲಿ ಸೆರೆಯಾಗಿದೆ. ಹೊಲದಲ್ಲಿ ಗ್ಯಾಸ್ ಕಟರ್ ಬಳಸಿ ಯಂತ್ರ ಒಡೆಯಲು ವಿಫಲ ಯತ್ನ ನಡೆಸಿ, ಹಾಗೇ ಬಿಟ್ಟು ಹೋಗಿದ್ದಾರೆ. ಯಂತ್ರವನ್ನು ಪತ್ತೆ ಮಾಡಿ ವಶಕ್ಕೆ ಪಡೆಯಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ತಿಳಿಸಿದ್ದಾರೆ.

‘ಕಾವಲುಗಾರನ ನಿಯೋಜಿಸದಿರುವುದು ಬ್ಯಾಂಕ್‌ನವರ ನಿರ್ಲಕ್ಷ್ಯ. ಯಂತ್ರದಲ್ಲಿ ₹1 ಲಕ್ಷ ಹಣವಿತ್ತು ಎಂದು ತಿಳಿಸಲಾಗಿದೆ. ಸ್ಥಳೀಯರೇ ಕೃತ್ಯ ನಡೆಸಿರುವ ಸಾಧ್ಯತೆಯಿದೆ’ ಎಂದಿದ್ದಾರೆ.

ಸೇತುರಾಮ್‌ಗೆ ‘ಶಾರದಾ ಕೃಷ್ಣ’ ಪ್ರಶಸ್ತಿ

ಉಡುಪಿ: ಹೆಬ್ರಿಯ ರಾಘವೇಂದ್ರ ಚಾರಿಟಬಲ್ ಟ್ರಸ್ಟ್ ಪ್ರಾಯೋಜಿತ, ಇಲ್ಲಿನ ಸಂಸ್ಕೃತಿ ವಿಶ್ವ ಪ್ರತಿಷ್ಠಾನ ನೀಡುವ 2026ನೇ ಸಾಲಿನ ‘ಶಾರದಾ ಕೃಷ್ಣ’ ಪ್ರಶಸ್ತಿಗೆ ಕಿರುತೆರೆ ನಟ, ರಂಗ ನಿರ್ದೇಶಕ ಬೆಂಗಳೂರಿನ ಎಸ್.ಎನ್. ಸೇತುರಾಮ್ ಅವರು ಆಯ್ಕೆಯಾಗಿದ್ದಾರೆ.



ಎಸ್.ಎನ್. ಸೇತುರಾಮ್

ಪ್ರಶಸ್ತಿ ₹50 ಸಾವಿರ ನಗದು ಒಳಗೊಂಡಿದ್ದು, ಜನವರಿಯಲ್ಲಿ ನಡೆಯುವ ಸಂಸ್ಕೃತಿ ಉತ್ಸವದಲ್ಲಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಸಂಚಾಲಕ ರವಿರಾಜ್ ಎಚ್.ಪಿ. ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಸುನಿತಾ ಕೃಷ್ಣನ್‌ಗೆ ‘ಕಾಯಕಶ್ರೀ’ ಪ್ರಶಸ್ತಿ

ಗೋಕಾಕ (ಬೆಳಗಾವಿ ಜಿಲ್ಲೆ): 2026ರ ಫೆಬ್ರುವರಿ 1 ರಿಂದ 3ರವರೆಗೆ ನಡೆಯುವ 21ನೇ ಶರಣ ಸಂಸ್ಕೃತಿ ಉತ್ಸವದಲ್ಲಿ ನೀಡಲಾಗುವ ‘ಕಾಯಕಶ್ರೀ’ ಪ್ರಶಸ್ತಿಗೆ ಹೋರಾಟಗಾರ್ತಿ, ಆಂಧ್ರಪ್ರದೇಶದ ಸುನಿತಾ ಕೃಷ್ಣನ್ ಅವರನ್ನು ಆಯ್ಕೆ ಮಾಡಲಾಗಿದೆ.

ಸುನಿತಾ ಕೃಷ್ಣನ್

ಪ್ರಶಸ್ತಿ ₹ 1 ಲಕ್ಷ ನಗದು, ಫಲಕ ಒಳಗೊಂಡಿದೆ. ಫೆ.2ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ’ ಎಂದು ಶೂನ್ಯ ಸಂಪಾದನ ಮಠದ ಮುರುಘರಾಜೇಂದ್ರ ಸ್ವಾಮೀಜಿ ತಿಳಿಸಿದ್ದಾರೆ.

ಅತ್ಯಾಚಾರ: ಬಂಧನ

ಬೆಳಗಾವಿ: ಜಿಲ್ಲೆಯ ಗ್ರಾಮವೊಂದರ 13 ವರ್ಷದ ಬಾಲಕಿ ಮೇಲೆ ನ. 23ರಂದು ಅತ್ಯಾಚಾರ ನಡೆದಿದ್ದು, ಆಕೆ ಸೋಮವಾರ ಮಣಿಕಂಠ ದಿನ್ನಿಮನಿ (28), ಈರಣ್ಣ ಸಂಕಮ್ಮನವರ (28) ಎಂಬ ಆರೋಪಿಗಳ ವಿರುದ್ಧ ದೂರು ನೀಡಿದ್ದಾಳೆ. ಪೊಲೀಸರು ಇಬ್ಬರನ್ನೂ ಬಂಧಿಸಿದ್ದಾರೆ.

‘ಹಿಟ್ಟಿನ ಗಿರಣಿಗೆ ಹೋಗಿ ಮನೆಗೆ ಮರಳುತ್ತಿದ್ದ ವೇಳೆ ಬಾಲಕಿಯನ್ನು ಇಬ್ಬರೂ ಕಬ್ಬಿನ ಗದ್ದೆಗೆ ಎಳೆದೊಯ್ದು ಕೃತ್ಯವೆಸಗಿದ್ದಾರೆ. ಪ್ರಾಣ ಬೆದರಿಕೆ ಒಡ್ಡಿದ್ದರಿಂದ ದೂರು ನೀಡಲು ವಿಳಂಬವಾಗಿದೆ’ ಎಂದು ಎಸ್‌ಪಿ ತಿಳಿಸಿದ್ದಾರೆ.

ಮೆಕ್ಕೆಜೋಳ: ಗದಗದಲ್ಲಿ ಖರೀದಿ ಆರಂಭ

17 ದಿನಗಳ ರೈತರ ಹೋರಾಟ ಅಂತ್ಯ; ಹಾವೇರಿಯಲ್ಲಿ ಇನ್ನೂ ಆರಂಭವಾಗದ ಖರೀದಿ ಕೇಂದ್ರ

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ/ಹಾವೇರಿ: ಮೆಕ್ಕೆಜೋಳದ ಬೆಂಬಲ ಬೆಲೆ ಖರೀದಿ ಕೇಂದ್ರ ತೆರೆಯುವಂತೆ ಆಗ್ರಹಿಸಿ ಗದಗ ಮತ್ತು ಹಾವೇರಿ ಜಿಲ್ಲೆಯಲ್ಲಿ ನಡೆಯುತ್ತಿದ್ದ ರೈತರ ಅನಿರ್ದಿಷ್ಟಾವಧಿ ಧರಣಿ ಸೋಮವಾರ ರಾತ್ರಿ ಅಂತ್ಯಗೊಂಡಿತು.

ಗದಗ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಅವರು ಖರೀದಿ ಕೇಂದ್ರಕ್ಕೆ ಚಾಲನೆ ನೀಡಿದ ಕೆಲ ಹೊತ್ತಿನಲ್ಲೇ ಲಕ್ಷ್ಮೇಶ್ವರ, ಶಿರಹಟ್ಟಿ ಹಾಗೂ ಮುಂಡರಗಿ ತಾಲ್ಲೂಕಿನ ರೈತರು ಧರಣಿ ಹಿಂಪಡೆದರು. ಇಲ್ಲಿನ ಶಿಗ್ಲಿ ಕ್ರಾಸ್‌ನಲ್ಲಿ ಅವರು 17 ದಿನಗಳಿಂದ ಹೋರಾಟ ನಡೆಸಿದ್ದರು.

‘ಸದ್ಯ ಒಬ್ಬ ರೈತರಿಂದ ಐದು ಕ್ವಿಂಟಲ್ ಮೆಕ್ಕೆಜೋಳ ಖರೀದಿಗೆ ಸರ್ಕಾರ ಒಪ್ಪಿಗೆ ನೀಡಿದೆ. ಮುಂದಿನ ದಿನಗಳಲ್ಲಿ ಈ ಪ್ರಮಾಣ ಹೆಚ್ಚಿಸುವಂತೆ ಸರ್ಕಾರಕ್ಕೆ ಈಗಾಗಲೇ ಮನವಿ ಸಲ್ಲಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಲಕ್ಷ್ಮೇಶ್ವರ ರೈತರು ಮಂಗಳವಾರ ಟಿಎಪಿಸಿಎಂಎಸ್ ಕಚೇರಿಯಲ್ಲಿ ಬೆಂಬಲ ಬೆಲೆ ಯೋಜನೆ ಅಡಿ ಮೆಕ್ಕೆಜೋಳ ಮಾರಾಟಕ್ಕೆ ಹೆಸರು ನೋಂದಣಿ ಮಾಡಿಸಿದರು

‘ರೈತರ ಸುದೀರ್ಘ ಹೋರಾಟಕ್ಕೆ ಜಯ ಸಿಕ್ಕಿದೆ’ ಎಂದು ರೈತ ಮುಖಂಡರಾದ ಮಂಜುನಾಥ ಮಾಗಡಿ, ನಾಗರಾಜ ಚಿಂಚಲಿ, ರವಿಕಾಂತ ಅಂಗಡಿ ತಿಳಿಸಿದರು.

ಖರೀದಿ ಕೇಂದ್ರ ತೆರೆಯಲು ಜಿಲ್ಲಾಡಳಿತವು ಸಿದ್ಧತೆ ನಡೆಸಿರುವ ಹಿನ್ನೆಲೆಯಲ್ಲಿ ಹಾವೇರಿಯಲ್ಲಿ ರೈತರು ಧರಣಿಯನ್ನು ತಾತ್ಕಾಲಿಕವಾಗಿ ಹಿಂಪಡೆದರು. ‘ಖರೀದಿ ಕೇಂದ್ರ ತೆರೆಯಲು ಇನ್ನಷ್ಟು ವಿಳಂಬ ಮಾಡಿದ್ದಲ್ಲಿ, ಡಿಸೆಂಬರ್ 8ರಂದು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ತಡೆದು ಗಂಭೀರ ಸ್ವರೂಪದ ಪ್ರತಿಭಟನೆ ನಡೆಸುತ್ತೇವೆ’ ಎಂದು ರೈತರು ಎಚ್ಚರಿಕೆ ನೀಡಿದರು.

‘ಖರೀದಿ ಕೇಂದ್ರ ತೆರೆಯಲು ಸಿದ್ಧತೆ ನಡೆದಿದೆ. ಖರೀದಿ ಸ್ಥಳ ಹಾಗೂ ಖರೀದಿದಾರರ ಜೊತೆ ಒಪ್ಪಂದ ಮಾಡಿಕೊಂಡು ಸರ್ಕಾರ ನಿಯಮಾವಳಿಯಂತೆ ಖರೀದಿ ಶುರುವಾಗಲಿದೆ’ ಎಂದು ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ತಿಳಿಸಿದರು.

‘ಸಂಸತ್ತಿನಲ್ಲಿ ಪ್ರಶ್ನಿಸದ ಬಿಜೆಪಿ ಸಂಸದರು’

ಶಿವಾನಂದ ಪಾಟೀಲ

ವಿಜಯಪುರ: ‘ಮೆಕ್ಕೆಜೋಳ ಖರೀದಿ ವಿಷಯವು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಸಂಸತ್ತಿನ ಅಧಿವೇಶನ ನಡೆದರೂ ರಾಜ್ಯದ ಬಿಜೆಪಿ ಸಂಸದರು ಮಾತನಾಡುತ್ತಿಲ್ಲ’ ಎಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಆರೋಪಿಸಿದರು.

ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮೆಕ್ಕೆಜೋಳ ಖರೀದಿಗೆ ಸಂಬಂಧಿಸಿ ಸಂಸದ ಬಸವರಾಜ ಬೊಮ್ಮಾಯಿ ಅವರು ರೈತರ ಜೊತೆ ಪ್ರತಿಭಟಿಸುತ್ತಾರೆ. ಲೋಕಸಭೆಯಲ್ಲಿ ಏಕೆ ವಿಷಯ ಪ್ರಸ್ತಾಪಿಸುವುದಿಲ್ಲ’ ಎಂದು ಪ್ರಶ್ನಿಸಿದರು.

‘ರಾಜ್ಯದಲ್ಲಿ ಅತಿ ಹೆಚ್ಚು ಮೆಕ್ಕೆಜೋಳ ಉತ್ಪಾದನೆಯಾಗಿದೆ. ಇದೇ ವರ್ಷ ಅಕ್ಟೋಬರ್‌ನಲ್ಲೇ ಪತ್ರ ಬರೆದರೂ ಕೇಂದ್ರ ಸರ್ಕಾರ ಸ್ಪಂದಿಸಿಲ್ಲ. ಮಾತುಕತೆಗೂ ಕರೆದಿಲ್ಲ. ಮೆಕ್ಕೆಜೋಳ ಖರೀದಿ ವಿಷಯದಲ್ಲಿ ರಾಜ್ಯ ಸರ್ಕಾರಕ್ಕೆ ಸೀಮಿತ ಅಧಿಕಾರವಿದೆ’ ಎಂದು ಹೇಳಿದರು.

ಮುರುಘಾ ಶರಣರ ವಿರುದ್ಧದ ಪ್ರಕರಣ; 154 ಪುಟಗಳ ಆದೇಶದಲ್ಲಿ ಉಲ್ಲೇಖ

‘ಪೋಕ್ಸೊ ಪ್ರಕರಣದ ಹಿಂದೆ ವ್ಯವಸ್ಥಿತ ಷಡ್ಯಂತ್ರ’

ಪ್ರಜಾವಾಣಿ ವಾರ್ತೆ

ಶಿವಮೂರ್ತಿ ಶರಣರು

ಚಿತ್ರದುರ್ಗ: ಶಿವಮೂರ್ತಿ ಮುರುಘಾ ಶರಣರ ವಿರುದ್ಧ ದಾಖಲಾಗಿದ್ದ ಪೋಕ್ಸೊ ಮೊದಲ ಪ್ರಕರಣದ ಹಿಂದಿರುವುದು ವ್ಯವಸ್ಥಿತ ಷಡ್ಯಂತ್ರ, ಹಳೆಯ ದ್ವೇಷ, ಪಿತೂರಿ, ಆಸ್ತಿ ವ್ಯಾಜ್ಯ ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ಅಭಿಪ್ರಾಯಪಟ್ಟಿದೆ.

ಶರಣರ ವಿರುದ್ಧ ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ 2022ರ ಆ. 26ರಂದು ದಾಖಲಾಗಿದ್ದ ಮೊದಲ ಪ್ರಕರಣಕ್ಕೆ ಸಂಬಂಧಿಸಿದ ಒಟ್ಟು 154 ಪುಟಗಳ ಆದೇಶದ ಪ್ರತಿಯಲ್ಲಿ ಈ ವಿಷಯ ಉಲ್ಲೇಖವಾಗಿದೆ. ಪ್ರಮುಖ ಆರೋಪಿಗಳಾಗಿದ್ದ ಶಿವಮೂರ್ತಿ ಮುರುಘಾ ಶರಣರು, ಮಠದ ವ್ಯವಸ್ಥಾಪಕ ಪರಮಶಿವಯ್ಯ ಹಾಗೂ ಮಠದ ಹಾಸ್ಟೆಲ್‌ನ ಮಹಿಳಾ ವಾರ್ಡನ್ ರಶ್ಮಿ ಅವರನ್ನು ದೋಷಮುಕ್ತಗೊಳಿಸಲಾಗಿದೆ.

‘ಸಂತ್ರಸ್ತೆಯರ ಸಾಕ್ಷ್ಯ ಅಸಮಂಜಸ, ವಿಶ್ವಾಸಾರ್ಹವಲ್ಲ’ ಎಂದು ಆದೇಶದಲ್ಲಿ ಉಲ್ಲೇಖಿಸಿದೆ. ಸಂತ್ರಸ್ತೆಯರು ಪರಿಹಾರಕ್ಕೂ ಅರ್ಹರಲ್ಲ ಎಂದೂ ತಿಳಿಸಲಾಗಿದೆ. ವೈದ್ಯಕೀಯ ತಪಾಸಣಾ ವರದಿಯಲ್ಲೂ ಸಂತ್ರಸ್ತೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವ ಕುರಿತು ಪುರಾವೆಗಳಿಲ್ಲ. ಅನ್ಯ ರಾಜ್ಯಗಳ ಪೋಕ್ಸೊ ಪ್ರಕರಣಗಳನ್ನು ಉಲ್ಲೇಖಿಸಿ ‘ಸಾಕ್ಷ್ಯಗಳು ವಿಶ್ವಾಸಾರ್ಹವಲ್ಲ’ ಎಂದು ನವೆಂಬರ್ 26ರಂದು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ ಗಂಗಾಧರಪ್ಪ ಹಡಪದ ಅವರು ಆದೇಶದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಬಿಎನ್‌ಎಸ್ ಸೆಕ್ಷನ್ 376 (2) (ಎನ್), 376 (3), 323, 504, 506 ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆಯ ಸೆಕ್ಷನ್ 5 (1), 6 ಮತ್ತು 17ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಂದ ಮೂವರು ಆರೋಪಿಗಳನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ. ಆರೋಪಿಗಳ ಜಾಮೀನು ಬಾಂಡ್ ಮತ್ತು ಶ್ಯೂರಿಟಿ ಬಾಂಡ್‌ಗಳನ್ನು ರದ್ದುಗೊಳಿಸಿದೆ.

ಸಂತ್ರಸ್ತೆಯರು ತನಿಖಾ ಹಂತದಲ್ಲಿ ವೈದ್ಯರು, ನ್ಯಾಯಾಧೀಶರ ಮುಂದೆ ನುಡಿದ ಸಾಕ್ಷ್ಯಗಳು ತಾಳೆಯಾಗುತ್ತಿಲ್ಲ. ಜತೆಗೆ ಸ್ವಾಮೀಜಿ ಹಾಗೂ ಮಠದ ಆಡಳಿತಾಧಿಕಾರಿಯಾಗಿದ್ದ ಮಾಜಿ ಶಾಸಕ ಎಸ್.ಕೆ. ಬಸವರಾಜನ್, ಪತ್ನಿ ಸೌಭಾಗ್ಯಾ ನಡುವೆ 15 ವರ್ಷಗಳಿಂದ ನಡೆಯುತ್ತಿದ್ದ ಆಸ್ತಿ ವ್ಯಾಜ್ಯ, ವೈಷಮ್ಯವೇ ಪ್ರಕರಣದ ಹಿಂದಿರುವ ಕಾರಣ’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

‘ಮಠದಲ್ಲಿ 300 ಮಕ್ಕಳಿದ್ದು ಈ ಪೈಕಿ 13 ಮಕ್ಕಳ ವಿಚಾರಣೆ ನಡೆದಿದೆ. ನಾಲ್ವರ ಸಾಕ್ಷ್ಯ ಪಡೆಯಲಾಗಿದೆ. ಅವರಲ್ಲಿ ಯಾರೂ ಸಂತ್ರಸ್ತೆಯರ ಪರ ಸಾಕ್ಷ್ಯ ಹೇಳಿಲ್ಲ. ಮಠದಲ್ಲಿ ಸಿ.ಸಿ.ಟಿ.ವಿ ಇದ್ದು, ಪೊಲೀಸರು ಅದರ ದೃಶ್ಯ ಸಂಗ್ರಹಿಸಿಲ್ಲ’ ಎಂದು ಕೋರ್ಟ್ ಆಕ್ಷೇಪಿಸಿದೆ.

ಋತುಚಕ್ರ ರಜೆ: ಹೊರಬಿದ್ದ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಮಹಿಳಾ ನೌಕರರಿಗೆ ತಕ್ಷಣದಿಂದಲೇ ಜಾರಿಯಾಗುವಂತೆ ತಿಂಗಳಿಗೆ ಒಂದು ಋತುಚಕ್ರ ರಜೆಯನ್ನು ಮಂಜೂರು ಮಾಡಿ ಆರ್ಥಿಕ ಇಲಾಖೆ ಆದೇಶ ಹೊರಡಿಸಿದೆ.

ಋತುಚಕ್ರ ಹೊಂದಿರುವ 18 ವರ್ಷದಿಂದ 52 ವರ್ಷ ವಯಸ್ಸಿನ ಮಹಿಳಾ ಸರ್ಕಾರಿ ನೌಕರರಿಗೆ ಈ ರಜೆ ಅನ್ವಯವಾಗಲಿದೆ. ತಿಂಗಳಿಗೆ ಒಂದರಂತೆ ವರ್ಷಕ್ಕೆ ಒಟ್ಟು 12 ಋತುಚಕ್ರ ರಜೆ ಪಡೆಯಬಹುದು.

ಸಾಂದರ್ಭಿಕ ರಜೆಯನ್ನು ಮಂಜೂರು ಮಾಡುವ ಸಕ್ಷಮಪ್ರಾಧಿಕಾರವೇ ಈ ರಜೆಯನ್ನೂ ಮಂಜೂರು ಮಾಡಬಹುದಾಗಿದೆ. ಈ ರಜೆ ಪಡೆಯಲು ಯಾವುದೇ ವೈದ್ಯಕೀಯ ಪ್ರಮಾಣ ಪತ್ರ ನೀಡಬೇಕಿಲ್ಲ. ಜತೆಗೆ ಈ ರಜೆಯನ್ನು ಹಾಜರಾತಿ ಪುಸ್ತಕದಲ್ಲಿ ಪ್ರತ್ಯೇಕವಾಗಿ ನಮೂದಿಸಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಮಾತೃತ್ವ ರಜೆ ಹೆಚ್ಚಳಕ್ಕೆ ಆಗ್ರಹ

ಬೆಂಗಳೂರು: ‘8ನೇ ವೇತನ ಆಯೋಗ ಜಾರಿ, ಹೊಸ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ರದ್ದತಿ, ಮಾತೃತ್ವ ರಜೆ ಒಂದು ವರ್ಷಕ್ಕೆ ವಿಸ್ತರಣೆ ಸೇರಿ ವಿವಿಧ ಈಡೇರಿಕೆಗಳನ್ನು ಈಡೇರಿಸುವಂತೆ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ ಆಗ್ರಹಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷೆ ರೋಶನಿಗೌಡ, ‘ಇದೇ 4ರಂದು ಬೆಳಿಗ್ಗೆ 10 ಗಂಟೆಗೆ ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ಮಹಿಳಾ ನೌಕರರ ಸಮ್ಮೇಳನ ಹಮ್ಮಿಕೊಂಡಿದ್ದು ಅಲ್ಲಿ ಈ ಬಗ್ಗೆ ಒತ್ತಾಯಿಸಲಾಗುವುದು’ ಎಂದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಋತುಚಕ್ರ ರಜೆ ಘೋಷಿಸಿರುವ ಮುಖ್ಯಮಂತ್ರಿ ಅವರಿಗೆ ಇದೇ ವೇಳೆ ಅಭಿನಂದನೆ ಸಲ್ಲಿಸಲಾಗುತ್ತದೆ’ ಎಂದು ಹೇಳಿದರು.

ಜಾರ್ಜ್ ವಿರುದ್ಧದ ದೂರು ವಜಾ

ಸ್ಮಾರ್ಟ್ ಮೀಟರ್: ಬಿಜೆಪಿ ನಾಯಕರು ಸಲ್ಲಿಸಿದ್ದ ಖಾಸಗಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದ ಟೆಂಡರ್‌ನಲ್ಲಿ ಅಕ್ರಮ ನಡೆದಿದೆ’ ಎಂದು ಆರೋಪಿಸಿ ಇಂಧನ ಸಚಿವ ಕೆ.ಜೆ. ಜಾರ್ಜ್ ಸೇರಿದಂತೆ ಅಧಿಕಾರಿಗಳ ವಿರುದ್ಧ ಬಿಜೆಪಿ ನಾಯಕರು ದಾಖಲಿಸಿದ್ದ ಖಾಸಗಿ ದೂರನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಆದೇಶ ರದ್ದು ಕೋರಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಮಂಗಳವಾರ ಈ ಕುರಿತಂತೆ ಆದೇಶಿಸಿತು.

‘ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದ ಟೆಂಡರ್ ಸಂಪೂರ್ಣ ಕಾನೂನು ಬಾಹಿರವಾಗಿದೆ ಎಂದು ಆರೋಪಿಸಿ ದಾಖಲಿಸಿರುವ ಖಾಸಗಿ ದೂರಿಗೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರ ಪ್ರಾಥಮಿಕ ತನಿಖಾ ವರದಿ ತರಿಸಿಕೊಳ್ಳಬೇಕು’ ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿತ್ತು.

ಈ ಆದೇಶ ಪ್ರಶ್ನಿಸಿ ಕೆ.ಜೆ.ಜಾರ್ಜ್, ತಾಂತ್ರಿಕ ವಿಭಾಗದ ಎಚ್.ಜೆ.ರಮೇಶ್ ಮತ್ತು ಇತ್ತೀಚೆಗೆ ಮರಣ ಹೊಂದಿದ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ದಿವಂಗತ ಮಹಾಂತೇಶ ಬೀಳಗಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಜನಸಂದಣಿ ನಿಯಂತ್ರಣಕ್ಕೆ ಎಸ್‌ಒಪಿ ಸಿದ್ಧ

‘ಸಾರ್ವಜನಿಕ ಸಮಾರಂಭಗಳಲ್ಲಿ ಜನಸಂದಣಿ ನಿಯಂತ್ರಿಸುವುದಕ್ಕೆ ಸಂಬಂಧಿಸಿದಂತೆ ಪ್ರಮಾಣಿತ ಕಾರ್ಯಾಚರಣೆ ವಿಧಾನಗಳ ವಿವರವನ್ನು (ಎಸ್‌ಒಪಿ) ಪ್ರಕರಣದ ಪಕ್ಷಕಾರರ ಜೊತೆ ವಿನಿಮಯ ಮಾಡಿಕೊಳ್ಳಲಾಗುವುದು’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಘಟಿಸಿದ ಕಾಲ್ತುಳಿತದಲ್ಲಿ 11 ಮಂದಿ ಸಾವನ್ನಪ್ಪಿದ ದುರ್ಘಟನೆಗೆ ಸಂಬಂಧಿಸಿದಂತೆ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ ಅವರು, ‘ಎಸ್‌ಒಪಿ ಸಿದ್ಧವಾಗಿದ್ದು, ಅಮಿಕಸ್ ಕ್ಯೂರಿ (ನ್ಯಾಯಾಲಯಕ್ಕೆ ಸಹಕರಿಸುವ ವಕೀಲರು) ಎಸ್. ಸುಶೀಲಾ ಅವರು ಕೆಲವು ಸಲಹೆಗಳನ್ನು ನೀಡಿದ್ದಾರೆ. ಅವುಗಳನ್ನು ಇದರಲ್ಲಿ ಅಡಕಗೊಳಿಸಲಾಗುವುದು. ಅಂತೆಯೇ ಎಲ್ಲಾ ಪಕ್ಷಗಾರರಿಗೂ ಇದನ್ನು ವಿತರಿಸಲಾಗುವುದು ’ ಎಂದು ತಿಳಿಸಿದರು.

ಅಡ್ವೊಕೇಟ್ ಜನರಲ್ ಅವರ ಕೋರಿಕೆಯಂತೆ ಕಾಲಾವಕಾಶ ನೀಡಿ, ವಿಚಾರಣೆಯನ್ನು 2026ರ ಜನವರಿ 20ಕ್ಕೆ ಮುಂದೂಡಿತು.

ಚಿಕ್ಕಮಗಳೂರಿನಲ್ಲಿ ಅನಸೂಯ ದೇವಿ ಜಯಂತಿ ನಿಮಿತ್ತ ಮಂಗಳವಾರ ನಡೆದ ಸಂಕೀರ್ತನಾ ಯಾತ್ರೆಯಲ್ಲಿ ಸಾವಿರಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು

ಗ್ರಾ.ಪಂ. ಆರು ಸದಸ್ಯರ ಸದಸ್ಯತ್ವ ರದ್ದು

ಪ್ರಜಾವಾಣಿ ವಾರ್ತೆ

ಕಮಲಾಪುರ (ಕಲಬುರಗಿ): ಸಂಬಂಧಿಕರ ಹೆಸರಲ್ಲಿ ಚೆಕ್ ಮೂಲಕ ಸರ್ಕಾರದ ಹಣ ಪಡೆದು ಅಧಿಕಾರ ದುರ್ಬಳಕೆ ಮಾಡಿದ್ದು ಸಾಬೀತಾಗಿದ್ದರಿಂದ ತಾಲ್ಲೂಕಿನ ಅವರಾದ (ಬಿ) ಗ್ರಾಮ ಪಂಚಾಯಿತಿಯ ಆರು ಸದಸ್ಯರ ಸದಸ್ಯತ್ವವನ್ನು ರದ್ದುಗೊಳಿಸಲಾಗಿದೆ.

ಪ್ರಿಯಾ ಪೀರಪ್ಪ, ನಾಗೇಂದ್ರ ಶಿವಕುಮಾರ, ಚಂದ್ರಕಲಾ ಸಂತೋಷಕುಮಾರ, ಕಲ್ಲಮ್ಮ ಶರಣ ಬಸಪ್ಪ, ಪ್ರೇಮಾ ಅಂಬಾರಾಯ, ದಶವಂತಿ ಶರಣಬಸಪ್ಪ ಸದಸ್ಯತ್ವ ಕಳೆದುಕೊಂಡವರು.

ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಬೇಕಿದ್ದ ಹಣವನ್ನು ಈ ಸದಸ್ಯರು ತಮ್ಮ ಪುತ್ರ, ಪತಿ, ಚಿಕ್ಕಪ್ಪನ ಮಗನ ಹೆಸರಿನಲ್ಲಿ ವಿವಿಧ ವರ್ಷಗಳಲ್ಲಿ ₹ 1500ರಿಂದ ₹ 64 ಸಾವಿರದವರೆಗೆ ಚೆಕ್ ಮೂಲಕ ಹಣವನ್ನು ತೆಗೆದುಕೊಂಡು ದುರ್ಬಳಕೆ ಮಾಡಿಕೊಂಡಿದ್ದರು.

ಆಳಂದ ತಾಲ್ಲೂಕಿನ ಬೆಳಮಗಿ ಗ್ರಾಮದ ರಾಜಕುಮಾರ ಶಾಂತಪ್ಪ ಅವರು ಜಿ.ಪಂ ಸಿಇಒ ಅವರಿಗೆ ದೂರು ನೀಡಿದ್ದರು. ತನಿಖಾ ವರದಿಯನ್ನು ಆಧರಿಸಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸೈಯದ್ ಪಟೇಲ್ ಅವರು ಸದಸ್ಯತ್ವ ರದ್ದುಗೊಳಿಸಿದ್ದಾರೆ.

ನರೇಗಾ: ಕೇಂದ್ರದಿಂದ ₹622 ಕೋಟಿ ಬಾಕಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಕರ್ನಾಟಕಕ್ಕೆ ₹622 ಕೋಟಿ ಬಿಡುಗಡೆ ಮಾಡದೆ ಬಾಕಿ ಇರಿಸಿಕೊಂಡಿದೆ.

ಲೋಕಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯರೊಬ್ಬರು ಕೇಳಿದ ಪ್ರಶ್ನೆಗೆ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ ಸಿಂಗ್ ಚೌಹಾಣ್ ಈ ಬಗ್ಗೆ ಉತ್ತರ ನೀಡಿದ್ದಾರೆ. ರಾಜ್ಯಕ್ಕೆ ಕೂಲಿ ಮೊತ್ತ ₹8.94 ಕೋಟಿ, ಸಾಮಗ್ರಿ ವೆಚ್ಚ ₹576 ಕೋಟಿ ಹಾಗೂ ಆಡಳಿತಾತ್ಮಕ ₹37 ಕೋಟಿ ಬಿಡುಗಡೆ ಮಾಡಬೇಕಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸಂಸತ್‌ನಲ್ಲಿ ಕರ್ನಾಟಕ

ರಫ್ತು ಕೇಂದ್ರವಾಗಿ ದಕ್ಷಿಣ ಕನ್ನಡ

ನವದೆಹಲಿ: ದಕ್ಷಿಣ ಕನ್ನಡವನ್ನು ಜಿಲ್ಲಾ ರಫ್ತು ಕೇಂದ್ರವಾಗಿ ಘೋಷಿಸಲಾಗಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕೆ ಖಾತೆ ರಾಜ್ಯ ಸಚಿವ ಜಿತಿನ್ ಪ್ರಸಾದ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಸಂಸದ ಬ್ರಿಜೇಶ್ ಚೌಟ ಮಂಗಳವಾರ ಕೇಳಿದ ಪ್ರಶ್ನೆಗೆ ಸಚಿವರು ಲಿಖಿತ ಉತ್ತರ ನೀಡಿ, ಸಮುದ್ರ ಆಹಾರಗಳು ಗೋಡಂಬಿಯನ್ನು ಸಂಭಾವ್ಯ ರಫ್ತು ಉತ್ಪನ್ನಗಳಾಗಿ ಸೇರಿಸಲಾಗಿದೆ ಎಂದಿದ್ದಾರೆ.

ರಾಯಚೂರಿನ ಉದ್ದೇಶಿತ 13ನೇ ಬೆಟಾಲಿಯನ್ • ಸಿಬ್ಬಂದಿಗೆ ನಿರಾಸೆ

ಕೆಎಸ್‌ಆರ್‌ಪಿ ತುಕಡಿ ಸ್ಥಾಪನೆಗೆ ಸಿಗದ ಸಮ್ಮತಿ

• ಮಂಜುನಾಥ ಎನ್. ಬಳ್ಳಾರಿ

ಕವಿತಾಳ (ರಾಯಚೂರು ಜಿಲ್ಲೆ): ರಾಯಚೂರು ಜಿಲ್ಲೆಯಲ್ಲಿ ಸ್ಥಾಪಿಸಲಿರುವ, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ (ಕೆಎಸ್‌ಆರ್‌ಪಿ) 13ನೇ ಬೆಟಾಲಿಯನ್‌ಗೆ ಹಣಕಾಸು ಇಲಾಖೆಯ ಅನುಮೋದನೆ ವಿಳಂಬವಾಗಿದೆ. ಯೋಜನೆ ಕೈತಪ್ಪುವ ಆತಂಕ ಎದುರಾಗಿದೆ. ಸ್ಥಳ ನಿಯುಕ್ತಿ ಹಾಗೂ ಬಡ್ತಿ ನಿರೀಕ್ಷೆಯಲ್ಲಿದ್ದ 400ಕ್ಕೂ ಅಧಿಕ ಸಿಬ್ಬಂದಿಗೆ ನಿರಾಸೆಯಾಗಿದೆ.

ಪ್ರಸ್ತುತ ರಾಜ್ಯದಲ್ಲಿ ಕೆಎಸ್‌ಆರ್‌ಪಿಯ 12 ಮತ್ತು ಐಆರ್‌ಬಿಯ 2 ತುಕಡಿಗಳಿವೆ. ಈ ಪೈಕಿ ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ನಲ್ಲಿ ಒಂದು ಐಆರ್‌ಬಿ ಮತ್ತು ಕಲಬುರಗಿಯಲ್ಲಿ ಒಂದು ಕೆಎಸ್‌ಆರ್‌ಪಿ ತುಕಡಿ ಇದೆ. ಐಆರ್‌ಬಿ ಪಡೆಯನ್ನು ಕೆಎಸ್‌ಆರ್‌ಪಿಯಿಂದ ಪ್ರತ್ಯೇಕಿಸಲು ಕರ್ನಾಟಕ ಆಡಳಿತ ನ್ಯಾಯಮಂಡಳಿ ಈಚೆಗೆ ಆದೇಶಿಸಿದೆ. ಐಆರ್‌ಬಿ ಘಟಕಗಳ ಪ್ರತ್ಯೇಕ ಸ್ಥಾಪನೆ ಹಿನ್ನೆಲೆಯಲ್ಲಿ ಉದ್ದೇಶಿತ 13ನೇ ಬಟಾಲಿಯನ್ ಸ್ಥಾಪನೆಯ ಅಗತ್ಯ ಸದ್ಯಕ್ಕೆ ಕಂಡು ಬರುತ್ತಿಲ್ಲ ಎಂದು ಆರ್ಥಿಕ ಇಲಾಖೆ ಪ್ರತಿಪಾದಿಸುತ್ತಿದೆ.

> ರಾಯಚೂರು ಜಿಲ್ಲೆಯಲ್ಲಿ 13ನೇ ಬೆಟಾಲಿಯನ್ ಸ್ಥಾಪನೆ ಸಾಧ್ಯತೆ ಪ್ರಸ್ತಾವ ಹಣಕಾಸು ಇಲಾಖೆಯ ಪರಿಶೀಲನೆಯಲ್ಲಿದೆ
>
> **ಸಂದೀಪ್ ಪಾಟೀಲ**
> ಕೆಎಸ್‌ಆರ್‌ಪಿ ಐಜಿಪಿ

2008ರಲ್ಲಿ ಕೆಎಸ್‌ಆರ್‌ಪಿಗೆ ಆಯ್ಕೆಯಾಗಿದ್ದ ಕಲ್ಯಾಣ ಕರ್ನಾಟಕ ಭಾಗದ ಹಲವು ಸಿಬ್ಬಂದಿ ಹೈದರಾಬಾದ್ ಕರ್ನಾಟಕ (371ಜೆ) ಮೀಸಲು ಅಡಿ ಬಡ್ತಿ ಹಾಗೂ ವರ್ಗಾವಣೆ ಪಡೆದು ಪ್ರಸ್ತುತ ಐಆರ್‌ಬಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕೆಎಟಿ ಆದೇಶದಂತೆ ಎರಡೂ ಪಡೆಗಳನ್ನು ಪ್ರತ್ಯೇಕಿಸಿ ಸಿಬ್ಬಂದಿಯನ್ನು ನಿಯುಕ್ತಿಗೊಳಿಸಬೇಕಿದೆ.

ಕಲಬುರಗಿ ಬೆಟಾಲಿಯನ್‌ನ ಒಂದು ಮಹಿಳಾ ಪಡೆ ಸ್ಥಾಪಿಸಲು ನಿರ್ಧರಿಸಲಾಗಿದೆ. ಇದರ ಪರಿಣಾಮ ಸ್ಥಳ ನಿಯುಕ್ತಿಗೆ ಕಾಯುತ್ತಿದ್ದ ಸಿಬ್ಬಂದಿಗೆ ಸಂಕಷ್ಟ ಎದುರಾಗಿದೆ. ಮುನಿರಾಬಾದ್‌ನ ಐಆರ್‌ಬಿ ಮತ್ತು ಕಲಬುರಗಿಯ ಕೆಎಸ್‌ಆರ್‌ಪಿ ಪಡೆಗಳಲ್ಲಿ ಪ್ರಸ್ತುತ ಹೆಚ್ಚುವರಿಯಾಗಿ ಸೇವೆ ಸಲ್ಲಿಸುತ್ತಿರುವ 400ಕ್ಕೂ ಹೆಚ್ಚಿನ ಸಿಬ್ಬಂದಿಗೆ ಸ್ಥಳ ನಿಯುಕ್ತಿಗೆ ಅನುಕೂಲ ಕಲ್ಪಿಸುತ್ತಿದ್ದ 13ನೇ ಬಟಾಲಿಯನ್ ಸ್ಥಾಪನೆ ವಿಳಂಬವಾದಲ್ಲಿ ಈ ಸಿಬ್ಬಂದಿ ಮೂಲ ಸ್ಥಾನದಲ್ಲೇ ಇರಬೇಕಾಗಿದೆ.

ಕಲಬುರಗಿ ಪಡೆಯಲ್ಲಿ ಹುದ್ದೆಗಳು ಖಾಲಿ ಇಲ್ಲದ ಕಾರಣ ಮುನಿರಾಬಾದ್ ಪಡೆಯಲ್ಲಿ ಈಗಾಗಲೇ ಬಡ್ತಿ ಪಡೆದ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಸ್ಥಳ ನಿಯುಕ್ತಿ ಸಾಧ್ಯವಾಗುತ್ತಿಲ್ಲ. ಹೀಗಾಗಿ ಕಲಬುರಗಿ ಪಡೆಯಲ್ಲಿ ನಿವೃತ್ತಿಯಾಗುವ ಅಧಿಕಾರಿಗಳ ಸ್ಥಾನಕ್ಕೆ ಬಡ್ತಿ ಪಡೆದ ಅಧಿಕಾರಿಗಳನ್ನು ಆದ್ಯತೆ ಮೇರೆಗೆ ನಿಯೋಜಿಸಲಾಗುತ್ತಿದೆ. ಹೀಗಾಗಿ ಬಡ್ತಿ ಪಡೆದವರಿಗೆ ಸೂಕ್ತ ಸ್ಥಳಾವಕಾಶ ಸಿಗುತ್ತಿಲ್ಲ ಎಂದು ಸಿಬ್ಬಂದಿ ಮತ್ತು ಅಧಿಕಾರಿಗಳು ಹೇಳುತ್ತಾರೆ.

ಕಲ್ಯಾಣ ಕರ್ನಾಟಕ ಭಾಗದ ಅಧಿಕಾರಿಗಳು, ಸಿಬ್ಬಂದಿ ಇದೀಗ ಜಿಲ್ಲೆಯ ಸಚಿವರು, ಶಾಸಕರು, ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಸೇರಿ ಜನಪ್ರತಿನಿಧಿಗಳ ಮೂಲಕ ಉದ್ದೇಶಿತ 13ನೇ ಬೆಟಾಲಿಯನ್ ಸ್ಥಾಪಿಸಲು ನಡೆಸುತ್ತಿರುವ ಪ್ರಯತ್ನ ಫಲಕಾರಿಯಾಗಿಲ್ಲ.

‘13ನೇ ಬೆಟಾಲಿಯನ್ ಸ್ಥಾಪನೆಯನ್ನು ಪ್ರಸಕ್ತ ಸಾಲಿನಲ್ಲಿ ಪರಿಗಣಿಸಲು ಅವಕಾಶವಿಲ್ಲ’ ಎಂದು ಒಳಾಡಳಿತ ಇಲಾಖೆ ಅಧೀನ ಕಾರ್ಯದರ್ಶಿ ಕೆ.ಎನ್. ವನಜಾ ಅವರು ಪೊಲೀಸ್ ಮಹಾನಿರ್ದೇಶಕರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

prajavani.net prajavani
ಬುಧವಾರ, ಡಿಸೆಂಬರ್ 3, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 333 | ಪುಟ 14
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ದೇಶೀಯ ಕ್ರಿಕೆಟ್‌ಗೆ ಕೊಹ್ಲಿ

ಭಾರತದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಇದೇ 24ರಂದು ಬೆಂಗಳೂರಿನಲ್ಲಿ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿಯ ಪಂದ್ಯದಲ್ಲಿ ದೆಹಲಿ ತಂಡದ ಪರ ಆಡಲಿದ್ದಾರೆ

ಹನುಮ ಜಯಂತಿ

ಬೆಂಗಳೂರಿನ ಆನಂದರಾವ್ ವೃತ್ತದ ಹತ್ತಿರದ ಶ್ರೀ ಪಾತಾಳಾಂಜನೇಯ ದೇವಸ್ಥಾನದ ಬಳಿ ಹನುಮ ಜಯಂತಿ ಅಂಗವಾಗಿ ಹನುಮ ವೇಷಧಾರಿ ಗಮನ ಸೆಳೆದರು

ಸೆನ್ಸೆಕ್ಸ್ 85,138 | ನಿಫ್ಟಿ 26,032 | $/₹ 89.96 | ಚಿನ್ನ (Std. 10g) ₹1,34,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,89,500 (ಬೆಂಗಳೂರು)

‘ಕಣ್ಗಾವಲು ಆ್ಯಪ್’ ವಿರುದ್ಧ ಕಿಡಿ

ಸಂಚಾರ ಸಾಥಿ ಆ್ಯಪ್ ವಿರುದ್ಧ ವಿಪಕ್ಷಗಳ ಆಕ್ರೋಶ

- ಸಾರ್ವಜನಿಕ ಧ್ವನಿ ಹತ್ತಿಕ್ಕುವ ಯತ್ನ–ಕಾಂಗ್ರೆಸ್

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಕೇಂದ್ರ ಸರ್ಕಾರವು ಮೊಬೈಲ್‌ಗಳಲ್ಲಿ ‘ಸಂಚಾರ ಸಾಥಿ’ ಆ್ಯಪ್ ಅಳವಡಿಕೆಯನ್ನು ಕಡ್ಡಾಯ ಮಾಡಿದ ಬೆನ್ನಲ್ಲೇ, ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದು, ‘ಇದು ಸರ್ವಾಧಿಕಾರಕ್ಕೆ ಸಮಾನವಾದ ನಡೆ’ ಎಂದು ಕಿಡಿಕಾರಿವೆ.

ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್, ‘ಜನರ ಧ್ವನಿಯನ್ನು ಹತ್ತಿಕ್ಕಲು ಬಿಜೆಪಿ ಮಾಡಿದ ಮತ್ತೊಂದು ಪ್ರಯತ್ನ ಇದಾಗಿದೆ’ ಎಂದು ಆರೋಪಿಸಿದೆ.

‘ಜನರ ಖಾಸಗಿತನ ರಕ್ಷಿಸ ಬೇಕಾದದ್ದು ಸರ್ಕಾರದ ಕರ್ತವ್ಯ. ಯಾವುದನ್ನಾದರೂ ಕಡ್ಡಾಯಗೊಳಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಉಂಟುಮಾಡುತ್ತದೆ’ ಎಂದು ಆಕ್ಷೇಪ ವ್ಯಕ್ತಪಡಿಸಿದೆ.

‘ದಬ್ಬಾಳಿಕೆ ಆಡಳಿತ’: ‘ಜನರ ಹಕ್ಕುಗಳಿಗೆ ಚ್ಯುತಿ ಉಂಟುಮಾಡುವುದು, ನಿಯಂತ್ರಿಸುವುದು, ಗೂಢಚಾರಿಕೆ ಮಾಡುವುದು, ಕಣ್ಗಾವಲು ನಡೆಸುವುದು ಬಿಜೆಪಿ ದಬ್ಬಾಳಿಕೆ ಆಡಳಿತದ ವಿಶಿಷ್ಟ ಲಕ್ಷಣವಾಗಿದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.

‘ಸಾರ್ವಜನಿಕರ ಧ್ವನಿಯನ್ನು ಹತ್ತಿಕ್ಕಲು ಬಿಜೆಪಿ ಮಾಡಿದ ಹಲವು ಪ್ರಯತ್ನಗಳ ಪಟ್ಟಿಗೆ ಸಂಚಾರ ಸಾಥಿ ಆ್ಯಪ್ ಮತ್ತೊಂದು ಸೇರ್ಪಡೆಯಾಗಿದೆ. ಜನರನ್ನು ಮತ್ತು ವಿವಿಧ ಪಾಲುದಾರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಈ ಆ್ಯಪ್ ಅನ್ನು ಅಪ್‌ಲೋಡ್ ಮಾಡಲು ಮೋದಿ ಸರ್ಕಾರ ತೆಗೆದುಕೊಂಡಿರುವ ತೀರ್ಮಾನ ಏಕಪಕ್ಷೀಯ. ಈ ಕುರಿತ ನಿರ್ದೇಶನಗಳು ಸರ್ವಾಧಿಕಾರಕ್ಕೆ ಸಮಾನವಾಗಿವೆ’ ಎಂದು ಅವರು ಕಿಡಿಕಾರಿದ್ದಾರೆ.

> ಇದೊಂದು ಗೂಢಚಾರಿ ಆ್ಯಪ್, ಖಾಸಗಿತನಕ್ಕೆ ಧಕ್ಕೆ ತರುತ್ತದೆ. ಇದೇನು ಕಣ್ಗಾವಲು ರಾಜ್ಯವೇ ಎಂದು ವಿಪಕ್ಷಗಳು ಆಕ್ರೋಶ ವ್ಯಕ್ತಪಡಿಸಿದ್ದರೆ, ‘ಬಳಕೆದಾರರ ಸುರಕ್ಷತೆಗಾಗಿ ಈ ಆ್ಯಪ್ ಅಳವಡಿಸಲು ಹೇಳಿದ್ದು, ಅವರು ಬಯಸಿದರೆ ಈ ಆ್ಯಪ್ ಅನ್ನು ಅಳಿಸಬಹುದು’ ಎಂದು ಸರ್ಕಾರ ಸಮರ್ಥಿಸಿಕೊಂಡಿದೆ.

‘ನಾಗರಿಕರು ತಮ್ಮ ಕುಟುಂಬ ಮತ್ತು ಸ್ನೇಹಿತರ ಜತೆ ಏನು ಮಾತನಾಡುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ಸರ್ಕಾರ ಏಕೆ ಬಯಸುತ್ತಿದೆ’ ಎಂದು ಅವರು ಪ್ರಶ್ನಿಸಿದ್ದಾರೆ.

‘ನಾಗರಿಕರ ಖಾಸಗಿತನವನ್ನು ಮೂಲಭೂತ ಹಕ್ಕಾಗಿ ಘೋಷಿಸಬೇಕು ಎಂಬುದನ್ನು ಕೇಂದ್ರ ಸರ್ಕಾರ, ಸುಪ್ರೀಂ ಕೋರ್ಟ್‌ನಲ್ಲಿ ತೀವ್ರವಾಗಿ ವಿರೋಧಿಸಿತ್ತು. ಹೀಗಾಗಿ ಈಗಿನ ಸರ್ಕಾರದ ನಡೆ ಆಶ್ಚರ್ಯವೆನಿಸಿಲ್ಲ. ಇದು ಸರ್ವಾಧಿಕಾರತ್ವವನ್ನು ತೋರಿಸುತ್ತದೆ’ ಎಂದು ಖರ್ಗೆ ಟೀಕಿಸಿದ್ದಾರೆ.

‘ಇದು ಗೂಢಚಾರಿ ಆ್ಯಪ್’: ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು, ಇದೊಂದು ‘ಗೂಢಚಾರಿ ಆ್ಯಪ್’ ಎಂದು ಟೀಕಿಸಿದ್ದಾರೆ.

▶9

ಆ್ಯಪ್ ಅಳಿಸಲು ಇದೆ ಅವಕಾಶ: ಸಿಂಧಿಯಾ

ಜ್ಯೋತಿರಾದಿತ್ಯ ಸಿಂಧಿಯಾ

‘ಮೊಬೈಲ್ ಬಳಕೆದಾರರು ಸಂಚಾರ ಸಾಥಿ ಅಪ್ಲಿಕೇಷನ್ ಅನ್ನು ಅಳಿಸಲು ಸ್ವತಂತ್ರರು ಮತ್ತು ಅವರು ಅದರಲ್ಲಿ ನೋಂದಣಿ ಮಾಡಿಕೊಳ್ಳುವವರೆಗೆ ಅದು ನಿಷ್ಕ್ರಿಯವಾಗಿ ಇರುತ್ತದೆ’ ಎಂದು ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಸ್ಪಷ್ಟನೆ ನೀಡಿದ್ದಾರೆ.

‘ನೀವು ಅಳಿಸಲು ಬಯಸಿದ್ದರೆ, ಅದನ್ನು ಅಳಿಸಬಹುದು. ಅದನ್ನು ಬಳಸದಿದ್ದರೆ ನೋಂದಾಯಿಸಿಕೊಳ್ಳಬೇಡಿ. ಒಂದು ವೇಳೆ ನೋಂದಾಯಿಸಿದರೆ ಅದು ಸಕ್ರಿಯವಾಗಿ ಉಳಿಯುತ್ತದೆ. ಇಲ್ಲದಿದ್ದರೆ ನಿಷ್ಕ್ರಿಯವಾಗಿರುತ್ತದೆ’ ಎಂದು ಅವರು ಸಂಸತ್ತಿನ ಹೊರಗೆ ಸುದ್ದಿಗಾರರಿಗೆ ತಿಳಿಸಿದರು.

‘ವಂಚನೆ ಮತ್ತು ಕಳ್ಳತನದಿಂದ ಗ್ರಾಹಕರನ್ನು ರಕ್ಷಿಸುವುದು ಈ ಅಪ್ಲಿಕೇಷನ್‌ನ ಉದ್ದೇಶ. ಆದರೆ, ಇದರ ಬಗ್ಗೆ ಹೆಚ್ಚಿನ ಜನರಿಗೆ ತಿಳಿದಿಲ್ಲ’ ಎಂದರು.

‘ಈ ಅಪ್ಲಿಕೇಷನ್ ಮೂಲಕ ಯಾವುದೇ ಕರೆ ಮೇಲ್ವಿಚಾರಣೆ, ನಿಗಾ ಮಾಡುವುದಿಲ್ಲ. ಇದರ ಆಧಾರದ ಮೇಲೆ ಯಾವುದೇ ಗೂಢಚಾರಿಕೆಯೂ ನಡೆಯುವುದಿಲ್ಲ. ಈ ಬಗ್ಗೆ ವಿರೋಧ ಪಕ್ಷಗಳು ಆರೋಪಗಳಲ್ಲಿ ಹುರುಳಿಲ್ಲ’ ಎಂದು ಪ್ರತಿಕ್ರಿಯಿಸಿದರು.

‘ಇದು ಸಾರ್ವಜನಿಕರ ರಕ್ಷಣೆಗಾಗಿ ಇರುವ ಅಪ್ಲಿಕೇಷನ್. ವಿರೋಧಿಸುವುದು ಸಲ್ಲ. ಇದರ ಆಧಾರದ ಮೇಲೆ ಫೋನ್ ಐಎಂಇಐ ಸಂಖ್ಯೆ ನಕಲಿಯೊ ಅಥವಾ ಅಸಲಿಯೊ ಎಂಬುದನ್ನು ಗುರುತಿಸಬಹುದಾಗಿದೆ. ಹಲವು ವಂಚನೆಗಳನ್ನು ತಡೆಯಬಹುದಾಗಿದೆ’ ಎಂದು ಅವರು ವಿವರಿಸಿದರು.

ಇಲ್ಲಿಯವರೆಗೆ 1.5 ಕೋಟಿಗೂ ಹೆಚ್ಚು ಮೊಬೈಲ್‌ಗಳಲ್ಲಿ ಈ ಅಪ್ಲಿಕೇಷನ್ ಡೌನ್‌ಲೋಡ್ ಆಗಿದೆ. ಇದರ ಆಧಾರದ ಮೇಲೆ 20 ಲಕ್ಷಕ್ಕೂ ಹೆಚ್ಚು ಕದ್ದ ಮೊಬೈಲ್‌ಗಳನ್ನು ಪತ್ತೆ ಹಚ್ಚಲಾಗಿದೆ. ಈ ಪೈಕಿ 7.5 ಲಕ್ಷ ಮೊಬೈಲ್‌ಗಳನ್ನು ಬಳಕೆದಾರರಿಗೆ ಹಿಂತಿರುಗಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಆ್ಯಪ್ ಅಳವಡಿಕೆಗೆ ಒಪ್ಪದ ಆ್ಯಪಲ್ ಚರ್ಚೆಗೆ ಮುಂದಾದ ಸ್ಯಾಮ್ಸಂಗ್

ತಾನು ತಯಾರಿಸುವ ಮೊಬೈಲ್ ಫೋನ್‌ಗಳಲ್ಲಿ ಈ ಆ್ಯಪ್ ಅನ್ನು ಮೊದಲೇ ಅಳವಡಿಸಲು ಆ್ಯಪಲ್ ಕಂಪನಿ ನಿರಾಕರಿಸಿದ್ದು, ಈ ಸಂಬಂಧ ಸರ್ಕಾರಕ್ಕೆ ತನ್ನ ನಿಲುವನ್ನು ಸ್ಪಷ್ಟಪಡಿಸಲಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ದೂರಸಂಪರ್ಕ ಇಲಾಖೆಯು ನವೆಂಬರ್ 28ರಂದು ಹೊರಡಿಸಿರುವ ಆದೇಶದ ಬಗ್ಗೆ ಸ್ಯಾಮ್ಸಂಗ್ ಕಂಪನಿ ಸರ್ಕಾರದ ಜೊತೆ ಮಾತುಕತೆ ನಡೆಸಲಿದೆ. ಮೊಬೈಲ್ ಫೋನ್‌ಗಳಲ್ಲಿ ಈ ಆ್ಯಪ್ ಅನ್ನು ಮೊದಲೇ ಅಳವಡಿಸಿರಬೇಕು ಎಂಬ ಆದೇಶದ ವಿಚಾರವಾಗಿ ಮಧ್ಯಮ ಮಾರ್ಗವೊಂದನ್ನು ಕಂಡುಕೊಳ್ಳಲು ಈ ಕಂಪನಿಗಳು ಯತ್ನಿಸಲಿವೆ ಎಂದು ಮೂಲಗಳು ಹೇಳಿವೆ.

▶9

ಎಸ್‌ಐಆರ್ ಚರ್ಚೆಗೆ ಒಪ್ಪಿಗೆ

ಮುಖ್ಯಾಂಶಗಳು

- ಸ್ಪೀಕರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸಹಮತ
- ಎರಡನೇ ದಿನವೂ ಲೋಕಸಭಾ ಕಲಾಪ ಮುಂದೂಡಿಕೆ

ನವದೆಹಲಿ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಸಂಸತ್ತಿನಲ್ಲಿ ಚರ್ಚೆಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳ ನಾಯಕರು ಪ್ರತಿಭಟನೆ ನಡೆಸಿದ ಬೆನ್ನಲ್ಲೇ, ಕೇಂದ್ರ ಸರ್ಕಾರ ಇದೇ 9ರಂದು ಲೋಕಸಭೆಯಲ್ಲಿ ಚರ್ಚೆಗೆ ಅವಕಾಶ ಕಲ್ಪಿಸುವುದಾಗಿ ಹೇಳಿದೆ.

ಇದರಿಂದ ಸಂಸತ್ತಿನ ಉಭಯ ಸದನಗಳಲ್ಲಿ ನಡೆಯುತ್ತಿದ್ದ ಗದ್ದಲಕ್ಕೆ ತೆರೆ ಬಿದ್ದಂತಾಗಿದೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅಧ್ಯಕ್ಷತೆಯಲ್ಲಿ ನಡೆದ ಸರ್ವಪಕ್ಷಗಳ ನಾಯಕರ ಸಭೆ ಮತ್ತು ಕಲಾಪ ಸಲಹಾ ಸಮಿತಿ (ಬಿಎಸಿ) ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

‘ಸ್ಪೀಕರ್ ಅಧ್ಯಕ್ಷತೆಯಲ್ಲಿ ನಡೆದ ಸರ್ವಪಕ್ಷಗಳ ನಾಯಕರ ಸಭೆಯಲ್ಲಿ ಇದೇ 8ರಂದು (ಸೋಮವಾರ) ಮಧ್ಯಾಹ್ನ 12 ಗಂಟೆಯಿಂದ ‘ವಂದೇ ಮಾತರಂ’ನ 150ನೇ ವಾರ್ಷಿಕೋತ್ಸವ ಕುರಿತು ಹಾಗೂ ಇದೇ 9ರಂದು ಮಧ್ಯಾಹ್ನ 12 ಗಂಟೆಯಿಂದ ಚುನಾವಣಾ ಸುಧಾರಣೆಗಳ ಕುರಿತು ಚರ್ಚೆ ನಡೆಸಲು ನಿರ್ಧರಿಸಲಾಗಿದೆ’ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

▶8

‘ರಾಜಕೀಯ ಶಾಶ್ವತ ಅಲ್ಲ, ಅಪ್ಪನ ಆಸ್ತಿಯೂ ಅಲ್ಲ’

ಸಿ.ಎಂ ಸಿದ್ದರಾಮಯ್ಯ ಮಾತು

ಉಪಾಹಾರಕ್ಕಾಗಿ ಮನೆಗೆ ಬಂದಿದ್ದ ಸಿದ್ದರಾಮಯ್ಯ ಅವರನ್ನು ಡಿ.ಕೆ.ಶಿವಕುಮಾರ್ ಸ್ವಾಗತಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕೀಯ ಶಾಶ್ವತ ಅಲ್ಲ. ನಮ್ಮಪ್ಪನ ಆಸ್ತಿಯೂ ಅಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿರುವ ‘ಅಸ್ಪಷ್ಟ’ ಮಾತುಗಳ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಮಂತ್ರಣದ ಮೇರೆಗೆ, ಅವರ ಮನೆಗೆ ಮಂಗಳವಾರ ಬೆಳಿಗ್ಗೆ ಸಿದ್ದರಾಮಯ್ಯ ಹೋಗಿದ್ದರು. ಅಲ್ಲಿ ಶಿವಕುಮಾರ್ ಜತೆಗೆ ಉಪಾಹಾರ ಸೇವಿಸಿದ ಸಿದ್ದರಾಮಯ್ಯ ಅವರು ವಿಧಾನಸೌಧಕ್ಕೆ ಬಂದಿದ್ದರು. ಅಲ್ಲಿಂದ ಹೊರಡುವಾಗ, ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ, ಮದ್ದೂರು ಶಾಸಕ ಉದಯ ಕದಲೂರು ಅವರಿಗೆ ಎದುರಾದರು. ಈ ವೇಳೆ, ಗೋಪಾಲಕೃಷ್ಣ ಅವರು ಸಿದ್ದರಾಮಯ್ಯ ಅವರನ್ನು ಮಾತಿಗೆ ಎಳೆದರು. ಅಗ ನಗುತ್ತಲೇ ಮಾತನಾಡಿದ ಸಿದ್ದರಾಮಯ್ಯ ಅವರು, ‘ಏನು ಆಗುತ್ತದೆಯೋ ಆಗಲಿ. ನಾನು ಯಾವುದಕ್ಕೂ ತಲೆ ಕೆಡಿಸಿಕೊಳ್ಳುವುದಿಲ್ಲ’ ಎಂದು ಅಲ್ಲಿಂದ ನಡೆದರು.

ಇಬ್ಬರ ನಡುವಣ ಈ ಮಾತುಕತೆಯ ದೃಶ್ಯದಲ್ಲಿ ಧ್ವನಿ ಸ್ಪಷ್ಟವಾಗಿಲ್ಲ. ಗೋಪಾಲಕೃಷ್ಣ ಅವರು ಕೇಳಿದ ಪ್ರಶ್ನೆ ಯಾವುದು ಎಂಬುದು ಕೇಳದಿದ್ದರೂ ಸಿದ್ದರಾಮಯ್ಯ ಅವರು, ‘ರಾಜಕೀಯ ಶಾಶ್ವತ ಅಲ್ಲ’ ಎಂಬುದು ಮಾತ್ರ ಗಟ್ಟಿಯಾಗಿ ಕೇಳುತ್ತದೆ.

ನಾಟಿ ಕೋಳಿ ಸಾರು, ಇಡ್ಲಿ

ತಮ್ಮ ಮನೆಗೆ ಬೆಳಿಗ್ಗೆ 9.30ಕ್ಕೆ ಬಂದ ಸಿದ್ದರಾಮಯ್ಯ ಅವರನ್ನು ಡಿ.ಕೆ. ಶಿವಕುಮಾರ್ ಆತ್ಮೀಯವಾಗಿ ಬರಮಾಡಿಕೊಂಡರು. ಉಪಾಹಾರದ ಮೆನುವಿನಲ್ಲಿ ಇಡ್ಲಿ ಜೊತೆ ನಾಟಿ ಕೋಳಿ ಸಾರು ವ್ಯವಸ್ಥೆ ಮಾಡಲಾಗಿತ್ತು. ಶಿವಕುಮಾರ್ ಅವರ ಪತ್ನಿ ಉಷಾ ಶಿವಕುಮಾರ್ ಅವರು ಮೈಸೂರು ಶೈಲಿಯ ಉಪಾಹಾರ ಸಿದ್ಧಪಡಿಸಿದ್ದರು.

‘ಶಿವಕುಮಾರ್ ನನ್ನನ್ನು ಉಪಾಹಾರಕ್ಕೆ ಕರೆದಿದ್ದರು. ನಾನು ಮಾಂಸಹಾರಿ, ಇವರು ಸಸ್ಯಾಹಾರಿ. ನಾನು ಅದಕ್ಕೆ ನನ್ನ ಮನೆಯಲ್ಲಿ ವೆಜ್ ಮಾಡಿಸಿದ್ದೆ. ಇಲ್ಲಿ ಸಿಗುವ ಕೋಳಿ ಚೆನ್ನಾಗಿರುವುದಿಲ್ಲ ಎಂಬ ಕಾರಣಕ್ಕೆ ಹಳ್ಳಿಯಿಂದ ಕೋಳಿ ತರಿಸುವಂತೆ ಶಿವಕುಮಾರ್ ಅವರಿಗೆ ನಾನು ಹೇಳಿದ್ದೆ’ ಎಂದು ಸಿದ್ದರಾಮಯ್ಯ ನಕ್ಕರು. ಸಿದ್ದರಾಮಯ್ಯ ಮತ್ತು ಶಿವಕುಮಾರ್ ಜೊತೆಯಲ್ಲಿ, ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಮತ್ತು ಶಾಸಕ ಕುಣಿಗಲ್ ರಂಗನಾಥ್ ಕೂಡಾ ಉಪಾಹಾರ ಸೇವಿಸಿದರು.

ಮುಖ್ಯಮಂತ್ರಿ ತಮ್ಮ ಮನೆಗೆ ಭೇಟಿ ನೀಡಿದ ವೇಳೆ, ಡಿ.ಕೆ. ಸುರೇಶ್ ಅವರು ಮುಖ್ಯಮಂತ್ರಿಯ ಕಾಲು ಮುಟ್ಟಿ ನಮಸ್ಕರಿಸಿದರು. ಶಿವಕುಮಾರ್ ಅವರು ಶಾಲು ಹೊದಿಸಿ ಸನ್ಮಾನ ಮಾಡಿದರು.

ಯಡಿಯೂರಪ್ಪ ವಿರುದ್ಧದ ಪ್ರಕರಣಕ್ಕೆ ‘ಸುಪ್ರೀಂ’ ತಡೆ

ಪ್ರಜಾವಾಣಿ ವಾರ್ತೆ

ಯಡಿಯೂರಪ್ಪ

ನವದೆಹಲಿ: ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ವಿರುದ್ಧದ ‘ಪೋಕ್ಸೊ’ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ದೂರಿಗೆ ಸಂಬಂಧಿಸಿದ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆ ನೀಡಿದೆ.

ಪ್ರಕರಣ ರದ್ದುಗೊಳಿಸಲು ಕರ್ನಾಟಕ ಹೈಕೋರ್ಟ್ ನಿರಾಕರಿಸಿದ್ದನ್ನು ಪ್ರಶ್ನಿಸಿ ಯಡಿಯೂರಪ್ಪ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ನ್ಯಾಯ ಪೀಠವು ಮಧ್ಯಂತರ ಆದೇಶ ನೀಡಿದೆ.

‘ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಹಾಗೂ ಪ್ರತಿವಾದಿಗೆ ನೋಟಿಸ್ ಜಾರಿ ಮಾಡಿ. ಏತನ್ಮಧ್ಯೆ, ವಿಚಾರಣಾ ಪ್ರಕ್ರಿಯೆಗಳಿಗೆ ತಡೆ ಮುಂದುವರಿಯುತ್ತದೆ’ ಎಂದು ಸಿಜೆಐ ಸೂರ್ಯಕಾಂತ್ ಹೇಳಿದರು.

‘ಈ ವಿಷಯವನ್ನು ಮತ್ತೆ ಹೈಕೋರ್ಟ್‌ಗೆ ಹಿಂತಿರುಗಿಸಿ, ವಿಚಾರಣೆಗೆ ಒಳಪಡಿಸಬೇಕೇ ಎಂಬುದನ್ನು ಪರಿಶೀಲಿಸುವ ಸೀಮಿತ ಉದ್ದೇಶಕ್ಕಾಗಿ ನೋಟಿಸ್ ನೀಡಲಾಗುತ್ತಿದೆ’ ಎಂದು ಅವರು ಸ್ಪಷ್ಟಪಡಿಸಿದರು.

ಯಡಿಯೂರಪ್ಪ ಅವರನ್ನು ಪ್ರತಿನಿಧಿಸಿದ ಹಿರಿಯ ವಕೀಲ ಸಿದ್ಧಾರ್ಥ್ ಲೂತ್ರಾ, ‘ಹೈಕೋರ್ಟ್ ಪ್ರಮುಖ ಸಾಕ್ಷ್ಯಗಳನ್ನು ನಿರ್ಲಕ್ಷಿಸಿದೆ ಮತ್ತು ಘಟನೆಯ ಸಮಯದಲ್ಲಿ ‘ಅಂತಹದ್ದೇನೂ ಸಂಭವಿಸಿಲ್ಲ’ ಎಂದು ಸೂಚಿಸುವ ಹೇಳಿಕೆಗಳನ್ನು ಪರಿಗಣಿಸಲು ವಿಫಲವಾಗಿದೆ’ ಎಂದು ವಾದಿಸಿದರು.

‘ಹೈಕೋರ್ಟ್ ಸತ್ಯಗಳನ್ನು ನಿರ್ಲಕ್ಷಿಸಿದೆ. ಅರ್ಜಿದಾರರು ನಾಲ್ಕು ಬಾರಿ ಮುಖ್ಯಮಂತ್ರಿಯಾಗಿದ್ದರು. ಅವರಿಗೆ ಈಗ 88 ವರ್ಷ. ರಾಜಕೀಯ ದ್ವೇಷದ ಪ್ರಕರಣದಿಂದ ನಲುಗಿದ್ದಾರೆ’ ಎಂದು ಲೂತ್ರಾ ಹೇಳಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ

‘ಎಸ್‌ಸಿ/ಎಸ್‌ಟಿ ಕಾಯ್ದೆ ರಕ್ಷಣೆ ಇಲ್ಲ’

ಲಖನೌ: ಜಾತಿ ವ್ಯವಸ್ಥೆಗೆ ಮಾನ್ಯತೆ ಇಲ್ಲದ ಧರ್ಮಕ್ಕೆ ಮತಾಂತರಗೊಂಡ ವ್ಯಕ್ತಿಗಳಿಗೆ ಎಸ್‌ಸಿ/ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಯ ರಕ್ಷಣಾ ನಿಬಂಧನೆಗಳನ್ನು ವಿಸ್ತರಿಸಲು ಸಾಧ್ಯವಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿದೆ. ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿರುವ ಪರಿಶಿಷ್ಟ ಜಾತಿಗೆ(ಎಸ್‌ಸಿ) ಸೇರಿದ ಜಿತೇಂದ್ರ ಕುಮಾರ್ ಸಾಹ್ನಿ ಮೇಲೆ, ಹಿಂದೂ ದೇವರನ್ನು ಅವಹೇಳನ ಮಾಡಿದ ಕಾರಣ ನೀಡಿ ವಿವಿಧ ವಿಭಾಗಗಳ ಅಡಿಯಲ್ಲಿ ಮೊಕದ್ದಮೆ ಹೂಡಲಾಗಿದೆ. ಅದನ್ನು ಪ್ರಶ್ನಿಸಿ ಜಿತೇಂದ್ರ ಅರ್ಜಿ ಸಲ್ಲಿಸಿದ್ದರು.

▶9

India Rank	World Rank	Institution Name	Overall Score
1	205	Indian Institute of Technology Delhi (IITD)	83.1
2	235	Indian Institute of Technology Bombay (IITB)	81.4
3	236	Indian Institute of Technology Kharagpur (IIT-KGP)	81.3
4	241	University of Delhi	80.9
5	305	Indian Institute of Technology Madras (IITM)	77.3
6	310	Indian Institute of Technology Kanpur (IITK)	77
7	352	Vellore Institute of Technology (VIT)	74.9
7	352	Indian Institute of Technology Roorkee (IITR)	74.9
9	462	Indian Institute of Science (IISc) Bangalore	70.5
10	467	Manipal Academy of Higher Education, Manipal	70.3

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ

ಅನುಕಂಪದ ನೌಕರಿಗೆ ಅಲೆದಾಟ

ಬೆಂಗಳೂರು: ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಅರ್ಜಿ ಸಲ್ಲಿಸಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಹಂಚಿಕೆಯಾದ ಅಭ್ಯರ್ಥಿಗಳು ನೇಮಕಾತಿ ಆದೇಶಕ್ಕಾಗಿ 10 ತಿಂಗಳಿನಿಂದ ಕಚೇರಿಗೆ ಅಲೆದಾಡುತ್ತಿದ್ದಾರೆ.

ಸರ್ಕಾರಿ ನೌಕರರು ಮೃತಪಟ್ಟಾಗ ಅವರ ಕುಟುಂಬದ ಸದಸ್ಯರಿಗೆ ನಿಯಮದಂತೆ ಅನುಕಂಪದ ಆಧಾರದಲ್ಲಿ ಸರ್ಕಾರಿ ಉದ್ಯೋಗ ನೀಡಬೇಕು. ನೌಕರರು ಯಾವ ಇಲಾಖೆಯಲ್ಲಿ ಕೆಲಸ ಮಾಡುತ್ತಿರುತ್ತಾರೆಯೋ, ಆ ಇಲಾಖೆಗೆ ಅರ್ಜಿ ಸಲ್ಲಿಸುತ್ತಾರೆ. ಮಾತೃ ಇಲಾಖೆಯಲ್ಲಿ ಖಾಲಿ ಹುದ್ದೆಗಳು ಲಭ್ಯವಿಲ್ಲದಿದ್ದರೆ ಅರ್ಜಿಗಳನ್ನು ಆಯಾ ಪ್ರಾದೇಶಿಕ ಆಯುಕ್ತರಿಗೆ ಕಳುಹಿಸಲಾಗುತ್ತದೆ. ಅರ್ಜಿಗಳ ಸಂಖ್ಯೆ, ವಿದ್ಯಾರ್ಹತೆಗೆ ಅನುಗುಣವಾಗಿ ಖಾಲಿ ಹುದ್ದೆಗಳ ಆಧಾರದಲ್ಲಿ ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಲಾಗುತ್ತದೆ.

ಆಯಾ ಇಲಾಖೆಗಳು ಹಂಚಿಕೆಯಾದ ಅಭ್ಯರ್ಥಿಗಳ ನೈಜತೆ, ದಾಖಲೆ ಪರಿಶೀಲಿಸಿದ ನಂತರ ನೇಮಕಾತಿ ಆದೇಶ ನೀಡುತ್ತವೆ. ವಿವಿಧ ಪ್ರಕರಣಗಳಲ್ಲಿ ಸುಪ್ರೀಂಕೋರ್ಟ್, ಹೈಕೋರ್ಟ್ ನೀಡಿದ ಆದೇಶದಂತೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಅರ್ಜಿ ಸಲ್ಲಿಸಿದ ಮೂರು ತಿಂಗಳ ಒಳಗೆ ನೇಮಕಾತಿ ಆದೇಶ ನೀಡಬೇಕು. ಇದೇ ವರ್ಷದ ಆರಂಭದಲ್ಲಿ ಹಂಚಿಕೆಯಾಗಿದ್ದ ಅಭ್ಯರ್ಥಿಗಳಿಗೆ ಉಳಿದ ಇಲಾಖೆಗಳು ಕಾಲಮಿತಿಯ ಒಳಗೆ ನೇಮಕಾತಿ ಆದೇಶ ನೀಡಿವೆ. ಆದರೆ, ನೋಂದಣಿ ಮತ್ತು ಮುದ್ರಾಂಕ ಇಲಾಖೆ ವಿಳಂಬ ಮಾಡಿದ್ದು, 37 ಅಭ್ಯರ್ಥಿಗಳು ನಿತ್ಯವೂ ಬೆಂಗಳೂರಿನ ಕಚೇರಿಗೆ ಅಲೆದಾಡುತ್ತಿದ್ದಾರೆ.

‘ಆದಾಯದ ಮೂಲವಾಗಿದ್ದ ಪೋಷಕರನ್ನು ಕಳೆದುಕೊಂಡು ಆರ್ಥಿಕ ಸಂಕಷ್ಟ ಅನುಭವಿಸುತ್ತಿರುವ ಮೃತ ನೌಕರರ ಕುಟುಂಬದ ಸದಸ್ಯರು ಆದೇಶದ ಪ್ರತಿ ಪಡೆಯಲು ನಿತ್ಯವೂ ಬೆಂಗಳೂರಿಗೆ ಬಂದು ಹೋಗುತ್ತಿದ್ದಾರೆ. ಎಲ್ಲ ಪ್ರಕ್ರಿಯೆ ಮುಗಿದಿದ್ದರೂ ವಿಳಂಬಕ್ಕೆ ಕಾರಣ ಸಿಗುತ್ತಿಲ್ಲ. ನಮ್ಮ ಜತೆಗೆ ಅರ್ಜಿ ಸಲ್ಲಿಸಿ, ಇತರೆ ಇಲಾಖೆಗಳಿಗೆ ಹಂಚಿಕೆಯಾದವರು ನೇಮಕಾತಿ ಆದೇಶ ಪಡೆದುಕೊಂಡು ಈಗಾಗಲೇ ಕೆಲಸ ಆರಂಭಿಸಿದ್ದಾರೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ವಿಳಂಬ ನೀತಿ ಸರಿಯಲ್ಲ’ ಎನ್ನುತ್ತಾರೆ ಉದ್ಯೋಗದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳು.

> **ನೋಂದಣಿ ಮಹಾಪರಿವೀಕ್ಷಕರು, ಮುದ್ರಾಂಕ ಆಯುಕ್ತರಿಂದ ಮಾಹಿತಿ ಪಡೆದು, ಎಲ್ಲ ಅರ್ಜಿಗಳನ್ನು ಇತ್ಯರ್ಥ ಮಾಡಲಾಗುವುದು**
>
> **ಮುನೀಶ್ ಮೌದ್ಗಿಲ್,** ಪ್ರಧಾನ ಕಾರ್ಯದರ್ಶಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆ

2,418 ಎಕರೆ ಭೂ ಸ್ವಾಧೀನ

ಬಿಬಿಸಿ ಅನುಷ್ಠಾನ: ನಗರದ ಸಂಚಾರ ದಟ್ಟಣೆ ಶೇಕಡ 40ರಷ್ಟು ತಗ್ಗುವ ನಿರೀಕ್ಷೆ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ– ಪಿಆರ್‌ಆರ್–1) ಯೋಜನೆಗೆ 2,418 ಎಕರೆ ಭೂಮಿ ಸ್ವಾಧೀನ ಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಧರಿಸಿದೆ.

ಸುಮಾರು ಐದು ಸಾವಿರ ಕುಟುಂಬಗಳು ಭೂಮಿ ಕಳೆದುಕೊಳ್ಳಲಿದ್ದು, ಕೆಲ ಕುಟುಂಬಗಳು ಪೂರ್ಣ ಅಥವಾ ಭಾಗಶಃ ಭೂಮಿ ಕಳೆದುಕೊಳ್ಳುವ ಸಾಧ್ಯತೆ ಇದೆ. ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಬಿಬಿಸಿ) ಯೋಜನೆ ಜಾರಿಯಾದರೆ ನಗರದ ಮೇಲಿನ ಸಂಚಾರ ದಟ್ಟಣೆ ಶೇಕಡ 40ರಷ್ಟು ತಗ್ಗುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

ಪಿಆರ್‌ಆರ್–1 ನಿರ್ಮಾಣಕ್ಕಾಗಿ ₹27,000 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಿದ್ದು, ಈ ಪೈಕಿ ಭೂಸ್ವಾಧೀನಕ್ಕೆ ₹20,000 ಕೋಟಿ ಮತ್ತು ರಸ್ತೆ ನಿರ್ಮಾಣಕ್ಕೆ ₹7,000 ಕೋಟಿ ವೆಚ್ಚ ಮಾಡಲಾಗುತ್ತದೆ. ಯೋಜನೆ ಅನುಷ್ಠಾನಕ್ಕೆ ಅಗತ್ಯವಿರುವ ಹಣವನ್ನು ಹುಡ್ಕೊದಿಂದ ಸಾಲ ಪಡೆಯಲಾಗಿದೆ.

100 ಮೀಟರ್ ಕಾರಿಡಾರ್‌ನಲ್ಲಿ ಉಳಿಯುವ 35 ಮೀಟರ್‌ನಲ್ಲಿ ವಾಣಿಜ್ಯ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಹರಾಜು ಹಾಕಲು ಹಾಗೂ ಟೋಲ್ ಸಂಗ್ರಹಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಇದರಿಂದ ಬರುವ ಆದಾಯವನ್ನು ಸಾಲ ಮರುಪಾವತಿಗೆ ಬಳಸಿಕೊಳ್ಳಲಾಗುತ್ತದೆ. ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲದ ಮೊತ್ತಕ್ಕೆ ಸರ್ಕಾರದ ವತಿಯಿಂದ ಖಾತರಿ ನೀಡಲು ಹಾಗೂ ಬಡ್ಡಿ ಮೊತ್ತವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ರಾಜ್ಯ ಸರ್ಕಾರದಿಂದ ಭರಿಸಲಾಗುತ್ತದೆ. ಈ ಅಡಮಾನ ಪ್ರಕ್ರಿಯೆಗೆ ವಿಧಿಸುವ ಮುದ್ರಾಂಕ ಶುಲ್ಕಕ್ಕೆ ಶೇಕಡ 50ರಷ್ಟು ವಿನಾಯಿತಿ ನೀಡಲು ತೀರ್ಮಾನಿಸಲಾಗಿದೆ.

₹27,000 ಕೋಟಿ ಬಿಬಿಸಿ ಯೋಜನೆಯ ಅಂದಾಜು ವೆಚ್ಚ

₹20,000 ಕೋಟಿ ಭೂಸ್ವಾಧೀನಕ್ಕೆ ಆಗುವ ವೆಚ್ಚ

₹7,000 ಕೋಟಿ ರಸ್ತೆ ನಿರ್ಮಾಣದ ವೆಚ್ಚ

ಈ ಯೋಜನೆಯಿಂದ ಭೂಮಿ ಕಳೆದುಕೊಳ್ಳುವ ರೈತರಿಗೆ 60:40 ಅನುಪಾತದಲ್ಲಿ 9,583 ಚದರ ಅಡಿ ಅಭಿವೃದ್ಧಿಪಡಿಸಿದ ವಸತಿ ನಿವೇಶನಗಳನ್ನು ನೀಡಲಾಗುತ್ತದೆ. ವಾಣಿಜ್ಯ ನಿವೇಶನಗಳನ್ನು ಆಯ್ಕೆ ಮಾಡಿಕೊಂಡವರಿಗೆ 8,385 ಚದರ ಅಡಿ ಜಾಗವನ್ನು ಪರಿಹಾರದ ರೂಪದಲ್ಲಿ ನೀಡಲಾಗುತ್ತದೆ.

ಮುಖ್ಯ ಜಂಕ್ಷನ್‌ಗಳ ಬಳಿ ವಿಶ್ರಾಂತಿ ಕೇಂದ್ರಗಳು, ವಾಣಿಜ್ಯ, ವಸತಿ ಭೂಮಿಯನ್ನು ಅಭಿವೃದ್ಧಿಪಡಿಸಲಾಗುತ್ತದೆ. ಸುಮಾರು 50–100 ಎಕರೆ ಭೂಮಿಯನ್ನು ಅಭಿವೃದ್ಧಿಗೆ ಮೀಸಲಿಡಲಾಗುತ್ತದೆ. ವಾಣಿಜ್ಯ ನಿವೇಶನಗಳನ್ನು ಹಂಚಿಕೆ ಮಾಡಿದ ಬಳಿಕ ಉಳಿದ ಜಾಗದಲ್ಲಿ ಮಾಲ್, ರೆಸ್ಟೋರೆಂಟ್, ವಾಣಿಜ್ಯ, ಪೆಟ್ರೋಲ್ ಬಂಕ್, ವಸತಿ ಉದ್ದೇಶಗಳಿಗೆ ಹರಾಜು ಹಾಕಲು ನಿರ್ಧರಿಸಲಾಗಿದೆ.

ತುಮಕೂರು ರಸ್ತೆಯ ಮಾದನಾಯಕನಹಳ್ಳಿ ರಸ್ತೆಯ ಜಂಕ್ಷನ್, ಹೆಸರಘಟ್ಟ ರಸ್ತೆಯ ಜಂಕ್ಷನ್, ದೊಡ್ಡಬಳ್ಳಾಪುರ ರಸ್ತೆಯ ಜಂಕ್ಷನ್, ಹೆಣ್ಣೂರು ರಸ್ತೆಯ ಜಂಕ್ಷನ್, ಚನ್ನಸಂದ್ರ ರಸ್ತೆಯ ಜಂಕ್ಷನ್‌ಗಳಲ್ಲಿ ಕ್ಲೋವರ್ ಲೀಫ್ ನಿರ್ಮಿಸಲಾಗುತ್ತದೆ. ಚೊಕ್ಕನಹಳ್ಳಿ ರಸ್ತೆಯ ಜಂಕ್ಷನ್‌ನಲ್ಲಿ ಮೇಲ್ಸೇತುವೆ ನಿರ್ಮಿಸಲಾಗುತ್ತದೆ.

ಬಿಬಿಸಿ ಯೋಜನೆಯು 117 ಕಿ.ಮೀ. ಉದ್ದ ಇದ್ದು, ತುಮಕೂರು ರಸ್ತೆಯಿಂದ ಯಲಹಂಕ, ವೈಟ್‌ಫೀಲ್ಡ್, ಆನೇಕಲ್, ಎಲೆಕ್ಟ್ರಾನಿಕ್ ಸಿಟಿ, ಮೈಸೂರು ರಸ್ತೆ ಮಾರ್ಗವಾಗಿ ಬೆಂಗಳೂರು ಸುತ್ತುವರಿದು, ಮತ್ತೆ ತುಮಕೂರು ರಸ್ತೆಯ ಬಿಐಇಸಿ ಬಳಿ ಸಂಪರ್ಕ ಸಾಧಿಸಲಿದೆ. ಈ ರಸ್ತೆಯು ಬೆಂಗಳೂರಿನ ಉತ್ತರ ಭಾಗದಲ್ಲಿ 73 ಕಿ.ಮೀ. ಸಾಗಲಿದ್ದು, ಉಳಿದದ್ದು ಬೆಂಗಳೂರಿನ ದಕ್ಷಿಣ ಭಾಗದಲ್ಲಿ ಸಾಗಲಿದೆ.

ಸುದ್ದಿ 2 ನಿಮಿಷ

ಸೋಂಪುರ: ಹನುಮ ಜಯಂತಿ

ದಾಬಸ್ ಪೇಟೆ: ಸೋಂಪುರ ಹೋಬಳಿಯಾದ್ಯಂತ ಹನುಮ ಜಯಂತಿ ಪ್ರಯುಕ್ತ ಆಂಜನೇಯ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯಿತು.

ಚನ್ನೋಹಳ್ಳಿ, ಹಾಲೇನಹಳ್ಳಿ, ಇಮಚೇನಹಳ್ಳಿ, ಹೆಗ್ಗುಂದ, ಕೆರೆಪಾಳ್ಯ, ಕುರುವೆಲ್ ತಿಮ್ಮನಹಳ್ಳಿ, ಕುಂಟಬೊಮ್ಮನಹಳ್ಳಿ ಆಂಜನೇಯ ದೇವಾಲಯ, ನರಸೀಪುರದ ಆತ್ಮಾರಾಮ ಸ್ವಾಮಿ ದೇವಾಲಯ, ರಾಮದೇವರ ಬೆಟ್ಟ, ಆಗಳಕುಪ್ಪೆ ರಾಮದೇವರ ದೇವಸ್ಥಾನಗಳಲ್ಲಿ ಆಂಜನೇಯ ದೇವರಿಗೆ ಅಭಿಷೇಕ, ಅಲಂಕಾರ ಮಾಡಲಾಗಿತ್ತು.

ಐತಿಹಾಸಿಕ ಸಿದ್ದರ ಬೆಟ್ಟದ ಮೇಲಿನ ಆಂಜನೇಯ ದೇವಾಲಯದಲ್ಲಿ 5 ಸಾವಿರಕ್ಕೂ ಹೆಚ್ಚು ಮಾಲಾಧಾರಿಗಳು ಹಾಗೂ ಅಪಾರ ಭಕ್ತರ ಸಮ್ಮುಖದಲ್ಲಿ ಹನುಮ ಜಯಂತಿ ನಡೆಯಿತು.

ರಾಜ್ಯದ ವಿವಿಧೆಡೆ ಮಳೆ ಸಾಧ್ಯತೆ

ಬೆಂಗಳೂರು: ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿರುವ ಪರಿಣಾಮ, ರಾಜ್ಯದ ವಿವಿಧೆಡೆ ಬುಧವಾರ ಸಾಧಾರಣ ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ತಾಪಮಾನದಲ್ಲಿ ಇಳಿಕೆ ಹಾಗೂ ಶೀತಗಾಳಿ ಬೀಸುತ್ತಿರುವ ಪರಿಣಾಮ ಚಳಿ ಮುಂದುವರಿದಿದೆ. ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಮೋಡ ಕವಿದ ವಾತಾವರಣ ಇದ್ದು, ಮಳೆಯಾಗಲಿದೆ.

ಬೆಂಗಳೂರಿನಲ್ಲಿ ಗರಿಷ್ಠ ಮತ್ತು ಕನಿಷ್ಠ ತಾಪಮಾನ ಕ್ರಮವಾಗಿ 24 ಡಿಗ್ರಿ ಸೆಲ್ಸಿಯಸ್ ಮತ್ತು 18 ಡಿಗ್ರಿ ಸೆಲ್ಸಿಯಸ್ ಇರಲಿದೆ. ಉತ್ತರ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ.

ಕಳೆದ 24 ಗಂಟೆಯಲ್ಲಿ ಚಿಂತಾಮಣಿಯಲ್ಲಿ ಗರಿಷ್ಠ 22.2 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ 18.6 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿದೆ. ಮಂಡ್ಯದಲ್ಲಿ ಗರಿಷ್ಠ 26.5 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ 17.3 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿದೆ.

ಎಕ್ಸ್‌ಪ್ರೆಸ್‌ವೇ: 236 ಚಾರ್ಜಿಂಗ್ ಕೇಂದ್ರ

ನವದೆಹಲಿ: ಬೆಂಗಳೂರನ್ನು ಸಂಪರ್ಕಿಸುವ ಹೆದ್ದಾರಿಗಳು ಹಾಗೂ ಎಕ್ಸ್‌ಪ್ರೆಸ್‌ವೇಗಳಲ್ಲಿ 236 ಇ.ವಿ.ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಭಾರಿ ಕೈಗಾರಿಕೆ ಇಲಾಖೆಯ ರಾಜ್ಯ ಸಚಿವ ಭೂಪತಿರಾಜು ಶ್ರೀನಿವಾಸ ವರ್ಮಾ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಬೆಂಗಳೂರು ಕೇಂದ್ರ ಸಂಸದ ಪಿ.ಸಿ.ಮೋಹನ್ ಕೇಳಿದ ಪ್ರಶ್ನೆಗೆ ಸಚಿವರು ಲಿಖಿತ ಉತ್ತರ ನೀಡಿದ್ದಾರೆ.

ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇನಲ್ಲಿ 30, ಬೆಂಗಳೂರು–ಹೈದರಾಬಾದ್ ಹೆದ್ದಾರಿಯಲ್ಲಿ 64, ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇಯಲ್ಲಿ 33 ಹಾಗೂ ಬೆಂಗಳೂರು–ಪುಣೆ ಹೆದ್ದಾರಿಯಲ್ಲಿ 109 ಕೇಂದ್ರಗಳನ್ನು ಆರಂಭಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಬೆಂಗಳೂರಿಗೆ 1,221 ಎಲೆಕ್ಟ್ರಿಕ್ ಬಸ್

ನವದೆಹಲಿ: ಫೇಮ್-2 ಯೋಜನೆಯಡಿ ಬೆಂಗಳೂರಿಗೆ 1,221 ಎಲೆಕ್ಟ್ರಿಕ್ ಬಸ್‌ಗಳನ್ನು ಒದಗಿಸಲಾಗಿದೆ ಎಂದು ಭಾರಿ ಕೈಗಾರಿಕೆ ಇಲಾಖೆಯ ರಾಜ್ಯ ಸಚಿವ ಭೂಪತಿರಾಜು ಶ್ರೀನಿವಾಸ ವರ್ಮಾ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ‘ಕರ್ನಾಟಕಕ್ಕೆ ಫೇಮ್-2 ಯೋಜನೆಯಡಿ 6,862 ಮತ್ತು ಪಿ.ಎಂ. ಇ-ಡ್ರೈವ್ ಯೋಜನೆಯಡಿ 13,800 ಎಲೆಕ್ಟ್ರಿಕ್ ಬಸ್ ನಿಯೋಜಿಸಲಾಗಿದೆ‘ ಎಂದು ತಿಳಿಸಿದ್ದಾರೆ.

ಪಿ.ಎಂ. ಇ-ಡ್ರೈವ್ ಯೋಜನೆಯ ಮೊದಲ ಹಂತದ 10,900 ಇ-ಬಸ್‌ಗಳ ಹಂಚಿಕೆಯಲ್ಲಿ ಬೆಂಗಳೂರಿಗೆ 4,500 ಇ-ಬಸ್‌ಗಳನ್ನು ಹಂಚಿಕೆ ಮಾಡಲಾಗಿದೆ. ಫೇಮ್-2 ಯೋಜನೆಗೆ ಒಟ್ಟು ₹517.23 ಕೋಟಿ ಅನುದಾನ ನೀಡಲಾಗಿದೆ ಎಂದು ಸಚಿವರು ಸದನಕ್ಕೆ ಮಾಹಿತಿ ನೀಡಿದ್ದಾರೆ.

ಹನುಮ ವೇಷಧಾರಿ

ಪ್ರಜಾವಾಣಿ ಚಿತ್ರ

ನಗರದ ಆನಂದರಾವ್ ವೃತ್ತದ ಬಳಿ ಇರುವ ಪಾತಾಳಾಂಜನೇಯ ದೇವಸ್ಥಾನದ ಸಮೀಪ ಮಂಗಳವಾರ ಹನುಮನ ವೇಷಧಾರಿಗಳು ಜನರ ಗಮನವನ್ನು ತಮ್ಮತ್ತ ಸೆಳೆದರು

ಚಿತ್ರಾವಳಿ



ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಆಂಜನೇಯ ಮೂರ್ತಿಗೆ ವಿಶೇಷ ಪೂಜೆ ಹಾಗೂ ಹೂವಿನ ಅಲಂಕಾರ ಮಾಡಲಾಯಿತು

ಹನುಮ ಜಯಂತಿ ಪ್ರಯುಕ್ತ ವರ್ತೂರಿನಲ್ಲಿ ಶಕ್ತ್ಯಾಂಜನೇಯ ಸ್ವಾಮಿ ದೇವಸ್ಥಾನ ಸೇವಾ ಸಮಿತಿಯಿಂದ ಬೈಕ್ ರ್‍ಯಾಲಿ ನಡೆಯಿತು. ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಂದ್ರ ಮೋದಿ, ಮುಖಂಡರಾದ ಶ್ರೀಧರ್, ಚಿಕ್ಕಣ್ಣ, ಕೃಪಾಕರ್, ಸಂಜಯ್, ಶ್ರೀನಿವಾಸ್ ಗೌಡ, ಮಂಜುನಾಥ್, ರಕ್ಷಿತ್ ಇದ್ದರು

ಹನುಮ ಜಯಂತಿ ಅಂಗವಾಗಿ ಹನುಮಂತನಗರದ ಗುಡ್ಡದ ಆಂಜನೇಯಸ್ವಾಮಿ ದೇವಾಲಯಕ್ಕೆ ಮಂಗಳವಾರ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡಿದ್ದರು

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ

ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)

ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ದೇವನಹಳ್ಳಿ, ಕರ್ನಾಟಕ–562164

ದೂ: (080)2991–6308

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗಳಿಗೆ ಇ–ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ಹೆಸರು ಮತ್ತು ಎನ್‌ಐಟಿ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.	ಪೂರ್ಣಗೊಳಿಸುವ ಕಾಲಾವಧಿ	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ	ಇಎಂಡಿ ರೂ.ಗಳಲ್ಲಿ
01	ಬೆಂಗಳೂರು, ದೇವನಹಳ್ಳಿ, ಹೆಚ್‌ಎಸ್‌ಎಫ್‌ಯಲ್ಲಿರುವ ಸಮರ್ಥನ್ ಕಟ್ಟಡದಲ್ಲಿ ಸಿವಿಲ್,ಪಿಹೆಚ್, ವಿದ್ಯುತ್, ಎಸಿ, ತೋಟಗಾರಿಕೆ ಮತ್ತು ಹೌಸ್‌ಕೀಪಿಂಗ್ ಕಾಮಗಾರಿಗಳಿಗೆ (ಒಂದು ವರ್ಷದ ಅವಧಿಗೆ) ನಿರ್ವಹಣಾ ಗುತ್ತಿಗೆ ಮತ್ತು ಸಂಬಂಧಪಟ್ಟ ಸಹಾಯಕ ಸೌಲಭ್ಯಗಳು. **ಹೆಚ್‌ಎಸ್‌ಎಫ್‌ಸಿ/ಸಿಎಂಜಿ/ಎಂಎಂ/ಸಿ/163/2025–26, ದಿ: 02.12.2025**	130.28 ಲಕ್ಷಗಳು	12 ತಿಂಗಳು	03.12.2025 ರ (11.00 ಗಂಟೆ) ಇಂದ 14.12.2025 (23.30 ಗಂಟೆ)ವರೆಗೆ	16.12.2025 10.00 ಗಂಟೆವರೆಗೆ	16.12.2025 10.30 ಗಂಟೆಗೆ	2,60,560/–
02	ದೇವನಹಳ್ಳಿ, ಹೆಚ್‌ಎಸ್‌ಎಫ್‌ಸಿಯಲ್ಲಿ ಕಾರ್ಮಿಕರಿಗೆ ವಿಶ್ರಾಂತಿಕೊಠಡಿ ಹಾಗೂ ಬಟ್ಟೆ ಬದಲಾಯಿಸುವ ಕೊಠಡಿಗಳ ನಿರ್ಮಾಣ (ಸಿವಿಲ್, ಪಿಹೆಚ್ ಮತ್ತು ವಿದ್ಯುತ್ ಕಾಮಗಾರಿಗಳು) **ಹೆಚ್‌ಎಸ್‌ಎಫ್‌ಸಿ/ಸಿಎಂಜಿ/ಎಂಎಂ/ಸಿ/ಇ/164/2025–26, ದಿ: 02.12.2025**	22.97 ಲಕ್ಷಗಳು	04 ತಿಂಗಳು				45,940/–

ಟೆಂಡರ್ ದಸ್ತಾವೇಜುಗಳನ್ನು ಟೆಂಡರ್ ವಿಜಾರ್ಡ್‌ನಲ್ಲಿ ನೋಂದಣಿಯಾಗುವ ಮೂಲಕ ವೆಬ್‌ಸೈಟ್: **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು ಪಾವತಿಸಬಹುದು. ಮಾರಾಟಗಾರರ ನೋಂದಣಿ ವಿಧಾನವನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಇತರೆ ವಿವರಗಳಿಗೆ ಟೆಂಡರ್ ಪ್ರಕಟಣೆಯನ್ನು ಪರಿವೀಕ್ಷಿಸಲು ವೆಬ್‌ಸೈಟ್: **www.isro.gov.in**ಗೆ ಭೇಟಿನೀಡಿ ಮತ್ತು ಟೆಂಡರ್ ದಸ್ತಾವೇಜುಗಳನ್ನು ಖರೀದಿಸಲು **www.tenderwizard.com/ISRO**ಗೆ ಭೇಟಿನೀಡಿ.

ಸಹಿ/– ಮುಖ್ಯಸ್ಥರು ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers / Professors

DEV-IN NATIONAL SCHOOL
CBSE
Sahakarnagar, Bengaluru-560092
Tel: 080-48655165

WE ARE HIRING SECONDARY TEACHERS

QUALIFICATION:
- Bachelor's degree in Education or related field
- Teaching experience at an appropriate level
- Ability to design and Implement lesson plans
- Strong communication skills and ability to motivate students.

ENGLISH, MATHEMATICS, SCIENCE, SOCIAL SCIENCE, KANNADA, HINDI

Send your resume to our email address: dnscset@gmail.com
Here is your chance to transform your passion into meaningful impact!

ST.FRANCIS COLLEGE | BENGALURU
Accredited 'B++' Grade by NAAC | Affiliated to Bengaluru City University
P.B.No. 3417, 3rd Block, 8th Main, Koramangala, Bengaluru-560034.
Tel: 080-25531037/38, Cell Ph: 9481857854 / 9449260409
Website: www.stfranciscollege.edu.in

FACULTY RECRUITMENT

Applications are invited for the post of **Associate / Assistant Professors** in the following Departments.

Management & Commerce	Computer Science
Qualification & Specialization	
M.B.A. / M.Com, Specialization in Finance and Analytics	M.C.A / M.Sc. (Preference for AI & ML specialization)

Eligibility and Experience
NET/SLET/Ph.D with minimum of 55% marks is required at PG level, and Above 3 Years of experience.

Job Location : Koramangala, Bengaluru

Interested and Eligible Candidates may send their resume along with recent passport size photograph, copies of qualification and experience certificate to the
Email-ID: admin@stfranciscollege.edu.in / director@stfranciscollege.edu.in
by mentioning the post and department applying for in the subject line within 10 days.

ST JOSEPH'S BOYS' HIGH SCHOOL
Museum Road, Bengaluru
Teachers wanted for the Academic Year 2026-27 for the following sections:
ISC (PG with B Ed)
ICSE (PG/UG with B Ed)
For all Subjects
Primary (UG with D Ed/ B Ed)
Pre-Primary (UG with ECCE or PPTT)
Please send an email with your latest CV and a recent photograph mentioning the post applied for in the subject line. Also, submit a hard copy of your resume to the school office by the **05th of December 2025.**
#27, Museum Road, Bengaluru-560025
Ph: 080 - 22214416/ 8884200548 / 9
Email: recruitment@sjbhs.edu.in / Website: www.sjbhs.edu.in

IIFT COLLEGE OF FASHION
Glamorous Careers... Glorious Future
RECRUITMENT
Teaching and Non – Teaching Staff Recruitment for
B.Sc. in Fashion and Apparel Design
B.Sc. in Interior Design & Decoration
Affiliated to Bangalore University
Open for SC/ ST Category
Address: #3, 1/6,1st Cross, M.C. Road, Vijayanagar Bangalore – 560079
Contact Number 9980097400 / 9008900074
Website: www.iiftbangalore.com

JOB
To Place your Classified Ads Contact: 9886213331

Cook

WANTED COOK
Required Cook, Preferably Male, below 60 years.
South Indian food (Veg and Non Veg) for family based in Basavanagudi, Bengaluru - 560004
Contact: 080 4555 7113

Engg/ Production Technical

POWERCARE SOLUTIONS PVT.LTD., (Manufacturer of Diesel Generator) URGENTLY REQUIRE: For INDIA/ABROAD, BDM, AREA SALES MANAGER, (Experience: Min 3-yrs. Salary-30K+Incentive) WANTED:Fresh/Exp-ITI/DIPLOMA/ENGG (MECH,EEE). CALL:8056128081, 8925889596, 7871932890.

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

General

CELESTIUM FINANCIAL Ltd. We are Hiring COLLECTION EXECUTIVES We are a RBI registered leading NBFC located in Bangalore. Requirements: Resident of Bangalore for at least 5 years, Must own a two-wheeler, Should be able to read, write and speak Kannada, Experience in finance market preferred. Graduation degree not compulsory Basic pay plus incentive payout as per industry norm Contact Us: +917406424211 info@celestium.in

WANTED FOR Data_entry_job in accounts department qualification PU-Pass with`work experience or`just B.Com_pass location wilson`garden siddaiah-Road Near Shantinagar bus-stand Call:9535218502 9845351200

Accounts & Finance

WANTED HIGHLY Qualified Graduate ACCOUNTANT with morethan 10 years of Experience and Graduate ACCOUNTS ASSISTANT for a Reputed Construction Company who can handle Company Accounts Independently. Age lessthan 45 years. Interested candidates forward resume to: enquiries@farah group.in.

Drivers

WANTED DRIVERS for Tata intra. Salary 18,000 to 22,000 + Food + Accomodation Timings: 10am to 9pm Sunday holiday Location: Bannerghatta, Bangalore Call 8050666007/ 9148899007

HOSTEL WARDEN with minimum of 10 years of Experience in managing hostel for Boys, preferably college student's hostel. Good communication skills, and comfortable with multi language with Kannada. Ready to stay in the campus hostel full time. ISME, Sarjapur Road. 080-28019800. www.isme.in. | hr@isme.in

WANTED OFFICE Assistant/ Clerk (FEMALE) Bommanahalli (Bangalore) Ph: 9980140661 email: starsilks@gmail.com

Marketing & Sales

UNCLE'S WANTED Immediately BUSINESS EXECUTIVES. Smart Promotional SALES GIRLS/ BOYS. Best Salary. Walk-in Everyday 10am: 99000-54461/62

Multiple Vacancy

A BANGALORE Based Steel Tube Company, Requires the following candidates for immediate joining. 1. Accountant with full Knowledge of Taxation 2. Accounts Assistant 3. Sales/ Business Development Looking for an Experienced person. Contact: 9845006993, 9845040615

Wanted

FACTORY HELPERS for Laundry in Bannergatta, Bangalore Salary 17,000 + Food + accommodation 8am to 8pm Call 8050666007/ 9880266007/ 9148899007

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

BUSINESS

Business to Business

Finance

WE ARRANGE LOANS for Mortgage of Site, Buildings, Construction, Completion, Takeover of Loans in Co-op Banks and NBFC. Contact: 9353705002.

ALL LOANS AVAILABLE @4% YEARLY INTEREST PERSONAL BUSINESS PROJECT TAKEOVER MORTGAGE MINIMUM DOCUMENTATION QUICK DISBURSEMENT MAHALAKSHMI FINANCE 9984823862

PERSONAL

Change of Name

I,AASHISH RADHANPURA R/at.14027, Sobha Dream Acres, Panathur Main Road, Varthur, Bengaluru-560087 have`changed my`minor daughter's name`from YAMI to YAMI AASHISH RADHANPURA vide`Affidavit Dtd:02.12.2025 Sworn`Before Notary P.Nanjunda, Bangalore

I, R. SIDDAPPA, Residing at #13 Maranna Layout Doddabidarakallu Nagasandra Post Bengaluru-73 have changed my name as SIDDAPPA. R, vide affidavit dated 23/11/2025 before Notary V.Anjanappa, Bengaluru

CHANGE OF NAME
I, **Santhosh,** residing at No. 4, Manjushri, 3rd Cross, Kannuramma Layout, Devi Nagar Lottegallhalli RMV 2nd Stage, Near Kannuramma Temple, Bengaluru-580094, have changed my name to **SANTHOSH SHETTY** vide affidavit dated 02.12.2025 before notary L Gopalkrishna, Bengaluru. Henceforth I shall be called **SANTHOSH SHETTY** only

CHANGE OF NAME
I, **Sadia Ahmed,** residing at No. 19/1-1, Dr Umer Sharief Road, Mohammedan Block, Basavanagudi, Bengaluru-560004, have changed my name to **SADIA SADAF** vide affidavit dated 02.12.2025 before notary S.T. Thippeswamy, Bengaluru. Henceforth I shall be called **SADIA SADAF** only

I , HRISHIKESH KASAL S/o Kasal Manjunatha R/o, 38FE Lake Shore Homes, Kasavanahalli Bangalore-35 shall henceforth be known as HRISHIKESH MANJUNATHA KASAL for all future purposes Vide affidavit dated 1/12/2025 before Notary V.Rangaraju, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

20 ವಾರ್ಡ್‌ ವ್ಯಾಪ್ತಿ, ಹೆಸರು ಬದಲು

ಐದು ನಗರ ಪಾಲಿಕೆ: ಅಂತಿಮ ಅಧಿಸೂಚನೆಯಲ್ಲಿ ಮಾರ್ಪಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆ ವಾರ್ಡ್‌ಗಳ ಅಂತಿಮ ಅಧಿಸೂಚನೆಯಲ್ಲಿ ಮಾರ್ಪಾಟು ಮಾಡಿರುವ ನಗರಾಭಿವೃದ್ಧಿ ಇಲಾಖೆ, ಕೆಲವು ವಾರ್ಡ್‌ಗಳ ವ್ಯಾಪ್ತಿ ಹಾಗೂ ಹೆಸರನ್ನು ಬದಲಾಯಿಸಿ ಅಧಿಸೂಚನೆ ಹೊರಡಿಸಿದೆ.

ಐದು ನಗರ ಪಾಲಿಕೆಗಳ 369 ವಾರ್ಡ್ ಅಂತಿಮಗೊಳಿಸಿ ನವೆಂಬರ್ 19ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಈ ಬಗ್ಗೆ ಶಾಸಕರು ಹಾಗೂ ಸಾರ್ವಜನಿಕರು ಕೆಲವು ಆಕ್ಷೇಪ ವ್ಯಕ್ತಪಡಿಸಿದ್ದರು. ಅದರಲ್ಲಿ ಕೆಲವನ್ನು ಪರಿಗಣಿಸಿ, ಬದಲಾವಣೆ ಮಾಡಿ ಡಿಸೆಂಬರ್ 1ರಂದು ಅಧಿಸೂಚನೆ ಹೊರಡಿಸಲಾಗಿದೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆಯಲ್ಲಿ 15- ಇಂದಿರಾನಗರ, 16- ನ್ಯೂ ತಿಪ್ಪಸಂದ್ರ ವಾರ್ಡ್‌ಗಳ ಗಡಿಯನ್ನು ಮಾರ್ಪಡಿಸಲಾಗಿದೆ.

ಬೆಂಗಳೂರು ಉತ್ತರ ನಗರ ಪಾಲಿಕೆಯಲ್ಲಿ ಯಲಹಂಕ ವಿಧಾನಸಭೆ ಕ್ಷೇತ್ರದ ವಾರ್ಡ್ 1 ರಾಜಾ ವೆಂಕಟಪ್ಪ ವಾರ್ಡ್ ಅನ್ನು ವಾರ್ಡ್ 3 ಚೌಡೇಶ್ವರಿ ವಾರ್ಡ್, ವಾರ್ಡ್ 2 ಆಕಾಶ್ ವಾರ್ಡ್ ಅನ್ನು ವಾರ್ಡ್ 2 ಏರೋ ಸಿಟಿ ವಾರ್ಡ್ ಹಾಗೂ ವಾರ್ಡ್ 3 ಯಲಹಂಕ ಓಲ್ಡ್ ಟೌನ್ ಅನ್ನು ವಾರ್ಡ್ 1 ರಾಜಾ ವೆಂಕಟಪ್ಪ ವಾರ್ಡ್ ಎಂದು ಬದಲಿಸಲಾಗಿದೆ. ಸರ್ವಜ್ಞ ನಗರ ವಿಧಾನಸಭೆ ಕ್ಷೇತ್ರದ ವಾರ್ಡ್ 31 ಕಲ್ಯಾಣ ನಗರ ವಾರ್ಡ್ ಅನ್ನು ವಾರ್ಡ್ 31 ಕಲ್ಯಾಣ ನಗರ ಎಂದು ಬದಲಿಸಲಾಗಿದೆ.

ಬೆಂಗಳೂರು ದಕ್ಷಿಣ ನಗರ ಪಾಲಿಕೆಯಲ್ಲಿ ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ವಾರ್ಡ್ 3 ಕುಮಾರಸ್ವಾಮಿ ವಾರ್ಡ್ ಅನ್ನು ವಾರ್ಡ್ 3 ಯಾರಬ್ ನಗರ ಎಂದು ಬದಲಿಸಲಾಗಿದೆ. 56- ದೊರೆಸಾನಿಪಾಳ್ಯ, 60- ಬಿಳೇಕಹಳ್ಳಿ, 65- ಗಾರ್ವೆಬಾವಿ ಪಾಳ್ಯ, 66- ಸಿಂಗಸಂದ್ರ ವಾರ್ಡ್‌ಗಳ ಗಡಿಯನ್ನು ಬದಲಾಯಿಸಲಾಗಿದೆ.

ಬೆಂಗಳೂರು ಪೂರ್ವ ನಗರ ಪಾಲಿಕೆಯಲ್ಲಿ ಕೆ.ಆರ್. ಪುರ ವಿಧಾನಸಭೆ ಕ್ಷೇತ್ರದ ವಾರ್ಡ್ 8- ಟಿ.ಸಿ. ಪಾಳ್ಯವನ್ನು ಆನಂದಪುರ, ವಾರ್ಡ್ 10- ಮೇಡ-ಹಳ್ಳಿಯನ್ನು ಬಸವನಪುರ, ವಾರ್ಡ್ 11- ಬಸವನಪುರವನ್ನು ಕೃಷ್ಣನಗರ, ವಾರ್ಡ್ 12- ಚಿಕ್ಕ ದೇವಸಂದ್ರ-ವನ್ನು ದೇವಸಂದ್ರ, ವಾರ್ಡ್ 13- ದೇವಸಂದ್ರವನ್ನು ರಾಜರಾಜೇಶ್ವರಿ ದೇವಸ್ಥಾನ ವಾರ್ಡ್ ಹಾಗೂ ಮಹದೇವಪುರ ವಿಧಾನಸಭೆ ಕ್ಷೇತ್ರದ ವಾರ್ಡ್ 49- ಶಿವನಸಮುದ್ರ ವಾರ್ಡ್ ಅನ್ನು ದೊಡ್ಡ ಕನ್ನೆಲ್ಲಿ ವಾರ್ಡ್ ಆಗಿ ಹೆಸರಿಸಲಾಗಿದೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯಲ್ಲಿ ಯಶವಂತಪುರ ವಿಧಾನಸಭೆ ಕ್ಷೇತ್ರದ ವಾರ್ಡ್ 19- ಕೆಂಗೇರಿಯನ್ನು ಶಿವನಪಾಳ್ಯ, ವಾರ್ಡ್ 20- ಹೆಮ್ಮಿಗೆಪುರವನ್ನು ಕೆಂಗೇರಿ ಕೋಟೆ ವಾರ್ಡ್ ಹಾಗೂ ವಾರ್ಡ್ 21- ಮಲ್ಲಸಂದ್ರವನ್ನು ಕೆಂಗೇರಿಯಾಗಿ ಹೆಸರು ಬದಲಿಸಿ ಅಧಿಸೂಚಿಸಲಾಗಿದೆ.

14 ಹೆಸರು ಬದಲಾವಣೆ ಆಗಿರುವ ವಾರ್ಡ್‌ಗಳು

6 ಗಡಿ ಬದಲಾವಣೆ ಆಗಿರುವ ವಾರ್ಡ್‌ಗಳು

- **ಬೆಂಗಳೂರು ಕೇಂದ್ರ ನಗರ ಪಾಲಿಕೆ: 63 ವಾರ್ಡ್**
  ವಿಧಾನಸಭೆ ಕ್ಷೇತ್ರ: ಚಾಮರಾಜಪೇಟೆ- 10 ವಾರ್ಡ್, ಚಿಕ್ಕಪೇಟೆ- 12 ವಾರ್ಡ್, ಸಿ.ವಿ. ರಾಮನ್ ನಗರ- 13 ವಾರ್ಡ್, ಗಾಂಧಿನಗರ- 10 ವಾರ್ಡ್, ಶಾಂತಿನಗರ- 10 ವಾರ್ಡ್, ಶಿವಾಜಿನಗರ- 8 ವಾರ್ಡ್.
- **ಬೆಂಗಳೂರು ಉತ್ತರ ನಗರ ಪಾಲಿಕೆ:72 ವಾರ್ಡ್**
  ವಿಧಾನಸಭೆ ಕ್ಷೇತ್ರ: ದಾಸರಹಳ್ಳಿ- 8 ವಾರ್ಡ್, ಪುಲಕೇಶಿನಗರ- 11 ವಾರ್ಡ್, ಬ್ಯಾಟರಾಯನಪುರ- 7 ವಾರ್ಡ್, ಯಲಹಂಕ- 14 ವಾರ್ಡ್, ರಾಜರಾಜೇಶ್ವರಿನಗರ- 5 ವಾರ್ಡ್, ಸರ್ವಜ್ಞನಗರ- 16 ವಾರ್ಡ್; ಹೆಬ್ಬಾಳ- 11 ವಾರ್ಡ್.
- **ಬೆಂಗಳೂರು ದಕ್ಷಿಣ ನಗರ ಪಾಲಿಕೆ: 72 ವಾರ್ಡ್**
  ವಿಧಾನ ಸಭೆ ಕ್ಷೇತ್ರ: ಆನೇಕಲ್- 1 ವಾರ್ಡ್, ಜಯನಗರ- 10 ವಾರ್ಡ್, ಪದ್ಮನಾಭನಗರ- 6 ವಾರ್ಡ್, ಬಿಟಿಎಂ ಲೇಔಟ್- 14 ವಾರ್ಡ್, ಬೆಂಗಳೂರು ದಕ್ಷಿಣ- 19 ವಾರ್ಡ್, ಬೊಮ್ಮನಹಳ್ಳಿ- 20 ವಾರ್ಡ್, ಮಹದೇವಪುರ- 1 ವಾರ್ಡ್, ಯಶವಂತಪುರ- 1 ವಾರ್ಡ್.
- **ಬೆಂಗಳೂರು ಪೂರ್ವ ನಗರ ಪಾಲಿಕೆ: 50 ವಾರ್ಡ್**
  ವಿಧಾನಸಭೆ ಕ್ಷೇತ್ರ: ಕೆ.ಆರ್ ಪುರ- 27 ವಾರ್ಡ್, ಮಹದೇವಪುರ- 23 ವಾರ್ಡ್.
- **ಬೆಂಗಳೂರು ಪಶ್ಚಿಮ ನಗರ ಪಾಲಿಕೆ: 112 ವಾರ್ಡ್**
  ವಿಧಾನಸಭೆ ಕ್ಷೇತ್ರ: ಗೋವಿಂದರಾಜನಗರ- 13 ವಾರ್ಡ್, ದಾಸರಹಳ್ಳಿ- 10 ವಾರ್ಡ್, ಪದ್ಮನಾಭನಗರ- 8 ವಾರ್ಡ್, ಬಸವನಗುಡಿ-10 ವಾರ್ಡ್, ಮಲ್ಲೇಶ್ವರ- 10 ವಾರ್ಡ್, ಮಹಾಲಕ್ಷ್ಮಿ ಲೇಔಟ್- 12 ವಾರ್ಡ್, ಯಶವಂಪುರ- 11 ವಾರ್ಡ್, ರಾಜರಾಜೇಶ್ವರಿನಗರ- 14 ವಾರ್ಡ್, ರಾಜಾಜಿನಗರ- 11 ವಾರ್ಡ್, ವಿಜಯನಗರ- 13 ವಾರ್ಡ್.

ಚಟಕೆ ಸುದ್ದಿ

ಡಿಎಚ್‌ಐಇ ಅಂತರ ಶಾಲಾ ಸ್ಪರ್ಧೆ ಇಂದಿನಿಂದ

ಬೆಂಗಳೂರು:ಡೆಕ್ಕನ್ ಹೆರಾಲ್ಡ್ ಇನ್ ಎಜುಕೇಶನ್ (ಡಿಎಚ್‌ಐಇ) ವತಿಯಿಂದ ಡಿ.3ರಿಂದ ಡಿ.5ರವರೆಗೆ ಕಬ್ಬನ್ ಉದ್ಯಾನದ ಬಾಲ ಭವನದಲ್ಲಿ 'ಡಿಎಚ್‌ಐಇ ಎಕ್ಸ್‌ಪ್ರೆಷನ್ಸ್' ಶೀರ್ಷಿಕೆಯಡಿ ಅಂತರ ಶಾಲಾ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ

ಮೂರು ದಿನಗಳ ಈ ಸ್ಪರ್ಧೆಯಲ್ಲಿ ನಗರ ಮತ್ತು ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಪ್ರತಿದಿನ 400ರಿಂದ 500 ವಿದ್ಯಾರ್ಥಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಡಿ.3ರಂದು ರಸಪ್ರಶ್ನೆ ಮತ್ತು ಚಿತ್ರಕಲೆ ಸ್ಪರ್ಧೆ ನಡೆಯಲಿದೆ. ಡಿ.4ರಂದು ಸ್ಪೆಲ್ ಬೀ ಮತ್ತು ವರ್ಡ್ ವೈಂಡರ್, ಡಿ.5ರಂದು ನೃತ್ಯ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಕಿರಿಯ ಮತ್ತು ಹಿರಿಯ ವಿಭಾಗದಲ್ಲಿ ಈ ಸ್ಪರ್ಧೆಯನ್ನು ಆಯೋಜಿಸಲಾಗುತ್ತಿದೆ.

ಗೀತಾ ಜಯಂತಿ

ಬೆಂಗಳೂರು: ಗೀತಾ ಜಯಂತಿ ಪ್ರಯುಕ್ತ ಎಚ್‌ಬಿಆರ್ ಲೇಔಟ್‌ನ ಇಸ್ಕಾನ್‌ನಲ್ಲಿ ಎರಡು ದಿನ ವಿವಿಧ ಕಾರ್ಯಕ್ರಮಗಳು ನಡೆದವು. ಭಾನುವಾರ ನಡೆದ ಭಕ್ತಿ-ಗಾನ ಮೇಳದಲ್ಲಿ ಭಕ್ತರು 108 ಭಗವದ್ಗೀತಾ ಶ್ಲೋಕಗಳ ಪಠಣ ಮಾಡಿ, ಹಲವು ತಾಸು ಭಜನೆ ಮತ್ತು ಕೀರ್ತನೆಯಲ್ಲಿ ಭಾಗವಹಿಸಿದ್ದರು.

ಸೋಮವಾರ ನಡೆದ ಗೀತಾ ಯಜ್ಞ ಮತ್ತು 700 ಶ್ಲೋಕಗಳ ಸಂಪೂರ್ಣ ಪಠಣದಲ್ಲಿ, ಭಕ್ತರು ದೇಶದ ಶಾಂತಿ ಮತ್ತು ಸಮೃದ್ಧಿಗಾಗಿ ಗೀತಾ ಯಜ್ಞವನ್ನು ನೆರವೇರಿಸಿದರು. ನಂತರ ನೂರಾರು ಭಕ್ತರು 700 ಶ್ಲೋಕಗಳ ಪಠಣ ಮಾಡಿದರು.

ಈ ಸಂದರ್ಭದಲ್ಲಿ 'ಭಗವದ್ಗೀತಾ ಪಠಣ ಮ್ಯಾರಥಾನ್' ಎಂಬ ಅಭಿಯಾನದಲ್ಲಿ ಭಕ್ತರು ಭಾಗವಹಿಸಿ, ಸಮಾಜದಲ್ಲಿ ಸತ್ಕರ್ಮ ಮತ್ತು ಧಾರ್ಮಿಕ ಮೌಲ್ಯಗಳ ಜಾಗೃತಿ ಮೂಡಿಸಿದರು.

ಮಧುಮೇಹ ಜಾಗೃತಿಗೆ ವಾಕಥಾನ್

'ಉತ್ತಮ ಜೀವನಶೈಲಿ, ಆರೋಗ್ಯ ತಪಾಸಣೆಗೆ ಒತ್ತು ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಯಮಿತ ಆಹಾರ ಹಾಗೂ ವ್ಯಾಯಾಮ, ಉತ್ತಮ ಜೀವನಶೈಲಿ ಹಾಗೂ ಆರೋಗ್ಯ ತಪಾಸಣೆಗೆ ಒತ್ತು ನೀಡುವುದರಿಂದ ಮಧುಮೇಹದ ಅಪಾಯದಿಂದ ಪಾರಾಗಬಹುದು' ಎಂದು ನಟ ದತ್ತಣ್ಣ ಸಲಹೆ ನೀಡಿದರು.

ಮಧುಮೇಹ ಜಾಗೃತಿಗಾಗಿ ರೋಟರಿ ಬೆಂಗಳೂರು ಶಂಕರ ಪಾರ್ಕ್ ಮತ್ತು ರೋಟರಿ ಸ್ಪಂದನ ಸಂಯುಕ್ತವಾಗಿ ಆಯೋಜಿಸಿದ್ದ ವಾಕಥಾನ್‌ನಲ್ಲಿ ಅವರು ಮಾತನಾಡಿದರು.

ರೋಟರಿ ಜಿಲ್ಲಾ ಗವರ್ನರ್ ಶ್ರೀಧರ್ ಮಾತನಾಡಿ, 'ಮಧುಮೇಹದ ಕುರಿತು ಜಾಗೃತಿ ಮೂಡಿಸುವ ಪ್ರಯತ್ನಗಳು ಹೆಚ್ಚುತ್ತಿರುವುದು ಶ್ಲಾಘನೀಯ. ರೋಟರಿ ಸಂಸ್ಥೆಯೂ ಕೈ ಜೋಡಿ-ಸಿರುವುದರಿಂದ ಹೆಚ್ಚಿನ ಜನರಿಗೆ ಇದರ ಉಪಯೋಗ ಸಿಗಲಿದೆ' ಎಂದು ಹೇಳಿದರು.

ಎನ್‌ಸ್ಟ್ರೈಡ್, ಐಎಂಎ ಹಾಗೂ ರಂಗಾದೊರೆ ಮೆಮೋರಿಯಲ್ ಆಸ್ಪತ್ರೆ ಸಹಕಾರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಮಧುಮೇಹ ತಪಾಸಣೆ, ಸಲಹೆ ಹಾಗೂ ಆರೋಗ್ಯ ಮಾರ್ಗದರ್ಶನವನ್ನು ತಜ್ಞರು ನೀಡಿದರು.

ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸೃಜನ ಸಾಂಸ್ಕೃತಿಕ ಸಮೂಹ, ನ್ಯಾಷನಲ್ ಇಂಗ್ಲಿಷ್ ಸ್ಕೂಲ್, ಬಸವನಗುಡಿ ನ್ಯಾಷನಲ್ ಕಾಲೇಜು, ವಿಶ್ವ ಸಾಯಿ ನರ್ಸಿಂಗ್ ಕಾಲೇಜು ಸಂಸ್ಥೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಧುಮೇಹ ಜಾಗೃತಿಗಾಗಿ ರೋಟರಿ ಬೆಂಗಳೂರು ಶಂಕರ ಪಾರ್ಕ್ ಮತ್ತು ರೋಟರಿ ಸ್ಪಂದನದಿಂದ ವಾಕಥಾನ್ ಆಯೋಜಿಸಲಾಗಿತ್ತು

ನಗರದಲ್ಲಿ ಇಂದು

ಹನುಮ ಜಯಂತಿ ಮಹೋತ್ಸವ: ಅಭಿಷೇಕ, ಮಹಾಮಂಗಳಾರತಿ, ಆಯೋಜನೆ ಮತ್ತು ಸ್ಥಳ: ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಕೃಷ್ಣರಾಜೇಂದ್ರ ರಸ್ತೆ, ಬೆಳಿಗ್ಗೆ 7.30ರಿಂದ

'ಬಸವಗೀತೆ ಸತ್ಯಸಂವಾದ' ಪುಸ್ತಕ ಬಿಡುಗಡೆ: ಎನ್.ಎಸ್. ಬೋಸರಾಜು, ಉದ್ಘಾಟನೆ: ಶಿವರಾಜ ತಂಗಡಗಿ, ಪುಸ್ತಕದ ಬಗ್ಗೆ ಮಾತು: ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಕ್ಷತೆ: ಲಕ್ಷ್ಮೀಶ ತೋಳ್ಪಾಡಿ, ಉಪಸ್ಥಿತಿ: ಬಸವರಾಜ ಸ್ವಾಮಿ, ಉಪಸ್ಥಿತಿ: ವಿಶ್ವನಾಥ ಬಸವರಾಜ ಸ್ವಾಮಿ, ಆಯೋಜನೆ: ಬಸವ ಸೇವಾ ಪ್ರತಿಷ್ಠಾನ, ಸುದ್ದಿಮೂಲ ದಿನಪತ್ರಿಕೆ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಲಕ್ಷ್ಮೀಶ ತೋಳ್ಪಾಡಿ

'ಓವರ್ಸೀಸ್ ಟ್ರಾವೆಲಾಗ್' ಪುಸ್ತಕ ಬಿಡುಗಡೆ: ಅನು ಶಿವರಾಮನ್, ಅತಿಥಿ: ಬಿ. ವೀರಪ್ಪ, ಎಂ.ಟಿ. ನಾಣಯ್ಯ, |ಲೇಖಕ: ಶಂಕರಪ್ಪ (ಪ್ರೇಮಶಂಕರ), ಅಧ್ಯಕ್ಷತೆ: ವಿವೇಕ ಸುಬ್ಬಾರೆಡ್ಡಿ, ಆಯೋಜನೆ: ಬೆಂಗಳೂರು ವಕೀಲರ ಸಂಘ, ಸ್ಥಳ: ಹಾಲ್ ಸಂಖ್ಯೆ 1, ಹೈಕೋರ್ಟ್, ಮಧ್ಯಾಹ್ನ 1.45

ರಂಗ ಸಂಭ್ರಮ: ರಂಗಶಾಲಾದಿಂದ 'ಮಿಸ್ ಅಂಡರ್‌ಸ್ಟ್ಯಾಂಡಿಂಗ್' ನಾಟಕ ಪ್ರದರ್ಶನ, ನಿರ್ದೇಶನ: ವಿನಯ್ ನೀನಾಸಂ, ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6

'ಮಾರುತಿ ಪ್ರತಾಪ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಸುಧೀರ್ ಭಟ್ ಪೆರ್ಡೂರು, ಪ್ರಭಾಕರ್ ಹೆಗಡೆ ಸಾಣ್ಮನೆ, ಸುಬ್ರಹ್ಮಣ್ಯ ಹೆಗಡೆ ಮೂರೂರು, ಗುರುದತ್ತ ಪರಿಯಾರ್, ಮುಮ್ಮೇಳ: ಮಾರುತಿ ನಾಯ್ಕ ಚಿಕ್ಕನಕೋಡು, ಶ್ರೀಕಾಂತ ಪೂಜಾರಿ ರಟ್ಟಾಡಿ, ಯೋಗೀಶ್ ಪೂಜಾರಿ ನೇರಳಕಟ್ಟೆ, ಪ್ರವೀಣ್ ಬಲ್ಯಾಯ ಅಮ್ಮುಂಜೆ, ರಮೇಶ್ ಭಂಡಾರಿ ಮೂರೂರು, ಸುಬ್ರಹ್ಮಣ್ಯ ಎನ್.ಜಿ., ಆಯೋಜನೆ: ನಂದಿಕೇಶ್ವರ ಪ್ರಸಾದಿತ ಯಕ್ಷಗಾನ ಮಂಡಳಿ ಮೆಕ್ಕೆಕಟ್ಟು ಶಿರಿಯಾರ, ಸ್ಥಳ: ಕಾಶಿವಿಶ್ವನಾಥ ದೇವಸ್ಥಾನ ವಠಾರ, ನ್ಯಾಯಾಂಗ ಬಡಾವಣೆ, ಯಲಹಂಕ, ಸಂಜೆ 6

'ಹಿಮಾಲಯದಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆಗಳ ನಿರ್ಮಾಣದ ಸವಾಲುಗಳು' ವಿಷಯದ ಬಗ್ಗೆ ಉಪನ್ಯಾಸ: ನಾಗೇಶ್ ಪುಟ್ಟಸ್ವಾಮಿ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ವಿ.ವಿ ಪುರ, ಸಂಜೆ 6

'ಎಷ್ಟು ಕಾಡತಾವ ಕಬ್ಬಕ್ಕೀ...' ನಾಟಕ ಪ್ರದರ್ಶನ: ರಚನೆ: ರಾಘವೇಂದ್ರ ಪಾಟೀಲ, ನಿರ್ದೇಶನ: ಬಸವರಾಜ ಎಮ್ಮಿಯವರ, ತಂಡ: ಕಲಾವಿಲಾಸಿ, ಸ್ಥಳ: ರಂಗಶಂಕರ, ಜೆಪಿ ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ರಾಜಾಜಿನಗರದ ಇ.ಎಸ್‌.ಐ.ಸಿ. ವೈದ್ಯಕೀಯ ಕಾಲೇಜು ಆಯೋಜನೆ

ವಿಶ್ವ ಏಡ್ಸ್ ದಿನ: ಎಚ್‌ಐವಿ ಬಗ್ಗೆ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಏಡ್ಸ್ ದಿನದ ಪ್ರಯುಕ್ತ ರಾಜಾಜಿನಗರದ ಇ.ಎಸ್.ಐ.ಸಿ. ವೈದ್ಯಕೀಯ ಕಾಲೇಜು, ನಗರದಲ್ಲಿ ಎಚ್‌ಐವಿ ಸೋಂಕಿನ ಬಗ್ಗೆ ಜಾಗೃತಿ ಮೂಡಿಸಿತು.

'ಎಚ್‌ಐವಿ ಪೀಡಿತರನ್ನು ನಿರ್ಲಕ್ಷ್ಯ ಮಾಡಿ ತುಚ್ಛವಾಗಿ ನೋಡುವ ಬದಲು ಅವರೂ ಸಮಾಜದಲ್ಲಿ ಒಬ್ಬರು ಎಂದು ಭಾವಿಸಿ, ಧೈರ್ಯ ತುಂಬಬೇಕು. ವೈದ್ಯಕೀಯ ತಪಾಸಣೆ ಮಾಡಿಸಿಕೊಳ್ಳುವಂತೆ ಸಲಹೆ ನೀಡಬೇಕು. ಪ್ರತಿಯೊಬ್ಬರೂ ಎಚ್‌ಐವಿ ಸೋಂಕಿನ ಬಗ್ಗೆ ತಿಳಿದಿರಬೇಕು. ಸಮುದಾಯದಲ್ಲೂ ಜಾಗೃತಿ ಮೂಡಿಸಬೇಕು. ಎಚ್‌ಐವಿ ಸೋಂಕಿತ ವ್ಯಕ್ತಿಗಳಿಗೆ ತೋರುವ ತಾರತಮ್ಯ ಹೋಗಲಾಡಿಸಬೇಕು' ಎಂದು ವೈದ್ಯಕೀಯ ತಜ್ಞರು ಅಭಿಪ್ರಾಯಪಟ್ಟರು.

'ಎಚ್‌ಐವಿ ಮನುಷ್ಯನ ರೋಗ ನಿರೋಧಕ ಶಕ್ತಿಯನ್ನು ಕಡಿಮೆ ಮಾಡುವ ವೈರಾಣು. ಅಸುರಕ್ಷಿತ ಲೈಂಗಿಕ ಸಂಬಂಧ, ಎಚ್‌ಐವಿ ಸೋಂಕಿತರ ರಕ್ತವನ್ನು ಪರೀಕ್ಷೆ ಮಾಡದೇ ಪಡೆಯುವುದು, ಸೋಂಕಿತ ತಾಯಿಯಿಂದ ಗರ್ಭಾವಸ್ಥೆಯಲ್ಲಿರುವ ಮಗುವಿಗೆ ಸೋಂಕು ಹರಡುತ್ತದೆ. ಹಾಗಾಗಿ ಬಹಳ ಎಚ್ಚರಿಕೆಯಿಂದ ಇರಬೇಕು' ಎಂದರು.



'ಎಚ್‌ಐವಿ ಸೋಂಕು ತಡೆಗೆ ಮುಂಜಾಗ್ರತೆಯೇ ಔಷಧ. ಆದ್ದರಿಂದ ಶಿಕ್ಷಣದ ಮೂಲಕ ಸಮುದಾಯದ ಪ್ರತಿಯೊಬ್ಬರಿಗೂ ಅರಿವು ಮೂಡಿಸಬೇಕು' ಎಂದು ಹೇಳಿದರು.

ಇ.ಎಸ್.ಐ.ಸಿ ವೈದ್ಯಕೀಯ ಕಾಲೇಜಿನ ಡೀನ್ ಡಾ. ಜಿತೇಂದ್ರ ಕುಮಾರ್, ವೈದ್ಯಕೀಯ ಅಧೀಕ್ಷಕ ಡಾ.ಸಿ.ಜಿ.ಎಸ್. ಪ್ರಸಾದ್, ಚರ್ಮರೋಗ ವಿಭಾಗದ ಮುಖ್ಯಸ್ಥ ಡಾ. ಗಿರೀಶ್ ಎಂ.ಎಸ್., ಚರ್ಮರೋಗ ವಿಭಾಗಾಧಿಕಾರಿ ಡಾ. ರಘುನಾಥ, ಸಮುದಾಯ ವೈದ್ಯಕೀಯ ವಿಭಾಗಾಧಿಕಾರಿ ಡಾ. ಸುರೇಶ್ ಕುಮಾರ್ ಜನಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ವೈದ್ಯಕೀಯ ವಿದ್ಯಾರ್ಥಿಗಳು ಜನಜಾಗೃತಿ ಭಿತ್ತಿಪತ್ರ ಹಂಚುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು.

ಇ.ಎಸ್‌.ಐ.ಸಿ. ವೈದ್ಯಕೀಯ ಕಾಲೇಜಿನಿಂದ ಎಚ್‌ಐವಿ ಸೋಂಕಿನ ಬಗ್ಗೆ ಜಾಗೃತಿ ಮೂಡಿಸಲಾಯಿತು

ಶೇ 52 ಪ್ರಯಾಣಿಕರು ಯುಪಿಐ ಬಳಕೆ

ಬಿಎಂಟಿಸಿ: ಈ ವರ್ಷ ಡಿಜಿಟಲ್ ಪಾವತಿ ಮೂಲಕ ₹ 470 ಕೋಟಿ ಸಂಗ್ರಹ

7,400 ಬಿಎಂಟಿಸಿ ಬಸ್‌ಗಳ ಸಂಖ್ಯೆ

43 ಲಕ್ಷ ಬಿಎಂಟಿಸಿಯಲ್ಲಿ ನಿತ್ಯ ಸಂಚರಿಸುವವರ ಪ್ರಮಾಣ

23 ಲಕ್ಷ ಶಕ್ತಿ ಯೋಜನೆಯಡಿ ಉಚಿತವಾಗಿ ಪ್ರಯಾಣಿಸುವವರ ಪ್ರಮಾಣ

52% ಹಣಪಾವತಿಸಿ ಪ್ರಯಾಣಿಸುವವರಲ್ಲಿ ಯುಪಿಐ ಬಳಸುವವರು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಟಿಕೆಟ್ ಪಡೆಯಲು ಯುಪಿಐ ಮೂಲಕ ಪಾವತಿ ಮಾಡುವವರ ಪ್ರಮಾಣ ಶೇಕಡ 52ಕ್ಕೆ ಏರಿದೆ. ಈ ವರ್ಷ ನವೆಂಬರ್ ಅಂತ್ಯದವರೆಗೆ ₹470 ಕೋಟಿ ವರಮಾನ ಯುಪಿಐ ಮೂಲಕ ಬಂದಿದೆ.

ಕೋವಿಡ್ ಬಂದಾಗ ಅಂತರ ಕಾಪಾಡಿಕೊಳ್ಳಬೇಕು ಎಂಬ ಕಾರಣಕ್ಕೆ 2021ರ ಮೇ ತಿಂಗಳಲ್ಲಿ ಬಿಎಂಟಿಸಿ ಬಸ್‌ಗಳಲ್ಲಿ ಯುಪಿಐ ಆಧಾರಿತ ಪಾವತಿ ವ್ಯವಸ್ಥೆ ಪರಿಚಯಿಸಲಾಗಿತ್ತು. ಕೋವಿಡ್ ಕಡಿಮೆಯಾಗುತ್ತಿದ್ದಂತೆ, ಯುಪಿಐ ಆಧಾರಿತ ಪಾವತಿ ವ್ಯವಸ್ಥೆಯೂ ಮೂಲೆಗೆ ಸರಿದಿತ್ತು. ಜನ ಸಂಚಾರ ಹೆಚ್ಚಾಗಿ ಸಮಯದ ಕೊರತೆ, ನೆಟ್‌ವರ್ಕ್ ಸಮಸ್ಯೆ, ಕೆಲವೆಡೆ ಒಂದು ಕಿ.ಮೀ. ಒಳಗೆ ಮತ್ತೊಂದು ನಿಲುಗಡೆ ಇರುವುದರಿಂದರ ಅವರು ಇಳಿಯುವ ಮೊದಲು ಟಿಕೆಟ್ ವಿತರಿಸಬೇಕಾದ ಧಾವಂತಗಳೆಲ್ಲ ಯುಪಿಐ ಪೂರ್ಣ ಪ್ರಮಾಣದಲ್ಲಿ ಬಳಕೆಗೆ ಅಡ್ಡಿಯಾಗಿದ್ದವು.

ದೇವನಹಳ್ಳಿಯಲ್ಲಿರುವ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಬನ್ನೇರುಘಟ್ಟ ಸಹಿತ ಪ್ರಮುಖ ಮತ್ತು ದೂರದ ಸ್ಥಳಗಳಿಗೆ ಸಂಚರಿಸುವ ಹವಾನಿಯಂತ್ರಿತ ಬಸ್‌ಗಳಲ್ಲಿ ಮಾತ್ರ ಯುಪಿಐ ವ್ಯವಸ್ಥೆ ಮುಂದುವರಿದಿತ್ತು. ಚಿಲ್ಲರೆ ನೀಡುವ ವಿಚಾರದಲ್ಲಿ ನಿರ್ವಾಹಕ ಮತ್ತು ಪ್ರಯಾಣಿಕರ ನಡುವೆ ವಾಗ್ವಾದಗಳು ಹೆಚ್ಚಾಗತೊಡಗಿತ್ತು. ಇದನ್ನು ಮನಗಂಡ ಬಿಎಂಟಿಸಿ ಅಧಿಕಾರಿಗಳು ಯುಪಿಐ ಪಾವತಿ ಮತ್ತು ಟಿಕೆಟ್ ನೀಡುವ ವ್ಯವಸ್ಥೆಯನ್ನು 2025ರ ಜನವರಿಯಲ್ಲಿ ಆಧುನೀಕರಣಗೊಳಿಸಿ ಅನುಷ್ಠಾನಗೊಳಿಸಿತು. ಒಂದು ಬಸ್‌ನಲ್ಲಿ ಏಳೆಂಟು ಕಡೆಗಳಲ್ಲಿ ಕ್ಯೂಆರ್ ಕೋಡ್ ಅಂಟಿಸಲಾಯಿತು. ಪ್ರಯಾಣಿಕರು ಸ್ಕ್ಯಾನ್ ಮಾಡಿ ಪಾವತಿ ಮಾಡಿದ ಕೂಡಲೇ ನಿರ್ವಾಹಕರಲ್ಲಿರುವ ಎಲೆಕ್ಟ್ರಿಕ್ ಟಿಕೆಟ್ ಮಷಿನ್‌ನಲ್ಲಿ ಟಿಕೆಟ್ ಮುದ್ರಣವಾಗುವಂತೆ ಮಾಡಲಾಯಿತು. ಇದರಿಂದ ಬಸ್ ನಿರ್ವಾಹಕರು ಕ್ಯೂಆರ್ ಕೋಡ್ ಅನ್ನು ಕುತ್ತಿಗೆಯಲ್ಲಿ ನೇತು |ಹಾಕಿಕೊಳ್ಳಬೇಕಾದ ಪ್ರಮೇಯ ತಪ್ಪಿತು.

‘2021ರಲ್ಲಿ ಯುಪಿಐ ಆಧಾರಿತ ಪಾವತಿಯು ದಿನಕ್ಕೆ ₹15 ಸಾವಿರ ಇರುತ್ತಿತ್ತು. 2024ರಲ್ಲಿ ಅದು ದಿನಕ್ಕೆ ₹33 ಲಕ್ಷಕ್ಕೆ ತಲುಪಿತ್ತು. ಈ ವರ್ಷ ಆಧುನೀಕರಣಗೊಳಿಸಿ ಎಲ್ಲ ಬಸ್‌ಗಳಲ್ಲಿ ಅಳವಡಿಸಿದ ಬಳಿಕ ದಿನಕ್ಕೆ ₹1.25 ಕೋಟಿಯಿಂದ ₹1.50 ಕೋಟಿವರೆಗೆ ಸಂಗ್ರಹವಾಗುತ್ತಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

‘ಬಿಎಂಟಿಸಿಯಲ್ಲಿ ಮೊದಲ ಸ್ಟೇಜ್‌ಗೆ ₹ 6, ಎರಡನೇ ಸ್ಟೇಜ್‌ಗೆ ₹ 12 ಇದೆ. ಎಲ್ಲ ಕಡೆ ಚಿಲ್ಲರೆ ನೀಡುವುದೇ ಸಮಸ್ಯೆ. ಇದಕ್ಕಾಗಿ ಹಲವು ಬಾರಿ ಜಗಳಗಳು ಉಂಟಾಗುತ್ತಿದ್ದವು. ಯುಪಿಐ ಆಧಾರಿತ ಪಾವತಿ ವ್ಯವಸ್ಥೆ ಬಂದ ಮೇಲೆ ಚಿಲ್ಲರೆ ಸಮಸ್ಯೆ ತಪ್ಪಿದೆ. ಜೊತೆಗೆ ಟಿಕೆಟ್ ನೀಡುವುದೂ ಸುಲಭವಾಗಿದೆ’ ಎಂದು ಬಿಎಂಟಿಸಿ ನಿರ್ವಾಹಕರೊಬ್ಬರು ತಿಳಿಸಿದರು.

ವೇಗ, ಸರಳ ಪಾವತಿ

ಬಿಎಂಟಿಸಿಯಲ್ಲಿ ಯುಪಿಐ ಆಧಾರಿತ ಪಾವತಿ ವ್ಯವಸ್ಥೆ ಅಳವಡಿಕೆಯಿಂದ ಪ್ರಯಾಣಿಕರಿಗೆ ವೇಗವಾಗಿ ಸುಲಭ ಮತ್ತು ನಗದುರಹಿತ ಟಿಕೆಟ್ ನೀಡುವ ವ್ಯವಸ್ಥೆಯನ್ನು ಒದಗಿಸಲಾಗಿದೆ. ಸುರಕ್ಷಿತ ಮತ್ತು ವಿಶ್ವಾಸಾರ್ಹ ವಹಿವಾಟು ಸಾಧ್ಯವಾಗಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಯಾಣಿಕರು ಡಿಜಿಟಲ್ ಪಾವತಿಯನ್ನು ಅಳವಡಿಸಿಕೊಳ್ಳುವ ನಿರೀಕ್ಷೆ ಇದೆ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಕುಮಾರ್ ಕೆ.ಬಿ. ತಿಳಿಸಿದ್ದಾರೆ.

‘ರೋಹಿಂಗ್ಯಾಗಳಿಗೆ ಕೆಂಪು ಹಾಸಿನ ಸ್ವಾಗತ ನೀಡಬೇಕೆ?’

ನವದೆಹಲಿ (ಪಿಟಿಐ): ಭಾರತ ದಲ್ಲಿ ವಾಸಿಸುತ್ತಿರುವ ರೋಹಿಂಗ್ಯಾಗಳ ಕಾನೂನು ಸ್ಥಿತಿ ಕುರಿತು ಮಂಗಳವಾರ ಪ್ರಶ್ನಿಸಿದ ಸುಪ್ರೀಂ ಕೋರ್ಟ್, ‘ದೇಶದ ನಾಗರಿಕರು ಬಡತನ ದಿಂದ ಬಳಲುತ್ತಿರುವಾಗ ನುಸುಳು ಕೋರರಿಗೆ ಕೆಂಪು ಹಾಸಿನ ಸ್ವಾಗತ ನೀಡಬೇಕೆ’ ಎಂದು ಕೇಳಿದೆ.

ಅಧಿಕಾರಿಗಳ ವಶದಲ್ಲಿದ್ದ ಕೆಲ ರೋಹಿಂಗ್ಯಾಗಳು ಕಣ್ಮರೆಯಾಗಿದ್ದಾರೆ ಎಂದು ಆರೋಪಿಸಿ ಸಾಮಾಜಿಕ ಕಾರ್ಯಕರ್ತೆಯೊಬ್ಬರು ಸಲ್ಲಿಸಿರುವ ಅರ್ಜಿ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠ ಅಭಿಪ್ರಾಯ ವ್ಯಕ್ತಪಡಿಸಿತು.

‘ಭಾರತ ಬಹಳಷ್ಟು ಬಡವರನ್ನು ಹೊಂದಿರುವ ದೇಶ. ನಾವು ಅವರ ಏಳಿಗೆಗೆ ಗಮನ ಹರಿಸಬೇಕೇ ಹೊರತು ನುಸುಳು ಕೋರರ ಬಗ್ಗೆಯಲ್ಲ’ ಎಂದಿತು.

ಸವಿತಾ ಸಮಾಜ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜದವರು ಅನುಭವಿಸುತ್ತಿರುವ ಸಂಕಷ್ಟವನ್ನು ತಪ್ಪಿಸಲು ಪರಿಶಿಷ್ಟ ಜಾತಿಯವರಿಗೆ ಇರುವಂತೆಯೇ ತಮ್ಮ ಸಮುದಾಯಕ್ಕೂ ಜಾತಿ ದೌರ್ಜನ್ಯ ತಡೆ ಕಾಯ್ದೆ ಅನ್ವಯಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ಸವಿತಾ ಸಮಾಜವು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.

ಗ್ರಾಮೀಣ ಭಾಗದಲ್ಲಿ ವೃತ್ತಿ ನಿರತ ಸವಿತಾ ಸಮಾಜದವರು ಬೇರೆ ಬೇರೆ ವರ್ಗಗಳಿಂದ ತೊಂದರೆ ಅನು-ಭವಿಸುವಂತಾಗಿದೆ. ದೌರ್ಜನ್ಯಗಳು ನಡೆಯುತ್ತಲೇ ಇವೆ. ಅಸ್ಪೃಶ್ಯತೆ-ಯನ್ನು ತಮ್ಮ ಸಮುದಾಯವೂ ಅನುಭವಿಸುತ್ತಿದೆ. ಹಿಂದುಳಿದ ವರ್ಗಗಳ ಆಯೋಗವು ಸರ್ಕಾರ ಸಲ್ಲಿಸಿದ ವರದಿಯಲ್ಲಿ ತಮ್ಮ ಸಮುದಾಯದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿಯನ್ನು ಉಲ್ಲೇಖಿಸಲಾಗಿದೆ. ಈ ವರದಿಯ ಶಿಫಾರಸಿನಲ್ಲಿ ಸವಿತಾ ಸಮಾಜವನ್ನೂ ಜಾತಿ ದೌರ್ಜನ್ಯ ತಡೆ ಕಾಯ್ದೆ ವ್ಯಾಪ್ತಿಗೆ ತರಬೇಕು ಎಂದು ಸಮಾಜದ ಅಧ್ಯಕ್ಷ ಡಿ.ಆರ್.ಕೃಷ್ಣ ಅವರು ಸರ್ಕಾರವನ್ನು ಒತ್ತಾಯಿಸಿದರು.

ಸವಿತಾ ಸಮುದಾಯದ 26 ಜಾತಿಗಳಿಗೆ ಸೇರಿದವರು, ಕರ್ನಾಟಕದಲ್ಲಿ ಸವರ್ಣೀಯರ ಹಾಗೂ ಪರಿಶಿಷ್ಟ ಜಾತಿ, ಪಂಗಡದವರ ಮಧ್ಯದ ಅಡಕತ್ತರಿಯಲ್ಲಿ ಸಿಕ್ಕಿ ನಲುಗುತ್ತಿದ್ದೇವೆ. ಮೀಸಲಾತಿಯ ಪಟ್ಟಿಯೊಳಗೆ ಪ್ರವರ್ಗ 2 ಎ ನಲ್ಲಿ 102 ಜಾತಿಗಳ ಮಧ್ಯೆ ತಮ್ಮ ಸಮುದಾಯವನ್ನು ಸೇರಿಸಲಾಗಿದೆ. ಇದರಿಂದಾಗಿ ಮೀಸಲಾತಿ ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡವನ್ನು ಹೋಲುವಂತಹ ಸಮುದಾಯವಾಗಿದೆ. ಹೀಗಾಗಿ, ನಮಗೆ ನ್ಯಾಯ ಕೊಡಿಸಬೇಕು ಎಂದು ಆಗ್ರಹಿಸಿದರು.

ಮಾಜಿ ಸಚಿವ ಸಿ.ಟಿ.ರವಿ ಅವರು ತಮ್ಮ ಸಮಾಜದ ವಿರುದ್ದ ಅವಹೇಳನ-ಕಾರಿಯಾಗಿ ನಡೆದುಕೊಂಡಿದ್ದು ವಿಧಾನ ಪರಿಷತ್ತಿನ ಸದಸ್ಯ ಸಿ.ಟಿ. ರವಿ ಅವರನ್ನು ಕೂಡಲೇ ಬಂಧಿಸಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಸವಿತಾ ಸಮಾಜದವರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಕೇರಳ ಶಾಸಕ ರಾಹುಲ್ ವಿರುದ್ಧ ಮತ್ತೊಂದು ಅತ್ಯಾಚಾರ ಆರೋಪ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಈಗಾಗಲೇ ಅತ್ಯಾಚಾರದ ಆರೋಪ ಎದುರಿಸುತ್ತಿರುವ ಕೇರಳದ ಪಾಲಕ್ಕಾಡ್ ಶಾಸಕ ರಾಹುಲ್ ಮಾಂಕೂಟತ್ತಿಲ್ ವಿರುದ್ಧ ಮತ್ತೊಂದು ಅತ್ಯಾಚಾರದ ಆರೋಪ ಕೇಳಿಬಂದಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ಸಮೀಪದಲ್ಲಿರುವಾಗಲೇ ಈ ಬೆಳವಣಿಗೆ ನಡೆದಿರುವುದು ಕೇರಳದ ಕಾಂಗ್ರೆಸ್ ಘಟಕವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಬೆಂಗಳೂರಿನ ನಿವಾಸಿಯಾಗಿರುವ 23 ವರ್ಷದ ಮಹಿಳೆ, ರಾಹುಲ್ ಮಾಂಕೂಟತ್ತಿಲ್ ತನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಆರೋಪಿಸಿದ್ದಾರೆ. ಅಲ್ಲದೇ, ಕಾಂಗ್ರೆಸ್‌ನ ರಾಷ್ಟ್ರೀಯ ಹಾಗೂ ರಾಜ್ಯ ಘಟಕದ ಮುಖ್ಯಸ್ಥರಿಗೆ ಇ-ಮೇಲ್ ಮೂಲಕ ದೂರು ಸಲ್ಲಿಸಿದ್ದಾರೆ. ‘ಸಾಮಾಜಿಕ ಮಾಧ್ಯಮದ ಮೂಲಕ ಪರಿಚಿತನಾಗಿದ್ದ ರಾಹುಲ್, ಮದುವೆಯಾಗುವುದಾಗಿ ನಂಬಿಸಿ ನನ್ನನ್ನು ಬೆಂಗಳೂರಿನಿಂದ ದೂರದಲ್ಲಿರುವ ಹೋಮ್ ಸ್ಟೇಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದಾನೆ. ಬಳಿಕ ಮದುವೆಯಾಗಲು ನಿರಾಕರಿಸಿದ್ದಾನೆ’ ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಮಹಿಳೆ ಕಳುಹಿಸಿರುವ ಇ-ಮೇಲ್ ಅನ್ನು ಪೊಲೀಸರಿಗೆ ಕಳುಹಿಸಲಾಗಿದೆ ಎಂದು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸನ್ನಿ ಜೋಸೆಫ್ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ. ಈಗಾಗಲೇ ಗರ್ಭಿಣಿಯೊಬ್ಬರ ಮೇಲೆ ಅತ್ಯಾಚಾರ ಎಸಗಿರುವ ಆರೋಪವನ್ನು ರಾಹುಲ್ ಎದುರಿಸುತ್ತಿದ್ದಾರೆ. ಪಕ್ಷ ಅವರನ್ನು ಈಗಾಗಲೇ ಅಮಾನತುಗೊಳಿಸಲಾಗಿದೆ.

ವಿಜಯನಗರದಲ್ಲಿ ಸೋಮವಾರ ಕಾರ್ಮಿಕರಿಗೆ ಕಣ್ಣಿನ ತಪಾಸಣೆ ಶಿಬಿರ ಆಯೋಜಿಸಲಾಗಿತ್ತು. ವೈದ್ಯರಾದ ರವಿರಾಜ್, ಪ್ರೇಮಜೀತ್ ಮೂಡಬಿದರಿ ತಪಾಸಣೆ ನಡೆಸಿದರು

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕೆ

‘ಇದು ಸರ್ಕಾರವಲ್ಲ, ರಿಯಾಲಿಟಿ ಶೋ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರ ರೈತರ ಸಮಸ್ಯೆ ಬಗೆಹರಿಸಿಲ್ಲ, ರಸ್ತೆಗುಂಡಿಗಳನ್ನು ದುರಸ್ತಿ ಮಾಡಿಲ್ಲ. ಆದರೆ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ತಮ್ಮ ನಡುವಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಉಪಾಹಾರ ಸಭೆ ಮಾಡಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು.



ಆರ್.ಅಶೋಕ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮೊದಲು ಸಿದ್ದರಾಮಯ್ಯ ಮನೆಯಲ್ಲಿ ಉಪಾಹಾರ ನಡೆದಿದ್ದರೆ, ಈಗ ಡಿ.ಕೆ.ಶಿವಕುಮಾರ್ ಮನೆಯಲ್ಲಿ ನಡೆದಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ವೇಣುಗೋಪಾಲ್ ನಿರ್ದೇಶನದಂತೆ ಈ ಪ್ರಹಸನ ನಡೆದಿದೆ. ರಾಜ್ಯದಲ್ಲಿನ ರಸ್ತೆ ಗುಂಡಿಗಳಿಂದಾಗಿ 10 ತಿಂಗಳಲ್ಲಿ 580ಕ್ಕೂ ಅಧಿಕ ಜನರು ಪ್ರಾಣ ಕಳೆದುಕೊಂಡಿದ್ದಾರೆ. ಉಪಾಹಾರಕ್ಕೆ ವ್ಯರ್ಥ ಮಾಡುವ ಸಮಯವನ್ನು ರಸ್ತೆ ಗುಂಡಿ ಮುಚ್ಚಲು ವಿನಿಯೋಗಿಸಿದ್ದರೆ ಜನರ ಪ್ರಾಣವನ್ನಾದರೂ ಉಳಿಸಬಹುದಿತ್ತು’ ಎಂದರು.

ರೈತರ ಕಬ್ಬಿನ ದರದ ಸಮಸ್ಯೆ, ಮೆಕ್ಕೆಜೋಳ ಖರೀದಿ ಕೇಂದ್ರದ ಸಮಸ್ಯೆ ಬಗೆಹರಿದಿಲ್ಲ. ಇಂತಹ ಸಮಸ್ಯೆ ಬಗೆಹರಿಸಲು ಉಪಾಹಾರ ಸಭೆ ನಡೆದಿಲ್ಲ. ಅಂಗನವಾಡಿ ಕಾರ್ಯಕರ್ತರು, ರೈತರು, ಉದ್ಯಮಿಗಳು, ದಲಿತರ ವಿಶ್ವಾಸವನ್ನು ಸರ್ಕಾರ ಕಳೆದುಕೊಂಡಿದೆ ಎಂದು ಟೀಕಿಸಿದರು.

‘ಅಧಿಕಾರವನ್ನು ಒದ್ದು ಕಿತ್ತುಕೊಳ್ಳುತ್ತೇನೆಂದು ಡಿ.ಕೆ.ಶಿವಕುಮಾರ್ ಹೇಳಿದ್ದರು. ಆದರೆ, ಈಗ ಅವರು ಉಪಾಹಾರ ಸವಿದಿದ್ದಾರೆ. ಗೃಹ ಸಚಿವ ಡಾ.ಜಿ.ಪರಮೇಶ್ವರ ಬಹಳ ನೋವಿನಿಂದ ಮಾತಾಡಿದ್ದಾರೆ. ಬಿಗ್‌ಬಾಸ್‌ನಲ್ಲಿ ‘ವೈಲ್ಡ್ ಕಾರ್ಡ್ ಎಂಟ್ರಿ’ ರೀತಿ ಸತೀಶ ಜಾರಕಿಹೊಳಿ, ಪರಮೇಶ್ವರ ಅವರು ದಲಿತ ಕೋಟಾದಲ್ಲಿ ಮುಖ್ಯಮಂತ್ರಿ ಆಗಲು ಕಾಯುತ್ತಿದ್ದಾರೆ. ಇಡೀ ಸರ್ಕಾರ ‘ರಿಯಾಲಿಟಿ ಶೋ’ನಂತೆ ಆಗಿದೆ ಎಂದು ದೂರಿದರು.

‘ಉತ್ತರ ಕರ್ನಾಟಕ ಸೇರಿದಂತೆ ಯಾವುದೇ ಅಭಿವೃದ್ಧಿಗೆ ಸರ್ಕಾರದ ಬಳಿ ಹಣವಿಲ್ಲ. ಸಿದ್ದರಾಮಯ್ಯ ಕಳೆದ ಬೆಳಗಾವಿ ಅಧಿವೇಶನದಲ್ಲಿ ಕೊಟ್ಟ ಮಾತನ್ನು ಈಡೇರಿಸಿಲ್ಲ. ಧರ್ಮಸ್ಥಳ-ದಲ್ಲಿ ಬುರುಡೆ ತಂದವನಿಗೆ ಬಿರಿಯಾನಿ ಕೊಟ್ಟಿದ್ದೇ ಇವರ ಸಾಧನೆ’ ಎಂದರು.

‘ಬೆಂಗಳೂರಿನ ಬಗ್ಗೆ ಟೀಕೆ ಮಾಡಿದ ಉತ್ತರ ಪ್ರದೇಶದ ಸಂಸದರು ಭದ್ರತೆ ಹೆಚ್ಚು ಮಾಡಿಕೊಳ್ಳಬೇಕು. ಇಲ್ಲವಾದರೆ ಡಿ.ಕೆ.ಶಿವಕುಮಾರ್, ಅವರಿಗೂ ಬೆದರಿಕೆ ಹಾಕುತ್ತಾರೆ. ಈಗಾಗಲೇ ಉದ್ಯಮಿಗಳಿಗೆ ಬೆದರಿಕೆ ಹಾಕಲಾಗಿದೆ’ ಎಂದರು.

‘ಬ್ರೇಕ್ ಫಾಸ್ಟ್ ಮೀಟಿಂಗ್ ಬರೀ ಟೀಸರ್’

ನವದೆಹಲಿ: ಕರ್ನಾಟಕ ಮುಖ್ಯಮಂತ್ರಿ–ಉಪಮುಖ್ಯಮಂತ್ರಿ ನಡುವಿನ ಬ್ರೇಕ್ ಫಾಸ್ಟ್ ಮೀಟಿಂಗ್ ಟೀಸರ್ ಅಷ್ಟೇ. ಸಿನೆಮಾ ಇನ್ನೂ ಬಾಕಿ ಇದೆ. ಕೆಲವೇ ದಿನಗಳಲ್ಲಿ ಚಿತ್ರ ಬಿಡುಗಡೆಯಾಗಲಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದರು.

ಬಸವರಾಜ ಬೊಮ್ಮಾಯಿ

ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಕೆಲವೇ ದಿನಗಳಲ್ಲಿ ಕಾಂಗ್ರೆಸ್ ಪರಿಸ್ಥಿತಿ ಏನು ಎಂಬುದು ಹೊರಬೀಳಲಿದೆ. ಇವರಿಬ್ಬರೂ ಒಬ್ಬರಿಗೊಬ್ಬರು ಬ್ರೇಕ್ ಫಾಸ್ಟ್ ಮಾಡುತ್ತಾ ಕಾಲಹರಣ ಮಾಡುತ್ತಿದ್ದಾರೆ. ಒಬ್ಬರು ಕುರ್ಚಿ ಕಸಿಯಲು ಪ್ರಯತ್ನಿಸುತ್ತಿದ್ದಾರೆ. ಇನ್ನೊಬ್ಬರು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ನಾಟಕ ನಿಲ್ಲಲಿ’ ಎಂದರು.

ಈಗ ಎಲ್ಲವೂ ತಿಳಿಯಾಗಿದೆ: ಪರಮೇಶ್ವರ

ಬೆಂಗಳೂರು: ‘ಪಕ್ಷದಲ್ಲಿ ಎಲ್ಲವೂ ತಿಳಿಯಾಗಿದೆ. ಈಗ ಸಂತೋಷದ ವಾತಾವರಣವಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಜಿ.ಪರಮೇಶ್ವರ

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸದ್ಯಕ್ಕೆ ಅವರು (ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ) ಇಬ್ಬರೇ ತಿಂಡಿ ತಿನ್ನುತ್ತಿದ್ದಾರೆ. ನಮ್ಮನ್ನೂ ಕರೆದರೆ ನಾವೂ ತಿಂಡಿ ತಿನ್ನಲು ಹೋಗುತ್ತೇವೆ. ಅಗತ್ಯ ಬಿದ್ದರೆ ನಮ್ಮ ಮನೆಗೂ ಉಪಾಹಾರಕ್ಕೆ ಕರೆಯುತ್ತೇನೆ’ ಎಂದರು.

‘ಎರಡನೇ ಉಪಾಹಾರ ಕೂಟಕ್ಕೂ ನನ್ನನ್ನು ಕರೆದಿಲ್ಲ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಇಬ್ಬರನ್ನೂ ನನ್ನ ಮನೆಗೂ ಉಪಾಹಾರಕ್ಕೆ ಯಾಕೆ ಕರೆಯಬಾರದು’ ಎಂದು ಪರಮೇಶ್ವರ ಪ್ರಶ್ನಿಸಿದರು.

‘ಕೆಲವರಿಗೆ ಸಿದ್ದರಾಮಯ್ಯ ಮುಂದುವರಿಯಲಿ, ಇನ್ನೂ ಕೆಲವರಿಗೆ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಲಿ, ಕೆಲವರಿಗೆ ಪರಮೇಶ್ವರ ಮುಖ್ಯಮಂತ್ರಿ ಆಗಲಿ ಎಂದು ಇದೆ. ಇದೆಲ್ಲ ಜನರ ಅಭಿಲಾಷೆ. ಅದನ್ನು ತಪ್ಪು ಎಂದು ಹೇಳಲು ಆಗುವುದಿಲ್ಲ. ನಮ್ಮ ಹೈಕಮಾಂಡ್ ಏನು ನಿರ್ಧಾರ ಮಾಡುತ್ತದೊ ಅದು ಮುಖ್ಯವಾಗುತ್ತದೆ’ ಎಂದು ತಿಳಿಸಿದರು.

ದಟ್ಟಣೆ ನಿಯಂತ್ರಣಕ್ಕೆ ಕ್ರಮ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕೆಐಎಎಲ್‌ನಲ್ಲಿ ಸಂಚಾರದ ಒತ್ತಡ ತಗ್ಗಿಸಲು ಡಿ.8ರಿಂದ ಜಾರಿ
- ವಿಮಾನ ನಿಲ್ದಾಣ ಮಾರ್ಗದಲ್ಲಿ ನಿತ್ಯ 1 ಲಕ್ಷ ವಾಹನ ಸಂಚಾರ
- ವಾಹನಗಳಿಗೆ ವಿವಿಧ ರೀತಿಯ ಶುಲ್ಕ ವಿಧಿಸಲು ನಿರ್ಧಾರ

ಬೆಂಗಳೂರು: ಪ್ರಯಾಣಿಕರ ಅನುಕೂಲಕ್ಕಾಗಿ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎಎಲ್) ಒತ್ತಡ ತಗ್ಗಿಸಲು, ಸುರಕ್ಷತೆ ಹೆಚ್ಚಿಸಲು, ಶಿಸ್ತು ಜಾರಿಗೆ ತರಲು ಹೆಚ್ಚುವರಿ ಶುಲ್ಕ ಭರಿಸಲು ನಿರ್ಧರಿಸಿದ್ದು, ಇದು ಡಿಸೆಂಬರ್ 8ರಿಂದ ಜಾರಿಗೆ ಬರಲಿದೆ ಎಂದು ಕೆಐಎಎಲ್ ಸಿಇಒ ಹರಿ ಮರಾರ್ ತಿಳಿಸಿದ್ದಾರೆ.

ಕೆಐಎಎಲ್ ವೇಗವಾಗಿ ಬೆಳೆಯುತ್ತಿರುವ ದೇಶದ ಮೂರನೇ ಅತಿದೊಡ್ಡ ವಿಮಾನ ನಿಲ್ದಾಣವಾಗಿದ್ದು, ನಿತ್ಯ ಅಂದಾಜು 1.30 ಲಕ್ಷ ಪ್ರಯಾಣಿಕರಿಗೆ ಸೇವೆ ಒದಗಿಸುತ್ತಿದೆ. ವಿಮಾನ ನಿಲ್ದಾಣ ರಸ್ತೆ ಮಾರ್ಗದಲ್ಲಿ ಸುಮಾರು ಒಂದು ಲಕ್ಷ ವಾಹನಗಳು ನಿತ್ಯ ಸಂಚರಿಸುತ್ತವೆ. ವಿಶೇಷವಾಗಿ ಟರ್ಮಿನಲ್ ಮುಂಭಾಗದಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಅನಧಿಕೃತ ಪಾರ್ಕಿಂಗ್ ತಡೆಯಲು ಮತ್ತು ಕಾಯುವಿಕೆಯ ಸಮಯವನ್ನು ಕಡಿಮೆ ಮಾಡಲು ಪ್ರತ್ಯೇಕ ಪಥ ವ್ಯವಸ್ಥೆಯನ್ನು ಪರಿಚಯಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಅನುಮತಿಸಿದ ಉಚಿತ ಸಮಯಕ್ಕಿಂತ ಹೆಚ್ಚು ಅವಧಿ ತಂಗುವ ವಾಹನಗಳಿಗೆ ಪ್ರವೇಶ ಶುಲ್ಕ ವಿಧಿಸಲಾಗುವುದು. ಎರಡೂ ಟರ್ಮಿನಲ್‌ಗಳ ಪಿಕಪ್ ವಲಯದಲ್ಲಿ ಎಲ್ಲ ಖಾಸಗಿ ವಾಹನಗಳು (ಬಿಳಿ ಬೋರ್ಡ್) 8 ನಿಮಿಷ ಉಚಿತವಾಗಿ ಬಳಕೆ ಮಾಡಬಹುದು. ಇದಾದ ಬಳಿಕ ಕಾರುಗಳಿಗೆ 8ರಿಂದ 13 ನಿಮಿಷದವರೆಗೆ ₹150 ಹಾಗೂ 13ರಿಂದ18 ನಿಮಿಷದವರೆಗೆ ₹300 ಶುಲ್ಕ ವಿಧಿಸಲಾಗುತ್ತದೆ. ಅದಕ್ಕಿಂತ ಹೆಚ್ಚು ಸಮಯ ನಿಲ್ಲಿಸಿದರೆ ಸಮೀಪದ ಪೊಲೀಸ್ ಠಾಣೆಗೆ 'ಟೋ' ಮಾಡಲಾಗುತ್ತದೆ. ದಂಡದ ಜೊತೆಗೆ ಟೋಯಿಂಗ್ ಶುಲ್ಕವನ್ನೂ ವಸೂಲಿ ಮಾಡಲಾಗುತ್ತದೆ ಎಂದು ಮಾಹಿತಿ ನೀಡಲಾಗಿದೆ.

ಹಳದಿ ಬೋರ್ಡ್ ಟ್ಯಾಕ್ಸಿ ಮತ್ತು ಎಲೆಕ್ಟ್ರಿಕ್ ಕ್ಯಾಬ್‌ಗಳು ಸೇರಿ ಎಲ್ಲ ವಾಣಿಜ್ಯ ವಾಹನಗಳು ನಿಗದಿಪಡಿಸಿದ ಸ್ಥಳದಲ್ಲಿಯೇ ಪ್ರಯಾಣಿಕರಿಗೆ ಕಾಯಬೇಕು. ಮೊದಲ 10 ನಿಮಿಷ ಉಚಿತವಾಗಿ ಪಾರ್ಕ್ ಮಾಡಬಹುದು. ಟರ್ಮಿನಲ್ ಒಂದಕ್ಕೆ ಬರುವ ವಾಣಿಜ್ಯ ವಾಹನಗಳು ಪಿ4 ಹಾಗೂ ಪಿ3 ಪಾರ್ಕಿಂಗ್ ವಲಯಕ್ಕೆ ತೆರಳಬೇಕು. ಟರ್ಮಿನಲ್–2ಕ್ಕೆ ಬರುವ ವಾಹನಗಳು ಪಿ2 ಪಾರ್ಕಿಂಗ್ ವಲಯಕ್ಕೆ ತೆರಳಬೇಕು.

ಬಿಳಿ ಬೋರ್ಡ್‌ನ ಎಲ್ಲಾ ವಾಹನಗಳನ್ನು ಖಾಸಗಿ ವಾಹನಗಳಾಗಿಯೂ, ಹಳದಿ ಬೋರ್ಡ್, ಇವಿ ವಾಣಿಜ್ಯ ವಾಹನಗಳನ್ನು ವಾಣಿಜ್ಯ ವಾಹನಗಳಾಗಿ ವಿಂಗಡಿಸಲಾಗಿದೆ. ನಿರ್ಗಮನ ಗೇಟ್‌ನಲ್ಲಿ ಖಾಸಗಿ ಹಾಗೂ ವಾಣಿಜ್ಯ ವಾಹನಗಳಿಗೆ ಈ ಶುಲ್ಕ ಅನ್ವಯಿಸುವುದಿಲ್ಲ.

₹48 ಲಕ್ಷ ವಂಚನೆ: ನಕಲಿ 'ಗುರೂಜಿ' ಸೆರೆ

ಲೈಂಗಿಕ ಸಮಸ್ಯೆ ಪರಿಹಾರಕ್ಕೆ ಔಷಧ ನೀಡುವುದಾಗಿ ಮೋಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ಸಮಸ್ಯೆಗಳು ಸೇರಿದಂತೆ ವಿವಿಧ ಕಾಯಿಲೆಗಳಿಗೆ ಆಯುರ್ವೇದ ಔಷಧ ನೀಡುವುದಾಗಿ ನಂಬಿಸಿ, ಸಾರ್ವಜನಿಕರಿಗೆ ವಂಚಿಸುತ್ತಿದ್ದ ನಕಲಿ 'ಗುರೂಜಿ'ಯನ್ನು ಜ್ಞಾನಭಾರತಿ ಠಾಣೆಯ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ವಿಜಯ್ ಗುರೂಜಿ ಬಂಧಿತ ಆರೋಪಿ.

ಆರೋಪಿಗೆ ಸಹಕಾರ ನೀಡುತ್ತಿದ್ದ ಸಹಚರನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಗೊತ್ತಾಗಿದೆ.

ಲೈಂಗಿಕ ಸಮಸ್ಯೆಗೆ ಶೀಘ್ರ ಪರಿಹಾರ ನೀಡುವುದಾಗಿ ನಂಬಿಸಿ, ಸಾಫ್ಟ್‌ವೇರ್ ಎಂಜಿನಿಯರ್ ತೇಜಸ್ ಎಂಬುವರಿಂದ ₹48 ಲಕ್ಷ ಪಡೆದು ವಂಚಿಸಿದ್ದ ಸಂಬಂಧ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ವಿಜಯ್ ಗುರೂಜಿ ಹಾಗೂ ವಿಜಯಲಕ್ಷ್ಮಿ ಆಯುರ್ವೇದಿಕ್ ಶಾಪ್ ಮಾಲೀಕನ ವಿರುದ್ಧ ಪ್ರಕರಣ ದಾಖಲಾಗಿತ್ತು. ಇದು ಗೊತ್ತಾದ ಮೇಲೆ ನಕಲಿ 'ಗುರೂಜಿ' ತಲೆಮರೆಸಿಕೊಂಡಿದ್ದ. ಆರೋಪಿಯ ಪತ್ತೆಗೆ ವಿಶೇಷ ಪೊಲೀಸ್ ತಂಡ ರಚಿಸಲಾಗಿತ್ತು.

ದೂರಿನಲ್ಲಿ ಏನಿತ್ತು?: ಲೈಂಗಿಕ ಸಮಸ್ಯೆಗೆ ಕೆಂಗೇರಿಯ ಆಸ್ಪತ್ರೆಯಲ್ಲಿ ತೇಜಸ್ ಚಿಕಿತ್ಸೆ ಪಡೆಯುತ್ತಿದ್ದರು. ಆಸ್ಪತ್ರೆಗೆ ಹೋಗಿ ಬರುವಾಗ ರಸ್ತೆಯ ಪಕ್ಕದ ಟೆಂಟ್ ಬಳಿ ಹಾಕಿದ್ದ ಲೈಂಗಿಕ ಸಮಸ್ಯೆಗೆ ಚಿಕಿತ್ಸೆ ಎಂಬ ಫಲಕ ನೋಡಿ, ಮೇ ತಿಂಗಳಲ್ಲಿ ಅಲ್ಲಿಗೆ ಭೇಟಿ ಕೊಟ್ಟಿದ್ದರು. ಟೆಂಟ್‌ನಲ್ಲಿದ್ದ ವ್ಯಕ್ತಿಯೊಬ್ಬ ವಿಜಯ್ 'ಗುರೂಜಿ'ಯನ್ನು ಪರಿಚಯ ಮಾಡಿಕೊಟ್ಟಿದ್ದ ಎಂದು ಮೂಲಗಳು ಹೇಳಿವೆ.

ಬಳಿಕ ತೇಜಸ್ ಅವರನ್ನು ಪರೀಕ್ಷಿಸಿದ್ದ ವಿಜಯ್ 'ಗುರೂಜಿ', ಯಶವಂತಪುರದ ವಿಜಯಲಕ್ಷ್ಮಿ ಆಯುರ್ವೇದ ಔಷಧ ಅಂಗಡಿಯಲ್ಲಿ 'ದೇವರಾಜ್ ಬೂಟಿ' ಹೆಸರಿನ ಔಷಧ ಖರೀದಿಸಿ ಸೇವಿಸಬೇಕು. ಅದರ ಬೆಲೆ ಗ್ರಾಂಗೆ ₹1.60 ಲಕ್ಷ ಇದ್ದು, ಆ ಔಷಧ ಬೇರೆ ಕಡೆ ಸಿಗುವುದಿಲ್ಲ. ಅದನ್ನು ಹರಿದ್ವಾರದಿಂದ ತರಿಸಲಾಗಿದೆ. ನಗದು ಪಾವತಿಸಿ ಆ ಔಷಧ ಖರೀದಿಸಬೇಕು. ಅದರ ಖರೀದಿಗೆ ಯಾರನ್ನೂ ಜತೆಯಲ್ಲಿ ಕರೆದುಕೊಂಡು ಹೋಗಬಾರದು. ಬೇರೆ ವ್ಯಕ್ತಿಯನ್ನು ಜತೆಯಲ್ಲಿ ಕರೆದೊಯ್ದರೆ ಆ ಔಷಧಿಗೆ ಶಕ್ತಿ ಫಲಿಸುವುದಿಲ್ಲ ಎಂಬುದಾಗಿ ಷರತ್ತು ಹಾಕಿದ್ದ ಎಂದು ಪೊಲೀಸರು ತಿಳಿಸಿದರು.

ವಿಜಯ್ 'ಗುರೂಜಿ' ಸಲಹೆಯಂತೆ ತೇಜಸ್ ಹಲವು ಬಾರಿ 'ದೇವರಾಜ್ ಬೂಟಿ' ಮತ್ತು 'ಭವನ ಬೂಟಿ' ತೈಲ ಖರೀದಿಸಿದ್ದರು. ಬೇರೆ ಬೇರೆ ಔಷಧಗಳು ಹಾಗೂ ತೈಲಗಳ ಹೆಸರಿನಲ್ಲಿ ತೇಜಸ್ ಅವರಿಂದ ಹಂತ ಹಂತವಾಗಿ ₹48 ಲಕ್ಷ ವಸೂಲು ಮಾಡಲಾಗಿದೆ. ಬ್ಯಾಂಕ್ ಹಾಗೂ ಸ್ನೇಹಿತರಿಂದ ಸಾಲ ಪಡೆದು ಔಷಧಗಳನ್ನು ಖರೀದಿಸಿದ್ದರು. ಆದರೂ ಸಮಸ್ಯೆ ಪರಿಹಾರವಾಗದಿದ್ದಾಗ ವಿಜಯ್ 'ಗುರೂಜಿ', 'ಇನ್ನೂ ಹೆಚ್ಚಿನ ಚಿಕಿತ್ಸೆಯ ಅಗತ್ಯ ಇದೆ. ಚಿಕಿತ್ಸೆ ಮುಂದುವರಿಸದಿದ್ದರೆ ಹೆಚ್ಚಿನ ಸಮಸ್ಯೆಯಾಗಿ ಜೀವಕ್ಕೆ ತೊಂದರೆ ಆಗುತ್ತದೆ' ಎಂಬುದಾಗಿ ಹೆದರಿಸಿ ತೇಜಸ್‌ರಿಂದ ಮತ್ತೆ ಹಣ ಪೀಕಲು ಯತ್ನಿಸಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು.

ಹಲವರಿಗೆ ವಂಚನೆ

ವಿಜಯ್ 'ಗುರೂಜಿ' ರಸ್ತೆಬದಿ ಟೆಂಟ್ ಹಾಕಿಕೊಂಡು ಆಯುರ್ವೇದ ಔಷಧಗಳನ್ನು ಮಾರಾಟ ಮಾಡುತ್ತಿದ್ದ. ಮಂಡಿನೋವು, ಚರ್ಮದ ಕಾಯಿಲೆ ಹಾಗೂ ವಿಶೇಷವಾಗಿ ಲೈಂಗಿಕ ಸಮಸ್ಯೆಗಳಿಂದ ಬಳಲುತ್ತಿದ್ದವರನ್ನು ಗುರಿಯಾಗಿಸಿಕೊಂಡು ವಂಚನೆ ಮಾಡುತ್ತಿದ್ದ. ಪರಿಹಾರದ ಆಸೆಯಿಂದ ಬರುತ್ತಿದ್ದ ಜನರಿಗೆ, ಮೂಲಿಕೆ ಹಾಗೂ ಪುಡಿಗಳ ರೂಪದಲ್ಲಿ ನಕಲಿ ಆಯುರ್ವೇದ ಔಷಧ ನೀಡಿ ವಂಚಿಸುತ್ತಿದ್ದ. ಆರೋಪಿ ಹಲವರಿಗೆ ವಂಚಿಸಿರುವ ಮಾಹಿತಿ ಲಭಿಸಿದೆ. ವಂಚನೆಗೆ ಒಳಗಾದ ಹಲವರು ಮರ್ಯಾದೆಗೆ ಅಂಜಿ ದೂರು ನೀಡಿಲ್ಲ. ಟೆಕಿ ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಬೆದರಿಕೆ ಹಾಕಿದ್ದ ಗುರೂಜಿ

ಗುರೂಜಿ ಸಲಹೆಯಂತೆ ತೆಗೆದುಕೊಂಡಿದ್ದ ಔಷಧದಿಂದ ಟೆಕಿಯ ಆರೋಗ್ಯ ಹದಗೆಟ್ಟಿತ್ತು. ಆರೋಗ್ಯ ಸಮಸ್ಯೆ ಕಾಣಿಸಿಕೊಂಡ ಬಳಿಕ, ತೇಜಸ್ ಅವರು ರಕ್ತ ಪರೀಕ್ಷೆ ಮಾಡಿಸಿಕೊಂಡಿದ್ದರು. ಆಗ, ಮೂತ್ರಪಿಂಡಕ್ಕೆ ಹಾನಿ ಆಗಿರುವುದು ಪತ್ತೆ ಆಗಿತ್ತು. ಅದಾದ ಮೇಲೆ ದೂರು ನೀಡುವುದಾಗಿ ಹೇಳಿದ್ದಕ್ಕೆ ಗುರೂಜಿ ಬೆದರಿಕೆ ಹಾಕಿದ್ದ ಎಂದು ಮೂಲಗಳು ಹೇಳಿವೆ.

ಊಟದಲ್ಲಿ ಹುಳು ಪತ್ತೆಯಾಗಿದ್ದ ಪ್ರಕರಣ, ಕಳೆದ ಜುಲೈನಲ್ಲಿ ನಡೆದಿದ್ದ ಘಟನೆ

ಮಾಲೀಕರು, ವ್ಯವಸ್ಥಾಪಕರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–1ರಲ್ಲಿರುವ 'ದಿ ರಾಮೇಶ್ವರ ಕೆಫೆ'ಯಲ್ಲಿ ನೀಡಲಾದ ಊಟದಲ್ಲಿ ಹುಳು ಪತ್ತೆಯಾಗಿದ್ದ ಪ್ರಕರಣದಲ್ಲಿ ಗ್ರಾಹಕರೊಬ್ಬರಿಗೆ ಕಿರುಕುಳ ನೀಡಿ ಮಾನಹಾನಿ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಕೆಫೆ ಮಾಲೀಕರು ಹಾಗೂ ವ್ಯವಸ್ಥಾಪಕರ ವಿರುದ್ಧ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ (ಬಿಐಎಎಲ್) ಎಫ್‌ಐಆರ್ ದಾಖಲಾಗಿದೆ.

'ದಿ ರಾಮೇಶ್ವರ ಕೆಫೆ'

ಮಾರತ್‌ಹಳ್ಳಿ ನಿವಾಸಿ ಎನ್.ನಿಖಿಲ್ ಅವರು ನೀಡಿದ ದೂರು ಆಧರಿಸಿ, ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್‌ಗಳಾದ 61, 123, 217, 228, 229, 274, ಹಾಗೂ 275ರ ಅಡಿ ಕೆಫೆ ಮಾಲೀಕರಾದ ದಿವ್ಯಾ ರಾಘವೇಂದ್ರ ರಾವ್, ರಾಘವೇಂದ್ರ ರಾವ್ ಹಾಗೂ ವ್ಯವಸ್ಥಾಪಕ ಬಿ.ಎಲ್.ಸುಮಂತ್ ಅವರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

ಘಟನೆಯು ಕಳೆದ ಜುಲೈ 24ರಂದು ನಡೆದಿದ್ದು, ದೂರುದಾರರು ಬೇರೆ ಪ್ರದೇಶಕ್ಕೆ ತೆರಳಿದ್ದರು. ನಂತರ, ತಮ್ಮ ಮೇಲೆ ದಾಖಲಾದ ದೂರಿನ ಬಗ್ಗೆ ತಿಳಿದುಕೊಂಡು ಠಾಣೆಗೆ ಹಾಜರಾಗಿ ದೂರು ನೀಡಿದ್ದಾರೆ. ಆ ದೂರಿನ ಮೇರೆಗೆ ನ.29ರಂದು ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿ: '₹25 ಲಕ್ಷಕ್ಕೆ ಬೇಡಿಕೆಯಿಟ್ಟು ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ಕೆಫೆಯ ಪ್ರತಿನಿಧಿ ಬಿ.ಎಲ್.ಸುಮಂತ್ ಅವರು ತಮ್ಮ ವಿರುದ್ಧ ನೀಡಿದ್ದ ದೂರಿನ ಬಗ್ಗೆ ಜುಲೈ 27ರಂದು ಮಾಧ್ಯಮಗಳ ವರದಿಯಿಂದ ತಿಳಿದುಕೊಂಡಿದ್ದೆ. ಘಟನೆ ನಡೆದ ದಿನದಂದು ಬೆಳಿಗ್ಗೆ 10.27ರ ಸುಮಾರಿಗೆ ವಿಮಾನದಲ್ಲಿಯೇ ಇದ್ದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳಿವೆ. ದೂರಿನಲ್ಲಿ ಉಲ್ಲೇಖಿಸಿರುವ ಫೋನ್ ಸಂಖ್ಯೆಗಳೊಂದಿಗೂ ತನಗೂ ಯಾವುದೇ ಸಂಪರ್ಕ ಇಲ್ಲ. ತಾನು ಯಾವುದೇ ಪರಿಹಾರ, ಮರುಪಾವತಿ ಅಥವಾ ಹಣಕಾಸಿನ ಬೇಡಿಕೆ ಮಾಡಿರುವುದಿಲ್ಲ' ಎಂದು ಉಲ್ಲೇಖಿಸಲಾಗಿದೆ.

'ಘಟನೆ ನಡೆದ ದಿನದಂದು ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ, ತನ್ನ ಬೋರ್ಡಿಂಗ್ ಪಾಸ್, ವಿಮಾನ ಪ್ರಯಾಣದ ದಾಖಲೆಗಳು ಹಾಗೂ ಸಂಬಂಧಿಸಿದ ಕರೆಗಳ ವಿವರಗಳನ್ನು ಪರಿಶೀಲಿಸಿ ತನಿಖೆ ನಡೆಸಬೇಕು. ಅಂದು ಕಳಪೆ ಆಹಾರ ನೀಡಿ ನನ್ನ ಜೀವಕ್ಕೆ ಅಪಾಯ ಉಂಟು ಮಾಡಲು ಪ್ರಯತ್ನಿಸಲಾಗಿತ್ತು. ಕೆಫೆಯ ಮಾಲೀಕರಾದ ರಾಘವೇಂದ್ರ ರಾವ್, ದಿವ್ಯಾ ರಾಘವೇಂದ್ರ ರಾವ್ ಹಾಗೂ ಬಿ.ಎಲ್.ಸುಮಂತ್ ಅವರು ಸುಳ್ಳು ಆರೋಪ ಹೊರಿಸಿ ಮಾನಹಾನಿ ಮಾಡಿದ್ದಾರೆ. ನನಗೆ ಕಿರುಕುಳ ನೀಡಿದ್ದಾರೆ. ತನ್ನ ವೈಯಕ್ತಿಕ ಗೌರವ ಹಾಗೂ ಪ್ರತಿಷ್ಠೆಗೆ ಹಾನಿ ಮಾಡಿದ್ದಾರೆ' ಎಂದು ನಿಖಿಲ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಎಫ್‌ಐಆರ್‌ನಲ್ಲಿ ಏನಿದೆ?

'ಎನ್.ನಿಖಿಲ್ ಅವರು ಜುಲೈ 24ರಂದು ಬೆಳಿಗ್ಗೆ 7.42ರ ಸುಮಾರಿಗೆ ತಮ್ಮ ಸ್ನೇಹಿತರ ಜತೆಗೆ ಗುವಾಹಟಿಗೆ ಪ್ರಯಾಣಿಸಲು ಕೆಐಎಎಲ್ ವಿಮಾನ ನಿಲ್ದಾಣ ಟರ್ಮಿನಲ್–1ಕ್ಕೆ ಬಂದಿದ್ದರು. ಉಪಾಹಾರಕ್ಕಾಗಿ ರಾಮೇಶ್ವರ ಕೆಫೆಗೆ ತೆರಳಿ, ಪೊಂಗಲ್ ಹಾಗೂ ಫಿಲ್ಟರ್ ಕಾಫಿ (ಬಿಲ್ ಸಂಖ್ಯೆ 139689, ಟೋಕನ್ 686) ಆರ್ಡರ್ ಮಾಡಿದ್ದರು. ಆಹಾರದಲ್ಲಿ ಕೀಟ (ಸೂಪರ್ ವರ್ಮ್) ಪತ್ತೆಯಾಗಿದ್ದು, ಹೋಟೆಲ್ ಸಿಬ್ಬಂದಿಗೆ ತಿಳಿಸಿದ್ದರು. ಅಲ್ಲಿದ್ದ ಸಿಬ್ಬಂದಿ ಆಹಾರ ಬದಲಾವಣೆ ಮಾಡಿಕೊಡುವುದಾಗಿ ಹೇಳಿದ್ದರು. ಅದೇ ವೇಳೆ ಕೆಫೆಗೆ ಬಂದಿದ್ದ ಗ್ರಾಹಕರು, ಘಟನೆಯ ವಿಡಿಯೊ ಹಾಗೂ ಫೋಟೊ ತೆಗೆದುಕೊಂಡಿದ್ದರು. ನಂತರ, ದೂರುದಾರ ನಿಖಿಲ್ ಅವರು ಗಲಾಟೆ ಮಾಡದೇ ವಿಮಾನದಲ್ಲಿ ಪ್ರಯಾಣಿಸಲು ತೆರಳಿದ್ದರು' ಎಂದು ಎಫ್‌ಐಆರ್ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

ವರ್ಗಾವಣೆ ಸಾಧ್ಯತೆ

ಸುಮಂತ್ ಅವರು ವೈಯಾಲಿಕಾವಲ್ ಠಾಣೆಗೆ ಈ ಹಿಂದೆ ದೂರು ನೀಡಿದ್ದರು. ಆ ದೂರು ಆಧರಿಸಿ ಪ್ರಕರಣ ದಾಖಲಾಗಿತ್ತು. ಈ ಎಫ್‌ಐಆರ್ ಸಹ ಅದೇ ಠಾಣೆಗೆ ವರ್ಗಾವಣೆ ಮಾಡಲಾಗುವುದು. ವೈಯಾಲಿಕಾವಲ್ ಠಾಣೆಯ ಪೊಲೀಸರು ಮುಂದಿನ ತನಿಖೆ ನಡೆಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿಗಳು

ಮಹಿಳೆ ಕೊಂದು ವ್ಯಕ್ತಿ ಆತ್ಮಹತ್ಯೆ

ಲಲಿತಾ


ಲಕ್ಷ್ಮಿನಾರಾಯಣ

ಬೆಂಗಳೂರು: ಸಹಜೀವನ ನಡೆಸುತ್ತಿದ್ದ ಮಹಿಳೆಯನ್ನು ಕೊಲೆ ಮಾಡಿದ ಬಳಿಕ ತಾನೂ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ರಾಜಗೋಪಾಲನಗರ ಪೊಲೀಸ್ ಠಾಣಾ ವ್ಯಾಪ್ತಿಯ ಇಂದಿರಾ ಪ್ರಿಯದರ್ಶಿನಿ ನಗರದಲ್ಲಿ ಮಂಗಳವಾರ ಬೆಳಿಗ್ಗೆ ನಡೆದಿದೆ.

ಲಲಿತಾ (49) ಕೊಲೆಯಾದ ಮಹಿಳೆ. ಲಕ್ಷ್ಮಿ ನಾರಾಯಣ (51) ಆತ್ಮಹತ್ಯೆ ಮಾಡಿಕೊಂಡವರು.

ಲಲಿತಾ ಅವರ ಪತಿ 15 ವರ್ಷಗಳ ಹಿಂದೆ ಮೃತಪಟ್ಟಿದ್ದರು. ಲಕ್ಷ್ಮಿನಾರಾಯಣ ಅವರೂ ಪತ್ನಿಯಿಂದ ದೂರವಾಗಿ ಪ್ರತ್ಯೇಕವಾಗಿ ನೆಲಸಿದ್ದರು. ಈ ನಡುವೆ ಲಲಿತಾ ಹಾಗೂ ಲಕ್ಷ್ಮಿನಾರಾಯಣ ಪರಿಚಿತರಾಗಿದ್ದರು. ಬಾಡಿಗೆಗೆ ಮನೆ ಪಡೆದು ಇಬ್ಬರೂ ಸಹಜೀವನ ನಡೆಸುತ್ತಿದ್ದರು ಎಂದು ಪೊಲೀಸರು ಹೇಳಿದರು.

ಲಲಿತಾ ಅವರು ಇತ್ತೀಚೆಗೆ ಬೇರೆ ವ್ಯಕ್ತಿಯ ಜತೆಗೆ ಮೊಬೈಲ್‌ನಲ್ಲಿ ಹೆಚ್ಚು ಸಮಯ ಮಾತನಾಡುತ್ತಿದ್ದರು. ಈ ವಿಚಾರಕ್ಕೆ ಇಬ್ಬರ ಮಧ್ಯೆ ಗಲಾಟೆ ನಡೆಯುತ್ತಿತ್ತು. ಮಂಗಳವಾರ ಬೆಳಿಗ್ಗೆಯೂ ಇಬ್ಬರ ಮಧ್ಯೆ ಗಲಾಟೆ ಆಗಿತ್ತು. ಗಲಾಟೆ ವಿಕೋಪಕ್ಕೆ ತಿರುಗಿದ್ದು, ಅದೇ ಕೋಪದಲ್ಲಿ ಲಕ್ಷ್ಮಿನಾರಾಯಣ ಅವರು ದುಪ್ಪಟದಿಂದ ಬಿಗಿದು ಮಹಿಳೆಯನ್ನು ಕೊಲೆ ಮಾಡಿದ್ದಾರೆ. ನಂತರ, ಅದೇ ದುಪ್ಪಟದಿಂದ ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ವಿಚಾರ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ರಾಜಗೋಪಾಲ ನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಿಕ್ಟೋರಿಯಾ ಆಸ್ಪತ್ರೆಗೆ ಮೃತದೇಹ ಕಳುಹಿಸಲಾಗಿದೆ. ರಾಜಗೋಪಾಲನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆಯಲ್ಲಿ ರಂಪಾಟ ಪ್ರಕರಣ ರೌಡಿಶೀಟರ್ ಸೇರಿ ಇಬ್ಬರ ಸೆರೆ

ಪ್ರಸಾದ್


ಮಧುಸೂದನ್

ಬೆಂಗಳೂರು: ರಸ್ತೆ ರಂಪಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ರೌಡಿಶೀಟರ್ ಸೇರಿ ಇಬ್ಬರನ್ನು ವಿದ್ಯಾರಣ್ಯಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರೌಡಿಶೀಟರ್ ಪ್ರಸಾದ್ ಅಲಿಯಾಸ್ 'ಮೆಂಟಲ್' ಪ್ರಸಾದ್ ಹಾಗೂ ಮಧುಸೂದನ್ ಬಂಧಿತರು.

ಕಾರಿನ ಮೇಲೆ ಕಲ್ಲು ಎತ್ತಿಹಾಕಿ ಚಾಲಕನ ಕೊಲೆಗೆ ಯತ್ನಿಸಿದ್ದ ಆರೋಪದ ಅಡಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ನವೆಂಬರ್ 21ರಂದು ರಾತ್ರಿ 10.45ರ ಸುಮಾರಿಗೆ ಶಾಜುಮೋನ್ ಎಂಬುವವರು ಕಾರಿನಲ್ಲಿ ತೆರಳುತ್ತಿದ್ದರು. ದ್ವಿಚಕ್ರ ವಾಹನಕ್ಕೆ ಕಾರು ತಾಗಿತ್ತು. ಶಾಜುಮೋನ್ ಹಾಗೂ ದ್ವಿಚಕ್ರ ವಾಹನ ಸವಾರ ರಸ್ತೆಯಲ್ಲಿ ನಿಂತು ಗಲಾಟೆ ಮಾಡಿಕೊಳ್ಳುತ್ತಿದ್ದರು. ಅದೇ ಸಂದರ್ಭದಲ್ಲಿ ರಸ್ತೆಬದಿಯಲ್ಲಿ ನಿಂತಿದ್ದ ರೌಡಿಶೀಟರ್ ಪ್ರಸಾದ್ ಹಾಗೂ ಮಧುಸೂದನ್ ಏಕಾಏಕಿ ಕಲ್ಲು ತಂದು ಕಾರಿನ ಮೇಲೆ ಎತ್ತಿಹಾಕಿದ್ದರು. ನಂತರ, ಚಾಲಕನ ಮೇಲೆ ಹಲ್ಲೆ ಮಾಡಿದ್ದರು. ಈ ಗಲಾಟೆಯನ್ನು ಗಮನಿಸಿದ್ದ ದ್ವಿಚಕ್ರ ವಾಹನ ಸವಾರ ಸ್ಥಳದಿಂದ ತೆರಳಿದ್ದರು. ಈ ವೇಳೆ ಪೊಲೀಸರಿಗೆ ಕರೆ ಮಾಡಲು ಮುಂದಾಗಿದ್ದ ವಿನೋದ್ ರಾವಲ್ ಅವರ ಮೇಲೂ ಆರೋಪಿಗಳು ಹಲ್ಲೆ ನಡೆಸಿ ಅಲ್ಲಿಂದ ಪರಾರಿ ಆಗಿದ್ದರು' ಎಂದು ಪೊಲೀಸರು ಹೇಳಿದರು.

ಕೊಲೆ, ಕೊಲೆ ಯತ್ನ, ದರೋಡೆ ಸೇರಿದಂತೆ ವಿವಿಧ ಅಪರಾಧ ಕೃತ್ಯಗಳಲ್ಲಿ 'ಮೆಂಟಲ್' ಪ್ರಸಾದ್ ಭಾಗಿಯಾಗಿ ಜೈಲಿಗೆ ಹೋಗಿದ್ದ. ಕಳೆದ ತಿಂಗಳು ಜೈಲಿನಿಂದ ಬಿಡುಗಡೆ ಆಗಿದ್ದ. ಇದೀಗ ಕೊಲೆ ಯತ್ನ ಪ್ರಕರಣದಲ್ಲಿ ಮತ್ತೆ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

80 ಬಂಡಲ್ ನಕಲಿ ಸಿಗರೇಟ್ ಜಪ್ತಿ

ಇಮ್ರಾನ್


ರಹೀಸ್

ಬೆಂಗಳೂರು: ಪ್ರತಿಷ್ಠಿತ ಕಂಪನಿಗಳ ಹೆಸರಿನಲ್ಲಿ ನಕಲಿ ಸಿಗರೇಟ್ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಮಲ್ಲೇಶ್ವರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕಾಟನ್‌ಪೇಟೆ ನಿವಾಸಿ ಇಮ್ರಾನ್ (36) ಹಾಗೂ ಕೇರಳದ ಕಣ್ಣೂರು ಜಿಲ್ಲೆಯ ಪಾಲುಟೊಳ್ಳಿ ಗ್ರಾಮದ ರಹೀಸ್ ಬಂಧಿತರು. ನಗರದ ಮಾರಪ್ಪನಪಾಳ್ಯದ ಬಾಡಿಗೆ ಮನೆಯಲ್ಲಿ ರಹೀಸ್ ನೆಲಸಿದ್ದ.

'ಬಂಧಿತರಿಂದ ₹2.50 ಲಕ್ಷ ಮೌಲ್ಯದ ಒಟ್ಟು 80 ಬಂಡಲ್ ನಕಲಿ ಸಿಗರೇಟ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳಿಬ್ಬರೂ ಕೆಲವು ತಿಂಗಳಿಂದ ಪರಿಚಿತರಾಗಿದ್ದರು. ಮಲ್ಲೇಶ್ವರದ 10ನೇ ಕ್ರಾಸ್ ಹಾಗೂ ಸಂಪಿಗೆ ರಸ್ತೆಯ ಸುತ್ತಮುತ್ತಲ ನಕಲಿ ಸಿಗರೇಟ್‌ಗಳನ್ನು ಐಟಿಸಿ ಕಂಪನಿಯ ಅಸಲಿ ಸಿಗರೇಟ್‌ಗಳೆಂದು ನಂಬಿಸಿ ಸಾರ್ವಜನಿಕರು ಹಾಗೂ ಅಂಗಡಿ ಮಾಲೀಕರಿಗೆ ಮಾರಾಟ ಮಾಡುತ್ತಿದ್ದರು. ಈ ಸಂಬಂಧ ಕಂಪನಿಯ ಸಿಬ್ಬಂದಿ ದೂರು ನೀಡಿದ್ದರು. ಈ ಸಂಬಂಧ ಈ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಲ್ಲೇಶ್ವರದ 10ನೇ ಕ್ರಾಸ್‌ನಲ್ಲಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ವಿಚಾರಣೆ ವೇಳೆ, ಕಾಸರಗೋಡಿನ ವ್ಯಕ್ತಿಯೊಬ್ಬರಿಂದ ನಕಲಿ ಸಿಗರೇಟ್ ತಂದು ಮಲ್ಲೇಶ್ವರದ ವ್ಯಾಪ್ತಿಯಲ್ಲಿ ಮಾರಾಟ ಮಾಡುತ್ತಿರುವುದಾಗಿ ಒಪ್ಪಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳು ಗೋದಾಮಿನಲ್ಲಿ ದಾಸ್ತಾನು ಮಾಡಿದ್ದ ಗೋಲ್ಡ್ ಫ್ಲೇಕ್ ಲೈಟ್ಸ್‌ನ 35 ಬಂಡಲ್, ಗೋಲ್ಡ್ ಫ್ಲೇಕ್ ಕಿಂಗ್ಸ್ 44 ಬಂಡಲ್, ಮಿನಿ ಗೋಲ್ಡ್ ಫ್ಲೇಕ್ 1 ಬಂಡಲ್ ಸೇರಿದಂತೆ ಒಟ್ಟು 80 ಬಂಡಲ್ ನಕಲಿ ಸಿಗರೇಟ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಬಾಂಬ್ ಬೆದರಿಕೆ ಸಂದೇಶ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಒರಾಯನ್ ಮಾಲ್, ಮಂತ್ರಿ ಸ್ಕ್ವೇರ್ ಸೇರಿದಂತೆ ಹಲವು ಕಡೆ ಬಾಂಬ್ ಸ್ಫೋಟಿಸುವುದಾಗಿ ಇ ಮೇಲ್ ಬೆದರಿಕೆ ಸಂದೇಶ ಕಳುಹಿಸಿರುವ ಸಂಬಂಧ ಸೈಬರ್ ಕ್ರೈಂ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜೈಷ್–ಎ–ಮೊಹಮ್ಮದ್ ವೈಟ್ ಕಾಲರ್ ಟೆರರ್ ಟೀಂ ಹೆಸರಿನಲ್ಲಿ ನವೆಂಬರ್ 30ರ ಬೆಳಿಗ್ಗೆ 11.53ಕ್ಕೆ ನಗರ ಪೊಲೀಸ್ ಕಮಿಷನರ್‌ಗೆ ಇ– ಮೇಲ್ ಕಳುಹಿಸಲಾಗಿದೆ. ವಿಮಾನ ನಿಲ್ದಾಣ, ಮಂತ್ರಿ ಸ್ಕ್ವೇರ್, ಲುಲು ಮಾಲ್, ಫೋರಂ ಸೌತ್ ಮಾಲ್‌ಗಳಲ್ಲಿ ರಾತ್ರಿ 7 ಗಂಟೆಗೆ ಬಾಂಬ್ ಸ್ಫೋಟಿಸಲಾಗುವುದು ಎಂದು ಇ–ಮೇಲ್‌ನಲ್ಲಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸ್ಫೋಟ: ಜಾಮೀನು ನಿರಾಕರಣೆ

ಬೆಂಗಳೂರು: ಮಲ್ಲೇಶ್ವರದಲ್ಲಿರುವ ಬಿಜೆಪಿ ಕಚೇರಿ ಎದುರು 2013ರಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದ 3ನೇ ಆರೋಪಿಯಾದ ತಮಿಳುನಾಡಿನ ಕಿಚನ್ ಬುಹಾರಿಗೆ ಹೈಕೋರ್ಟ್ ಜಾಮೀನು ನಿರಾಕರಿಸಿದೆ.

ಜಾಮೀನು ಕೋರಿ ಬುಹಾರಿ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್.ಮುದಗಲ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಮೇಲ್ಮನವಿದಾರ ಪ್ರಕರಣದ ಮುಖ್ಯ ಸೂತ್ರಧಾರ ಆಗಿರುವುದನ್ನು ದೋಷಾರೋಪ ಪಟ್ಟಿಯ ದಾಖಲೆಗಳು ಮೇಲ್ನೋಟಕ್ಕೇ ದೃಢಪಡಿಸುತ್ತವೆ' ಎಂಬ ಕಾರಣ ನೀಡಿ ನ್ಯಾಯಪೀಠ ಜಾಮೀನು ತಿರಸ್ಕರಿಸಿದೆ.

ಜಾಮೀನು ತಿರಸ್ಕರಿಸಿ ನಗರದ ಎನ್‌ಐಎ ವಿಶೇಷ ನ್ಯಾಯಾಲಯ 2024ರ ಫೆಬ್ರುವರಿ 23ರಂದು ಆದೇಶಿಸಿತ್ತು.

ಕೆನರಾ ಬ್ಯಾಂಕ್ ನೌಕರರ ಒಕ್ಕೂಟದಿಂದ ಪ್ರತಿಭಟನೆ

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕೆನರಾ ಬ್ಯಾಂಕ್ ನೌಕರರ ಒಕ್ಕೂಟದಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಬ್ಬಂದಿ ನೇಮಕಾತಿ ಸಂಖ್ಯೆ ಹೆಚ್ಚಿಸುವ ಮೂಲಕ ನೌಕರರ ಮೇಲಿನ ಒತ್ತಡ ತಗ್ಗಿಸಬೇಕು, ವರ್ಗಾವಣೆಗೆ ಪಾರದರ್ಶಕ ನೀತಿ ಜಾರಿಗೊಳಿಸಬೇಕು ಎನ್ನುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕೆನರಾ ಬ್ಯಾಂಕ್ ನೌಕರರ ಒಕ್ಕೂಟದಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

'ಕೆನರಾ ಬ್ಯಾಂಕ್‌ನ ವಹಿವಾಟು ಏರಿಕೆಯಾಗಿ ಸೆಪ್ಟೆಂಬರ್ ಹೊತ್ತಿಗೆ ₹26.78 ಲಕ್ಷ ಕೋಟಿಗೆ ತಲುಪಿದೆ. ಲಾಭದ ಪ್ರಮಾಣವೇ ₹8,588 ಕೋಟಿಯಷ್ಟಿದೆ. ಆದರೆ, ನೌಕರರ ಪ್ರಮಾಣ ಮೂರು ವರ್ಷಗಳಲ್ಲಿ 88,213ರಿಂದ 81,260ಕ್ಕೆ ಇಳಿದಿದೆ. ಸಿಬ್ಬಂದಿ ಸಂಖ್ಯೆ ಕಡಿಮೆಯಾಗಿರುವುದರಿಂದ ಪ್ರತಿ ಶಾಖೆಯಲ್ಲೂ ಒತ್ತಡ ಹೆಚ್ಚಿದೆ' ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎನ್.ಸುರೇಶ್‌ಬಾಬು ಹೇಳಿದರು.

'ಎಲ್ಲಾ ಶ್ರೇಣಿಯ ಹುದ್ದೆಗಳಲ್ಲೂ ನೇಮಕ ಪ್ರಕ್ರಿಯೆ ನಡೆಸಬೇಕು. ಪಾರದರ್ಶಕ ವರ್ಗಾವಣೆ ನೀತಿ ಜಾರಿಗೊಳಿಸಬೇಕು. ನೌಕರರ ಫೀಡ್‌ಬ್ಯಾಕ್ ವ್ಯವಸ್ಥೆ ಹಿಂದಕ್ಕೆ ಪಡೆಯಬೇಕು. ಎಲ್ಲಾ ಶಾಖೆಗಳಿಗೂ ಸೂಕ್ತ ಮೂಲಸೌಕರ್ಯ ಒದಗಿಸಬೇಕು. ದಿನಗೂಲಿಯಾಗಿ ಕಾರ್ಯನಿರ್ವಹಿಸುತ್ತಿರುವವರ ಸೇವೆ ಕಾಯಂ ಮಾಡಿ ನ್ಯಾಯಸಮ್ಮತ ವೇತನ ನಿಗದಿ ಮಾಡಬೇಕು. ಕೆವೈಸಿ ಮಾಹಿತಿ ಉನ್ನತೀಕರಿಸಲು ನೌಕರ ಸ್ನೇಹಿ ಸಾಫ್ಟ್‌ವೇರ್ ರೂಪಿಸಬೇಕು' ಎಂದು ಆಗ್ರಹಿಸಿದರು.

ಮೈಸೂರು ರೇಸ್

ಆಲ್ಡ್‌ಗೇಟ್ ಗೆಲ್ಲುವ ನಿರೀಕ್ಷೆ

ಡಾ.ಆರ್.ರಾಜೇಂದ್ರ ಪ್ರಸಾದ್ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಆಲ್ಡ್‌ಗೇಟ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2 ಗಂಟೆಗೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡಿ ಡಾನ್ ಕಿಂಗ್ 2, ಜೆಂಟಲ್‌ಮ್ಯಾನ್ಸ್ ವರ್ಡ್ 7, ಅಲ್ಯೂರಿಂಗ್ ಬ್ಯೂಟಿ 1
2ನೇ ರೇಸ್: ಟ್ರಂಪ್ ಬೇಬಿ 9, ಸಿರಾ 2, ನ್ಯಾಚುರಲ್ ಸ್ಪೀಡ್ 1
3ನೇ ರೇಸ್: ಚಾಯ್ಸ್ 1, ಸಿಟಿ ಆಫ್ ಹಸ್ಲ್ 9, ಕೂಲ್ ವಿಂಟರ್ 10
4ನೇ ರೇಸ್: ಎಲಿಗೆಂಟ್ ಟೈಮ್ 7, ಸೆಲ್ಮಾ 9, ಪೋಲಾರ್ ವಿಂಡ್ 1
5ನೇ ರೇಸ್: ಆಲ್ಡ್‌ಗೇಟ್ 4, ಪ್ಯೂರ್ ಫಾರ್ ಶ್ಯೂರ್ 1, ಡೆಕಕಾರ್ನ್ 6
6ನೇ ರೇಸ್: ಮ್ಯಾಜಿಕ್ ಸರ್ಕಲ್ 1, ಸೌಂಡ್ ಆಫ್ ಕೆನನ್ಸ್ 8, ರೆಡ್ ಫಾಲ್ಕನ್ 4
7ನೇ ರೇಸ್: ಅಥೆಂಟಿಕ್ ಬೆಲ್ 12, ಮೂನ್‌ಲೈಟ್ ಕ್ವೀನ್ 5, ಸೇಂಟ್ ಎಮಿಲಿಯನ್ 2

ಉತ್ತಮ ಬೆಟ್: ಅಥೆಂಟಿಕ್ ಬೆಲ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಯುವಕ ಸಾವು: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋದಾಮಿನಲ್ಲಿ ಕೆಲಸ ಮಾಡಿಕೊಂಡಿದ್ದ ಯುವಕನೊಬ್ಬ ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ಈ ಸಂಬಂಧ ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿದ್ದಾಪುರ ನಿವಾಸಿ ಅಬ್ದುಲ್ ಹುಸೇನ್(30) ಮೃತ ಯುವಕ. ಘಟನೆ ಸಂಬಂಧ ಮೃತ ಯುವಕನ ಪೋಷಕರು ದೂರು ನೀಡಿದ್ದಾರೆ.

ಹುಸೇನ್ ಅವರು ಮಾವನ ಪುತ್ರಿಯನ್ನು ಪ್ರೀತಿಸುತ್ತಿದ್ದರು. ಪುತ್ರಿ ಮದುವೆ ಮಾಡಿಕೊಡುವಂತೆ ಮಾವನ ಬಳಿ ಮನವಿ ಮಾಡಿದ್ದರು. ಅದಕ್ಕೆ ಮಾವ ಒಪ್ಪಿರಲಿಲ್ಲ. ಈ ಮಧ್ಯೆ ಆರು ತಿಂಗಳ ಹಿಂದೆ ಕುಟುಂಬ ಸಮೇತರಾಗಿ ಮಾವ ಅಂದ್ರಹಳ್ಳಿಗೆ ಸ್ಥಳಾಂತರಗೊಂಡಿದ್ದರು. ಗೋದಾಮು ಬಾಡಿಗೆ ಪಡೆದು ಗುಜರಿ ವ್ಯಾಪಾರ ಮಾಡುತ್ತಿದ್ದರು. ಇತ್ತೀಚೆಗೆ ಆ ಗೋದಾಮಿಗೆ ಬೆಂಕಿ ಬಿದ್ದು ನಷ್ಟವಾಗಿತ್ತು. ಅದಾದ ಮೇಲೆ ಯುವಕ, ಮಾವನ ಜತೆಗೆ ಸೇರಿ ಗುಜರಿ ವ್ಯಾಪಾರ ಆರಂಭಿಸಿದ್ದರು. ಈ ನಡುವೆ ಪುತ್ರಿಯನ್ನು ಮದುವೆ ಮಾಡಿಕೊಡುವಂತೆ ಯುವಕ ಮತ್ತೊಮ್ಮೆ ಕೇಳಿಕೊಂಡಿದ್ದರು. ಆಗಲೂ ಮಾವ ಒಪ್ಪಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಗೋದಾಮಿನಲ್ಲಿ ನೇಣುಬಿಗಿದುಕೊಂಡ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ.

ORCHIDS The International School
Presents
ಪ್ರಜಾವಾಣಿ QUIZ CHAMPIONSHIP 2025

ಈಗಲೇ ನೋಂದಾಯಿಸಿ
ಉಚಿತ ಪ್ರವೇಶ!!!

ಬೆಂಗಳೂರು ವಲಯದ ಸುತ್ತು
ನಿಮ್ಮ ಪ್ರತಿಭೆಯನ್ನು ತೋರ್ಪಡಿಸಲು ಸದವಕಾಶ!
ಪ್ರಜಾವಾಣಿ ರಸಪ್ರಶ್ನೆ ಸ್ಪರ್ಧೆಯಲ್ಲಿ ಅಗ್ರ ಸ್ಪರ್ಧಿಗಳೊಡನೆ ಬುದ್ಧಿವಂತಿಕೆಯ ಸೆಣಸಾಟದಲ್ಲಿ ನಿಮ್ಮ ಜ್ಞಾನದ ಬೆಳಕನ್ನು ಒರೆಗೆ ಹಚ್ಚಿ ಮತ್ತು ಆಕರ್ಷಕ ಬಹುಮಾನಗಳನ್ನು ಗೆಲ್ಲಿ.
ಏಳರಿಂದ 10 ನೆಯ ತರಗತಿಯ ಎಲ್ಲ ವಿದ್ಯಾರ್ಥಿಗಳನ್ನು ಈ ಮೂಲಕ ಆಹ್ವಾನಿಸುತ್ತಿದ್ದೇವೆ!
ವಿಜೇತರನ್ನು ವಿನೂತನ ಕಲಿಕಾ ಕಾರ್ಯಾಗಾರಕ್ಕೆ ಆಹ್ವಾನಿಸಲಾಗುವುದು ಮತ್ತು ಅವರಿಗೆ ಹೊಸ ಸಾಧ್ಯತೆಗಳನ್ನು ಅನ್ವೇಷಿಸುವ ಅವಕಾಶ ದೊರೆಯುವುದು.

ದಿನಾಂಕ	ವಾರ	ಸ್ಥಳ
ಡಿಸೆಂಬರ್ 15, ಮುಂಜಾನೆ 9 ಕ್ಕೆ	ಸೋಮವಾರ	ಆರ್ವಿ ಆಡಿಟೋರಿಯಂ (ಆರ್ವಿ ಟೀಚರ್ಸ್ ಕಾಲೇಜ್), ರಾಷ್ಟ್ರೀಯ ವಿದ್ಯಾಲಯ ರಸ್ತೆ, 2ನೇ ಬ್ಲಾಕ್, ಜಯನಗರ, ಬೇಬಿ ಡಾಲ್ಸ್, ಬೆಂಗಳೂರು, ಕರ್ನಾಟಕ 560011

ಉತ್ತಮೋತ್ತಮರನ್ನು ಸೋಲಿಸಿ ಮತ್ತು ಗ್ರಾಂಡ್ ಫಿನಾಲೆಯಲ್ಲಿ ನಿಮ್ಮ ಸ್ಥಾನವನ್ನು ಹೊಂದಿ.
ನೋಂದಾಯಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ಅಥವಾ www.prajavani.net ಗೆ ಭೇಟಿ ನೀಡಿ.
ಸಂಪರ್ಕಿಸಿ: 73380 18541 (ಮಧ್ಯಾಹ್ನ 12 ರಿಂದ ಸಂಜೆ 5, ಸೋಮವಾರ-ಶುಕ್ರವಾರ)

Banking Partner: SBI The banker to every Indian
Refreshment Partner: MoGu MoGu
Special Partner: BHIMA
Nutrition Partner: ನಂದಿನಿ
Associate Sponsors: ಪೂರ್ವಿಕಾ, VIPS 25 YEARS IN SERVICE OF HUMANITY, talent sprint Part of Accenture, ICS MAHESH PU COLLEGE
Associate Sponsors: SIDDAGANGA, ಮಾರ್ಗದರ್ಶಿ
TV partner: asianet ಸುವರ್ಣ ನ್ಯೂಸ್
Knowledge partner: QURIOSITY Knowledge Solutions

ಜಿಪಿಎಸ್ ಸಂಪರ್ಕ ಬೇಡದ 'ಬುದ್ಧಿವಂತ' ಡ್ರೋನ್‌ಗಳು

• ಸುಧೀರ ಎಚ್.ಎಸ್.

ಇತ್ತೀಚಿನ ದಿನಗಳಲ್ಲಿ ಡ್ರೋನ್‌ಗಳು ಛಾಯಾಗ್ರಹಣದಿಂದ ಹಿಡಿದು ಮಿಲಿಟರಿ ಕಣ್ಗಾವಲಿನವರೆಗೆ ಹಲವು ಕ್ಷೇತ್ರಗಳಲ್ಲಿ ಕ್ರಾಂತಿಯನ್ನುಂಟುಮಾಡುತ್ತಿವೆ. ಬೆಂಗಳೂರಿನಂತಹ ಮಹಾನಗರಗಳ ಟ್ರಾಫಿಕ್ ನಿಯಂತ್ರಣದಿಂದ ಮೊದಲಾಗಿ ಕರಾವಳಿಯ ಕೃಷಿಭೂಮಿಯ ತನಕ ಅವುಗಳ ಬಳಕೆ ಹೆಚ್ಚುತ್ತಿದೆ. ಆದರೆ ಇವುಗಳಿಗಿಂತ ಹೆಚ್ಚು ಕ್ಲಿಷ್ಟಕರವಾದ ಡ್ರೋನ್ ಸಮೂಹಗಳ (Drone Swarms) ಕಾರ್ಯಾಚರಣೆಯನ್ನು ಹೆಚ್ಚು ಪರಿಣಾಮಕಾರಿಯಾಗಿ, ಸ್ವಯಂಚಾಲಿತವಾಗಿ ಮತ್ತು ರಹಸ್ಯವಾಗಿ ಮಾಡಲು ಮುಂಬೈನ ಐಐಟಿ ಸಂಶೋಧಕರು ಹೊಸ ತಂತ್ರಜ್ಞಾನವನ್ನು ರೂಪಿಸಿದ್ದಾರೆ.

'ನೋಡಿ'ಯೇ ಹಾರಾಟ

ಸಾಮಾನ್ಯವಾಗಿ ಡ್ರೋನ್‌ಗಳ ಸಮೂಹವನ್ನು ನಿಯಂತ್ರಿಸಲು ಜಿಪಿಎಸ್‌ನಂತಹ ಬಾಹ್ಯಸ್ಥಾನೀಕರಣ ವ್ಯವಸ್ಥೆಗಳು ಅಥವಾ ನಿರ್ದೇಶನ ನೀಡಲು ಕಂಪ್ಯೂಟರ್ ಆಧಾರಿತ ಅಥವಾ ಮಾನವ ಚಾಲಕರ ಅಗತ್ಯವಿರುತ್ತದೆ. ಆದರೆ ಮುಂಬೈ ಐಐಟಿಯ ಪ್ರೊ.ದ್ವೈಪಾಯನ್ ಮುಖರ್ಜಿ ಮತ್ತು ಅವರ ವಿದ್ಯಾರ್ಥಿ ಚಿನ್ಮಯ್ ಗರಣಾಯಕ್ ಅವರು ಒಂದು ಹೊಸ ವಿಧಾನವನ್ನು (Control Scheme) ರೂಪಿಸಿದ್ದಾರೆ.

ಇವರ ಈ ವ್ಯವಸ್ಥೆಯ ಪ್ರಕಾರ, ಡ್ರೋನ್‌ಗಳು ಸಮೂಹದಲ್ಲಿ ಉದ್ದೇಶಿತ ರಚನೆಗಳನ್ನು ಕಾಯ್ದುಕೊಳ್ಳಲು ಮತ್ತು ಸಂಚರಿಸಲು ತಮ್ಮ ನೆರೆಯ ಡ್ರೋನ್‌ಗಳನ್ನು 'ನೋಡಿ'ದರೆ ಅಷ್ಟೇ ಸಾಕು. ಎಂದರೆ, ಪ್ರತಿ ಡ್ರೋನ್ ತನ್ನ ಕ್ಯಾಮೆರಾದಿಂದ ನೆರೆಯ ಡ್ರೋನ್‌ಗೆ ಇರುವ ಸಾಪೇಕ್ಷ ಸ್ಥಾನವನ್ನು (Bearing Information) ಅಳೆಯುತ್ತದೆ. ಈ ಮಾಹಿತಿಯನ್ನು ಬಳಸಿ, ಅದು ಸಮೂಹದಲ್ಲಿ ತನ್ನ ಸ್ಥಾನವನ್ನು ಕಾಯ್ದುಕೊಂಡು, ಉದ್ದೇಶಿತ ದಿಕ್ಕಿನಲ್ಲಿ ಚಲಿಸುತ್ತದೆ.

ಈ ತಂತ್ರಜ್ಞಾನದ ವೈಶಿಷ್ಟ್ಯವೆಂದರೆ, ಜಿಪಿಎಸ್ ಅಥವಾ ನೆರೆಯ ಡ್ರೋನ್‌ಗಳ ನಡುವೆ ಸಂಪರ್ಕದ ಅಗತ್ಯವೇ ಇಲ್ಲದೆ ಸಮೂಹದಲ್ಲಿರುವ ಡ್ರೋನ್‌ಗಳು ಚಲಿಸಬಲ್ಲದು. ಹೀಗಾಗಿ ಈ ವ್ಯವಸ್ಥೆಯು ದಕ್ಷವಾಗಿಯೂ ವಿಶ್ವಾಸಾರ್ಹವಾಗಿಯೂ ಸಂಪೂರ್ಣ ಸ್ವಾಯತ್ತವಾಗಿಯೂ ಕಾರ್ಯನಿರ್ವಹಿಸುತ್ತದೆ. ಜಿಪಿಎಸ್ ಸಿಗದ ಪ್ರದೇಶಗಳಲ್ಲಿ ಅಥವಾ ಸಂಪರ್ಕಕ್ಕೆ ತಡೆಯುಂಟಾದಾಗ ಕೂಡ ಇದು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ.

ಈ ತಂತ್ರಜ್ಞಾನವು ರಹಸ್ಯ ಕಾರ್ಯಾಚರಣೆಗಳಿಗೆ ಸೂಕ್ತವಾಗಿದೆ. ಯಾವುದೇ ಬಾಹ್ಯ ಸಂಕೇತಗಳನ್ನು ಅವಲಂಬಿಸದೆಯೇ ಇರುವುದರಿಂದ ಈ ಡ್ರೋನ್‌ಗಳ ಪತ್ತೆ ಹಚ್ಚುವಿಕೆಯು ವೈರಿಗಳಿಗೆ ಕಷ್ಟವಾಗುತ್ತದೆ.

> ಗುಂಪಿನಲ್ಲಿ ಚಲಿಸುವ ಡ್ರೋನ್‌ಗಳು ಅಕ್ಕಪಕ್ಕದ ಇತರ ಡ್ರೋನ್‌ಗಳ ಮಾಹಿತಿಯನ್ನೇ ಬಳಸಿಕೊಂಡು ಉದ್ದೇಶಿತ ಕಾರ್ಯಗಳನ್ನು ಸಮರ್ಥವಾಗಿ ಮಾಡಬಲ್ಲದು

'ಬೇರಿಂಗ್-ಒನ್ಲಿ' ಪರಿಹಾರ

ಈ ಸಂಶೋಧನೆಯಲ್ಲಿ ಬಳಸಲಾದ ಡ್ರೋನ್‌ಗಳು VTOL (Vertical Take-off and Landing) ವರ್ಗಕ್ಕೆ ಸೇರಿವೆ. ಎಂದರೆ, ನಮ್ಮ ಸಾಮಾನ್ಯ ಹೆಲಿಕಾಪ್ಟರ್‌ಗಳಂತೆ ಇವುಗಳಿಗೆ ಓಡುದಾರಿಯ (Runway) ಅಗತ್ಯವಿಲ್ಲ, ನೇರವಾಗಿ ಮೇಲಕ್ಕೆ ಹಾರಬಲ್ಲವು ಮತ್ತು ಹಾಗೆಯೇ ಗಾಳಿಯಲ್ಲಿ ತೇಲಬಲ್ಲವು. ಇವು 'ಚಲನೆಯ ಸ್ವಾತಂತ್ರ್ಯದ ಆರು ಡಿಗ್ರಿ'ಗಳನ್ನು (Six Degrees of Freedom) ಹೊಂದಿರುತ್ತವೆ. ಒಂದು ಡ್ರೋನ್ ಮೇಲಕ್ಕೆ-ಕೆಳಗೆ, ಎಡಕ್ಕೆ-ಬಲಕ್ಕೆ, ಮತ್ತು ಮುಂದೆ-ಹಿಂದಕ್ಕೆ ಚಲಿಸಬಲ್ಲದು. ಜೊತೆಗೆ, ಮೂರು ಅಕ್ಷಗಳ ಸುತ್ತ ತಿರುಗಬಲ್ಲದು (ತಿರುಗುವುದು, ಬಾಗುವುದು). ಆದರೆ, ಈ 'VTOL' ಡ್ರೋನ್‌ಗಳು ಕೇವಲ ಮೇಲಕ್ಕೆ-ಕೆಳಗೆ ಚಲನೆ ಮತ್ತು ಮೂರು ಅಕ್ಷಗಳ ಸುತ್ತ ತಿರುಗುವ ಚಲನೆಗಳ ಮೇಲೆ ನೇರ ನಿಯಂತ್ರಣವನ್ನು ಹೊಂದಿರುತ್ತವೆ. ಎಡಕ್ಕೆ-ಬಲಕ್ಕೆ ಮತ್ತು ಮುಂದೆ-ಹಿಂದಕ್ಕೆ ಚಲಿಸಲು, ಲಭ್ಯವಿರುವ ನೇರ ನಿಯಂತ್ರಣಗಳನ್ನು ಎಚ್ಚರಿಕೆಯಿಂದ ಬಳಸಬೇಕಾಗುತ್ತದೆ. ಇಂತಹ ವ್ಯವಸ್ಥೆಗಳನ್ನು 'ಅಂಡರ್‌ಆಕ್ಚುಯೇಟೆಡ್ ಸಿಸ್ಟಮ್ಸ್' (Underactuated Systems) ಎಂದು ಕರೆಯುತ್ತಾರೆ. ಒಟ್ಟು ಚಲನೆಯ ಸ್ವಾತಂತ್ರ್ಯದ ಸಂಖ್ಯೆಗಿಂತ ನೇರವಾಗಿ ನಿಯಂತ್ರಿಸಬಹುದಾದ ಚಲನೆಗಳ ಸಂಖ್ಯೆ ಕಡಿಮೆಯಿರುತ್ತದೆ. ಹೀಗಾಗಿ ಇವುಗಳನ್ನು ನಿಯಂತ್ರಿಸುವುದು ಬಹಳ ಕಷ್ಟದ ಕೆಲಸ.

ಸಂಶೋಧಕರು ಈ ಕ್ಲಿಷ್ಟಕರವಾದ 'ಅಂಡರ್‌ಆಕ್ಚುಯೇಟೆಡ್' ಡ್ರೋನ್‌ಗಳ ಚಲನಶೀಲ ಮಾದರಿಗಳನ್ನು (Dynamic Models) ಬಳಸಿ, ಸ್ಥಿರತೆಯನ್ನು ಖಾತರಿಪಡಿಸುವ ಒಂದು ಹೊಸ ನಿಯಂತ್ರಣ ವಿಧಾನವನ್ನು ಅಭಿವೃದ್ಧಿಪಡಿಸಿದ್ದಾರೆ. ಡ್ರೋನ್‌ಗಳ ಆರಂಭದ ಸ್ಥಾನದಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೂ ಮುಂದೆ ಅವು ವಿಶ್ವಾಸಾರ್ಹವಾಗಿ ಬಯಸಿದ 'ರಚನೆ'ಗೆ ಸೇರಬಲ್ಲದು.

ಸನ್ನಿವೇಶಗಳಿಗೆ ತಕ್ಕ ಪರಿಹಾರ

ಈ ಹೊಸ ವಿಧಾನವು ಎರಡು ಮುಖ್ಯ ಸನ್ನಿವೇಶಗಳನ್ನು ನಿಭಾಯಿಸುತ್ತದೆ. ಒಂದು – ಸ್ಥಿರ ವೇಗದ ಸನ್ನಿವೇಶಗಳು (Constant Velocity Scenarios). ಇಲ್ಲಿ ಡ್ರೋನ್‌ಗಳು ಕೇವಲ 'ಬೇರಿಂಗ್' ಮತ್ತು ಅದು ಬದಲಾಗುವ ಪ್ರಮಾಣವನ್ನು (Bearing Rates) ಬಳಸಿ ತಮ್ಮ ರಚನೆಯನ್ನು ಕಾಯ್ದುಕೊಳ್ಳುತ್ತವೆ. ಎರಡು - ಸಮಯ-ವ್ಯತ್ಯಯದ ಸನ್ನಿವೇಶಗಳು (Time-Varying Scenarios). ಇಲ್ಲಿ ಸಮೂಹದ ರಚನೆ ಬದಲಾಗಬಹುದು, ಅಥವಾ ಮುಖ್ಯ ಡ್ರೋನ್ ತಿರುಗಬಹುದು/ವೇಗ ಹೆಚ್ಚಿಸಬಹುದು. ಇಂತಹ ಸಂದರ್ಭಗಳಲ್ಲಿ, ಡ್ರೋನ್‌ಗಳು ತಮ್ಮದೇ ಆದ ವೇಗದ ಅಳತೆಗಳನ್ನು ಕೂಡ ಬೇರಿಂಗ್‌ಗಳ ಜೊತೆ ಸಂಯೋಜಿಸುತ್ತವೆ. ಈ ಸನ್ನಿವೇಶಗಳನ್ನು ನಿಭಾಯಿಸುವ ಸಾಮರ್ಥ್ಯ ಈ ಸಂಶೋಧನೆಯ ಒಂದು ಪ್ರಮುಖ ಸುಧಾರಣೆ. ಒಂದು ಡ್ರೋನ್ ಸಮೂಹವು ಕಿರಿದಾದ ದಾರಿಗಳಲ್ಲಿ ಹೋಗಬೇಕಾದಾಗ, ತಾತ್ಕಾಲಿಕವಾಗಿ ಒಂದು ಸರಳ ರೇಖೆಗೆ ಮರು-ಸಂರಚನೆಗೊಳ್ಳಬೇಕಾದಾಗ ಅಥವಾ ಕಾರ್ಯಾಚರಣೆಯ ಅವಶ್ಯಕತೆಗಳಿಗೆ ತಕ್ಕಂತೆ ಬದಲಾಗಬೇಕಾದಾಗ ಈ ಸಾಮರ್ಥ್ಯವು ಬಹಳ ಮುಖ್ಯವಾಗುತ್ತದೆ.

ಡಿಕ್ಕಿಯಿಂದ ಪಾರು

ಈ ಸಂಶೋಧಕರ ಮುಂದಿನ ಸವಾಲು ಎಂದರೆ, ಡ್ರೋನ್‌ಗಳ ನಡುವೆ ಮತ್ತು ಪರಿಸರದಲ್ಲಿರುವ ವಸ್ತುಗಳೊಂದಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸುವುದನ್ನು ಸದ್ಯಕ್ಕೆ ಸೈದ್ಧಾಂತಿಕ ಮಟ್ಟದಲ್ಲಿ ಸಾಧಿಸಿ ತೋರಿಸುವುದು. ಏಕೆಂದರೆ, ಈಗಿರುವ ಹೆಚ್ಚಿನ ಅಲ್ಗಾರಿದಮ್‌ಗಳು ಡಿಕ್ಕಿ ತಪ್ಪಿಸಲು ತಾತ್ಕಾಲಿಕ (ad-hoc) ವಿಧಾನಗಳನ್ನು ಅವಲಂಬಿಸಿದ್ದು, ಅವುಗಳಿಗೆ ಯಾವುದೇ ಸೈದ್ಧಾಂತಿಕ ಖಾತರಿಗಳಿಲ್ಲ.

ಒಟ್ಟಾರೆಯಾಗಿ, ಡ್ರೋನ್ ಸಮೂಹದ ಕಾರ್ಯಾಚರಣೆಗಳನ್ನು ಇನ್ನಷ್ಟು ಪ್ರಬಲವಾಗಿಸಲು ಹೊಸ ಸಂಶೋಧನೆಯು ನೆರವಾಗಲಿದೆ. ನಮ್ಮ ರಸ್ತೆಗಳ ಸಂಚಾರ ದಟ್ಟಣೆಯಿಂದ ಉಂಟಾಗುತ್ತಿರುವ ಗೊಂದಲ ನಾಳೆ ಈ ಡ್ರೋನ್‌ಗಳಿಗೂ ಎದುರಾಗಬಹುದೇನೋ! ಆದರೆ ಈ ಹೊಸ ತಂತ್ರಜ್ಞಾನವನ್ನು ನಮ್ಮ ಚಾಲಕ ಸಹಿತ/ರಹಿತ ವಾಹನಗಳಿಗೂ ಅಳವಡಿಸಿದರೆ ರಸ್ತೆಯ ಮೇಲಿನ ಅಪಘಾತಗಳನ್ನು ತಡೆಯಬಹುದೇನೋ?

ಮರೆತ ಶೋಧಕ್ಕೆ ಮಾನ್ಯತೆ ಪಡೆದ ವಿಜ್ಞಾನಿ

ಮೇರಿ ಬ್ರಂಕೋವ್
ಚಿತ್ರಕೃಪೆ: ನೊಬೆಲ್ ಅಧಿಕೃತ ವೆಬ್‌ಸೈಟ್

• ಕೊಳ್ಳೇಗಾಲ ಶರ್ಮ

ಮೇರಿ ಬ್ರಂಕೋವ್ ಅಮೆರಿಕದ ಸಿಯಾಟಲ್ ಪಟ್ಟಣದಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಸಿಸ್ಟಮ್ಸ್ ಬಯಾಲಜಿ ಸಂಸ್ಥೆಯಲ್ಲಿ ಯೋಜನಾ ನಿರ್ವಹಣಾಧಿಕಾರಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಇಪ್ಪತ್ತನಾಲ್ಕು ವರ್ಷಗಳ ಹಿಂದೆ ಇವರು ನಡೆಸಿದ ಸಂಶೋಧನೆಯಿಂದಾಗಿ ಈಗ ನೊಬೆಲ್ ಪಾರಿತೋಷಕವನ್ನು ಪಡೆದಿದ್ದಾರೆ. 'ನನ್ನ ಕಾರ್ಯಕ್ಷೇತ್ರವೇ ಬೇರೆಯಾಗಿ ಬಿಟ್ಟಿದೆ. ನಾನೀಗ, ಟಿ-ಕೋಶಗಳ ಬಗ್ಗೆ ಸಂಶೋಧನೆಯನ್ನು ಮಾಡುತ್ತಿಲ್ಲ' ಎನ್ನುತ್ತಾರೆ, ಬ್ರಂಕೋವ್.

ಆದರೆ ಇಪ್ಪತ್ತು ವರ್ಷಗಳ ಹಿಂದೆ ಬ್ರಂಕೋವ್ ನಡೆಸಿದ ಸಂಶೋಧನೆ ಇಂದು ಫಲ ನೀಡುತ್ತಿದೆ ಎನ್ನಬಹುದು. ಆಗ ಇವರು ವಾಷಿಂಗ್ಟನ್ ರಾಜ್ಯದ ಬೊಥೇಲ್ ಪಟ್ಟಣದಲ್ಲಿದ್ದ ಸೆಲ್‌ಟೆಕ್ ಕೈರೊಸೈನ್ಸ್ ಎನ್ನುವ ಔಷಧ ಕಂಪನಿಯಲ್ಲಿ ಸಂಶೋಧಕಿಯಾಗಿದ್ದರು. ಇದೇ ಸಂಸ್ಥೆಯಲ್ಲಿ ಈ ವರ್ಷದ ನೊಬೆಲ್ ಪಾರಿತೋಷಕವನ್ನು ಪಡೆದಿರುವ ಮತ್ತೊಬ್ಬ ವಿಜ್ಞಾನಿ ಫ್ರೆಡ್ ರಾಮ್ಸ್‌ಡೆಲ್ ಕೂಡ ಇದ್ದರು. ಬ್ರಂಕೋವ್ ಅವರ ಸಹೋದ್ಯೋಗಿಯಾಗಿದ್ದರು.

ಆ ಸಂದರ್ಭದಲ್ಲಿ ಜಪಾನಿನ ಶಿಮೊನ್ ಸಕಾಗುಚಿ ರಕ್ತದಲ್ಲಿರುವ ಬಿಳಿಯ ರಕ್ತಕೋಶಗಳಲ್ಲಿ ರೋಗಪ್ರತಿರೋಧವನ್ನು ನಿಯಂತ್ರಿಸುವ ಟಿ-ಕೋಶಗಳು ಇವೆ ಎಂದು ಪತ್ತೆ ಮಾಡಿದ್ದರು. ಜೊತೆಗೆ ಅವುಗಳಿಗೂ ಆಟೊ ಇಮ್ಯೂನ್ ಕಾಯಿಲೆಗೂ ಸಂಬಂಧ ಇರಬಹುದು ಎಂಬ ಸೂಚನೆಯನ್ನೂ ನೀಡಿದ್ದರು. ಇದು ಇವರಿಬ್ಬರಿಗೂ ಕುತೂಹಲ ಎನ್ನಿಸಿತು. ಏಕೆಂದರೆ ಬ್ರಂಕೋವ್ ಮತ್ತು ರಾಮ್ಸ್‌ಡೆಲ್ ಕೂಡ ಆಟೊ ಇಮ್ಯೂನ್ ಕಾಯಿಲೆಗಳ ಬಗ್ಗೆ ಸಂಶೋಧನೆ ನಡೆಸುತ್ತಿದ್ದರು. ಅದಕ್ಕಾಗಿ ಚಿಕಿತ್ಸೆ ಹುಡುಕಲು ಪ್ರಯತ್ನಿಸುತ್ತಿದ್ದರು.



ಆಟೊ ಇಮ್ಯೂನ್ ಕಾಯಿಲೆಗಳಿಗೆ ಚಿಕಿತ್ಸೆ ಹುಡುಕುವ ಪ್ರಯೋಗಗಳಲ್ಲಿ ಇವರು ವಿಶಿಷ್ಟ ಬಗೆಯ ಇಲಿಯೊಂದನ್ನು ಬಳಸುತ್ತಿದ್ದರು. ಈ ಇಲಿ ಪರಮಾಣು ಬಾಂಬು ಯೋಜನೆಯ ಹುಟ್ಟು. ಪರಮಾಣು ಬಾಂಬನ್ನು ತಯಾರಿಸುವ ಸಂದರ್ಭದಲ್ಲಿ, ವಿಕಿರಣಗಳ ಪರಿಣಾಮವನ್ನು ಇಲಿಗಳ ಮೇಲೆ ಪರೀಕ್ಷಿಸುವಾಗ ಹುಟ್ಟಿದ ಒಂದು ತಳಿ. ಈ ತಳಿಯಲ್ಲಿ ಹುಟ್ಟುವ ಗಂಡುಮರಿಗಳಲ್ಲಿ ಅರ್ಧಕ್ಕರ್ಧ ಒಂದು ಬಗೆಯ ಆಟೊ ಇಮ್ಯೂನ್ ಕಾಯಿಲೆಯಿಂದ ನರಳುತ್ತವೆ. ಗಂಡುಇಲಿಗಳಲ್ಲಿಯಷ್ಟೆ ಈ ಕಾಯಿಲೆ ಕಾಣಿಸುತ್ತಿದ್ದುದರಿಂದ, ಇದು 'ಎಕ್ಸ್' ಎನ್ನುವ ವರ್ಣತಂತುವಿನ ಮೇಲೆ ಇರುವುದು ಖಚಿತವಾಗಿತ್ತು. ಎಕ್ಸ್–ಕ್ರೊಮೋಸೋಮು ಎಲ್ಲ ಜೀವಕೋಶಗಳಲ್ಲಿಯೂ ಇರುವ ಲಿಂಗವರ್ಣತಂತು ಜೋಡಿಯಲ್ಲಿ ಒಂದು. ಇದು ಸಾಮಾನ್ಯವಾಗಿ ತಾಯಿಯಿಂದ ಮರಿಗೆ ದಾಟಿ ಬರುತ್ತದೆ. 'ವೈ' ಎಂಬ ಹೆಸರಿನ, ಜೋಡಿಯ ಇನ್ನೊಂದು ವರ್ಣತಂತು ತಂದೆಯಿಂದ ಬಳುವಳಿಯಾಗಿರುತ್ತದೆ. ಈ ರೋಗಿಷ್ಠ ಇಲಿಗಳ ತಳಿಗಳನ್ನು 'ಸ್ಕರ್ಫಿ' ಎಂದು ಕರೆದಿದ್ದರು.

ಸ್ಕರ್ಫಿ ಇಲಿಗಳಲ್ಲಿ ಹಲವು ತೊಂದರೆಗಳು ಕಾಣಿಸುತ್ತವೆ. ಮೈ ಮೇಲೆ ರೋಮಗಳ ಜಾಗದಲ್ಲಿ ಹುರುಪೆಗಳಿರುತ್ತವೆ. ಗುಲ್ಮ ಮತ್ತು ದುಗ್ಧ ಗ್ರಂಥಿಗಳು ಸಾಮಾನ್ಯಕ್ಕಿಂತಲೂ ಊದಿಕೊಂಡಿರುತ್ತವೆ. ಅಂದರೆ ಯಾವುದೋ ದಾಳಿ ನಡೆಯುತ್ತಿರುವ ಕುರುಹು. ಈ ಇಲಿಗಳು ಹೆಚ್ಚು ಕಾಲ ಬದುಕುವುದೂ ಇಲ್ಲ. ಇವೆಲ್ಲವೂ ವಿಕಿರಣದಿಂದ ಉಂಟಾದ ಒಂದು ದೋಷ ಎಂಬುದು ಸ್ಪಷ್ಟವಾಗಿತ್ತು. ಅದು ಎಕ್ಸ್ ವರ್ಣತಂತುವಿನ ಮೇಲೆ ಇರಬೇಕು ಎಂಬುದೂ ನಿರ್ಣಯವಾಗಿತ್ತು. ಆದರೆ ವರ್ಣತಂತುವಿನಲ್ಲಿ ಎಲ್ಲಿ ಎಂಬುದು ಗೊತ್ತಿರಲಿಲ್ಲ. ಜೊತೆಗೆ ಅದರ ಕೆಲಸ ಏನು ಎಂಬುದೂ ಗೊತ್ತಿರಲಿಲ್ಲ. ಈ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಿದವರು ಬ್ರಂಕೋವ್.

ಸ್ಕರ್ಫಿ ಇಲಿಯ ಎಕ್ಸ್ ಕ್ರೋಮೋಸೋಮಿನಲ್ಲಿ ಈ ದೋಷ ಎಲ್ಲಿದೆ ಎಂದು ಪತ್ತೆ ಮಾಡುವ ಕೆಲಸ ಹದಿನೇಳು ಕೋಟಿ ಅಕ್ಷರಗಳಿರುವ ಪುಸ್ತಕದಲ್ಲಿ ಯಾವುದೋ ಪ್ಯಾರಾದಲ್ಲಿ ಇರುವ ಯಾವುದೋ ಅಕ್ಷರದೋಷವನ್ನು ಹುಡುಕಿದ ಹಾಗೆ. ಬ್ರಂಕೋವ್ ಮತ್ತು ರಾಮ್ಸ್‌ಡೆಲ್ ಸಂಶೋಧನೆ ನಡೆಸುತ್ತಿದ್ದ ಸಂದರ್ಭದಲ್ಲಿ ಇದು ಬಹಳ ಶ್ರಮ ಹಾಗೂ ನಿಧಾನದ ಕೆಲಸ ಆಗಿತ್ತು. ಹಾಗಿದ್ದೂ ಹತ್ತಾರು ವರ್ಷಗಳ ಕಾಲ ಸಂಶೋಧನೆ ನಡೆಸಿದ ಬ್ರಂಕೋವ್, ಎಕ್ಸ್ ವರ್ಣತಂತುವಿನಲ್ಲಿರುವ ಸಾವಿರಾರು ಜೀನ್‌ಗಳಲ್ಲಿ ಇಪ್ಪತ್ತು ಜೀನ್‌ಗಳ ಗುಂಪಿನಲ್ಲಿ ಈ ದೋಷ ಇರಬೇಕು ಎಂದು ಪತ್ತೆ ಮಾಡಿದರು. ಅನಂತರ ಈ ಇಪ್ಪತ್ತು ಜೀನ್‌ಗಳನ್ನೂ ಒಂದೊಂದನ್ನಾಗಿ ಆರೋಗ್ಯವಂತ ಇಲಿಯ ಅದೇ ಇಪ್ಪತ್ತು ಜೀನ್‌ಗಳ ಜೊತೆಗೆ ಹೋಲಿಸಬೇಕಿತ್ತು. ಪ್ರತಿಯೊಂದನ್ನು ಹೋಲಿಸುವುದಕ್ಕೂ ಮೊದಲಿಗೆ ವರ್ಣತಂತುವಿನ ಆ ಭಾಗದ ತುಣುಕನ್ನು ಗುರುತಿಸಿ, ಬೇರ್ಪಡಿಸಬೇಕಿತ್ತು. ಅನಂತರ ಅದರಲ್ಲಿರುವ ಡಿಎನ್‌ಎ ಸರಣಿಯನ್ನು ವಿವರಿಸಬೇಕಿತ್ತು. ಇದೇ ರೀತಿ ಆರೋಗ್ಯವಂತ ಇಲಿಯ ಡಿಎನ್‌ಎ ಸರಣಿಯನ್ನೂ ವಿವರಿಸಬೇಕಿತ್ತು. ಇವೆರಡೂ ಡಿಎನ್‌ಎ ಸರಣಿಯನ್ನು ಒಂದೊಂದೇ ಅಕ್ಷರವನ್ನಾಗಿ ಹೋಲಿಸಬೇಕಿತ್ತು. ಡಿಎನ್‌ಎಗೆ ಹೋಲಿಸುವುದು ಎಂದರೆ ಕಣ್ಣಿಗೆ ಕಾಣದ ಮಾಯದ ವಸ್ತುವಿನಲ್ಲಿ ವ್ಯತ್ಯಾಸಗಳನ್ನು ಹುಡುಕುವುದು ಎಂದಷ್ಟೆ. ಅದಕ್ಕಾಗಿ ಅತಿ ಎಚ್ಚರದಿಂದ ರಾಸಾಯನಿಕ ಕ್ರಿಯೆಗಳನ್ನು ನಡೆಸಬೇಕಿತ್ತು. ಈ ಎಲ್ಲವನ್ನೂ ನಡೆಸಿದ ನಂತರವಷ್ಟೆ ವ್ಯತ್ಯಾಸ ಗೊತ್ತಾಗಬೇಕು. ಬ್ರಂಕೋವ್ ಮತ್ತು ರಾಮ್ಸ್‌ಡೆಲ್ ಹೀಗೆ ಸ್ಕರ್ಫಿ ಇಲಿಯ ಎಕ್ಸ್ ವರ್ಣತಂತುವಿನ ಆ ದೋಷಪೂರ್ಣ ಭಾಗದಲ್ಲಿದ್ದ ಹತ್ತೊಂಬತ್ತು ಜೀನ್‌ಗಳನ್ನು ಆರೋಗ್ಯವಂತ ಇಲಿಯದ್ದರ ಜೊತೆಗೆ ಹೋಲಿಸಿ ನೋಡಿದರು. ಏನೂ ವ್ಯತ್ಯಾಸ ಕಂಡಿರಲಿಲ್ಲ. ಅಂತೂ ಕೊನೆಗೆ ಇಪ್ಪತ್ತನೆಯ ಜೀನನ್ನು ಹೋಲಿಸಿದಾಗ ಒಂದು ವ್ಯತ್ಯಾಸ ಕಂಡಿತು. ಈ ಬಗೆಯಲ್ಲಿ ವ್ಯತ್ಯಾಸ ಕಂಡ ಜೀನ್ ಅನ್ನು 'ಫಾಕ್ಸ್ 3' (ಫಾಕ್ಸ್ ತ್ರೀ) ಎಂದು ಕರೆದರು. ಫಾಕ್ಸ್ 3 ಜೀನ್ ಪತ್ತೆ, ಆಟೊ ಇಮ್ಯೂನ್ ರೋಗವನ್ನು ಅರ್ಥ ಮಾಡಿಕೊಳ್ಳುವ ಹಾದಿಯಲ್ಲಿ ಮಹಾತಿರುವೆನ್ನಿಸಿದೆ. ಇದನ್ನು ಸಾಧಿಸಿದ್ದು ಮೇರಿ ಬ್ರಂಕೋವ್ ಮತ್ತು ಫ್ರೆಡ್ ರಾಮ್ಸ್‌ಡೆಲ್.

ಬ್ರಂಕೋವ್ ಸಂಶೋಧನೆ ಮಾಡಿದ್ದೆಲ್ಲವೂ ಖಾಸಗಿ ಕಂಪೆನಿಯಲ್ಲಿ. ಅವರು ಉದ್ಯೋಗಕ್ಕೆ ಸೇರಿದ್ದು ಡಾರ್ವಿನ್ ಮಾಲಿಕ್ಯುಲಾರ್ ಕಾರ್ಪೊರೇಷನ್ ಎನ್ನುವ ಜೈವಿಕ ತಂತ್ರಜ್ಞಾನದ ಕಂಪನಿಯಲ್ಲಿ. ಅನಂತರ ಆ ಕಂಪನಿ ಹಲವು ಬಾರಿ ಮಾರಾಟವಾಗಿ, ಬೇರೆ, ಬೇರೆ ಕಂಪನಿಗಳ ಜೊತೆಗೆ ಸೇರಿಕೊಂಡಿತು. ಇಷ್ಟೆಲ್ಲ ನಡೆದಾಗಲೂ ಮೇರಿ ಅಲ್ಲಿಯೇ ತಮ್ಮ ಉದ್ಯೋಗ ಮುಂದುವರೆಸಿದ್ದರು. ಫಾಕ್ಸ್ 3 ಪತ್ತೆಯಾದಾಗ ಕಂಪನಿ ಇಂಗ್ಲೆಂಡಿನ ಕಂಪನಿಯ ಒಡೆತನದಲ್ಲಿ ಇತ್ತು. ಯಾವುದೋ ಕಾರಣಕ್ಕೆ, ಬೊಥೆಲ್ ಪಟ್ಟಣದಲ್ಲಿದ್ದ ಸಂಶೋಧನಾಲಯವನ್ನು ಮುಚ್ಚಿಬಿಟ್ಟಿತು. ಬ್ರಂಕೋವ್ ಕೆಲಸ ಕಳೆದುಕೊಂಡು, ಬೇರೊಂದು ಕಂಪೆನಿ ಸೇರಿದರು. ಟಿ–ಕೋಶಗಳ ಸಂಶೋಧನೆ ಅಲ್ಲಿಗೇ ನಿಂತಿತು.

ಎಂದೋ ನಡೆಸಿದ ಕೆಲಸ. ಕಷ್ಟದ ಹಾದಿಯಲ್ಲಿ ನಡೆದು ಮಾಡಿದ ಹೊಸ ಶೋಧ. ಅದಕ್ಕಾಗಿ ಪ್ರಪಂಚದ ಮೇರು ಪ್ರಶಸ್ತಿ ಮೇರಿ ಬ್ರಂಕೋವ್ ಅವರಿಗೆ ದಕ್ಕಿದೆ. 'ಕರ್ಮ ಬೆನ್ನು ಹತ್ತುತ್ತದೆ' ಎಂದು ಒಳ್ಳೆಯದಕ್ಕೂ ಹೇಳಬಹುದು!

ನೊಬೆಲ್ ವಿಜ್ಞಾನಿಗಳು 8

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ವಿದ್ಯುಚ್ಛಕ್ತಿ ಪ್ರವಾಹದ ಕಾಂತೀಯ ಪರಿಣಾಮಗಳು

5) ಕೊಟ್ಟಿರುವ ಪ್ರದೇಶದಲ್ಲಿನ ಕಾಂತಕ್ಷೇತ್ರವು ಏಕರೂಪವಾಗಿದೆ. ಇದನ್ನು ಪ್ರತಿನಿಧಿಸುವ ಚಿತ್ರವನ್ನು ರಚಿಸಿರಿ

ಉತ್ತರ:–



6) ಸರಿಯಾದ ಉತ್ತರವನ್ನು ಆರಿಸಿ. ವಿದ್ಯುತ್ ಪ್ರವಾಹವಿರುವ ಉದ್ದವಾದ ನೇರ ಸೊಲೆನಾಯ್ಡ್‌ನ ಒಳಭಾಗದಲ್ಲಿನ ಕಾಂತಕ್ಷೇತ್ರವು.

a) ಸೊನ್ನೆ ಆಗಿರುತ್ತದೆ.

b) ನಾವು ಅದರ ತುದಿಯ ಕಡೆಗೆ ಚಲಿಸಿದಂತೆಲ್ಲಾ ಕಡಿಮೆಯಾಗುತ್ತದೆ.

c) ನಾವು ಅದರ ತುದಿಯ ಕಡೆಗೆ ಚಲಿಸಿದಂತೆಲ್ಲಾ ಹೆಚ್ಚಾಗುತ್ತದೆ.

d) ಎಲ್ಲಾ ಬಿಂದುಗಳಲ್ಲೂ ಸಮನಾಗಿರುತ್ತದೆ.

ಉತ್ತರ:– (d) ಎಲ್ಲಾ ಬಿಂದುಗಳಲ್ಲೂ ಸಮನಾಗಿರುತ್ತದೆ

7) ಒಂದು ಪ್ರೊಟಾನ್, ಕಾಂತಕ್ಷೇತ್ರದಲ್ಲಿ ಸ್ವತಂತ್ರವಾಗಿ ಚಲಿಸುವಾಗ ಈ ಕೆಳಗಿನ ಯಾವ ಗುಣವು ಬದಲಾಗುತ್ತದೆ? (ಒಂದಕ್ಕಿಂತ ಹೆಚ್ಚು ಉತ್ತರಗಳು ಇರಬಹುದು)

(a) ರಾಶಿ (b) ಜವ

(c) ವೇಗ (d) ಸಂವೇಗ

ಉತ್ತರ:– (c) ವೇಗ (d) ಸಂವೇಗ

8) ಚಟುವಟಿಕೆ 12.7 ರಲ್ಲಿ ಸಲಾಕೆ ABಯ ಸ್ಥಾನಪಲ್ಲಟವು ಯಾವಾಗ ಬಾಧಿತಗೊಳ್ಳುತ್ತದೆ ಎಂದು ಯೋಚಿಸುವಿರಿ?

(i) ಸಲಾಕೆ ABಯಲ್ಲಿ ವಿದ್ಯುತ್‌ಪ್ರವಾಹವನ್ನು ಹೆಚ್ಚಿಸಿದಾಗ

(ii) ಪ್ರಬಲವಾದ ಕುದುರೆಲಾಳಾಕೃತಿ ಕಾಂತವನ್ನು ಬಳಸಿದಾಗ ಮತ್ತು

(iii) ಸಲಾಕೆ ABಯ ಉದ್ದವನ್ನು ಹೆಚ್ಚಿಸಿದಾಗ

ಉತ್ತರ:– (i) AB ಸಲಾಕೆಯ ಸ್ಥಾನಪಲ್ಲಟ ಹೆಚ್ಚಾಗುತ್ತದೆ.

(ii) ಪ್ರಬಲವಾದ ಕುದುರೆಲಾಳ ಬಳಸಿದಾಗ ಕಾಂತ ಕ್ಷೇತ್ರಗಳ ಬಲ ಹೆಚ್ಚಾಗುತ್ತದೆ

(iii) ಹೆಚ್ಚು ವಿದ್ಯುತ್ಪ್ರವಾಹ ಉಂಟಾಗುತ್ತದೆ.

9) ಪಶ್ಚಿಮಕ್ಕೆ ಯೋಜಿತವಾದ ಧನಾತ್ಮಕ ಕಣ(ಆಲ್ಫಾ–ಕಣ)ವು ಕಾಂತ ಕ್ಷೇತ್ರದಿಂದಾಗಿ ಉತ್ತರಕ್ಕೆ ಪಲ್ಲಟಗೊಂಡಿದೆ. ಆಗ ಕಾಂತಕ್ಷೇತ್ರದ ದಿಕ್ಕು

(a) ದಕ್ಷಿಣದ ಕಡೆಗಿರುತ್ತದೆ (b) ಪೂರ್ವದ ಕಡೆಗಿರುತ್ತದೆ

(c) ಕೆಳಮುಖವಾಗಿರುತ್ತದೆ (d) ಮೇಲ್ಮುಖವಾಗಿರುತ್ತದೆ

ಉತ್ತರ:– (d) ಮೇಲ್ಮುಖವಾಗಿರುತ್ತದೆ

10) ಫ್ಲೆಮಿಂಗನ ಬಲಗೈ ನಿಯಮವನ್ನು ಸಂಕ್ಷಿಪ್ತವಾಗಿ ತಿಳಿಸಿ.

ಉತ್ತರ:– ಫ್ಲೆಮಿಂಗನ ಬಲಗೈ ನಿಯಮ - "ಬಲಗೈನ ಹೆಬ್ಬೆರಳು, ತೋರು ಬೆರಳು ಮತ್ತು ಮಧ್ಯದ ಬೆರಳು ಇವುಗಳನ್ನು ಪರಸ್ಪರ ಲಂಬವಾಗಿರುವಂತೆ ಹೊಂದಿಸಿದರೆ, ತೋರು ಬೆರಳು ಕಾಂತಕ್ಷೇತ್ರದ ನೇರವನ್ನೂ, ಹೆಬ್ಬೆರಳು ವಾಹಕದ ಚಲನೆಯ ನೇರವನ್ನೂ, ಮಧ್ಯದ ಬೆರಳು ಪ್ರೇರಿತ ವಿದ್ಯುತ್ ಪ್ರವಾಹದ ನೇರವನ್ನು ಸೂಚಿಸುತ್ತದೆ".

11) ಫ್ಲೆಮಿಂಗನ ಬಲಗೈ ನಿಯಮವು ಯಾವ ಸಂಬಂಧವನ್ನು ತಿಳಿಸುತ್ತದೆ?

ಉತ್ತರ:– ಕಾಂತಕ್ಷೇತ್ರ, ಪ್ರೇರಿತ ವಿದ್ಯುತ್‌ಪ್ರವಾಹ ಮತ್ತು ಸುರುಳಿ ಚಲನೆ ನೇರಗಳಿಗಿರುವ ಪರಸ್ಪರ ಸಂಬಂಧವನ್ನು ಫ್ಲೆಮಿಂಗನ ಬಲಗೈ ನಿಯಮವು ತಿಳಿಸುತ್ತದೆ.

12) ಯಾವುದಕ್ಕೆ ಕಾಂತವನ್ನು ವಿದ್ಯುತ್‌ಕಾಂತ ಎನ್ನುವರು?

ಉತ್ತರ:– ಹೆಚ್ಚು ಕಾಂತಕ್ಷೇತ್ರ ಹೊಂದಿರುವ ಸೊಲೆನಾಯ್ಡ್‌ನ ಒಳಭಾಗದಲ್ಲಿ ಒಂದು ಕಾಂತೀಯ ವಸ್ತುವಾದ ಮೆದು ಕಬ್ಬಿಣದ ತುಂಡನ್ನು ಇರಿಸಿ ಕಾಂತವನ್ನಾಗಿಸಲು ಉಪಯೋಗಿಸಬಹುದು (ಕೆಳಗಿನ ಚಿತ್ರದಲ್ಲಿರುವಂತೆ) ಈ ರೀತಿ ಉಂಟಾದ ಕಾಂತವನ್ನು ವಿದ್ಯುತ್‌ಕಾಂತ ಎನ್ನುವರು.



13) ವೃತ್ತಾಕಾರದ ವಾಹಕ ಸುರುಳಿಯಲ್ಲಿನ ವಿದ್ಯುತ್‌ಪ್ರವಾಹದಿಂದ ಉಂಟಾದ ಕಾಂತಕ್ಷೇತ್ರ ಬಗ್ಗೆ ವಿವರಿಸಿ

ಉತ್ತರ:– ನೇರವಾದ ವಾಹಕ ತಂತಿಯಲ್ಲಿ ವಿದ್ಯುತ್ ಪ್ರವಹಿಸಿದಾಗ ಅದರ ಸುತ್ತಲೂ ಕಾಂತೀಯಬಲ ರೇಖೆಗಳು ಉಂಟಾಗುತ್ತದೆ.

ಅದೇ ನೇರ ವಾಹಕ ತಂತಿಯನ್ನು ಸುರುಳಿಯಾಕಾರದಲ್ಲಿ ಬಾಗಿಸಿ ವಿದ್ಯುತ್ ಅನ್ನು ಹರಿಸಿದಾಗ, ಕಾಂತೀಯ ಬಲರೇಖೆಗಳು ಹೇಗೆ ಕಾಣತ್ತದೆ ಎಂದರೆ

ನೇರವಾದ ವಾಹಕ ತಂತಿಯಲ್ಲಿ ವಿದ್ಯುತ್‌ಪ್ರವಾಹವನ್ನು ಹರಿಸಿದಾಗ ಉಂಟಾದ ಕಾಂತಕ್ಷೇತ್ರವು ಅದರಿಂದ ಇರುವ ದೂರಕ್ಕೆ ವಿಲೋಮಾನುಪಾತದಲ್ಲಿರುತ್ತದೆ. ಅದೇ ರೀತಿ ವಿದ್ಯುತ್ ಪ್ರವಾಹವಿರುವ ಸುರುಳಿ ವಾಹಕದಲ್ಲಿನ ಪ್ರತಿಬಿಂದುವಿನಲ್ಲಿ ಅದರ ಸುತ್ತಲಿನ ಕಾಂತಕ್ಷೇತ್ರವನ್ನು ಪ್ರತಿನಿಧಿಸುವ ಏಕಕೇಂದ್ರೀಯ ವೃತ್ತಗಳು ತಂತಿಯಿಂದ ದೂರ ಸರಿದಂತೆಲ್ಲಾ ನಿರಂತರವಾಗಿ ದೊಡ್ಡದಾಗುತ್ತಾ ಹೋಗುತ್ತವೆ. (ಕೆಳಗಿನ ಚಿತ್ರದಲ್ಲಿರುವಂತೆ)



ನಾವು ವೃತ್ತಾಕಾರದ ಸುರುಳಿಯ ಕೇಂದ್ರವನ್ನು ತಲುಪುತ್ತಿದ್ದಂತೇ ದೊಡ್ಡ ವೃತ್ತಗಳ ಕಮಾನುಗಳು ಸರಳರೇಖೆಯಂತೆ ಗೋಚರಿಸುತ್ತವೆ. ವಾಹಕ ಸುರುಳಿಯ ಕೇಂದ್ರದಲ್ಲಿನ ಪ್ರತಿ ಬಿಂದುವಿನಿಂದ ಉಂಟಾದ ಕಾಂತೀಯ ಬಲರೇಖೆಗಳು ಸರಳರೇಖೆಯಲ್ಲಿರುವಂತೆ ಗೋಚರಿಸುತ್ತವೆ. ಬಲಗೈ ನಿಯಮವನ್ನು ಅನ್ವಯಿಸುವ ಮೂಲಕ ತಂತಿಯ ಪ್ರತಿಯೊಂದು ಭಾಗವು ಸುರುಳಿಯಲ್ಲಿನ ಬಲರೇಖೆಗಳ ದಿಕ್ಕಿನಲ್ಲಿರುವಂತೆಯೇ ಕಾಂತೀಯ ಬಲ ರೇಖೆಗಳ ಕೊಡುಗೆಯನ್ನು ನೀಡುತ್ತದೆ,

ವಿದ್ಯುತ್ ಪ್ರವಹಿಸುತ್ತಿರುವ ತಂತಿಯ ಒಂದು ನಿರ್ದಿಷ್ಟ ಬಿಂದುವಿನಲ್ಲಿ ಉಂಟಾದ ಕಾಂತಕ್ಷೇತ್ರವು ಅದರಲ್ಲಿ ಪ್ರವಹಿಸುತ್ತಿರುವ ವಿದ್ಯುತ್‌ಪ್ರವಾಹವನ್ನು ನೇರವಾಗಿ ಅವಲಂಬಿಸಿರುತ್ತದೆ ಆದ್ದರಿಂದ ಸುರುಳಿಯು 'n' ಸುತ್ತುಗಳನ್ನು ಹೊಂದಿದ್ದರೆ ಅದರ ಕಾಂತಕ್ಷೇತ್ರವು ಸುರುಳಿಯ ಒಂದು ಸುತ್ತಿನಿಂದ ಉಂಟಾದ ಕಾಂತಕ್ಷೇತ್ರಕ್ಕಿಂತ 'n' ರಷ್ಟು ಅಧಿಕವಾಗಿರುತ್ತದೆ. ಏಕೆಂದರೆ, ಪ್ರತಿಯೊಂದು ಸುರುಳಿಯಲ್ಲಿನ ವಿದ್ಯುತ್‌ಪ್ರವಾಹ ಒಂದೇ ದಿಕ್ಕಿನಲ್ಲಿ ಇರುತ್ತದೆ ಹಾಗೂ ಪ್ರತಿಯೊಂದು ಸುತ್ತಿನಿಂದ ಉಂಟಾದ ಕಾಂತಕ್ಷೇತ್ರವು ಸಂಯೋಜನೆಗೊಳ್ಳುತ್ತವೆ.

(ಮುಂದುವರಿಯುವುದು)

CHEMISTRY

Alcohols, Phenols and Ethers

8. Explain how the –OH group attached to a carbon of benzene ring activates it towards electrophilic substitution.

Ans :The density of the electron increases in the benzene ring as the – OH group acts as an electron-donating group. This is clearly shown in the resonance structure of phenol given here.



As a result, the benzene ring is activated towards electrophilic substitution.

9. Give equations of the following reactions:

(i) Oxidation of propan-1-ol with alkaline $KMnO_4$ solution.

(ii) Bromine in CS_2 with phenol.

(iii) Dilute HNO_3 with phenol.

Ans :

(i)



(ii)



(iii)



9: Explain the following with an example.

(i) Kolbe's reaction.

(ii) Reimer-Tiemann reaction.

(iii) Williamson ether synthesis

(iv) Unsymmetrical ether.

Ans :**(i) Kolbe's reaction:** Sodium phenoxide is formed when phenol is treated with sodium hydroxide. Ortho – hydroxybenzoic acid as the main product when sodium phenoxide is treated with carbon dioxide, followed by acidification, it undergoes electrophilic substitution. This reaction is known as Kolbe's reaction.



(ii) Reimer – Tiemann reaction:

When we treat phenol with chloroform and an aqueous hydroxide, an aldehyde group –CHO is introduced onto the aromatic ring. Generally, the aldehyde is introduced at the ortho-position with respect to the –OH group. This reaction is named as Reimer- Tiemann Reaction. Let us take an example-



Reimer-Tiemann Synthesis

Here, a substituted benzal chloride is formed initially, but it is hydrolysed by the alkaline reaction medium.

The Riemer-Tiemann synthesis reaction involves electrophilic substitution on the highly reactive phenoxide ring. Here, the electrophilic reagent is dichlorocarbene (CCl_2), which is generated from chloroform through the action of base. Although dichlorocarbene is electrically neutral but it contains carbon with only a sextet of electrons which makes it highly electrophilic-

$$OH^- + CHCl_3 \rightleftarrows H_2O + ^-:CCl_3 \rightarrow Cl^- + :CCl_2$$

Now, we will discuss the Williamson ether synthesis-

As we can understand from the name itself, the end product in this synthesis is ether. In this synthesis, an alkoxide anion undergoes substitution nucleophilic bimolecular reaction with an alkyl halide and forms ether. We generally carry out this reaction for the formation of unsymmetrical ethers. We will take an example to understand the mechanism of this reaction-



Here we have to use a strong base, NaH to form the alkoxide anion as alcohols are a weak acid and methyl iodide is used here which is the electrophile. Here, the reaction proceeds via S_{N2} pathway.

(iii) Williamson ether synthesis:

A chemical method to synthesize symmetrical & unsymmetrical ethers by making alkyl halides to react with sodium alkoxides is called Williamson ether synthesis.



The above reaction includes Sn_2 attack of the alkoxide ion on the alkyl halide. In the case of primary alkyl halides, better results are obtained.



Only If the alkyl halide is tertiary or secondary, in that case, elimination competes over substitution.

‘ಕೂಡಿ ಬಾಳೋಣ’ ಕೇಂದ್ರ ಸ್ಥಾಪನೆ

ಜಿಲ್ಲಾ, ತಾಲ್ಲೂಕು ಸಾಂತ್ವನ ಕೇಂದ್ರಗಳಲ್ಲಿ ವಿವಾಹಪೂರ್ವ ಸಮಾಲೋಚನೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಜಿಲ್ಲೆ ಮತ್ತು ತಾಲ್ಲೂಕು ಸಾಂತ್ವನ ಕೇಂದ್ರಗಳಲ್ಲಿ ವಿವಾಹಪೂರ್ವ ಸಮಾಲೋಚನೆಗಾಗಿ ‘ಕೂಡಿ ಬಾಳೋಣ’ ಕೇಂದ್ರ ಆರಂಭಿಸಲು ರಾಜ್ಯ ಮಹಿಳಾ ಆಯೋಗವು ಮುಂದಾಗಿದೆ.

ರಾಷ್ಟ್ರೀಯ ಮಹಿಳಾ ಆಯೋಗವು ‘ತೇರೆ ಮೇರೆ ಸಪ್ನೆ’ ಎಂಬ ವಿವಾಹಪೂರ್ವ ಸಮಾಲೋಚನಾ ಕೇಂದ್ರ ಕಾರ್ಯಕ್ರಮ ರೂಪಿಸಿದೆ. ಅದರಂತೆ, ರಾಜ್ಯಗಳ ವಿವಾಹಪೂರ್ವ ಸಮಾಲೋಚನಾ ಕೇಂದ್ರ ಆರಂಭಿಸುವಂತೆ ಎಲ್ಲ ರಾಜ್ಯಗಳ ಮಹಿಳಾ ಆಯೋಗಕ್ಕೆ ಪತ್ರ ಬರೆದಿತ್ತು.

‘ತೇರೆ ಮೇರೆ ಸಪ್ನೆ’ಯ ಪ್ರಮಾಣಿತ ಕಾರ್ಯವಿಧಾನದ (ಎಸ್‌ಒಪಿ) ಆಧಾರದಲ್ಲಿಯೇ ಸಮಾಲೋಚನಾ ಕೇಂದ್ರ ಆರಂಭಿಸುವ ಬಗ್ಗೆ ರಾಜ್ಯ ಮಹಿಳಾ ಆಯೋಗವು ಪ್ರಸ್ತಾವ ರೂಪಿಸಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಲ್ಲಿಸಿತ್ತು. ‘ತೇರೆ ಮೇರೆ ಸಪ್ನೆ’ ಎಂಬ ಹಿಂದಿ ಹೆಸರನ್ನು ಬದಲಿಸಿ, ‘ಕೂಡಿ ಬಾಳೋಣ’ ಎಂದು ಮರುನಾಮಕರಣ ಮಾಡಲಾಗಿದೆ.

ಆಯೋಗದ ಈ ಪ್ರಸ್ತಾವಕ್ಕೆ ಇಲಾಖೆಯು ಮಂಗಳವಾರ ಅನುಮೋದನೆ ನೀಡಿದ್ದು, ಲಭ್ಯವಿರುವ ಸಂಪನ್ಮೂಲಗಳನ್ನು ‘ಕೂಡಿ ಬಾಳೋಣ’ ಕೇಂದ್ರಕ್ಕೆ ಒದಗಿಸಬೇಕು ಎಂದು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ. ಜಿಲ್ಲಾಧಿಕಾರಿಗಳ ಬಳಿ ಲಭ್ಯವಿರುವ ಅನುದಾನ ಅಥವಾ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಬಳಸಿಕೊಂಡು ಅಗತ್ಯ ಸಂಪನ್ಮೂಲಗಳನ್ನು ಸೃಷ್ಟಿಸಬಹುದು ಎಂದು ಆದೇಶದಲ್ಲಿ ಸಲಹೆ ನೀಡಲಾಗಿದೆ.

ಈ ಕೇಂದ್ರಗಳ ರೂಪುರೇಷೆ ಹೇಗಿರಬೇಕು, ಅವು ಹೇಗೆ ಕಾರ್ಯನಿರ್ವಹಿಸಬೇಕು ಎಂಬುದರ ಬಗ್ಗೆ ತರಬೇತಿ ನೀಡಲು ರಾಷ್ಟ್ರೀಯ ಮಹಿಳಾ ಆಯೋಗದ ಪರಿಣತರ ತಂಡವು ರಾಜ್ಯಕ್ಕೆ ಭೇಟಿ ನೀಡಲಿದೆ. ಅದಕ್ಕೂ ಮುನ್ನ ಎಲ್ಲ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮಾಲೋಚನಾ ಕೇಂದ್ರಕ್ಕೆ ಜಾಗ ಗುರುತಿಸಿ, ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಬೇಕಿದೆ.

ಮುಖ್ಯಾಂಶಗಳು

- ‘ತೇರೆ ಮೇರೆ ಸಪ್ನೆ’ ಕಾರ್ಯಕ್ರಮದ ಮಾದರಿಯ ಯೋಜನೆ
- ಪ್ರಸ್ತಾವನೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಸ್ತು
- ಸಂಪನ್ಮೂಲ ಒದಗಿಸಲು ಡಿ.ಸಿಗಳಿಗೆ ಸೂಚನೆ

ಯಾವುದೆಲ್ಲಾ ಸೇವೆ ಲಭ್ಯ...

- ವಿವಾಹ ಆಗಲು ಇಚ್ಛಿಸುವ ಜೋಡಿ ಮತ್ತು ವಿವಾಹಿತ ಜೋಡಿಯು ಈ ಕೇಂದ್ರಗಳಲ್ಲಿ ಸಮಾಲೋಚನೆ ಪಡೆಯಬಹುದು
- ಈ ಕೇಂದ್ರಗಳಲ್ಲಿ ಸಮಾಲೋಚನೆ ಪಡೆಯುವವರ ಎಲ್ಲ ವಿವರಗಳನ್ನು ಗೋಪ್ಯವಾಗಿ ಇರಿಸಲಾಗುತ್ತದೆ
- ವಿವಾಹ ಆಪ್ತ ಸಮಾಲೋಚನೆ, ವಿವಾಹ ಮತ್ತು ನೋಂದಣಿ ಪ್ರಕ್ರಿಯೆ ಕುರಿತಾಗಿ ಸಲಹೆ ನೀಡಲಾಗುತ್ತದೆ
- ವಿವಾಹಿತ ಜೋಡಿಯ ಮಧ್ಯೆ ಸಮಸ್ಯೆಗಳು ಇದ್ದರೆ, ಅದನ್ನು ಪರಿಹರಿಸಿಕೊಳ್ಳಲು ಅಗತ್ಯ ಸಲಹೆಗಳನ್ನು ನೀಡಲಾಗುತ್ತದೆ

ಶಾಲಾ ಆವರಣ: ನಾಯಿಗಳ ಸ್ಥಳಾಂತರಕ್ಕೆ ಕ್ರಮ– ಸೂಚನೆ

ಬೆಂಗಳೂರು: ಮಕ್ಕಳ ಸುರಕ್ಷತೆಗಾಗಿ ರಾಜ್ಯದ ಎಲ್ಲ ಶಾಲೆಗಳ ಆವರಣದಲ್ಲಿರುವ ಬೀದಿ ನಾಯಿಗಳ ಮಾಹಿತಿ ಸಂಗ್ರಹಿಸಿ, ಸ್ಥಳೀಯ ಸಂಸ್ಥೆಗಳಿಗೆ ನೀಡುವಂತೆ ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಎಲ್ಲ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ಬೀದಿ ನಾಯಿಗಳ ಉಪಟಳ ತಪ್ಪಿಸಲು ಕ್ರಮಕೈಗೊಳ್ಳಬೇಕು. ಶಾಲಾ ಆವರಣ ದಲ್ಲಿರುವ ನಾಯಿಗಳ ಸಂಖ್ಯೆಯನ್ನು ಲೆಕ್ಕ ಹಾಕಬೇಕು. ನಗರ ಹಾಗೂ ಗ್ರಾಮೀಣ ಸಂಸ್ಥೆಗಳಿಗೆ ಮಾಹಿತಿ ನೀಡಬೇಕು. ನಾಯಿಗಳನ್ನು ಹಿಡಿದು ಪ್ರಾಣಿ ಆಶ್ರಯ ಸ್ಥಾನಗಳಿಗೆ ಸ್ಥಳಾಂತರಿಸಲು ಸಹಕರಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಸೂಚಿಸಿದ್ದಾರೆ.

ಬೀದಿನಾಯಿಗಳು ಶಾಲಾ ಆವರಣದೊಳಗೆ ಪ್ರವೇಶಿಸುವುದನ್ನು ತಡೆಯಲು ಸಂಸ್ಥೆಯ ಆವರಣಕ್ಕೆ ಕಾಂಪೌಂಡ್ ನಿರ್ಮಿಸಬೇಕು. ಮೇಲುಸ್ತುವಾರಿ ಮಾಡಲು ಹಾಗೂ ಸ್ಥಳೀಯ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಲು ಆಯಾ ಶಾಲೆಯ ಮುಖ್ಯಶಿಕ್ಷಕರು ಅಥವಾ ಪ್ರಾಂಶುಪಾಲರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಬೇಕು. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪ ನಿರ್ದೇಶಕರು ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶಿಸಿದ್ದಾರೆ.

ಮಕ್ಕಳ ಸುರಕ್ಷತೆಗಾಗಿ ಶಾಲಾ ಆವರಣದಲ್ಲಿರುವ ಬೀದಿ ನಾಯಿಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳುವಂತೆ ಸುಪ್ರೀಂ ಕೋರ್ಟ್ ಈಚೆಗೆ ನಿರ್ದೇಶನ ನೀಡಿದ್ದು, ಅದರಂತೆ ಕ್ರಮವಹಿಸಬೇಕು ಎಂದು ಸೂಚಿಸಿದ್ದಾರೆ.

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು–01

ಹೆಚ್‌ಸಿಸಿ ಸಂ. 43/2025 ದಿನಾಂಕ: 29.11.2025

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯವು, ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ Contract for "Sanitization Services/House Keeping" ಗಾಗಿ ಟೆಂಡರನ್ನು e-Procurement Portal ನಲ್ಲಿ ಆಹ್ವಾನಿಸಲಾಗಿದೆ.

ಟೆಂಡರ್‌ನ್ನು ದಿನಾಂಕ: **16.12.2025 ರ 4:00 ಗಂಟೆಯೊಳಗೆ** ಆಸಕ್ತರು upload ಮಾಡಬೇಕು. ಹೆಚ್ಚಿನ ವಿವರಗಳನ್ನು https://kppp.karnataka.gov.in/#/portal/searchTender/live ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/–
(ಎಸ್.ವಿ.ದಿನೇಶ)
ರಿಜಿಸ್ಟ್ರಾರ್ (ಗಣಕ) ಮತ್ತು ಟೆಂಡರ್ ಆಹ್ವಾನಿಸುವ ಹಾಗೂ ಅಂಗೀಕರಿಸುವ ಪ್ರಾಧಿಕಾರ,
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/4133/ಎಂಎಎ/25–26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯ ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ದಕ್ಷಿಣ) 7ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1.	ದಕ್ಷಿಣ ಪಶ್ಚಿಮ–2	ಬೆಂಜಮಂ/ಕಾನಿಅ (ದ.ಪ–2)/ತಾಂ.ಅ/ ಪಿಬಿ/4248/2025–26 ದಿನಾಂಕ: 01.12.2025	ರೂ.16,00,987/–	09.12.2025 ಸಂಜೆ 5:00 ಗಂಟೆಯವರೆಗೆ	11.12.2025ರ ಬೆಳಗ್ಗೆ 10:30 ಗಂಟೆಯ ನಂತರ
			ರೂ.40,100/–		
2.		ಬೆಂಜಮಂ/ಕಾನಿಅ (ದ.ಪ–2)/ತಾಂ.ಅ/ ಪಿಬಿ/4248/2025–26 ದಿನಾಂಕ: 01.12.2025 (ಪರಿಶಿಷ್ಟ ಪಂಗಡಕ್ಕೆ ಮೀಸಲು)	ರೂ.15,80,930/–		
			ರೂ.19,800/–		
3.		ಬೆಂಜಮಂ/ಕಾನಿಅ (ದ.ಪ–2)/ತಾಂ.ಅ/ ಪಿಬಿ/4248/2025–26 ದಿನಾಂಕ: 01.12.2025	ರೂ.24,97,952/–		
			ರೂ.50,000/–		
4.			ರೂ.7,34,755/–		
			ರೂ.25,000/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ ಪಶ್ಚಿಮ–2)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/4160/SSC/2025-26

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಕರ್ನಾಟಕ ರವರ ಕಛೇರಿ ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. ದೂ: 080–23346551

ಸಂಖ್ಯೆ: KFD/HOFF/PUB(GEL)/2/2025-CI-KFD ದಿನಾಂಕ: 02.12.2025

ಟೆಂಡರ್ ಪ್ರಕಟಣೆ

ಅರಣ್ಯ ಇಲಾಖೆಯ ಸಾಮಾಜಿಕ ಜಾಲತಾಣಗಳನ್ನು ಮತ್ತು ಪ್ರಚಾರ ಕಾರ್ಯಗಳನ್ನು ನಿರ್ವಹಿಸಲು ಸೂಕ್ತ ಏಜೆನ್ಸಿಯನ್ನು ಆಯ್ಕೆ ಮಾಡಲು ಟೆಂಡರ್ ಅಧಿಸೂಚನೆ.

ಕರ್ನಾಟಕ ಅರಣ್ಯ ಇಲಾಖೆಯ ಸಾಮಾಜಿಕ ಜಾಲತಾಣ / ಹ್ಯಾಂಡಲ್ಸ್ ಮತ್ತು ಪ್ರಚಾರ ಕಾರ್ಯಗಳನ್ನು ನಿರ್ವಹಿಸಲು ಏಜೆನ್ಸಿಯನ್ನು ಆಯ್ಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಲ್ಲಿ ಇ–ಟೆಂಡರ್ **ಅಧಿಸೂಚನೆ ಸಂಖ್ಯೆ: KFD/2025-26/SE1453 ದಿನಾಂಕ: 01.12.2025** ಅನ್ನು ಪ್ರಕಟಿಸಲಾಗಿದ್ದು, ಆಸಕ್ತರಿಂದ ಬಿಡ್ಡುಗಳನ್ನು ಆಹ್ವಾನಿಸಲಾಗಿದೆ.

ಸದರಿ ಪೋರ್ಟಲ್‌ನ ವೆಬ್‌ಸೈಟ್ ಮುಖಾಂತರ ದಿನಾಂಕ: **01.12.2025** ರಿಂದ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **13.12.2025ರ ಸಂಜೆ 5.00 ಗಂಟೆಯವರೆಗೆ** ಅವಕಾಶವಿರುತ್ತದೆ. ತಾಂತ್ರಿಕ ಬಿಡ್ಡನ್ನು **15.12.2025ರ ಸಂಜೆ 5.00 ಗಂಟೆಗೆ** ಈ ಕಛೇರಿಯಲ್ಲಿ ತೆರೆಯಲಾಗುವುದು ಮತ್ತು ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನ ಪೂರ್ಣಗೊಂಡ ನಂತರ ತೆರೆಯಲಾಗುವುದು. ಟೆಂಡರ್ ಅಧಿಸೂಚನೆಯ ಪೂರ್ಣ ಮಾಹಿತಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರ ಸ್ಥಾನ)

DIPR/CP/YC/4158/2025-26

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ: 16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–52.
ದೂರವಾಣಿ: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: www.kerc.karnataka.gov.in

ಸಂಖ್ಯೆ: ಕ.ವಿ.ನಿ.ಆ/ಡಿಎಫ್/ಡಿಎಸ್‌ಎಂ/2025–26/1234 ದಿನಾಂಕ: 02.12.2025

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ [(ಫ್ರೇಮ್‌ವರ್ಕ್ ಫಾರ್ ಡಿಮ್ಯಾಂಡ್ ಫ್ಲೆಕ್ಸಿಬಿಲಿಟಿ (ಡಿಎಫ್) / ಡಿಮ್ಯಾಂಡ್ ಸೈಡ್ ಮ್ಯಾನೇಜ್‌ಮೆಂಟ್ (ಡಿಎಸ್‌ಎಂ)] ವಿನಿಮಯಗಳು, 2025–ಬಗ್ಗೆ.

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಕರಡು ವಿನಿಮಯಗಳನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ **13.10.2025** ರಂದು ಪ್ರಕಟಗೊಳಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲ ತಾಣ **(https://kerc.karnataka.gov.in)** ದಲ್ಲಿ ಸದರಿ ಕರಡನ್ನು ಲಭ್ಯವಿರಿಸಲಾಗಿದೆ. ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ದಿನಾಂಕ: 19.12.2025 ಮಧ್ಯಾಹ್ನ 3.00 ಗಂಟೆಗೆ ಶುಕ್ರವಾರ** ದಂದು ಆಯೋಗದ ಕೋರ್ಟ್ ಹಾಲ್‌ನ, ಒಂದನೆಯ ಮಹಡಿ, ನಂ. 16 C-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052 ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ. ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ/ಅಭಿಪ್ರಾಯ/ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ, ಕವಿನಿಆ, ಬೆಂಗಳೂರು–52.

ವಾಸಾಸಂಇ/ಉನಿ–ಸಿ.ಪಿ/4146/ಕೆಎಸ್‌ಎಂಸಿಎ/2025–26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ನ್ಯಾಕ್ ಎ+ ಮಾನ್ಯತೆ
ಆಸ್ತಿ ಅಧಿಕಾರಿಗಳ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು–560065
ದೂರವಾಣಿ : GKVK: 2330153-250, Direct : 23332765
Email : eo@uasbangalore.edu.in, Website: www.uasbangalore.edu.in

ಸಂ:ಇ.ಒ/ಎಸ್.ಪಿ.ಒ/ಇ–ಪ್ರೊಕ್ಯೂರ್‌ಮೆಂಟ್/11/2025–26 ದಿ:01–12–2025

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಜಿಕೆವಿಕೆ, ಬೆಂಗಳೂರು, ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಕೆ.ಜಿ–1, ಮತ್ತು ಕೆ.ಜಿ–2, ಟೆಂಡರ್ ನಿಬಂದನೆಗೊಳಪಟ್ಟಂತೆ ಟೆಂಡರನ್ನು ಆಹ್ವಾನಿಸಲಾಗಿದೆ.
ವಿವರ: ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 15–12–2025 ಸಂಜೆ 4.00 ಘಂಟೆಯವರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17–12–2025 ಸಮಯ ಬೆಳಗ್ಗೆ 10.30ಕ್ಕೆ, ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 20–12–2025 ಸಮಯ ಬೆಳಗ್ಗೆ 10.30ಕ್ಕೆ. ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. ಸೂಚನೆ:ಯಾವುದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಪ್ರಕಟಣೆಯ ವಿವರಗಳು ವೆಬ್‌ಸೈಟ್: **https://kppp.karnataka.gov.in** ರಲ್ಲಿ ದೊರೆಯುತ್ತದೆ ಹಾಗೂ ಈ ಕಛೇರಿಯನ್ನು, ಕಛೇರಿಯ ವೇಳೆಯಲ್ಲಿ ಸಹಾಯವಾಣಿ ದೂರವಾಣಿ ಸಂಖ್ಯೆ. **91–8046010000, +91–8068948777 09240214000/09240214001 support@eprochelpdesk.com** ಅಥವಾ **www.uasbangalore.edu.in** ದೂರವಾಣಿ ಸಂಖ್ಯೆ: 23630128 ಅನ್ನು ಸಂಪರ್ಕಿಸಬಹುದು.

ಸಹಿ/–
ಆಸ್ತಿ ಅಧಿಕಾರಿಗಳು

ವಾಸಾಸಂಇ/ವಾಪ್ರ/ಜಿಎ/4153/2025–26

ಕರ್ನಾಟಕ ಸರ್ಕಾರ
ಜಿಲ್ಲಾ ಆಯುಷ್ ಕಛೇರಿ, ಹೊಸಹಳ್ಳಿ, ಕಾರಸವಾಡಿ ರಸ್ತೆ, ಮಂಡ್ಯ– 571401. ದೂರವಾಣಿ: 08232–220147,
ಇ–ಮೇಲ್ ವಿಳಾಸ: dao.mandya09@gmail.com
ಸಂ:ಜಿಆಕಮ/06/ಅಭಿವೃದ್ಧಿ/2025–26 ದಿನಾಂಕ: 01–12–2025

ಇ–ಟೆಂಡರ್ ಪ್ರಕಟಣೆ ಕೆಪಿಪಿ–ಪ್ರಕ್ಯೂರ್‌ಮೆಂಟ್ ಮುಖಾಂತರ

ವಿಷಯ:–ಜಿಲ್ಲಾ ಆಯುಷ್ ಕಛೇರಿ, ಮಂಡ್ಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಯುಷ್ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಗೆ ಬರುವ ರೋಗಿಗಳ ಉಪಯೋಗಕ್ಕಾಗಿ ಆಯುರ್ವೇದ ಔಷಧಿಗಳನ್ನು ಖರೀದಿಸುವ ಬಗ್ಗೆ ಇ–ಟೆಂಡರ್ ಪ್ರಕಟಣೆ.

ಜಿಲ್ಲಾ ಆಯುಷ್ ಕಛೇರಿ, ಮಂಡ್ಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಗೆ ಬರುವ ರೋಗಿಗಳ ಉಪಯೋಗಕ್ಕಾಗಿ ಆಯುರ್ವೇದ ಔಷಧಿಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರನ್ವಯ ಕೆಪಿಪಿ–ಪ್ರಕ್ಯೂರ್‌ಮೆಂಟ್ ಮುಖಾಂತರ ನೊಂದಾಯಿತ ಅರ್ಹ ಟೆಂಡರ್‌ದಾರರಿಂದ ಇ–ಟೆಂಡರ್ ಕರೆಯಲಾಗಿದೆ. ಟೆಂಡರ್ ವಿವರಗಳನ್ನು ವೆಬ್ ಸೈಟ್ https://kppp.karnataka.gov.in ಇದರಲ್ಲಿ ನೋಡುವುದು. ಔಷಧಿಗಳನ್ನು ಖರೀದಿಸುವ ಅಂದಾಜು ಮೌಲ್ಯ ರೂ.26.00 ಲಕ್ಷಗಳಾಗಿರುತ್ತದೆ. ಇ.ಎಂ.ಡಿ. ರೂ.52,000/– ಗಳನ್ನು ನಿಗದಿಪಡಿಸಿದೆ. ಇ–ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:15–12–2025 ರಂದು ಸಂಜೆ 4.00 ಗಂಟೆ ಮತ್ತು ಇ–ಟೆಂಡರ್ ತೆರೆಯುವ ದಿನಾಂಕ:16–12–2025 ರಂದು ಅಪರಾಹ್ನ 4.30 ಗಂಟೆ ಆಗಿರುತ್ತದೆ. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಜಿಲ್ಲಾ ಆಯುಷ್ ಅಧಿಕಾರಿಗಳು, ಮಂಡ್ಯ ಇವರನ್ನು ಸಂಪರ್ಕಿಸಬಹುದಾಗಿದೆ. ಇ–ಟೆಂಡರ್ ದಾಖಲಾತಿಗಳಲ್ಲಿ ಯಾವುದೇ ಬದಲಾವಣೆ ಆದಲ್ಲಿ ಮಾಹಿತಿಯನ್ನು ಕೆಪಿಪಿ–ಪ್ರಕ್ಯೂರ್‌ಮೆಂಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಹಾಗೂ ಸದರಿ ಮಾಹಿತಿಯನ್ನು ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.

ಸಹಿ/–ಜಿಲ್ಲಾ ಆಯುಷ್ ಅಧಿಕಾರಿಗಳು,
ಟೆಂಡರ್ ಸಮಿತಿ, ಜಿಲ್ಲಾ ಆಯುಷ್ ಕಛೇರಿ, ಮಂಡ್ಯ.

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/606/2025–26

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ, ತುಮಕೂರು.

ಕ್ರ.ಸಂ:ಕಾಇಂ:ಲೋಇವಿ:ತುವು:ಸಇಂ–2:ಟೆಂಡರ್31/2025–26
ದಿನಾಂಕ : 28.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.31/2025–26 ದಿನಾಂಕ: 28.11.2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 31/2025–26 ದಿನಾಂಕ 28–11–2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054 ಜಿಲ್ಲಾ ರಸ್ತೆಗಳು–ಸುಧಾರಣೆಗಳು ಅಡಿಯಲ್ಲಿ 4 ಕಾಮಗಾರಿಗಳಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಕನಿಷ್ಟ ಮೊತ್ತ ರೂ: 160.24 ಲಕ್ಷಗಳು ಹಾಗೂ ಟೆಂಡರ್ ಗಿಟ್ಟ ಗರಿಷ್ಟ ಮೊತ್ತ ರೂ:241.26 ಲಕ್ಷಗಳು, ಕನಿಷ್ಟ ಇ.ಎಂ.ಡಿ ಮೊತ್ತ ರೂ.240367/– ಹಾಗೂ ಗರಿಷ್ಟ ಇ.ಎಂ.ಡಿ ಮೊತ್ತ ರೂ: 361892/–, ಅರ್ಹ ಗುತ್ತಿಗೆದಾರರು 3 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 06 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 06–12–2025 ರ 17–30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 29–11–2025 ರಿಂದ 08–12–2025ರ 16.00ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್ ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 08–12–2025 ರ 16–00 ಗಂಟೆವರೆಗೆ, ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ: 09–12–2025 ರ 16–30 ಗಂಟೆವರೆಗೆ ಮತ್ತು ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 10–12–2025 ರ 11–00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/358/KSMCA/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ತುಂ.ಮೇ.ಯೋ. ವಿಭಾಗ, ಶಿವಮೊಗ್ಗ. ಫೋನ್ ನಂ. 08182–254832

No.EE/UTPDN/SMG/KNNL/PB-3/T.N.No. 23/2025-26 Dt: 28.11.2025

ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.–ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 4701–ಚನ್ನಗಿರಿ 41 ಕೆರೆ ತುಂಬಿಸುವ ಏತ ನೀರಾವರಿ ಯೋಜನೆ ಅಡಿಯಲ್ಲಿ ಬರುವ (01) ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪತ್ರಿಕೆಯಂತೆ ಟೆಂಡರ್‌ಗೆ ಇಡಲಾದ ಮೊತ್ತ ರೂ.83.10 ಕೋಟಿಗಳು.(ಜಿ.ಎಸ್.ಟಿ ಹೊರತುಪಡಿಸಿ)

(2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ/ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ: 18.12.2025 ಸಾಯಂಕಾಲ 5.29 ಘಂಟೆಯವರೆಗೆ.

(3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 28.11.2025 ರಿಂದ 30.12.2025 ಸಾಯಂಕಾಲ 4.30 ಘಂಟೆಯವರೆಗೆ.

ಟೆಂಡರನ್ನು ತೆರೆಯುವ ದಿನಾಂಕ / ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು / ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/–
ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ತುಂ.ಮೇ.ಯೋ. ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ಸಂ.131–12/ಝೋಂಕಾರ್/2025–26

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಧಾರವಾಡ.

ಉಲ್ಲೇಖ: ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ 11/2025–26 ದಿನಾಂಕ: 01/12/2025

ಕರ್ನಾಟಕ ಲೋಕೋಪಯೋಗಿ ಹಾಗೂ ಜಲಸಂಪನ್ಮೂಲ ಇಲಾಖೆಗಳಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ವಿಭಾಗ ಕಛೇರಿಯಡಿ ಬರುವ ಧಾರವಾಡ, ಗದಗ, ಹಾನಗಲ್ ಮತ್ತು ರಾಣೆಬೆನ್ನೂರು ಉಪವಿಭಾಗಗಳ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಮಂಜುರಾದ ಕಾಮಗಾರಿಗಳನ್ನು **ಕೆ.ಡಬ್ಲ್ಯೂ–1,2,3,4** (ದ್ವಿಲಕೋಟೆ) ಪದ್ದತಿಯಲ್ಲಿ "ಇ–ಪ್ರೊಕ್ಯೂಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ. ಟೆಂಡರ್‌ಗೆ ಇಡಲಾದ **ಗರಿಷ್ಠ ಅಂದಾಜು ಮೊತ್ತ ರೂ. 975.00 ಲಕ್ಷಗಳು ಹಾಗೂ ಗರಿಷ್ಠ ಇ.ಎಂ.ಡಿ ಮೊತ್ತ ರೂ: 14.62 ಲಕ್ಷಗಳು ಹಾಗೂ ಕನಿಷ್ಠ ಅಂದಾಜು ಮೊತ್ತ ರೂ. 2.00 ಲಕ್ಷಗಳು ಹಾಗೂ ಕನಿಷ್ಠ ಇ.ಎಂ.ಡಿ ಮೊತ್ತ ರೂ: 5000.00** ಖಾಲಿ ಟೆಂಡರ್ ಫಾರಂಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್–ಸೈಟ್ ವಿಳಾಸ https://kppp.karnataka.gov.in **ದಿನಾಂಕ: 02/12/2025** ರಿಂದ ಮುಂದಿನ **30 ದಿನಗಳೊಳಗಾಗಿ** ಹಂತ ಹಂತವಾಗಿ ಡೌನಲೋಡ್ ಮಾಡಿಕೊಳ್ಳುವುದು ಹಾಗೂ ಟೆಂಡರ್ ಕುರಿತಂತೆ ಅನುಮಾನಗಳಿದ್ದರೆ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ.

ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಸೇರ್ಪಡೆ, ದಿನಾಂಕಗಳ ಬದಲಾವಣೆ, ಇನ್ನಿತರೆ ಯಾವುದೇ, ಬದಲಾವಣೆಗಳನ್ನು ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನೀಯರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ

dipr/hvr/dipo/541/2025-26

ಅಲ್ಪಸಂಖ್ಯಾತರ ನಿರ್ದೇಶನಾಲಯ

ನಂ.16ಸಿ, ಮೌಲಾನ ಅಬುಲ್ ಕಲಾಂ ಅಜಾದ್ ಭವನ, ಮಿಲ್ಲರ್ ಟ್ಯಾಂಕ್ ರಸ್ತೆ, ವಸಂತನಗರ, ಬೆಂಗಳೂರು–560 052.
Website: https://dom.karnataka.gov.in

ಪತ್ರಿಕಾ ಪ್ರಕಟಣೆ

2025–26ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿದ್ಯಾರ್ಥಿವೇತನ ಯೋಜನೆಗಳಾದ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಯೋಜನೆ(1ರಿಂದ 8ನೇ ತರಗತಿ), ಶುಲ್ಕ ಮರುಪಾವತಿ ಯೋಜನೆ, ಐಐಟಿ ಐಐಎಂ etc. ಉತ್ತೇಜನ ಯೋಜನೆ, ಪಿಹೆಚ್‌ಡಿ ಫೆಲೋಶಿಪ್ ಯೋಜನೆ, ಬಿ.ಎಸ್ಸಿ ನರ್ಸಿಂಗ್ & ಜಿಎನ್.ಎಂ ಹಾಗೂ ರಾಷ್ಟ್ರೀಯ ವಿದೇಶಿ ವಿದ್ಯಾರ್ಥಿವೇತನ ಯೋಜನೆಗಳಡಿ ವಿದ್ಯಾರ್ಥಿವೇತನ ನೀಡಲು ಅರ್ಹ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗಾಗಿ ಆನ್‌ಲೈನ್ ಮೂಲಕ **ಅರ್ಜಿಗಳನ್ನು ಸಲ್ಲಿಸಲು**

ಕೊನೆಯ ದಿನಾಂಕವನ್ನು 31.01.2026 ರವರೆಗೆ ವಿಸ್ತರಿಸಲಾಗಿದೆ

ಹಾಗೂ 2024–25ನೇ ಸಾಲಿನಲ್ಲಿ ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ಸಕಾಲದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ವಿವರಗಳನ್ನು ಅಪ್‌ಡೇಟ್ ಮಾಡದೇ ಇರುವುದರಿಂದ 2024–25ನೇ ಸಾಲಿನಲ್ಲಿ ಶುಲ್ಕ ಮರುಪಾವತಿ ಯೋಜನೆಯಡಿ ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿದ್ದ ಕೊನೆಯ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸಲು ಸಾಧ್ಯವಾಗದ ವಿದ್ಯಾರ್ಥಿಗಳ ಕೋರಿಕೆಯ ಮೇರೆಗೆ ವೈದ್ಯಕೀಯ ಪದವಿ, ಸ್ನಾತಕೋತ್ತರ ವೃತ್ತಿಪರ, ತಾಂತ್ರಿಕ ಮತ್ತು ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಮಾತ್ರ **ಅರ್ಜಿ ಸಲ್ಲಿಸಲು**

ದಿನಾಂಕವನ್ನು 15.12.2025 ರವರೆಗೆ ವಿಸ್ತರಿಸಲಾಗಿದೆ.

ಆದ್ದರಿಂದ ಸದರಿ ಯೋಜನೆಗಳ ಸದುಪಯೋಗ ಪಡೆಯಲು ಅರ್ಹ ವಿದ್ಯಾರ್ಥಿಗಳು ಕೂಡಲೇ https://ssp.postmatric.karnataka.gov.in/ ಹಾಗೂ https://sevasindhuservices.karnataka.gov.in/ ಲಿಂಕ್ ಮೂಲಕ ಕೊನೆಯ ದಿನಾಂಕಗಳ ಒಳಗಾಗಿ ಆನ್‌ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಹಾಗೂ ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ Website: https://dom.karnataka.gov.in ಗೆ ಭೇಟಿ ನೀಡಬಹುದಾಗಿರುತ್ತದೆ.

ದಿನಾಂಕ: 01.12.2025
ಸ್ಥಳ: ಬೆಂಗಳೂರು

ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/4163/ಎಂಎಎ/2025–26

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816–2281105 Email:eemitmk@gmail.com

ಐ.ಎಫ್.ಟಿ ಸಂಖ್ಯೆ.14/2025–26 KW-1, KW-2, KW-3 & KW-4 (ದ್ವಿ ಲಕೋಟೆ) ದಿನಾಂಕ: 29.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 29.11.2025

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2025–26ನೇ ಸಾಲಿನ ಲೆಕ್ಕ ಶೀರ್ಷಿಕೆ: 4702–ಕೆರೆಗಳ ಆಧುನೀಕರಣ– ಪ್ರಧಾನ ಕಾಮಗಾರಿಗಳು, 4702–ಅಣೆಕಟ್ಟು ಮತ್ತು ಪಿಕಪ್ ಯೋಜನೆಯ ಕಾಮಗಾರಿಗಳು ಮತ್ತು 4702–ಏತ ನೀರಾವರಿ ಯೋಜನೆ–ಪ್ರಧಾನ ಕಾಮಗಾರಿಗಳು ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೆ.ಪಿ.ಪಿ ಪೋರ್ಟ್‌ಲ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 14/2025–26, ದಿ: 29–11–2025 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ.

ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:

1. ಟೆಂಡರ್ ಪ್ರಕಟಣೆಯನ್ನು ದಿನಾಂಕ: 01–12–2025 ರಂದು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. 2. ಅವಶ್ಯ ಟೆಂಡರ್ ಮಾಹಿತಿ/ ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ: 06–12–2025 ಬೆಳ್ಳಗ್ಗೆ 11.30 ಗಂಟೆಯವರೆಗೆ ಸ್ವೀಕರಿಸಲಾಗುವುದು. 3. ಗುತ್ತಿಗೆದಾರರಿಂದ ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್‌ನ ಮೂಲಕ ದಿನಾಂಕ: 10–12–2025 ಸಾಯಂಕಾಲ 5.00ಗಂಟೆಯವರೆಗೆ ಸ್ವೀಕರಿಸಲಾಗುವುದು. 4. ತಾಂತ್ರಿಕ ಬಿಡ್ಡನ್ನು ದಿನಾಂಕ: 11–12–2025 ಸಾಯಂಕಾಲ 5.05 ಗಂಟೆಗೆ ತೆರೆಯಲಾಗುವುದು. 5. ಆರ್ಥಿಕ ಬಿಡ್ಡನ್ನು ದಿನಾಂಕ: 12–12–2025 ಸಾಯಂಕಾಲ 5.10 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.

DIPR/TUM/359/KSMCA/2025-26

ಜಿಲ್ಲಾ ಪಂಚಾಯತ್, ತುಮಕೂರು.
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಮಹಾತ್ಮಗಾಂಧಿ ಕ್ರೀಡಾಂಗಣ, ತುಮಕೂರು ಜಿಲ್ಲೆ.
ದೂರವಾಣಿ: 0816–2278124 ಇ–ಮೇಲ್: adysstmk1975@gmail.com

ಸನಿ/ಯುಸಕ್ರೀಇ/ತುಮ/20/ಹೊನೌಕಟೆಂಪ್ರ/2025–26 ದಿನಾಂಕ:29–11–2025

ಇ– ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ ದ್ವಿ–ಲಕೋಟೆ ಪದ್ಧತಿ

ವಿಷಯ:– 2025–26 ನೇ ಸಾಲಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ಪಡೆಯಲು ಟೆಂಡರ್ ಅಧಿಸೂಚನೆ ಹೊರಡಿಸುವ ಬಗ್ಗೆ.

ತುಮಕೂರು ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಕ್ರೀಡಾಂಗಣ, ಜಿಲ್ಲಾ ಒಳಾಂಗಣ ಕ್ರೀಡಾಂಗಣ ಮತ್ತು ತಾಲ್ಲೂಕು ಕ್ರೀಡಾಂಗಣಗಳಿಗೆ ಕಾವಲುಗಾರರು/ವಾಚ್‌ಮೆನ್, ಸ್ವಚ್ಛತಾಗಾರರು ಮತ್ತು ಕಛೇರಿಗೆ ಹಾಗೂ ಕ್ರೀಡಾ ವಸತಿ ನಿಲಯಕ್ಕೆ ಅಗತ್ಯವಿರುವ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ (ಅನುಬಂಧ–1 ರಲ್ಲಿ ವಿವರ ನೀಡಿದೆ) ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (ಕೆಟಿಪಿಪಿ) 2000 ನಿಯಮಗಳು ಕಾರ್ಯವಿಧಾನ ಅನುಸರಿಸಿ ಇ– ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿದ ಅರ್ಹ ಅಂಗೀಕೃತ ಏಜೆನ್ಸಿಗಳು ಇ–ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಇ–ಟೆಂಡರ್ ಪ್ರಕ್ರಿಯೆ ವಿವರ ಈ ಕೆಳಗಿನಂತಿದೆ.

ಇ–ಟೆಂಡರ್‌ನಲ್ಲಿ ಭಾಗವಹಿಸಲು ಪ್ರಾರಂಭವಾಗುವ ದಿನಾಂಕ ಮತ್ತು ಸಮಯ	**ದಿನಾಂಕ : 29.11.2025 ಸಮಯ : ಸಂಜೆ 5.00 ಗಂಟೆ**
ಇ–ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ ಮತ್ತು ಸಮಯ	**ದಿನಾಂಕ: 07.12.2025 ಸಂಜೆ 5.00 ಗಂಟೆಯವರೆಗೆ**
ಇ–ಟೆಂಡರ್ ನಲ್ಲಿ ಭಾಗವಹಿಸಲು ಪಾವತಿಸಬೇಕಾದ ಇಎಂಡಿ ಮೊತ್ತ	**ರೂ. 1.19.500/–**
ಟೆಂಡರ್‌ನ ವಾರ್ಷಿಕ ಮೊತ್ತ	**ರೂ. 33.75 ಲಕ್ಷ**
ಇ–ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	**ದಿನಾಂಕ: 09.12.2025 ಸಮಯ : ಬೆಳಿಗ್ಗೆ 11.00 ಗಂಟೆ**
ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	**ದಿನಾಂಕ :13.12.2025 ಸಮಯ : ಸಂಜೆ 4.00 ಗಂಟೆ**
ಹೆಚ್ಚಿನ ವಿವರಗಳಿಗಾಗಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬೇಕಾದ ವಿಳಾಸ ಹಾಗೂ ದೂ.ಸಂಖ್ಯೆ	**ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಾತ್ಮಾ ಗಾಂಧಿ ಜಿಲ್ಲಾ ಕ್ರೀಡಾಂಗಣ, ತುಮಕೂರು. ದೂ. ಸಂಖ್ಯೆ: 0816–2278124/ 9901316107/9741691379**

ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 21.11.2025 ರಿಂದ Website: **https://kppp.karnataka.gov.in/** ನಲ್ಲಿ ಪಡೆಯಬಹುದಾಗಿದೆ.

ಸಹಿ/– ಸಹಾಯಕ ನಿರ್ದೇಶಕರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ತುಮಕೂರು ಜಿಲ್ಲೆ.

DIPR/TUM/RO- 172/25-26/Oysters

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ್ ರವರ ಕಚೇರಿ,
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ – 591302.

ಸಂಖ್ಯೆ: ಕನೀನಿನಿ/ಕಯೋವಿ/ಖಾ/ಪಿಬಿ/ಅ.ಟೆಂ.ಪ್ರ/2025–26/1601, 1602, 1603, 1604, 1605, 1606 & 1607 ದಿನಾಂಕ: 01–12–2025

ಅಲ್ಪಾವಧಿ ಶೇಕಡಾವಾರು ಟೆಂಡರ ಪ್ರಕಟಣೆ
(ಕೆಪಿಪಿ–ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ (ದರ್ಜೆ 2 ಮತ್ತು ಮೇಲ್ಪಟ್ಟು) ಶೇಕಡಾವಾರು ಟೆಂಡರ್‌ಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಕೆಪಿಪಿ–ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)
1	Providing infrastructure facilities to Kumarswamy Layout and Vidyanagar coming under the jurisdiction of Belagavi Rural Constituency under Bagewadi TFS in Belagavi Taluka. **(KNNL/2025-26/RD/WORK_INDENT3562)**	**338.89**
2	Providing infrastructure facilities to Belagundi and Kangrali BK Villages coming under the jurisdiction of Belagavi Rural Constituency under Hangaraga TFS in Belagavi Taluka. **(KNNL/2025-26/RD/WORK_INDENT3563)**	**423.66**
3	Providing infrastructure facilities to Halaga, Bastawad and Mastamaradi Villages coming under the jurisdiction of Belagavi Rural Constituency under Bagewadi TFS in Belagavi Taluka. **(KNNL/2025-26/RD/WORK_INDENT3564)**	**423.57**
4	Providing infrastructure facilities to Tarihal, Kolikoppa, Kamakaratti, Khondasakoppa, Nagerahal and Nagenahatti Villages coming under the jurisdiction of Belagavi Rural Constituency under Bagewadi TFS in Belagavi Taluka. **(KNNL/2025-26/RD/WORK_INDENT3565)**	**423.49**
5	Providing infrastructure facilities to Pantanagar, Balekundri, Shanganamatti Villages & Improvement of Mavinakatti Bidadi Marg Road coming under the jurisdiction of Belagavi Rural Constituency under Bagewadi TFS in Belagavi Taluka. **(KNNL/2025-26/RD/WORK_INDENT3566)**	**422.62**
6	Providing infrastructure facilities to Desur, Sulaga (y), Rajahamsagad Villages coming under the jurisdiction of Belagavi Rural Constituency under Bagewadi TFS in Belagavi Taluka. **(KNNL/2025-26/RD/WORK_INDENT3567)**	**252.67**
7	Providing infrastructure facilities to Aralikatti, Basapur, Veerapanakoppa & Waghawade Villages coming under the jurisdiction of Belagavi Rural Constituency under Bagewadi TFS in Belagavi Taluka. **(KNNL/2025-26/RD/WORK_INDENT3568)**	**423.35**

ವೆಬ್‌ಸೈಟ್: **https://kppp.karnataka.gov.in** ನಲ್ಲಿ ಅರ್ಜಿ ಡೌನ್‌ಲೋಡ್ ಮಾಡಿಕೊಳ್ಳಬಹುದು / ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **19–12–2025 ರಂದು ಸಂಜೆ 4.30 ಘಂಟೆವರೆಗೆ ಸಲ್ಲಿಸಬಹುದು.** ಪ್ರಿ–ಬಿಡ್ ಸಭೆಯನ್ನು ದಿನಾಂಕ: **08–12–2025 ರ ಮುಂಜಾನೆ 11.00 ಘಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪುರ ಕಚೇರಿಯಲ್ಲಿ ಆಯೋಜಿಸಲಾಗಿದೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20–12–2025 ರಂದು ಸಂಜೆ 4.30 ಘಂಟೆ.** ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ್ ಷರತ್ತುಗಳು ಹಾಗೂ ಇತರೆ ವಿವರಗಳನ್ನು ಕೆಪಿಪಿ–ಪೋರ್ಟಲ್ ಮುಖಾಂತರ **https://kppp.karnataka.gov.in** ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಯ ದೂರವಾಣಿ ಸಂಖ್ಯೆ: 08336–222163 ಸಂಪರ್ಕಿಸುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್,
ಕನೀನಿನಿ, ಕಳಸಾ ಯೋಜನೆ ವಿಭಾಗ,
ಖಾನಾಪೂರ, ಬೆಳಗಾವಿ.

ವಾಸಾಸಂಇ/ಬೆಳಗಾವಿ/1416/ಅಡ್ವರ್ಟೋರ್/2025–26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ದಾರಿದ್ರ್ಯ ದಾಂಗುಡಿ ಇಟ್ಟಾಗ ಧೈರ್ಯ ಕಳೆದುಕೊಳ್ಳದಿದ್ದರೆ ಸಹನಾಶಕ್ತಿ ಹೆಚ್ಚುತ್ತದೆ.

-ಬಂಕಿಮಚಂದ್ರ ಚಟರ್ಜಿ

ಸಂಪಾದಕೀಯ

ಅಸಾಧಾರಣ ಆರ್ಥಿಕ ಬೆಳವಣಿಗೆ ಆತಂಕ–ಹಿಂಜರಿಕೆಗಳ ಸವಾಲು

ಪ್ರಸಕ್ತ ಆರ್ಥಿಕ ವರ್ಷದ ಎರಡನೇ (ಜುಲೈ–ಸೆಪ್ಟೆಂಬರ್) ತ್ರೈಮಾಸಿಕದಲ್ಲಿ ದೇಶದ ಆರ್ಥಿಕತೆ ಸಾಧಿಸಿರುವ ಶೇ 8.2ರ ಬೆಳವಣಿಗೆ ಎಲ್ಲ ನಿರೀಕ್ಷೆ ಮತ್ತು ಅಂದಾಜುಗಳನ್ನು ಮೀರಿದ ಮುನ್ನಡೆಯಾಗಿದೆ. ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ದರ ಪರಿಷ್ಕರಣೆಯಿಂದ ಆರ್ಥಿಕ ಚಟುವಟಿಕೆಗಳು ಚುರುಕುಗೊಂಡಿರುವುದು, ದೇಶದ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಉತ್ತಮ ಸ್ಥಿತಿ ತಲಪಲು ಕಾರಣವಾಗಿದೆ. ಕಳೆದ ಆರು ತ್ರೈಮಾಸಿಕಗಳಲ್ಲಿ ಸಾಧಿಸಿರುವ ಗರಿಷ್ಠಮಟ್ಟದ ಬೆಳವಣಿಗೆ ಇದಾಗಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂದಾಜು ಮಾಡಿದ್ದ ಶೇ 7ರ ಬೆಳವಣಿಗೆಗಿಂತಲೂ ಹೆಚ್ಚಿನ ಸಾಧನೆಯಾಗಿದೆ. ಆರ್ಥಿಕ ತಜ್ಞರ ಗುರಿಯೂ ಶೇ 7ರಷ್ಟೇ ಇತ್ತು. ಎರಡನೇ ತ್ರೈಮಾಸಿಕದ ಅವಧಿಯಲ್ಲಿ ಅಮೆರಿಕ ಹೇರಿದ ಕಠಿಣ ಸುಂಕ ನೀತಿಯು ದೇಶದ ರಫ್ತು ವಲಯದ ಮೇಲೆ ಗಂಭೀರ ಪರಿಣಾಮ ಬೀರಿತ್ತು. ಇದರಿಂದ, ಆರ್ಥಿಕತೆ ಬೆಳವಣಿಗೆಯು ನಿರೀಕ್ಷೆಗಿಂತ ಕಡಿಮೆಯಾಗಲಿದೆ ಎಂದು ಆರ್‌ಬಿಐ ಅಂದಾಜು ಮಾಡಿತ್ತು. ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಜಿಡಿಪಿ ಶೇ 5.6ರಷ್ಟು ದಾಖಲಾಗಿತ್ತು. ಮೊದಲ ತ್ರೈಮಾಸಿಕದಲ್ಲಿನ ಶೇ 7ರ ಬೆಳವಣಿಗೆಯ ಹಿನ್ನೆಲೆಯಲ್ಲಿ ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದ ಬೆಳವಣಿಗೆಯು ಶೇ 8ಕ್ಕೆ ತಲಪಿದೆ ಮತ್ತು ಈ ಪ್ರಗತಿಯು ಅಸಾಧಾರಣ ಆದುದಾಗಿದೆ.

ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯದ ಪ್ರಕಾರ, ಕೈಗಾರಿಕಾ ಉತ್ಪಾದನೆ ವಲಯದ ಬೆಳವಣಿಗೆಯು ಶೇ 8.1ರಷ್ಟು ಹಾಗೂ ಸೇವಾ ವಲಯ ಶೇ 9.2ರಷ್ಟು ಬೆಳವಣಿಗೆ ಸಾಧಿಸಿದೆ. ತಯಾರಿಕಾ ವಲಯವು ಆರು ತ್ರೈಮಾಸಿಕಗಳ ಗರಿಷ್ಠ ಸಾಧನೆಯಾದ ಶೇ 9.1ರಷ್ಟು ಬೆಳವಣಿಗೆ ದಾಖಲಿಸಿದೆ. ಈ ದರ ಕಳೆದ ತ್ರೈಮಾಸಿಕದಲ್ಲಿ ಶೇ 7.7ರಷ್ಟಿತ್ತು. ನಿರ್ಮಾಣ ವಲಯವೂ ಶೇ 7.2ರಷ್ಟು ಬೆಳವಣಿಗೆ ಕಂಡಿದೆ. ಹಣಕಾಸು, ರಿಯಲ್ ಎಸ್ಟೇಟ್ ಮತ್ತು ವೃತ್ತಿಪರ ಸೇವೆಗಳನ್ನು ಒಳಗೊಂಡಿರುವ ಸೇವಾ ವಲಯವು ಕಳೆದ ಒಂಬತ್ತು ತ್ರೈಮಾಸಿಕಗಳ ಗರಿಷ್ಠ ಮಟ್ಟವಾದ ಶೇ 10.2ರಷ್ಟು ಬೆಳವಣಿಗೆ ದಾಖಲಿಸಿದೆ. ಕುಟುಂಬಗಳಿಂದ ಸರಕುಗಳ ಖರೀದಿ ಮತ್ತು ಬಳಕೆಗೆ ಮಾಡುವ ವೆಚ್ಚವು ಜಿಡಿಪಿ ಪ್ರಗತಿಗೆ ಶೇ 60ರಷ್ಟು ಕೊಡುಗೆ ನೀಡುತ್ತದೆ. ಈ ಬಳಕೆಯ ವೆಚ್ಚ ಶೇ 7.9ರಷ್ಟು ಹೆಚ್ಚಾಗಿದೆ. ಈ ಪ್ರಮಾಣ ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಶೇ 6.4ರಷ್ಟಿತ್ತು. ಆದರೆ, ಕೃಷಿ ವಲಯದ ಬೆಳವಣಿಗೆಯು ಶೇ 3.5ಕ್ಕೆ ಕುಸಿದಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಶೇ 4.1ರಷ್ಟು ಬೆಳವಣಿಗೆ ಕಂಡಿತ್ತು. ಈ ನಡುವೆಯೂ, ಗ್ರಾಮೀಣ ಪ್ರದೇಶದಲ್ಲಿನ ಬೇಡಿಕೆ ಸುಧಾರಣೆ ಕಂಡಿದೆ.

ದೇಶದ ಸದ್ಯದ ಆರ್ಥಿಕತೆ ಬೆಳವಣಿಗೆ ಅನೂಹ್ಯವಾಗಿದ್ದರೂ, ಪ್ರಸಕ್ತ ಆರ್ಥಿಕ ವರ್ಷದ ಒಟ್ಟಾರೆ ಸಾಧನೆ ಇಷ್ಟೇ ಉತ್ತಮ ಆಗಿರುತ್ತದೆಂದು ನಿರೀಕ್ಷಿಸಲಾಗದು.

ಜಿಡಿಪಿ ದರ ಉತ್ತಮ ಸ್ಥಿತಿಯಲ್ಲಿರುವುದು ಸಮಾಧಾನಕರ ಸಂಗತಿಯಾದರೂ, ಕಳವಳಕ್ಕೆ ಕಾರಣಗಳೂ ಇವೆ. ಅಮೆರಿಕದೊಂದಿಗಿನ ವಾಣಿಜ್ಯ ಒಪ್ಪಂದಕ್ಕೆ ಸಂಬಂಧಿಸಿದ ಡೋಲಾಯಮಾನ ಸ್ಥಿತಿ ಮುಂದುವರಿದಿದೆ. ವಿಶ್ವ ವಾಣಿಜ್ಯ ದೃಷ್ಟಿಕೋನವೂ ದುರ್ಬಲವಾಗಿ ಗೋಚರಿಸುತ್ತಿದೆ. ಹಣದುಬ್ಬರಕ್ಕೆ ಅನುಗುಣವಾಗಿ ನೈಜ ಜಿಡಿಪಿ ದರವು ನಿರೀಕ್ಷೆಗಿಂತ ಹೆಚ್ಚಾಗಿದ್ದರೂ, ಸಾಂಕೇತಿಕ (ನಾಮಿನಲ್) ಜಿಡಿಪಿ ದರ ಕಡಿಮೆ ಇರುವುದು ಕಳವಳಕಾರಿ ಸಂಗತಿಯಾಗಿದೆ. ಇತ್ತೀಚಿನ 'ಐಎಂಎಫ್' ವರದಿಯು ಭಾರತದ ಜಿಡಿಪಿ ದತ್ತಾಂಶಗಳಿಗೆ 'ಸಿ' ಗ್ರೇಡ್ ನೀಡಿರುವುದನ್ನು ಇಲ್ಲಿ ಗಮನಿಸಬಹುದು. ಈ ಶ್ರೇಯಾಂಕವು ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದ ದತ್ತಾಂಶಗಳ ವಿಶ್ವಾಸಾರ್ಹತೆಯನ್ನು ಅನುಮಾನದಿಂದ ನೋಡಲು ಕಾರಣವಾಗುತ್ತದೆ. ಆರ್ಥಿಕತೆ ಬೆಳವಣಿಗೆಗೆ ಹಬ್ಬಗಳು ಚೋದಕವಾಗಿ ಪರಿಣಮಿಸಿದ್ದರೂ, ಅದು ನಿರಂತರ ಪ್ರಕ್ರಿಯೆ ಆಗಿರಬೇಕೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ. ಖಾಸಗಿ ವಲಯದಲ್ಲಿ ಬಂಡವಾಳ ಹೂಡಿಕೆ ಕೂಡ ಇನ್ನೂ ಚುರುಕಾಗಿಲ್ಲ. ಈ ಹೂಡಿಕೆ ಸುಧಾರಿಸದೆ ಹೋದಲ್ಲಿ ಸುಸ್ಥಿರ ಬೆಳವಣಿಗೆಯೂ ಸಾಧ್ಯವಾಗುವುದಿಲ್ಲ. ಈ ಎಲ್ಲ ಗೊಂದಲಗಳ ಕಾರಣದಿಂದಾಗಿ, ಇಡೀ ಆರ್ಥಿಕ ವರ್ಷದ ಬೆಳವಣಿಗೆಯನ್ನು ಶೇ 7ಕ್ಕೆ ಗೊತ್ತುಪಡಿಸಿರುವ ಸರ್ಕಾರದ ನಿರ್ಧಾರ ಅತೀವ ಆಶಾವಾದದಿಂದ ಕೂಡಿರುವಂತೆ ಭಾಸವಾಗುತ್ತಿದೆ.

ನಮ್ಮ ದುಡ್ಡಲ್ಲಿ...

ಕರ್ನಾಟಕ, ಮಹಾರಾಷ್ಟ್ರ, ತಮಿಳುನಾಡು ತರಹದ ರಾಜ್ಯಗಳ ತೆರಿಗೆಯಿಂದ ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳು 'ಫ್ರೀಬಿ'ಯಲ್ಲಿ ಆಡಳಿತ ನಡೆಸುತ್ತಿವೆ. ತೆರಿಗೆ ಕಟ್ಟಿದ ಮೇಲೂ ಸರಿಯಾದ ಮೂಲ ಸೌಕರ್ಯಗಳಿಲ್ಲದೆ ರಸ್ತೆಗುಂಡಿಗೆ ಬಿದ್ದು ಸಾಯಬೇಕಾದ ಪರಿಸ್ಥಿತಿ ನಮ್ಮದಾಗಿದೆ.

ಅರುಣ್ ಜಾವಗಲ್, ಕನ್ನಡ ಕಾರ್ಯಕರ್ತ, 'ಎಕ್ಸ್'ನಿಂದ

ಕಿಡಿನುಡಿ

ಕಾಂಗ್ರೆಸ್ ಹೈಕಮಾಂಡ್ ಎಲ್ಲಿದೆ? ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ತಮ್ಮ ಮೇಲೆ ಹೈಕಮಾಂಡ್ ಇದೆ ಎಂದು ಹೇಳಿದ ಮೇಲೆ ಹೈಕಮಾಂಡ್‌ಗೆ ಏನಾದರೂ ಅರ್ಥ ಇದೆಯೆ?

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಭಾನುವಾರ, 3-12-2000

- **ಪಂಜಾಬ್: ಭೀಕರ ರೈಲು ದುರಂತ– 40 ಸಾವು**

ಸರಾಯ್‌ಬಂಜಾರಾ (ಪಂಜಾಬ್), ಡಿ. 2 (ಪಿಟಿಐ)– ಅಂಬಾಲಾದಿಂದ 40 ಕಿ.ಮೀ. ದೂರವಿರುವ ಇಲ್ಲಿ ಇಂದು ಬೆಳಿಗ್ಗೆ ಹಳಿತಪ್ಪಿ ನಿಂತಿದ್ದ ಸರಕು ಸಾಗಾಣಿಕೆ ರೈಲಿಗೆ ಅಮೃತಸರ್ ಹೌರಾ ಮೇಲ್ ಡಿಕ್ಕಿ ಹೊಡೆದಾಗ ಸಂಭವಿಸಿದ ಅಪಘಾತದಲ್ಲಿ ಮಹಿಳೆಯರು, ಮಕ್ಕಳು ಸೇರಿದಂತೆ ಕನಿಷ್ಠ 40 ಮಂದಿ ಮೃತರಾಗಿದ್ದು, ಸುಮಾರು 150 ಪ್ರಯಾಣಿಕರು ಗಾಯಗೊಂಡಿದ್ದಾರೆ.

ಇಪ್ಪತ್ತೆರಡು ಜನರು ಸ್ಥಳದಲ್ಲೇ ಮೃತರಾದರೆ ಫತೇಹಗಢ ಸಾಹಿಬ್, ರಾಜಪುರ ಮತ್ತು ಪಟಿಯಾಲದ ಆಸ್ಪತ್ರೆಗೆ ಸೇರಿಸಲಾಗಿದ್ದ ಗಾಯಾಳುಗಳಲ್ಲಿ ಇತರ ಕೆಲವರು ಮೃತರಾದರು. ಗಾಯಗೊಂಡವರಲ್ಲಿ ಕೆಲವರ ಸ್ಥಿತಿ ಗಂಭೀರವಾಗಿರುವುದರಿಂದ ಸತ್ತವರ ಸಂಖ್ಯೆ ಏರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

- **ವೀರಪ್ಪನ್ ವಿರುದ್ಧ ಕಾರ್ಯಾಚರಣೆಗೆ 3,000 ಸಿಬ್ಬಂದಿ ನಿಯೋಜನೆ**

ಬೆಂಗಳೂರು, ಡಿ. 2– ವೀರಪ್ಪನ್‌ನನ್ನು ಹಿಡಿಯಲು ಕರ್ನಾಟಕ ಮತ್ತು ತಮಿಳು ನಾಡು ಸರ್ಕಾರಗಳು ಜಂಟಿ ಕಾರ್ಯ ತಂತ್ರ ರೂಪಿಸಿದ್ದು, ಗಡಿ ಭದ್ರತಾ ಪಡೆಯ 1,000 ಯೋಧರು ಮತ್ತು ಉಭಯ ರಾಜ್ಯಗಳ 2,000 ಸಿಬ್ಬಂದಿ ಸೇರಿ ಒಟ್ಟು 3,000 ಜನರ ಪಡೆ ಕಾರ್ಯಾಚರಣೆಯಲ್ಲಿ ತೊಡಗಲಿದೆ.

ಈ ನಡುವೆ ರಾಜ್ಯದ ವಿಶೇಷ ಕಾರ್ಯಾಚರಣೆ ಪಡೆ ಮುಖ್ಯಸ್ಥ ಎಚ್‌.ಟಿ. ಸಾಂಗ್ಲಿಯಾನ ಅವರಿಗೆ ನೆರವಾಗಲು ನೇಮಿಸಲಾಗಿದ್ದ ಡಿಐಜಿ ಕೆಂಪಯ್ಯ ಅವರನ್ನು ಕೈಬಿಡಲಾಗಿದೆ.

75 ವರ್ಷಗಳ ಹಿಂದೆ

ಭಾನುವಾರ, 3-12-1950

- **ಸತ್ಯಪೂರ್ಣ ವರದಿ, ತರ್ಕಬದ್ಧ ಟೀಕೆ, ಪತ್ರಿಕಾ ಲಕ್ಷ್ಯವಾಗಿರಲಿ**

ನವದೆಹಲಿ, ಡಿ. 2– ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದ್‌ರವರು ಅಖಿಲ ಭಾರತ ಪತ್ರಿಕಾ ಸಂಪಾದಕರ ಪರಿಷತ್ತಿನ 9ನೇ ಅಧಿವೇಶನವನ್ನು ಆರಂಭಿಸುತ್ತ ಪತ್ರಿಕೆಗಳು ಸಂಗತಿಗಳನ್ನು ಯಥಾವತ್ತಾಗಿ ಪ್ರಕಟಿಸಬೇಕೆಂದು ಉಪದೇಶಿಸಿದರು.

ಟೀಕೆ ಟಿಪ್ಪಣಿಗಳನ್ನು ಖಡಾಖಂಡಿತವಾಗಿ ಬರೆಯಬೇಕು. ಆದರೆ, ಅವುಗಳ ಧಾಟಿ ಓದುಗರ ಬುದ್ಧಿಗೆ ಹಿಡಿಯುವಂತಿರಬೇಕೇ ಹೊರತು ಅವರ ಭಾವನೆಗಳನ್ನು ಕೆರಳಿಸುವಂತಿರಬಾರದೆಂದರು.

ಒಟ್ಟಿನಲ್ಲಿ ಈ ದೇಶದ ಪತ್ರಿಕೆಗಳು ಕಷ್ಟತಮವಾದ ಕರ್ತವ್ಯಗಳನ್ನು ಕಷ್ಟ ಕಾಲದಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿ ನಿರ್ವಹಿಸುತ್ತಿವೆ ಎಂದರು.

- **'ಯುದ್ಧ ತಪ್ಪಿಸಲು ಮಹಾ ರಾಷ್ಟ್ರಗಳ ಒಪ್ಪಂದ ಅಗತ್ಯ'**

ಮದ್ರಾಸು ಡಿ. 2– ವಿಶ್ವದಲ್ಲೆಲ್ಲಾ ಈಗ ಮೂಡಿರುವ ಬಿಕ್ಕಟ್ಟನ್ನು ಬಗೆಹರಿಸಿ ಯುದ್ಧವನ್ನು ತಪ್ಪಿಸಬೇಕಾದರೆ ಪ್ರಮುಖ ರಾಷ್ಟ್ರಗಳು ಒಪ್ಪಂದವೊಂದಕ್ಕೆ ಬರಬೇಕೆಂದು ಭಾರತದ ರಷ್ಯಾ ರಾಯಭಾರಿ ಡಾ. ರಾಧಾಕೃಷ್ಣನ್ ಸೂಚಿಸಿದರು.

ಇದು ಫ್ಲ್ಯಾಷ್ ನ್ಯೂಸ್ ಕಾಲ!

ವಿಶ್ಲೇಷಣೆ

ಚಂದ್ರಕಾಂತ ವಡ್ಡು

> ಫ್ಲ್ಯಾಷ್ ನ್ಯೂಸ್ ಎನ್ನುವುದು ಸುದ್ದಿಗೆ ಮಾತ್ರ ಸಂಬಂಧಿಸಿದ್ದಲ್ಲ; ಅದು, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳನ್ನೂ ಆವರಿಸಿಕೊಂಡಿರುವ ಸಾಂಕ್ರಾಮಿಕವಾಗಿದೆ. ಎಲ್ಲವನ್ನೂ ಚುಟುಕಾಗಿ, ಚುರುಕಾಗಿ ಹಾಗೂ ಶೀಘ್ರವಾಗಿ ತಲಪಿಸಬೇಕೆನ್ನುವ ಹಪಹಪಿ 'ಸಾಮಾಜಿಕ ವಿವೇಕ'ವನ್ನು ಜಡಗೊಳಿಸುತ್ತಿದೆ.

ಇತ್ತೀಚೆಗೆ ಗೆಳೆಯರ ಮದುವೆ ಸಮಾರಂಭದಲ್ಲಿ ಹಿರಿಯ ರಾಜಕಾರಣಿಯೊಬ್ಬರು ಭೇಟಿ ಆಗಿದ್ದರು. ಸಹಜವಾಗಿ ಪತ್ರಿಕೆ ಮತ್ತು ಪತ್ರಕರ್ತರ ಕಡೆ ಮಾತು ಹೊರಳಿತು. ಸರ್ಕಾರದಲ್ಲಿ ಹಲವಾರು ಉನ್ನತ ಸ್ಥಾನಗಳನ್ನು ನಿರ್ವಹಿಸಿ, ಪತ್ರಕರ್ತರನ್ನು ನಿಭಾಯಿಸುವುದರಲ್ಲೂ ನಿಪುಣರಾದ ಆ ಅನುಭವಿ ನಾಯಕರು, 'ಇದು ಫ್ಲ್ಯಾಷ್ ನ್ಯೂಸ್ ಕಾಲ!' ಎಂದು ತೀರಾ ಸಹಜ, ಸರಳ ದನಿಯಲ್ಲಿ ಉದ್ಗರಿಸಿದರು. 'ಓದುಗರನ್ನು, ನೋಡುಗರನ್ನು ಚಿಂತನೆಗೆ ಹಚ್ಚುವ ಮಾಧ್ಯಮ ಯಾರಿಗೂ ಬೇಕಿಲ್ಲ, ದೀರ್ಘ–ಗಂಭೀರ ಲೇಖನಗಳನ್ನು ಯಾರೂ ಗಮನಿಸುವುದಿಲ್ಲ' ಎಂಬುದು ಅವರ ಮಾತಿನ ತಾತ್ಪರ್ಯ. ಅವರ ಅಭಿಪ್ರಾಯವನ್ನು ಪೂರ್ತಿ ತಳ್ಳಿಹಾಕುವ ಅಥವಾ ಸಾರಾಸಗಟಾಗಿ ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಯಾರೂ ಇದ್ದಂತಿರಲಿಲ್ಲ.

ರಾಜಕೀಯ ನಾಯಕರು ಉಸುರಿದ 'ಫ್ಲ್ಯಾಷ್ ನ್ಯೂಸ್' ನುಡಿಗಟ್ಟಿನ ಅರ್ಥ ಮತ್ತು ಅನ್ವಯದ ವ್ಯಾಪ್ತಿ 'ತಾಜಾ ಸುದ್ದಿ' ಎಂಬುದಕ್ಕೆ ಸೀಮಿತವಾದಂತೆ ಕಾಣಿಸುವುದಿಲ್ಲ. ಸುದ್ದಿವಾಹಿನಿಗಳು ತಮ್ಮೊಳಗಿನ ಸ್ಪರ್ಧೆಯನ್ನು ನಿರ್ವಹಿಸಲು ಅಳವಡಿಸಿಕೊಂಡಿರುವ 'ನಾವೇ ಮೊದಲು' ಮಾದರಿಯ ತಂತ್ರಗಳು ಒಂದು ಅನುಕರಣೀಯ ಆದರ್ಶವಾಗಿ, ಸಂದರ್ಭದ ಅನಿವಾರ್ಯತೆಯಾಗಿ, ತಕ್ಷಣ ನಿಲುಕುವ ಗುರಿಯಾಗಿ, ತಲಪುವ ಮಾರ್ಗವಾಗಿ ವರ್ತಮಾನವನ್ನು ಆವರಿಸಿರುವ ವೈಚಿತ್ರ್ಯವನ್ನು ಅವರ ಮಾತು ಧ್ವನಿಸುತ್ತಿತ್ತು. ಎದುರಿಗಿರುವ ಕೇಳುಗರು, ನೋಡುಗರು, ಓದುಗರು ಅಥವಾ ಮತದಾರರ 'ಅಗತ್ಯ' ಅರಿಯುವ ಶ್ರಮದ ಬದಲು ಅವರ ತಕ್ಷಣದ 'ಕಾಮನೆ' ತೀರಿಸುವ 'ಸುಗಮ ದಾರಿ' ಎಂದರೆ ಎಲ್ಲರಿಗೂ ಇಷ್ಟ!

ಆದರೆ ಈ ವಿಷಯದಲ್ಲಿ ಸರಿ ಅಥವಾ ತಪ್ಪು ಎಂಬ ತೀರ್ಮಾನದ ಹಂತ ಮುಟ್ಟುವ ಮುನ್ನ ಬಹುಮುಖ್ಯ ತಾತ್ವಿಕ ಪ್ರಶ್ನೆಗೆ ನಮ್ಮೊಳಗೆ ಉತ್ತರ ಹುಡುಕಬೇಕಾಗುತ್ತದೆ. ಜನರು ಬಯಸುವುದನ್ನು ನೀಡುವುದು ಮತ್ತು ಜನರಿಗೆ ಅಗತ್ಯವಿರುವುದನ್ನು ಪರಿಗಣಿಸುವ ಎರಡು ವಿಧಗಳಲ್ಲಿ ಯಾವುದು ಸರಿಯಾದ ಕ್ರಮ? ಈ ಕುರಿತು ನಿರ್ಧಾರ ತಳೆಯುವುದರಲ್ಲಿಯೇ ವ್ಯಕ್ತಿ, ಸಂಸ್ಥೆ, ಸಂಘಟನೆ, ಮಾಧ್ಯಮ, ಪಕ್ಷ, ಸರ್ಕಾರದ ಉದ್ದೇಶ ಮತ್ತು ಧೋರಣೆ ನಿರ್ಣಯಿಸಲ್ಪಡುತ್ತದೆ.

ಈ ಹಿನ್ನೆಲೆಯಲ್ಲಿ 'ಇದು ಫ್ಲ್ಯಾಷ್ ನ್ಯೂಸ್ ಕಾಲ!' ಹೇಳಿಕೆಯನ್ನು ನಿರ್ವಚಿಸುವ ಅಗತ್ಯವಿದೆ. ಸಾಹಿತ್ಯ ಸೇರಿದಂತೆ ಬಹುಪಾಲು ಸಮಕಾಲೀನ ಮಾಧ್ಯಮಗಳ ವರ್ತನೆ ಹಾಗೂ ಸಾರ್ವಜನಿಕ ಆಗುಹೋಗುಗಳು ಶೀಘ್ರತೆಯ ವ್ಯಸನಕ್ಕೋ ಹಿತಾಸಕ್ತಿಯ ಮೋಹಕ್ಕೋ ಬಲಿಯಾಗಿರುವುದನ್ನು ಸೂಚಿಸುತ್ತಿವೆ. ತಾತ್ಕಾಲಿಕ ಆದರೂ ಪರವಾಗಿಲ್ಲ, ತಕ್ಷಣದ ಪರಿಣಾಮ ಮತ್ತು ಫಲಿತಾಂಶದ ನಿರೀಕ್ಷೆ ಎಲ್ಲಾ ಕ್ಷೇತ್ರಗಳ ಪಡಸಾಲೆ ಪ್ರವೇಶಿಸಿರುವುದನ್ನು ಕಾಣಬಹುದು. ಯಾವುದೂ ದೀರ್ಘ ಆಗಿರಕೂಡದು, ಶೀಘ್ರ ಕೈಗೂಡಬೇಕಷ್ಟೇ. ಹಾಗಾದರೆ ಅಲ್ಪಕಾಲೀನ ಸುಖವು ದೀರ್ಘಕಾಲೀನ ಒಳಿತನ್ನು ಅಪಹರಿಸುವ ವಿದ್ಯಮಾನಕ್ಕೆ ವರ್ತಮಾನ ಸಾಕ್ಷಿಯಾಗುತ್ತಿದೆಯೇ?

ಪ್ರಚಲಿತ ರಾಜಕಾರಣ ಈ ವಿಷಯದಲ್ಲಿ ಗಮನಾರ್ಹ ಮುನ್ನಡೆ ಸಾಧಿಸಿರುವುದು ಎದ್ದು ಕಾಣುತ್ತದೆ. 'ಇದು ಫ್ಲ್ಯಾಷ್ ನ್ಯೂಸ್ ಕಾಲ!' ಎಂಬ ರಾಜಕಾರಣಿಯ ಮಾಧ್ಯಮ ಉದ್ದೇಶಿಸಿದ ಪ್ರತಿಪಾದನೆ ಕೂಡ ಪ್ರಾಯಶಃ ರಾಜಕಾರಣದ ಅಂತರಂಗದ ಅನಾವರಣ ಅನ್ನಿಸಿದರೆ ಅಚ್ಚರಿಪಡಬೇಕಿಲ್ಲ. ಅಧಿಕಾರದ ಏಣಿಯನ್ನು ಅತಿ ಶೀಘ್ರದಲ್ಲೇ ಏರುವ ತೀವ್ರ ಹವಣಿಕೆಯಲ್ಲಿ ಅಡಗಿರುವುದು ಕೂಡ ಫ್ಲ್ಯಾಷ್ ನ್ಯೂಸ್ ಮಾಧ್ಯಮಕ್ಕೆ ಸಂವಾದಿ ಎನ್ನಿಸುವ ನಡೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ರಾಜಕಾರಣದಲ್ಲಿ ಹಣ ಮತ್ತು ಅಧಿಕಾರ ಗಳಿಕೆಯ ಅವಸರವೇ ಮೇಲುಗೈ ಸಾಧಿಸಿದ ಸನ್ನಿವೇಶದಲ್ಲಿ ನಾವಿದ್ದೇವೆ; ಜನರ ವಿಶ್ವಾಸ ಗಳಿಸುವ ವಿಚಾರವನ್ನು ಬಹಳ ದೂರ ಬಿಟ್ಟು ಬಂದಾಗಿದೆ.

ನಾವೀಗ ಫ್ಲ್ಯಾಷ್ ನ್ಯೂಸ್ ಕಾಲದಲ್ಲಿ ಇರುವುದನ್ನು ಮನಗಾಣಿಸುವ ಹಲವಾರು ಬೆಳವಣಿಗೆಗಳು ನಮ್ಮೆದುರು ದಿನನಿತ್ಯ ಜರುಗುತ್ತಿವೆ. ದೂರದರ್ಶನ ಮತ್ತು ಮೊಬೈಲ್ ಪರದೆಗಳನ್ನು ನೋಡಿದರೆ ಸುದ್ದಿಗಳು ಪ್ರಸಾರವಾಗುವುದಿಲ್ಲ, ಸ್ಫೋಟಗೊಳ್ಳುತ್ತವೆ ಎಂಬುದು ಯಾರಿಗಾದರೂ ಮನವರಿಕೆಯಾಗುತ್ತದೆ. ಫ್ಲ್ಯಾಷ್ ನ್ಯೂಸ್ ಪ್ರಭಾವವು ಮಾಧ್ಯಮಲೋಕ ಮೀರಿ ರಾಜಕೀಯರಂಗ, ಆಡಳಿತ, ಸಾಮಾಜಿಕ ನಡವಳಿಕೆ ಮತ್ತು ಸಾರ್ವಜನಿಕ ಚಟುವಟಿಕೆಗಳಿಗೆ ವಿಸ್ತರಿಸಿದೆ. ವೇಗವೇ ಮುಖ್ಯ ಎಂಬ ನಂಬಿಕೆಯ ಕತ್ತಲಲ್ಲಿ ಯಾವುದೇ ತಿಳಿವಳಿಕೆಯ ವಾಸ್ತವಿಕ ಆಳ, ನಿಖರತೆ ಹಾಗೂ ವಿಶ್ವಾಸಾರ್ಹತೆ ಮರೆಯಾಗುವುದು ಸಾಮಾನ್ಯ ಕ್ರಿಯೆಯಾಗಿದೆ. ಎಲ್ಲಕ್ಕಿಂತ ಅಪಾಯಕಾರಿ ಸಂಗತಿಯೆಂದರೆ, ತ್ವರಿತ ಮನೋಗತಿಯನ್ನು ನಾನಾ ಪ್ರಚೋದನೆಗಳು ಹಿಂಬಾಲಿಸುವುದು.

ಭಾರತೀಯ ಪ್ರಜಾಪ್ರಭುತ್ವದ ಸ್ವರೂಪವನ್ನು ಮರುರೂಪಿಸುವ ರೀತಿಯಲ್ಲಿ ಸಮಕಾಲೀನ ರಾಜಕೀಯವು ತ್ವರಿತ ಕ್ರಿಯೆ ಮತ್ತು ಪ್ರತಿಕ್ರಿಯೆಗಳ ರಂಗಭೂಮಿಯಾಗಿದೆ. ರಾಜಕೀಯ ಪಕ್ಷಗಳ ನಡುವೆ ಈಗ ಸೈದ್ಧಾಂತಿಕ ಸೆಣಸಾಟದ ಬದಲಾಗಿ ವೈರಲ್ ಕ್ಲಿಪ್‌ಗಳು ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿಯ ಚಮತ್ಕಾರಿಕ ಪೋಸ್ಟುಗಳ ಪೈಪೋಟಿ ತಾರಕಕ್ಕೇರುವುದನ್ನು ಕಾಣಬಹುದು. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯ ಸಂಧಾನ ಮಾತುಕತೆಯ ನೈಜ ವಿವರಗಳಿಗಿಂತ ಮೊದಲಿಗೇ ತಿಂಡಿ ತಿನ್ನುವ ಚಿತ್ರ ಫ್ಲ್ಯಾಷ್ ಆಗುವುದು ಏನನ್ನು ತೋರಿಸುತ್ತದೆ? ಮೂಲ ವಿಷಯದ ದಿಕ್ಕು ತಪ್ಪಿಸುವ, ಗಾಂಭೀರ್ಯ ತಗ್ಗಿಸುವ ರಾಜಕಾರಣಿಗಳ ಜಾಣತನ ಹಾಗೂ ತಂತ್ರಗಾರಿಕೆಯು ಫ್ಲ್ಯಾಷ್ ನ್ಯೂಸ್ ದಾಹದ ವೀಕ್ಷಕರು ಮತ್ತು ಮಾಧ್ಯಮಗಳನ್ನು ವಂಚಿಸುವಲ್ಲಿ ಯಶಸ್ವಿಯಾಗುತ್ತಿರುವುದು ಗಮನಾರ್ಹ ಸಂಗತಿ.

ಗಂಭೀರ ಸಂಶೋಧನೆ, ಮೌಲಿಕ ಸಾಹಿತ್ಯ ಹಾಗೂ ಗುಣಾತ್ಮಕ ಶೈಕ್ಷಣಿಕ ಚಟುವಟಿಕೆಗಳು ಕೂಡ ವೇಗದ ಗೀಳಿನ ವಾತಾವರಣದಲ್ಲಿ ಉಸಿರಾಡಲು ಹೆಣಗಾಡುತ್ತಿವೆ. ವರ್ಷಗಳ ಪಾಂಡಿತ್ಯವು ಸಂವೇದನಾಹೀನ ಸುದ್ದಿಯಲ್ಲಿ, ಸೂಕ್ಷ್ಮವಾದ ಸಾರ್ವಜನಿಕ ಭಾಷಣಗಳು ಆಳವಿಲ್ಲದ ಬೈನರಿಗಳಲ್ಲಿ ಕಳೆದುಹೋಗುತ್ತಿವೆ. ಪ್ರಜಾಪ್ರಭುತ್ವದ ಅಸ್ತಿತ್ವಕ್ಕೆ ತಾರ್ಕಿಕತೆ, ವೈಚಾರಿಕತೆ ಮತ್ತು ಚರ್ಚೆಗೆ ಸ್ಥಳಾವಕಾಶ ಬೇಕು. ಶೀಘ್ರ ಸುದ್ದಿಯುಗದಲ್ಲಿ ಇವಾವುಗಳಿಗೂ ನೆಲೆ ಸಿಗುವುದಿಲ್ಲ. ತುರ್ತು–ತುಂತುರು ಸುದ್ದಿಗಳು ನಮ್ಮನ್ನು ಚುರುಕಾಗಿಸಿವೆ; ವಿವೇಕ ಮೂಡಿಸಿಲ್ಲ. ಅಬ್ಬರ ತರಿಸಿವೆ; ಪೂರ್ಣ ಮಾಹಿತಿ ಒದಗಿಸುತ್ತಿಲ್ಲ. ಸಂವಹನ ಸಾಧ್ಯತೆ ವೃದ್ಧಿಸಿದೆ; ಪರಸ್ಪರ ಅರ್ಥೈಸಿಕೊಳ್ಳುವಿಕೆ ಕುಗ್ಗಿಸಿದೆ.

ಹತ್ತಿಪ್ಪತ್ತು ಸೆಕೆಂಡುಗಳ ಎಡಿಟ್ ಮಾಡಿದ ವಿಡಿಯೊ ತುಣುಕುಗಳು ಸಮುದಾಯಗಳ ನಡುವಿನ ಸಂಘರ್ಷ ಅಥವಾ ಸೌಹಾರ್ದ ನಿರ್ಧರಿಸುವುದು ಫ್ಲ್ಯಾಷ್ ನ್ಯೂಸ್ ಯುಗದ ಮತ್ತೊಂದು ವೈಶಿಷ್ಟ್ಯ ಮತ್ತು ಗಂಡಾಂತರ. ಅಧಿಕೃತ ಸ್ಪಷ್ಟೀಕರಣಗಳಿಗಿಂತ ವೇಗವಾಗಿ ವದಂತಿಗಳು ಪ್ರಯಾಣಿಸುತ್ತವೆ. 'ನಕಲಿಯೇ ಮೊದಲು, ಸತ್ಯ ಆಮೇಲೆ', 'ಮೊದಲು ಪ್ರತಿಕ್ರಿಯೆ, ನಂತರ ಯೋಚನೆ', 'ತೀರ್ಪಿನ ನಂತರ ಸಾಕ್ಷ್ಯ–ಸಾಬೀತು' ಎಂಬಂತಹ ಸೂತ್ರಗಳಿಗೆ ನಾಗರಿಕರೂ ಬದ್ಧರಾದರೆ ಇನ್ನೇನು ಘಟಿಸಲು ಸಾಧ್ಯ? 'ಆರೋಪ ಸಾಬೀತಾಗುವವರೆಗೂ ನಿರಪರಾಧಿ' ಎಂಬ ನ್ಯಾಯಿಕತತ್ವವು 'ಫ್ಲ್ಯಾಷ್ ನ್ಯೂಸ್ ಘೋಷಿಸುವವರೆಗೂ ಆರೋಪಿಯು ನಿರಪರಾಧಿ' ಎಂಬ ತತ್ತ್ವಕ್ಕೆ ಸದ್ದಿಲ್ಲದೆ ಹಾದಿ ಮಾಡಿಕೊಡುತ್ತಿದೆ.

ಪಂಥಗಳ ನಡುವೆ ಜೋಕಾಲಿ ಆಡುವ ಪ್ರಕಾಶಕರೊಬ್ಬರು ಇತ್ತೀಚೆಗೆ, 'ಎಡ–ಬಲ, ಹಿಂದೂ–ಮುಸ್ಲಿಂ ಯಾರಾದರೂ ಆಗಿರಲಿ, ಓದುಗರಿಗೆ ಬೇಕಾದ ಪುಸ್ತಕ ಕೊಡುವುದು ಪ್ರಕಾಶನದ ಜವಾಬ್ದಾರಿ ಅಷ್ಟೇ' ಎಂದು ಹೇಳುವ ಮೂಲಕ ಬೇಡಿಕೆ–ಪೂರೈಕೆಯ ಬಂಡವಾಳಶಾಹಿ ಆರ್ಥಿಕ ತಾತ್ವಿಕತೆಯನ್ನು ಸಾಹಿತ್ಯ ವಲಯದಲ್ಲಿಯೂ ನುಸುಳಿಸಲು ಯತ್ನಿಸಿದರು.

'ಪ್ರೇಕ್ಷಕರ ಅಪೇಕ್ಷೆಯ ಸಿನಿಮಾ ಕೊಡುವುದು, ರಂಜಿಸುವುದು ಮಾತ್ರ ನಮ್ಮ ಕೆಲಸ; ಅದರಲ್ಲಿ ಸೆಕ್ಸ್, ಹಿಂಸೆ, ಸಮಾಜಘಾತುಕತೆ ಏನಾದರೂ ಇರಲಿ' ಎಂದು ಸಿನಿಮಾ ನಿರ್ದೇಶಕ/ನಿರ್ಮಾಪಕ ಸಮರ್ಥಿಸಿಕೊಂಡರೆ ಹೇಗೆ? 'ಗ್ರಾಹಕ ಯಾರೇ ಆಗಿರಲಿ, ಅವನಿಗೆ ಬೇಕಾದ ವಸ್ತು ಗಾಂಜಾ, ಪಾನ್, ಡ್ರಗ್ಸ್, ಏನೇ ಇರಲಿ, ಅದನ್ನು ಪೂರೈಸುವುದು ವ್ಯಾಪಾರಿಯ ಜವಾಬ್ದಾರಿ' ಎಂಬುದು ಎಷ್ಟು ಸರಿ? ಅಶ್ಲೀಲ ಸಾಹಿತ್ಯ ಓದುವವರನ್ನು ತಣಿಸುವುದೂ ಪ್ರಕಾಶಕರ ಜವಾಬ್ದಾರಿಯೇ? ಎಂಬ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ.

ಒಂದು ರೀತಿಯಲ್ಲಿ ನೋಡಿದರೆ ನಾವು 'ಶೀಘ್ರ ಸುದ್ದಿಯುಗ'ದಲ್ಲಿ ವಾಸಿಸುತ್ತಿದ್ದೇವೆಯೇ ಎಂಬುದು ಪ್ರಶ್ನೆಯೇ ಅಲ್ಲ; ವಸ್ತುಸ್ಥಿತಿ. ನಿಜವಾದ ಸವಾಲು ಮತ್ತು ಸಮಸ್ಯೆ ಇರುವುದು ಈ ತ್ವರಿತ ಸಂಸ್ಕೃತಿಯೇ ನಮ್ಮ ಭಾವನೆ, ತಿಳಿವಳಿಕೆ ಹಾಗೂ ಪ್ರಜಾಪ್ರಭುತ್ವವನ್ನು ರೂಪಿಸುವುದಕ್ಕೆ ನಮ್ಮ ಪ್ರಜ್ಞಾಪೂರ್ವಕ ಸಮ್ಮತಿ ಇದೆಯೇ ಎಂಬುದರಲ್ಲಿ. ಈ ಸಂದರ್ಭದಲ್ಲಿ ಒಂದು ನಾಗರಿಕ ಸಮಾಜವಾಗಿ ನಾವು ಉತ್ತರ ಕಂಡುಕೊಳ್ಳಬೇಕಾದ ಮತ್ತೊಂದು ಉಪಪ್ರಶ್ನೆಯೆಂದರೆ, ನಾವು ಫ್ಲ್ಯಾಷ್ ನ್ಯೂಸ್ ಕರುಣೆಯಲ್ಲಿಯೇ ಬದುಕು ಕಳೆಯಲು ಬಯಸುತ್ತೇವೆಯೇ ಎಂಬುದು.

ಬಯಕೆ ಏನೇ ಇದ್ದರೂ ನಾಗರಿಕರಿಗೆ ಅದನ್ನು ಕಾರ್ಯಗತಗೊಳಿಸುವ ಅವಕಾಶ ಇದೆಯೇ ಎಂಬ ಸಾಪೇಕ್ಷ ಅನುಮಾನ ಮೂಡುವುದಂತೂ ನಿಜ. ಆದರೆ, ಚಿಂತನಶೀಲ ಪತ್ರಿಕೋದ್ಯಮ, ಸೈದ್ಧಾಂತಿಕ ರಾಜಕಾರಣ ಮತ್ತು ಹೊಣೆಯುಕ್ತ ಪೌರನಡತೆಯಿಂದ ಪ್ರಸಕ್ತ ಸನ್ನಿವೇಶಕ್ಕೆ ಹೊಸ ಭಾಷ್ಯ ಬರೆಯಬಹುದು. ಸುದ್ದಿಯ ಫ್ಲ್ಯಾಷ್‌ಗೆ ಮುನ್ನ ಮಾಧ್ಯಮ ತನ್ನ ವಿವೇಚನಾಬುದ್ಧಿ ಬಳಸಿದರೆ, ವೀರ ಫಾರ್ವರ್ಡ್ ಯೋಧರು ಸಂದೇಶಗಳನ್ನು ಸಿಡಿಸುವಾಗ ತುಸು ಸಂಯಮ ವಹಿಸಿದರೆ, ನಟನಾಪ್ರವೀಣ ರಾಜಕಾರಣಿಗಳು ಬಣ್ಣ–ವೇಷ ಕಳಚಿ ಹೊರಬಂದರೆ ಒಂದಿಷ್ಟು ಸಂಚಲನೆ ಸಾಧ್ಯ. ಆದರೆ, ಈ ಆಶಯವನ್ನು ಫ್ಲ್ಯಾಷ್ ನ್ಯೂಸ್ ರೂಪದಲ್ಲಿ ತಲಪಿಸುವುದು ಹೇಗೆ?

ವಾಚಕರ ವಾಣಿ

ಸಂಚಾರ ದಟ್ಟಣೆ: ಪರ್ಯಾಯ ಹುಡುಕಿ

ಬೆಂಗಳೂರಿನಲ್ಲಿ ದಿನೇ ದಿನೇ ವಾಹನಗಳ ಸಂಚಾರ ದಟ್ಟಣೆ ಹೆಚ್ಚುತ್ತಿದೆ. ಇದಕ್ಕೆ ಕಡಿವಾಣ ಹಾಕಲು ಪರ್ಯಾಯ ವ್ಯವಸ್ಥೆ ರೂಪಿಸುವುದು ಅನಿವಾರ್ಯವಾಗಿದೆ. ದೆಹಲಿಯಲ್ಲಿ ವಾಯುಮಾಲಿನ್ಯ ಏರುಗತಿ ಕಂಡಿದ್ದರಿಂದ ಸಮ–ಬೆಸ ಸಂಖ್ಯೆ ಆಧಾರದಲ್ಲಿ ವಾಹನಗಳ ಬಳಕೆಗೆ ಅವಕಾಶ ಕಲ್ಪಿಸಲಾಗಿತ್ತು. ಅದೇ ಮಾದರಿಯನ್ನು ಉದ್ಯಾನನಗರಿಗೂ ಪರಿಚಯಿಸುವುದು ಉತ್ತಮ. ಬೆಂಗಳೂರಿನ ಹಲವೆಡೆ ಮೆಟ್ರೊ ರೈಲು ಸಂಚಾರ ಇದೆ. ಆ ಭಾಗಗಳಲ್ಲಿ ಮೆಟ್ರೊ ಬಳಸುವಂತೆ ಜನರಿಗೆ ಅರಿವು ಮೂಡಿಸಬೇಕಿದೆ. ಇಲ್ಲವಾದಲ್ಲಿ ಸಂಚಾರ ದಟ್ಟಣೆಯ ನಿಯಂತ್ರಣ ಕಷ್ಟಕರವಾಗಲಿದೆ.

ಹೊನ್ನೇಶ ಯಲಿಗಾರ, ಹಾವೇರಿ

ಯುವಜನರ ಬಗ್ಗೆ ಮಲತಾಯಿ ಧೋರಣೆ

ಕಳೆದ ಐದು ವರ್ಷಗಳಿಂದ ಸರ್ಕಾರದ ಉದ್ಯೋಗ ನೇಮಕಾತಿ ಪ್ರಕ್ರಿಯೆ ಕುಂಟುತ್ತಾ ಸಾಗಿದೆ. ಕೆಲವು ನೇಮಕಾತಿಗಳಿಗೆ ನ್ಯಾಯಾಲಯದ ತಡೆಯಾಜ್ಞೆ ಇದೆ. ಇದರಿಂದ ಯುವ ಸಮುದಾಯದ ಅಮೂಲ್ಯ ಸಮಯ ನಷ್ಟವಾಗುತ್ತಿದೆ. ವ್ಯವಸ್ಥೆಯ ಬಗ್ಗೆ ಋಣಾತ್ಮಕ ಭಾವನೆ ಮೂಡುತ್ತಿದೆ. ಎಲ್ಲದಕ್ಕೂ ಸರ್ಕಾರಿ ಕೆಲಸವೇ ಪರಿಹಾರ ಅಲ್ಲ, ನಿಜ. ಆದರೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದರಿಂದ ಆಡಳಿತ ಯಂತ್ರಕ್ಕೆ ಬಲ ಬರುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರಗಳಿಗೆ ತಾಯಿಯ ಗುಣವಿರಬೇಕು. ಆದರೆ, ಯುವಜನರ ಬಗ್ಗೆ ಮಲತಾಯಿ ಧೋರಣೆ ತಳೆಯುವುದು ಸರಿಯಲ್ಲ.

ಅಶೋಕ ಗೌಡ, ಶಿರಸಿ

ಒಗ್ಗಟ್ಟು ಅರಿಯದಿದ್ದರೆ ಗೆಲುವು ಅಸಾಧ್ಯ

ವೀರಶೈವ ಆತ್ಮ, ಲಿಂಗಾಯತವೇ ದೇಹವಯ್ಯ. ಅನ್ನದಿಂದಾದ ದೇಹ ಬಿಟ್ಟರೆ ವೀರಶೈವಕ್ಕೆ ನೆಲೆ ಇಲ್ಲವಯ್ಯ. ಜೀವಾತ್ಮನು ಇಲ್ಲದಿರೆ ಲಿಂಗಾಯತಕೆ ಬೆಲೆ ಇಲ್ಲವಯ್ಯ. ದೇಹ–ಆತ್ಮಗಳೆರಡು ಕೂಡಿಕೊಂಡರೆ ಜಗವನ್ನೇ ಜಯಸಬಹುದಯ್ಯ. ಪರಸ್ಪರ ಇಬ್ಬರು ಸೇರದಿರೆ ಅವನತಿ ಖಚಿತವಯ್ಯ ಶರಣಬಸವ.

ಹನುಮಂತ ಬಿ. ದಾಸರ, ತರಲಕಟ್ಟಿ

ಸಂವಿಧಾನ ಜನರ ಬದುಕಿಗೆ ದಾರಿದೀಪ

'ಭಗವದ್ಗೀತೆ ಮನೆಯಲ್ಲಿದ್ದರೆ ಸಮಾಲೋಚಕರೇ ಬೇಕಾಗಿಲ್ಲ. ಪ್ರತಿಯೊಬ್ಬರ ದ್ವಂದ್ವಗಳಿಗೆ ಪರಿಹಾರ ಇದರಲ್ಲಿದೆ. ಇಂದಿಗೂ ಶ್ರೀಕೃಷ್ಣ ಅತ್ಯುತ್ತಮ ಆಪ್ತ ಸಲಹೆಗಾರ' ಎಂದು ಹೈಕೋರ್ಟ್ ನ್ಯಾಯಮೂರ್ತಿ ಶ್ರೀಶಾನಂದ ಅವರು ಹೇಳಿರುವುದು (ಪ್ರ.ವಾ., ಡಿ. 2) ಉತ್ಪ್ರೇಕ್ಷೆ ಅನ್ನಿಸುತ್ತಿದೆ. ಸಮಾಜದ ಅಸಮಾನತೆಗೆ, ಬಡವರ ಸಂಕಷ್ಟಗಳಿಗೆ, ಹಣ, ಅಧಿಕಾರದ ದೌರ್ಜನ್ಯಗಳಿಗೆ ಭಗವದ್ಗೀತೆಯಲ್ಲೇ ಪರಿಹಾರ ಸಿಗುವುದಾದರೆ ಸಂವಿಧಾನ ಏಕೆ ಬೇಕಿತ್ತು? ಕೋರ್ಟು, ಕಚೇರಿಗಳು ಏಕಿರಬೇಕು? ಭಗವದ್ಗೀತೆ ವಿದ್ವಾಂಸರ ಅಧ್ಯಯನಕ್ಕಾಗಿ ಇರಲಿ. ಜನಸಾಮಾನ್ಯರಿಗೆ ಬೇಕಾದ ಹೆಚ್ಚಿನ ತಿಳಿವಳಿಕೆಗಾಗಿ ಸಂವಿಧಾನವನ್ನು ಸಂಕ್ಷಿಪ್ತಗೊಳಿಸಿ ಕಿರುಪುಸ್ತಕಗಳನ್ನು ರಚಿಸಿ ವಿತರಿಸುವ ಮೂಲಕ, ಸರ್ಕಾರ ಮತ್ತು ಸಂಘ–ಸಂಸ್ಥೆಗಳು ನೊಂದವರ ನೆರವಿಗೆ ಧಾವಿಸುವಂತಾಗಲಿ.

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಮಂತ್ರ–ತಂತ್ರ

ಕುರ್ಚಿ ಗದ್ದಲದ ಮಧ್ಯೆ
ಬ್ರೇಕ್‌ಫಾಸ್ಟ್ ನೆಪದಲ್ಲಿ
ಒಗ್ಗಟ್ಟಿನ ಮಂತ್ರ:
ಸದನ ಮುಗಿದ ಬಳಿಕ
ಮತ್ತೆ ಗರಿಗೆದರಲಿದೆ
ರಾಜಕೀಯದ ತಂತ್ರ!

ಆರ್. ನಾಗರಾಜ್, ಗೊರೂರು

ಜನಪ್ರತಿನಿಧಿಗಳು 'ವಚನ' ತಪ್ಪಬಾರದು

ನಾವಾಡುವ ಮಾತು ಮನಸ್ಸನ್ನು ಅರಳಿಸಬೇಕು. ಜೊತೆಗೆ, ಆತ್ಮೋನ್ನತಿಗೆ ಕಾರಣವಾಗಬೇಕು. ವಂಚನೆ ತುಂಬಿದ ಮಾತು ಜೀವನವನ್ನು ನರಕವಾಗಿಸುತ್ತದೆ. ಹಾಗಾಗಿಯೇ, ಅಲ್ಲಮಪ್ರಭು 'ಮಾತೆಂಬುದು ಜ್ಯೋತಿರ್ಲಿಂಗ' ಎಂದಿದ್ದಾರೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ನಡುವೆ ಮುಖ್ಯಮಂತ್ರಿ ಗದ್ದುಗೆಗೆ ಸಂಬಂಧಿಸಿದಂತೆ ಏನು ಮಾತುಕತೆ ನಡೆದಿದೆಯೋ ಯಾರಿಗೆ ಗೊತ್ತು? ಆದರೆ, ಅಧಿಕಾರದ ಗದ್ದುಗೆ ಏರುವ ಮುನ್ನ ಈ ನಾಡಿನ ರೈತರಿಗೆ, ಮಹಿಳೆಯರಿಗೆ, ಯುವಕರಿಗೆ ಕೊಟ್ಟ ಭರವಸೆಯ ಮಾತುಗಳನ್ನು ಮರೆಯಬಾರದು.

ಸಿದ್ದು ಪೂಜಾರಿ, ಬೆಂಗಳೂರು

ಕಾರ್ಖಾನೆಗಳ ದೂಳು, ಜನರಿಗೆ ಗೋಳು

ಕೊಪ್ಪಳ ಸಮೀಪದ ಗಿಣಿಗೇರಿ, ಕನಕಾಪುರ, ಬಸಾಪುರ, ಅಲ್ಲಾನಗರ, ಬೇವಿನಹಳ್ಳಿ, ಹಿರೇಬಗನಾಳ, ಕಾಸನಕಂಡಿ, ಚಿಕ್ಕಬಗನಾಳ, ಲಾಚನಕೇರಿ, ಮುಂತಾದ ಗ್ರಾಮಗಳ ಪರಿಸರವು ಕಾರ್ಖಾನೆಗಳ ಹೊಗೆ, ದೂಳು, ಹಾರುಬೂದಿಯಿಂದ ಹದಗೆಟ್ಟಿದೆ. ಜನರು ಅಸ್ತಮಾ, ಕ್ಷಯ, ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ. 20ಕ್ಕೂ ಹೆಚ್ಚು ಹಳ್ಳಿಗಳ ಎರಡು ಲಕ್ಷಕ್ಕೂ ಹೆಚ್ಚು ಜನರ ಆರೋಗ್ಯ ಹದಗೆಡುತ್ತಿದೆ. ಇಡೀ ಪರಿಸರ ನಾಶದತ್ತ ಹೆಜ್ಜೆ ಹಾಕುತ್ತಿದೆ. ಈಗಲಾದರೂ ಸರ್ಕಾರ ಕಣ್ಣು ತೆರೆದು ಇಲ್ಲಿನ ಅವ್ಯವಸ್ಥೆಗೆ ಅವರು ಪರಿಹಾರ ಹುಡುಕುವುದೆ?

ಅಲ್ಲಮಪ್ರಭು ಬೆಟ್ಟದೂರು, ಕೊಪ್ಪಳ

ಸಂಸತ್ ಸದಸ್ಯರು ಹೊಣೆ ಮರೆಯದಿರಲಿ

ಸಂಸತ್‌ನ ಚಳಿಗಾಲದ ಅಧಿವೇಶನ ಆರಂಭವಾಗಿದೆ. ಜೊತೆಗೆ, ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರ ಜವಾಬ್ದಾರಿಯೂ ಹೆಚ್ಚಾಗಿದೆ. ಜನರ ತೆರಿಗೆ ಹಣವನ್ನು ವ್ಯರ್ಥ ಮಾಡದೆ ಕಲಾಪಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂಬುದು ಮತದಾರರ ನಿರೀಕ್ಷೆ. ಪ್ರತಿ ನಿಮಿಷದ ಸಂಸದೀಯ ಸಮಯವನ್ನು ರಾಷ್ಟ್ರೀಯ ಸಂಪತ್ತು ಎಂದು ಪರಿಗಣಿಸಬೇಕಿದೆ. ಪ್ರತಿ ಮಸೂದೆ ಬಗ್ಗೆ ಆಳವಾದ ಅಧ್ಯಯನ ನಡೆಸಿ, ರಚನಾತ್ಮಕ ಟೀಕೆ–ಟಿಪ್ಪಣಿಗಳೊಂದಿಗೆ ಚರ್ಚೆಯಲ್ಲಿ ಪಾಲ್ಗೊಳ್ಳಬೇಕಿದೆ.

ಎಸ್.ಎನ್. ಭಟ್ ಸೈಪಂಗಲ್ಲು, ಕಾಸರಗೋಡು

ಚುರುಮುರಿ



ಸಿಎಂ ಟಾಸ್ಕ್

• ಮಣ್ಣೆ ರಾಜು

'ಇದು ಬಿಗ್ ಬಾಸ್... ಮನೆಯ ಸದಸ್ಯರಿಗೆ ಬಿಗ್ ಬಾಸ್ ಚಟುವಟಿಕೆಯೊಂದನ್ನು ನೀಡುತ್ತಿದ್ದಾರೆ, ಅದುವೇ ಸಿಎಂ ಟಾಸ್ಕ್...' ಎಂದು ಬಿಗ್ ಬಾಸ್ ಪ್ರಕಟಿಸಿದರು.

ಮನೆಯ ಸದಸ್ಯರು ಚಪ್ಪಾಳೆ ತಟ್ಟಿ ಸ್ವಾಗತಿಸಿದರು.

'ಟಾಸ್ಕ್‌ನ ನಿಯಮಗಳು ಈ ರೀತಿ ಇವೆ... ಸ್ಪರ್ಧಿಗಳು ಗೆರೆ ಬಳಿ ನಿಲ್ಲಬೇಕು, ಬಜರ್ ಆದನಂತರ ಮುನ್ನುಗ್ಗಿ ಹೋಗಿ ಅಲ್ಲಿರುವ ಸಿಎಂ ಕುರ್ಚಿಯ ಕಾಲು ಹಿಡಿಯಬೇಕು. ಹೆಚ್ಚು ಸಮಯ ಯಾರು ಕುರ್ಚಿಯ ಕಾಲು ಹಿಡಿದಿರುತ್ತಾರೋ ಅವರು ಈ ಟಾಸ್ಕ್‌ನ ವಿಜೇತರಾಗಿ ಸಿಎಂ ಕುರ್ಚಿ ಮೇಲೆ ಕುಳಿತುಕೊಳ್ಳುವ ಅವಕಾಶ ಪಡೆಯುತ್ತಾರೆ' ಎಂದು ಬಿಗ್ ಬಾಸ್ ಘೋಷಿಸಿದರು.

'ಓಕೆ ಬಿಗ್ ಬಾಸ್' ಸದಸ್ಯರು ಖುಷಿಯಾದರು.

'ಎದುರಾಳಿ ಸ್ಪರ್ಧಿಗಳು ಸಿಎಂ ಕುರ್ಚಿಯ ಕಾಲು ಹಿಡಿಯದಂತೆ ಅವರ ಕಾಲು ಎಳೆಯುವುದು ನಿಮಗಿರುವ ಸವಾಲು. ಕಾಲು ಮಾತ್ರವೇ ಎಳೆಯಬೇಕು, ಕೈ–ಮೈ, ಜುಟ್ಟು, ಬಟ್ಟೆ ಹಿಡಿದು ಎಳೆದಾಡುವಂತಿಲ್ಲ. ನಿಯಮಗಳನ್ನು ಉಲ್ಲಂಘಿಸಿದವರು ಮನೆಯಿಂದ ಹೊರಹೋಗಲು ನೇರವಾಗಿ ನಾಮಿನೇಟ್ ಆಗುತ್ತಾರೆ, ಎಚ್ಚರಿಕೆ' ಎಂದರು ಬಿಗ್ ಬಾಸ್.

'ಓಕೆ ಬಿಗ್ ಬಾಸ್'.

'ಸಿಎಂ ಕುರ್ಚಿ ಕಾಲು ಹಿಡಿಯಲು ಯಾರಿಗೂ ಅವಕಾಶ ಮಾಡಿಕೊಡದಂತೆ ನೀವೆಲ್ಲಾ ಆಡಬೇಕು'.

'ಕೊಡೋದಿಲ್ಲಾ ಬಿಗ್ ಬಾಸ್, ಕಾಲೆಳೆಯುವ ಕಲೆಯಲ್ಲಿ ನಾವು ಪರಿಣತರು!'

'ನಮಗೂ ಗೊತ್ತಿದೆ!' ಎಂದು ಬಿಗ್ ಬಾಸ್ ನಕ್ಕರು.

'ಕುರ್ಚಿ ಕಾಲನ್ನು ಯಾರೂ ಹಿಡಿಯದಿದ್ದರೆ ಯಾರನ್ನು ಸಿಎಂ ಟಾಸ್ಕ್ ವಿನ್ನರ್ ಎಂದು ಘೋಷಿಸ್ತೀರಿ ಬಿಗ್ ಬಾಸ್?'

'ಸಿಎಂ ಟಾಸ್ಕ್ ಮನರಂಜನೆಗಷ್ಟೇ, ಸೂಕ್ತ ಕಾಲದಲ್ಲಿ ಸೂಕ್ತವಾದವರನ್ನು ಸಿಎಂ ಟಾಸ್ಕ್ ವಿಜೇತರೆಂದು ಬಿಗ್ ಬಾಸ್ ಘೋಷಿಸುತ್ತಾರೆ!'

ಸದಸ್ಯರು ಪರಸ್ಪರ ಮುಖ ನೋಡಿಕೊಂಡು, 'ಓಕೆ ಬಿಗ್ ಬಾಸ್, ನಿಮ್ಮ ತೀರ್ಮಾನ, ಆದೇಶಗಳಿಗೆ ನಾವು ಸದಾ ಬದ್ಧರಾಗಿರುತ್ತೇವೆ...' ಎಂದು ಒಕ್ಕೊರಲ ಅಭಿಪ್ರಾಯ ಹೇಳಿದರು.

ಬಿಗ್ ಬಾಸ್ ಮತ್ತೊಮ್ಮೆ ನಕ್ಕರು.

ಸಂಗತ

ಶುದ್ಧ ಪರಿಸರ ಎನ್ನುವ ಜೀವಿಸುವ ಹಕ್ಕು!

'ಮಾಲಿನ್ಯಮುಕ್ತ ಪರಿಸರ'ವನ್ನು ಹೊಂದುವುದು ನಾಗರಿಕರ ಹಕ್ಕು. ಈ ಹಕ್ಕನ್ನು ಸಾಕಾರಗೊಳಿಸುವ ಇಚ್ಛಾಶಕ್ತಿ ಸರ್ಕಾರಗಳಿಗೆ ಇಲ್ಲದಿರುವುದೇ ಸಮಸ್ಯೆಯಾಗಿದೆ.

• ರಾಘವೇಂದ್ರ ಕೆ. ತೊಗರ್ಸಿ

'ತಾಯ ಮೊಲೆವಾಲು ನಂಜಾಗಿ ಕೊಲುವೊಡೆ ಇನ್ನಾರಿಗೆ ದೂರುವೆ' ಎನ್ನುವ ಬಸವಣ್ಣನ ವಚನವನ್ನು ನೆನಪಿಸುವ ವಿದ್ಯಮಾನಗಳಿಗೆ ನಾವು ಸಾಕ್ಷಿಯಾಗುತ್ತಿದ್ದೇವೆ. ಸಕಲ ಜೀವಸಂಕುಲವನ್ನು ಪೊರೆಯುವ ತಾಯಿಯಾಗಿರುವ ಪ್ರಕೃತಿಯೇ ಪೂತನಿಯ ರೂಪದಲ್ಲಿ ಕಾಣಿಸಿಕೊಳ್ಳುತ್ತಿರುವ ವಿದ್ಯಮಾನಗಳನ್ನು ಕಾಣುತ್ತಿದ್ದೇವೆ ಹಾಗೂ ಅಂಥ ಘಟನೆಗಳ ಸೃಷ್ಟಿಕರ್ತರು ನಾವೇ ಆಗಿದ್ದೇವೆ.

ಬಿಹಾರದ ಕೆಲವು ಪ್ರದೇಶಗಳಲ್ಲಿ ಹಾಲುಣಿಸುವ ತಾಯಂದಿರ ಎದೆಹಾಲಿನಲ್ಲಿ ನಂಜುಕಾರಕ ಯುರೇನಿಯಂ ಅಂಶ ಪತ್ತೆಯಾಗಿರುವುದು ಇತ್ತೀಚೆಗೆ ದೊಡ್ಡ ಸುದ್ದಿಯಾಗಿತ್ತು. ಕಲಬೆರಕೆ ಜಗತ್ತಿನಲ್ಲಿ ತಾಯಿಯ ಹಾಲೂ ಶುದ್ಧವಾಗಿ ಉಳಿದಿಲ್ಲ ಎನ್ನುವುದು ಮನುಷ್ಯ ಸಂಬಂಧಗಳ ಬಗ್ಗೆ ನಂಬಿಕೆ ಉಳ್ಳವರನ್ನು ಕಂಗೆಡಿಸುವ ಸಂಗತಿ. ಅಸಂಭವ ಎನ್ನುವ ಸಾದೃಶ್ಯಗಳನ್ನು ನೀಡುವ ಬಸವಣ್ಣನ 'ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ ಧರೆ ಹತ್ತಿ ಉರಿದರೆ ನಿಲಲುಬಾರದು' ಎನ್ನುವ ವಚನದ ಆತಂಕ ವರ್ತಮಾನದಲ್ಲಿ ಸಂಭವನೀಯ ಎನ್ನುವಂತಾಗಿದೆ.

ತಾಯಂದಿರ ಎದೆಹಾಲಿನಲ್ಲಿ ಯುರೇನಿಯಂ ಅಂಶ ಇರುವುದನ್ನು ಪಟ್ನಾದ ಮಹಾವೀರ್ ಕ್ಯಾನ್ಸರ್ ಸಂಸ್ಥೆ ಮತ್ತು ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಏಮ್ಸ್) ಸಂಶೋಧನೆ ದೃಢಪಡಿಸಿದೆ. ಯುರೇನಿಯಂ ಪ್ರಮಾಣವು ವಿಶ್ವ ಆರೋಗ್ಯ ಸಂಸ್ಥೆಯ ಸೂಚ್ಯಂಕಕ್ಕಿಂತ ಕಡಿಮೆ ಇದೆ ಎನ್ನುವುದು ಸಮಾಧಾನದ ಸಂಗತಿ.

'ಯಾರಿಗೆ ದೂರುವುದು' ಎನ್ನುವ ಬಸವಣ್ಣನ ಆತಂಕದ ಪ್ರಶ್ನೆಗೆ, ಪ್ರಜಾಪ್ರಭುತ್ವ ವ್ಯವಸ್ಥೆ ತೋರಬಹುದಾದ ಉತ್ತರ, ಪ್ರಜೆಗಳೇ ಚುನಾಯಿಸಿದ ಸರ್ಕಾರ. ಪರಿಸರ ಸಂರಕ್ಷಣೆ ಸರ್ಕಾರದ ಹೊಣೆಗಾರಿಕೆ. ಈ ಕರ್ತವ್ಯವನ್ನು ಸುಪ್ರೀಂ ಕೋರ್ಟ್, ಮೂಲಭೂತ ಹಕ್ಕುಗಳ ರಕ್ಷಣೆಯ ರೂಪದಲ್ಲಿ ವ್ಯಾಖ್ಯಾನಿಸಿರುವುದು ಕುತೂಹಲಕರ. ರಾಜಸ್ಥಾನದ ಮೂರು ನದಿಗಳ (ಜೊಜರಿ, ಬಂಡಿ, ಲುನಿ) ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ, 'ಪರಿಸರ ಸಂರಕ್ಷಣೆ ಜನತೆಯ ಮೂಲಭೂತ ಹಕ್ಕಿನ ರಕ್ಷಣೆ ಕೂಡ' ಎಂದು ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠ ಹೇಳಿದೆ. ನೈಸರ್ಗಿಕ ಸಮತೋಲನ ಮತ್ತು ಸ್ವಚ್ಛ ವಾತಾವರಣವನ್ನು ದೇಶದ ಜನತೆಗೆ ಕಲ್ಪಿಸುವುದು, ಅವರ ಮೂಲಭೂತ ಹಕ್ಕನ್ನು ಕಾಪಾಡಿದಂತೆಯೇ ಸರಿ ಎನ್ನುವುದು ಸುಪ್ರೀಂ ಕೋರ್ಟ್ ಅಭಿಪ್ರಾಯದ ಸಾರ. ತನ್ನ ಮಾತುಗಳ ಸಂದರ್ಭದಲ್ಲಿ, ಸಂವಿಧಾನದ 21ನೇ ವಿಧಿಯನ್ನು ಪ್ರಸ್ತಾಪಿಸಿರುವ ಕೋರ್ಟ್– 'ಪರಿಸರದ ಸಂರಕ್ಷಣೆ ಜೀವಿಸುವ ಹಕ್ಕಿಗೆ ಸಮಾನ' ಎಂದು ವಿಶ್ಲೇಷಿಸಿದೆ.

ತಿರುಚಿರಾಪಳ್ಳಿಯ ಬಳಿ ಕಾವೇರಿ ನದಿಯನ್ನು ಅಧ್ಯಯನಕ್ಕೆ ಒಳಪಡಿಸಿರುವ ತಮಿಳುನಾಡಿನ 'ಭಾರತೀದಾಸನ್' ವಿಶ್ವವಿದ್ಯಾಲಯದ ಸಂಶೋಧಕರು, ನದಿಯ ನೀರಿನಲ್ಲಿ ಭಾರವಾದ ಲೋಹಗಳು ಸೇರಿರುವುದನ್ನು ಗುರ್ತಿಸಿದ್ದಾರೆ. ಸೀಸ ಮತ್ತು ಕ್ಯಾಡ್ಮಿಯಂ ಲೋಹದ ಮಾದರಿ ಕಾವೇರಿ ನದಿಯಲ್ಲಿನ ಮೀನಿನಲ್ಲಿಯೂ ಪತ್ತೆ ಆಗಿದೆ. ಭಾರಲೋಹ ಬೆರೆತ ನೀರು ಮಾತ್ರವಲ್ಲ, ಆ ಪರಿಸರದ ಮೀನುಗಳ ಸೇವನೆ ಕೂಡ ಆರೋಗ್ಯಕ್ಕೆ ಹಿತಕರವಲ್ಲ ಎಂಬ ಎಚ್ಚರಿಕೆಯನ್ನು ತಜ್ಞರ ತಂಡ ನೀಡಿದೆ.

'ಲಾನ್ಸೆಂಟ್ ಕೌಂಟ್‌ಡೌನ್'ನ 2025ರ ವರದಿಯಲ್ಲಿ ಇರುವ, ವಾಯುಮಾಲಿನ್ಯ ಉಂಟು ಮಾಡಿರುವ ಅನಾಹುತದ ಮಾಹಿತಿ ಗಾಬರಿ ಹುಟ್ಟಿಸುವಂತಿದೆ. 2022ರಲ್ಲಿ ಲಕ್ಷಾಂತರ ಭಾರತೀಯರು ವಾಯುಮಾಲಿನ್ಯಕ್ಕೆ ಬಲಿಯಾಗಿದ್ದಾರೆ ಎಂದು ವರದಿ ಹೇಳುತ್ತದೆ. 'ಲಾನ್ಸೆಂಟ್ ಕೌಂಟ್‌ಡೌನ್' ಅಂತರರಾಷ್ಟ್ರೀಯ ಸಂಸ್ಥೆಯಾಗಿದ್ದು, ಜಾಗತಿಕವಾಗಿ ಹವಾಮಾನ ಬದಲಾವಣೆ ಮತ್ತು ಅದು ಆರೋಗ್ಯದ ಮೇಲೆ ಉಂಟುಮಾಡುತ್ತಿರುವ ಪರಿಣಾಮದ ಬಗ್ಗೆ ಅಧ್ಯಯನ ನಡೆಸುತ್ತದೆ. ಪಾರಂಪರಿಕ ಇಂಧನ ಮೂಲಗಳಾದ ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಬಳಕೆಯಿಂದ ಜಗತ್ತಿನ ನೂರು ದೇಶಗಳಲ್ಲಿ ಪ್ರತಿವರ್ಷ ಲಕ್ಷಾಂತರ ಮಂದಿ ಸಾವಿಗೀಡಾಗುತ್ತಿದ್ದಾರೆ ಎನ್ನುವ ದಾರುಣ ಸಂಗತಿಯನ್ನೂ ಲಾನ್ಸೆಂಟ್ ತನ್ನ ವರದಿಯಲ್ಲಿ ದಾಖಲಿಸಿದೆ.

ಕರ್ನಾಟಕದಲ್ಲಿಯೂ ನದಿ ಮೂಲಗಳು ಶುದ್ಧವಾಗಿಲ್ಲ ಎನ್ನುವ ಆತಂಕ ದಶಕಗಳಿಂದಲೂ ಇದೆ. ಕೈಗಾರಿಕೆಗಳಿಂದ ನಾಡಿನ ಜೀವನದಿಗಳು ನಂಜು ಮೈಗೂಡಿಸಿಕೊಳ್ಳುತ್ತಿರುವ ಬಗ್ಗೆ ಪರಿಸರವಾದಿಗಳು ಎಚ್ಚರಿಕೆ ನೀಡುತ್ತಲೇ ಇದ್ದಾರೆ. ಆದರೆ, ನದಿಗಳನ್ನು ಚರಂಡಿಗಳಾಗಿಸುವ 'ನಾಗರಿಕ ಕಾರ್ಯ' ಎಗ್ಗಿಲ್ಲದೆ ಸಾಗಿದೆ.

ವಾಯುಮಾಲಿನ್ಯ ಹೆಚ್ಚುತ್ತಿದ್ದರೂ, ದೀಪಾವಳಿ ಸಂದರ್ಭದಲ್ಲಿ ಪಟಾಕಿ ಸಿಡಿಸಿ, ವಾಯುಮಾಲಿನ್ಯಕ್ಕೆ ತಿದಿ ಒತ್ತುತ್ತೇವೆ. ದೆಹಲಿಯ ಪಾಡಂತೂ ಹೇಳತೀರದು. ಅಲ್ಲಿ ಉಸಿರಾಡುವ ಗಾಳಿಯ ಗುಣಮಟ್ಟ ಅತ್ಯಂತ ಕಳಪೆಯಾಗಿದೆ ಎಂದು ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯೇ ಹೇಳಿದೆ. ದೇಶದ ರಾಜಧಾನಿಯಲ್ಲಿ ಗಾಳಿಯ ಗುಣಮಟ್ಟ ಸುಧಾರಿಸುವ ಬಗ್ಗೆ ಸುಪ್ರೀಂ ಕೋರ್ಟ್ ಸಿಟ್ಟು, ಆಕ್ರೋಶದೊಂದಿಗೆ, ನಿರಾಶೆಯ ಧ್ವನಿಯಲ್ಲೂ ಮಾತನಾಡಿರುವುದಿದೆ.

ಮಾಲಿನ್ಯ ನಿಯಂತ್ರಣಕ್ಕೆ ಒತ್ತಾಯಿಸಿ ನಡೆಯುವ ನಾಗರಿಕ ಪ್ರತಿರೋಧದ ಚಳವಳಿಗಳನ್ನು ವ್ಯವಸ್ಥೆ ಹತ್ತಿಕ್ಕಲು ಬಯಸುತ್ತದೆ. ಪರಿಸರ ಕಾಳಜಿಯ ಮಾತುಗಳನ್ನಾಡುವವರು ಅಭಿವೃದ್ಧಿಯ ವಿರೋಧಿಗಳು ಎನ್ನುವಂತೆ ಚಿತ್ರಿಸಲಾಗುತ್ತದೆ. ಪ್ರತಿರೋಧದ ನಡುವೆಯೂ ಪರಿಸರ ಕಾಳಜಿಯ ವಿವೇಕದ ಧ್ವನಿಗಳು ಜೀವಂತವಾಗಿವೆ ಎನ್ನುವುದು ಆಶಾವಾದದ ಸಂಗತಿ.

ಸ್ವಚ್ಛ ಪರಿಸರದ ಅಪೇಕ್ಷೆ ನಾಗರಿಕರ ಮೂಲಭೂತ ಹಕ್ಕು ಎನ್ನುವುದನ್ನು ಸರ್ಕಾರಗಳು ಮನಗಾಣಬೇಕಿದೆ. ಮುಂದಿನ ದಿನಗಳಲ್ಲಿ ಆರೋಗ್ಯಕರ ಗಾಳಿಗೂ ಪಡಿತರ ವ್ಯವಸ್ಥೆ ಅನಿವಾರ್ಯವಾಗುವ ಸ್ಥಿತಿಯನ್ನು ಸರ್ಕಾರಗಳು ಸೃಷ್ಟಿಸಬಾರದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡಿಜಿಟಲ್ ಇ–ಸ್ಟ್ಯಾಂಪ್ ಕಾಗದರಹಿತ ನೋಂದಣಿಯತ್ತ ಹೆಜ್ಜೆ

ಪ್ರಜಾವಾಣಿ ವಾರ್ತೆ

ರಾಜ್ಯದಲ್ಲಿ ನೋಂದಣಿ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಡಿಜಿಟಲೀಕರಣಗೊಳಿಸಲು (ಕಾಗದರಹಿತ) ಹೊರಟಿರುವ ಕಂದಾಯ ಇಲಾಖೆಯು ಅದಕ್ಕೆ ಪೂರಕವಾದ ಹೆಜ್ಜೆಯಾಗಿ ಡಿಜಿಟಲ್ ಇ–ಸ್ಟ್ಯಾಂಪ್ (ಡಿಇಎಸ್) ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಈಗ ನೋಂದಣಿ ಮತ್ತು ನೋಂದಣಿಯೇತರ ಛಾಪಾ ಕಾಗದ ವಹಿವಾಟುಗಳಿಗೆ ಬಳಸುವ ‘ಇ–ಸ್ಟ್ಯಾಂಪ್’ ಜಾಗವನ್ನು ಇನ್ನು ಮುಂದೆ ‘ಡಿಜಿಟಲ್ ಇ–ಸ್ಟ್ಯಾಂಪ್’ ತುಂಬಲಿದೆ.

ಈಗಿನ ವ್ಯವಸ್ಥೆಯಲ್ಲಿದ್ದ ಭದ್ರತಾ ಲೋಪವನ್ನು ತೊಡೆದು ಹಾಕುವುದು ಹೊಸ ವ್ಯವಸ್ಥೆಯ ಒಂದು ಉದ್ದೇಶವಾದರೆ, ಇ–ಸ್ಟ್ಯಾಂಪ್ ವಂಚನೆಯಿಂದ ಸರ್ಕಾರದ ಬೊಕ್ಕಸಕ್ಕೆ ಆಗುತ್ತಿದ್ದ ನಷ್ಟವನ್ನು ತಪ್ಪಿಸುವುದು ಇನ್ನೊಂದು ಉದ್ದೇಶ. ಜನರು ಜಗತ್ತಿನಲ್ಲಿ ಎಲ್ಲೇ ಇದ್ದರೂ ಮನೆಯಲ್ಲೇ ಕುಳಿತು ಸ್ಟ್ಯಾಂಪ್ ಖರೀದಿಸುವುದಕ್ಕೆ ಅವಕಾಶ ಮಾಡಿಕೊಡುವುದು ಈ ಪ್ರಯತ್ನದ ಹಿಂದಿರುವ ಮತ್ತೊಂದು ಸಕಾರಣ.

‘ಈ ವ್ಯವಸ್ಥೆಯನ್ನು ಯಶಸ್ವಿಯಾಗಿ ಅಳವಡಿಸಿಕೊಳ್ಳಲಾಗಿದ್ದು, ಇನ್ನು ಮುಂದೆ ರಾಜ್ಯದಾದ್ಯಂತ ಡಿಜಿಟಲ್ ಇ–ಸ್ಟ್ಯಾಂಪ್ ಕಡ್ಡಾಯವಾಗಲಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದ್ದಾರೆ.

ಹೊಸ ಸ್ಟ್ಯಾಂಪ್ ಹಾಗೂ ಅದರ ಪ್ರಯೋಜನಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ.

ವೈಶಿಷ್ಟ್ಯಗಳು, ಪ್ರಯೋಜನಗಳು

- ಮಧ್ಯವರ್ತಿಗಳ ನೆರವಿಲ್ಲದೆ ನಾಗರಿಕರು ಸ್ವತಃ ಡಿಜಿಟಲ್ ಇ-ಸ್ಟ್ಯಾಂಪ್ ಪಡೆಯಬಹುದು. ಈ ಸೇವೆ 24x7 ಲಭ್ಯ. ಜಗತ್ತಿನಲ್ಲಿ ಎಲ್ಲೇ ಇದ್ದರೂ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಈ ಸ್ಟ್ಯಾಂಪ್ ಪಡೆಯಬಹುದು. ಅದಕ್ಕಾಗಿ ಕಂಪ್ಯೂಟರ್‌ಗೆ ಇಂಟರ್‌ನೆಟ್ ಸಂಪರ್ಕ ಇರಬೇಕಷ್ಟೆ
- ಈ ಸೇವೆ ಸಂಪೂರ್ಣ ಡಿಜಿಟಲ್ ಆಗಿರುವುದರಿಂದ ಸುರಕ್ಷಿತವಾಗಿ ಆನ್‌ಲೈನ್ ಮೂಲಕ ಪಾವತಿ ಮಾಡಬಹುದು
- ನಾಗರಿಕರು ಆಧಾರ್ ಆಧಾರಿತ ಇ–ಸಹಿ ಅಥವಾ ಡಿಜಿಟಲ್ ಸಹಿ ಪ್ರಮಾಣಪತ್ರ (ಡಿಎಸ್‌ಸಿ) ಬಳಸಿಕೊಂಡು ದಾಖಲೆಗಳಿಗೆ ಡಿಜಿಟಲ್ ಸಹಿ ಮಾಡಬೇಕಾಗುತ್ತದೆ. ಹೀಗಾಗಿ ಇಡೀ ಪ್ರಕ್ರಿಯೆ ಸುರಕ್ಷಿತ
- ಆನ್‌ಲೈನ್ ಮೂಲಕವೇ ಎಲ್ಲ ಪ್ರಕ್ರಿಯೆ ನಡೆಯುವುದರಿಂದ ಸ್ಟ್ಯಾಂಪ್‌ನ ನಕಲು ಮಾಡಲು ಸಾಧ್ಯವಿಲ್ಲ. ವ್ಯವಸ್ಥೆ ಹೆಚ್ಚು ಪಾರದರ್ಶಕವಾಗಿರಲಿದೆ. ಶುಲ್ಕ ವಂಚನೆಗೂ ಕಡಿವಾಣ ಬೀಳಲಿದೆ. ಶುಲ್ಕ ನೇರವಾಗಿ ಸರ್ಕಾರದ ಖಜಾನೆಗೆ ಜಮೆ ಆಗುತ್ತದೆ
- ಡಿಜಿಟಲ್ ಸ್ಟ್ಯಾಂಪ್ ವಿವರಗಳು ಸ್ವಯಂಚಾಲಿತವಾಗಿ ನೋಂದಣಿ ವ್ಯವಸ್ಥೆಗೆ ಸೇರುತ್ತವೆ. ಕಂದಾಯ ಇಲಾಖೆ ಪರಿಚಯಿಸಲು ಉದ್ದೇಶಿಸಿರುವ ಕಾಗದ ರಹಿತ ನೋಂದಣಿ ವ್ಯವಸ್ಥೆಗೆ ಇದು ಅನುಗುಣವಾಗಿದೆ
- ಸ್ಟ್ಯಾಂಪ್‌ನ ತಪ್ಪು ವರ್ಗೀಕರಣ ಹಾಗೂ ವಂಚನೆಗಳಿಗೆ ಕಡಿವಾಣ ಬೀಳುವುದರಿಂದ ಇಲಾಖೆಯ ಆದಾಯವೂ ಹೆಚ್ಚಲಿದೆ
- ಈ ಸ್ಟ್ಯಾಂಪ್, ದಾಖಲೆಯ ಪ್ರಮುಖ ಭಾಗವಾಗಿರುವುದರಿಂದ, ಸಹಿ ಮಾಡಿರುವವರ ಗಮನಕ್ಕೆ ಬಾರದಂತೆ ಯಾವುದೇ ಬದಲಾವಣೆ ಮಾಡಲು ಸಾಧ್ಯವಿಲ್ಲ
- ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲಾದ ದಾಖಲೆಗಳು ಕಾನೂನು ಬದ್ಧ. ಹೀಗಾಗಿ ಭೌತಿಕ ಪ್ರತಿಯ ಅಗತ್ಯವಿಲ್ಲ

ಡಿಜಿಟಲ್ ಸ್ಟ್ಯಾಂಪ್ ಪಡೆಯುವುದು ಹೇಗೆ?

ಕಾವೇರಿ ಪೋರ್ಟಲ್ (https://kaveri.karnataka.gov.in/) ಮೂಲಕ ಡಿಜಿಟಲ್ ಇ–ಸ್ಟ್ಯಾಂಪ್ ಪಡೆಯಬೇಕು. ಅದಕ್ಕಾಗಿ ಪೋರ್ಟಲ್‌ನಲ್ಲಿ ನೋಂದಣಿ ಆಗಬೇಕು. ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ಡಿಜಿಟಲ್ ಇ–ಸ್ಟ್ಯಾಂಪ್ ಅನ್ನು ಪಡೆಯುವ ವಿಧಾನವನ್ನು ವಿವರಿಸಿದೆ.

- ಈಗಾಗಲೇ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದರೆ, ಮತ್ತೆ ಹೊಸದಾಗಿ ಮಾಡಬೇಕಾದ ಅಗತ್ಯವಿಲ್ಲ. ನೇರವಾಗಿ ಪೋರ್ಟಲ್‌ಗೆ ಲಾಗಿನ್ ಆಗಬಹುದು
- ಲಾಗಿನ್ ಆದ ಬಳಿಕ ‘ಸ್ಟಾರ್ಟ್ ನ್ಯೂ ಅಪ್ಲಿಕೇಷನ್’ ಎಂಬ ಕೊಂಡಿ ಒತ್ತಿದರೆ, ವಿವಿಧ ಸೇವೆಗಳ ಪಟ್ಟಿ ತೋರಿಸುತ್ತದೆ. ಅದರಲ್ಲಿ ಡಿಜಿಟಲ್ ‘ಇ–ಸ್ಟ್ಯಾಂಪ್’ ಆಯ್ಕೆ ಒತ್ತಬೇಕು

- ಸ್ಟ್ಯಾಂಪ್ ಡೌನ್‌ಲೋಡ್ ಮಾಡಿಕೊಳ್ಳಲು ಏಳು ಹಂತಗಳನ್ನು ಪೂರೈಸಬೇಕಾಗುತ್ತದೆ
- ಮೊದಲ ಹಂತದಲ್ಲಿ ದಾಖಲೆಯ ವಿಧ (ಉದಾ: ಬಾಡಿಗೆ ಒಪ್ಪಂದ, ಅಫಿಡವಿಟ್, ಮಾರಾಟ ಒಪ್ಪಂದ ಮುಂತಾದ 60 ವಿಧಗಳಿವೆ) ಮತ್ತು ಉಪ ವಿಧಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ನಂತರ ವಿವರಗಳನ್ನು ಭರ್ತಿ ಮಾಡಬೇಕು
- ಅರ್ಜಿದಾರರು ಹಾಗೂ ಸಹಿ ಮಾಡುವ ಎಲ್ಲರೂ ಆಧಾರ್ ಆಧಾರಿತ ಪರಿಶೀಲನೆ ಮೂಲಕ ಗುರುತು ದೃಢೀಕರಿಸಬೇಕು

(ಆಸ್ತಿ ಸಂಬಂಧಿತ ದಾಖಲೆಗಳಿದ್ದರೆ, ಸರ್ಕಾರಿ ದತ್ತಾಂಶದಲ್ಲಿ ದಾಖಲಾಗಿರುವ ಆಸ್ತಿ ಮಾಹಿತಿಯನ್ನು ಈ ವ್ಯವಸ್ಥೆ ಸ್ವಯಂಚಾಲಿತವಾಗಿ ಪರಿಶೀಲಿಸುತ್ತದೆ)

- ಸ್ಟ್ಯಾಂಪ್ ಶುಲ್ಕ ಲೆಕ್ಕ ಹಾಕಿದ ನಂತರ, ಖಜಾನೆ ಪಾವತಿ ಗೇಟ್‌ವೇ ಮೂಲಕ ಪಾವತಿ ಮಾಡಬೇಕು
- ಶುಲ್ಕ ಪಾವತಿ ದೃಢಪಟ್ಟ ನಂತರ, ಪೋರ್ಟಲ್ ಡಿಜಿಟಲ್ ಇ–ಸ್ಟ್ಯಾಂಪ್ ಸೃಷ್ಟಿಸುತ್ತದೆ. ಇದರಲ್ಲಿ ವಿಶಿಷ್ಟ ಕ್ರಮ ಸಂಖ್ಯೆ, ಕ್ಯೂಆರ್ ಕೋಡ್, ಡಿಜಿಟಲ್ ವಾಟರ್‌ಮಾರ್ಕ್ ಇರುತ್ತದೆ
- ದಾಖಲೆಗಳಿಗೆ ಸಹಿ ಹಾಕುವವರಿಗೆ ಅವರ ಮೊಬೈಲ್‌ಗೆ ಇ–ಸಹಿ ಹಾಕುವ ಲಿಂಕ್ ಬರುತ್ತದೆ. ಅದರಲ್ಲಿ ಆಧಾರ್ ಇ–ಸಹಿ ಅಥವಾ ಡಿಜಿಟಲ್ ಸಹಿ ಪ್ರಮಾಣಪತ್ರದ ಮೂಲಕ ಸಹಿ ಹಾಕಬೇಕಾಗುತ್ತದೆ
- ಎಲ್ಲರೂ ಸಹಿ ಮಾಡಿದ ನಂತರ ಅಂತಿಮ ಡಿಜಿಟಲ್ ಇ–ಸ್ಟ್ಯಾಂಪ್ ಸಿಗುತ್ತದೆ. ಇದನ್ನು ಡೌನ್‌ಲೋಡ್ ಮಾಡಿ ನೋಂದಣಿಗೆ ಬಳಸಬಹುದು

ಛಾಪಾ ಕಾಗದದಿಂದ ಡಿಇಎಸ್‌ವರೆಗೆ

ಹಿಂದೆ ನೋಂದಣಿಗಾಗಿ ಛಾಪಾ ಕಾಗದಗಳನ್ನು ಬಳಸಲಾಗುತ್ತಿತ್ತು. ಇವುಗಳನ್ನು ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ಇಂಡಿಯಾ ಸೆಕ್ಯೂರಿಟಿ ಪ್ರೆಸ್‌ನಲ್ಲಿ ಮುದ್ರಿಸಲಾಗುತ್ತಿತ್ತು. ಪರವಾನಗಿ ಪಡೆದ ಸ್ಟ್ಯಾಂಪ್ ಮಾರಾಟಗಾರರು ಈ ಛಾಪಾ ಕಾಗದಗಳನ್ನು ನಾಗರಿಕರಿಗೆ ಒದಗಿಸುತ್ತಿದ್ದರು. 2000ದಲ್ಲಿ ನಕಲಿ ಛಾಪಾ ಕಾಗದ ಹಗರಣ ಬೆಳಕಿಗೆ ಬಂತು. ₹32 ಸಾವಿರ ಕೋಟಿ ಮೌಲ್ಯದ ಈ ಹಗರಣದ ಹಿಂದಿದ್ದ ಕರೀಂ ಲಾಲ್ ತೆಲಗಿಯನ್ನು 2001ರಲ್ಲಿ ಬಂಧಿಸಲಾಯಿತು. ಆ ಬಳಿಕವೂ ಕೆಲವು ತಿಂಗಳು ಛಾಪಾ ಕಾಗದ ಬಳಕೆಯಲ್ಲಿತ್ತು. 2003ರ ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರ ಛಾಪಾ ಕಾಗದದ ಬಳಕೆಯನ್ನು ಸ್ಥಗಿತಗೊಳಿಸಿ ಆದೇಶ ಹೊರಡಿಸಿತು.

ಆ ಬಳಿಕ ದಾಖಲೆಯ ವಿವರಗಳನ್ನು ₹2 ಮೌಲ್ಯದ ದಾಖಲೆ ಹಾಳೆ (ಡಾಕ್ಯುಮೆಂಟ್ ಶೀಟ್) ಅಥವಾ ಖಾಲಿ ಹಾಳೆಯಲ್ಲಿ ಬರೆಯುವ ಮತ್ತು ಆಯಾ ವ್ಯಾಪ್ತಿಯ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಅಥವಾ ಅಧಿಕೃತ ಬ್ಯಾಂಕುಗಳಲ್ಲಿ ಛಾಪಾ ಕಾಗದದ ಸುಂಕ (ಸ್ಟ್ಯಾಂಪ್ ಡ್ಯೂಟಿ) ಪಾವತಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು.

ಕಂದಾಯ ಇಲಾಖೆಯು 2008ರಲ್ಲಿ ರಾಜ್ಯದಲ್ಲಿ ಪ್ರಾಯೋಗಿಕವಾಗಿ ಇ–ಸ್ಟ್ಯಾಂಪ್ ವ್ಯವಸ್ಥೆ ಪರಿಚಯಿಸಿತು. 2009ರಲ್ಲಿ ಇದನ್ನು ರಾಜ್ಯದಾದ್ಯಂತ ವಿಸ್ತರಿಸಲಾಯಿತು. ಭದ್ರತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುವ ದಿಸೆಯಲ್ಲಿ ಇದು ಮಹತ್ವದ ಹೆಜ್ಜೆ ಎಂದು ಇಲಾಖೆ ಅಂದು ಪ್ರತಿಪಾದಿಸಿತ್ತು.

ರಾಜ್ಯದಾದ್ಯಂತ ಇ-ಸ್ಟ್ಯಾಂಪ್‌ಗಳ ವಿತರಣೆ ಜವಾಬ್ದಾರಿಯನ್ನು ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್‌ಗೆ (ಎಸ್‌ಎಚ್‌ಸಿಐಎಲ್) ನೀಡಲಾಗಿತ್ತು.

ಇ–ಸ್ಟ್ಯಾಂಪ್‌ನಲ್ಲೂ ವಂಚನೆ: ಹೆಚ್ಚು ಸುರಕ್ಷಿತ ಮತ್ತು ಪಾರದರ್ಶಕ ಎಂದು ಬಿಂಬಿಸಲಾಗಿದ್ದ ಇ–ಸ್ಟ್ಯಾಂಪ್ ವ್ಯವಸ್ಥೆಯಲ್ಲೂ ಲೋಪಗಳು ಕಂಡುಬಂದವು.

ಇ-ಸ್ಟ್ಯಾಂಪ್ ಪ್ರಮಾಣಪತ್ರಗಳನ್ನು ಜೆರಾಕ್ಸ್ ಪಡೆದು ನಕಲು ಮಾಡುವುದು ಅಥವಾ ಅವುಗಳಂತೆಯೇ ಕಾಣುವ ಪ್ರತಿಗಳನ್ನು ಸೃಷ್ಟಿಸುವ ಪ್ರಕರಣಗಳು ವರದಿಯಾದವು. ಒಂದು ಉದ್ದೇಶಕ್ಕಾಗಿ ಖರೀದಿಸಿದ ಇ–ಸ್ಟ್ಯಾಂಪ್ ಅನ್ನು ಬೇರೆ ರೀತಿಯ ದಾಖಲೆಗೆ ಬಳಸುವ ಪ್ರಸಂಗಗಳು ನಡೆಯುತ್ತಿರುವುದು ಕೂಡ ಗಮನಕ್ಕೆ ಬಂದವು.

ಇಂತಹ ಕೃತ್ಯಗಳ ಮೂಲಕ ಸ್ಟ್ಯಾಂಪ್ ಶುಲ್ಕ ಪಾವತಿಯನ್ನು ತಪ್ಪಿಸಿ ಇಲಾಖೆಗೆ ವಂಚಿಸುತ್ತಿರುವ ಘಟನೆಗಳು ರಾಜ್ಯದಾದ್ಯಂತ ನಡೆದಿವೆ. ಇದು ರಾಜ್ಯದ ಬೊಕ್ಕಸಕ್ಕೆ ನಷ್ಟವನ್ನು ಉಂಟುಮಾಡಿತ್ತು. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಡಿಜಿಟಲ್ ಇ–ಸ್ಟ್ಯಾಂಪ್ ವ್ಯವಸ್ಥೆ ಜಾರಿಗೆ ತರಲಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದ್ದಾರೆ.

ರಾಷ್ಟ್ರೀಯ

ಅಯೋಧ್ಯೆ: ಮ್ಯೂಸಿಯಂ ವಿಸ್ತರಣೆಗೆ ಅನುಮತಿ



ಲಖನೌ, ಉತ್ತರಪ್ರದೇಶ (ಪಿಟಿಐ): ಅಯೋಧ್ಯೆಯಲ್ಲಿ ಪ್ರಸ್ತಾವಿತ ದೇವಾಲಯ ವಸ್ತು ಸಂಗ್ರಹಾಲಯ ವಿಸ್ತರಿಸಲು ಉತ್ತರ ಪ್ರದೇಶ ಸಚಿವ ಸಂಪುಟವು ಮಂಗಳವಾರ ಒಪ್ಪಿಗೆ ನೀಡಿದೆ. 52 ಎಕರೆ ಜಾಗದಲ್ಲಿ ಸಂಗ್ರಹಾಲಯವು ನಿರ್ಮಾಣವಾಗಲಿದ್ದು, ಟಾಟಾ ಸನ್ಸ್ ಸಂಸ್ಥೆಯು ಅಭಿವೃದ್ಧಿಪಡಿಸಿ, ನಿರ್ವಹಿಸಲಿದೆ.

ಯೋಗಿ ಆದಿತ್ಯನಾಥ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸಂಸದೀಯ ವ್ಯವಹಾರಗಳ ಖಾತೆ ಸಚಿ ಸುರೇಶ್ ಕುಮಾರ್ ಖನ್ನಾ ಅವರು ಈ ಕುರಿತು ಮಾಹಿತಿ ನೀಡಿದ್ದಾರೆ.

‘ಅತ್ಯಾಧುನಿಕ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ಟಾಟಾ ಸನ್ಸ್ ಸಂಸ್ಥೆ ಆಸಕ್ತಿ ವಹಿಸಿದ್ದು, ವಿಶೇಷ ಉದ್ದೇಶ ಘಟಕದ (ಎಸ್‌ಪಿವಿ) ಮೂಲಕ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯ (ಸಿಎಸ್‌ಆರ್) ಅಡಿಯಲ್ಲಿ ನಿರ್ವಹಿಸಲು ಒಪ್ಪಿಗೆ ನೀಡಿದೆ. ಎಸ್‌ಪಿವಿಯಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಪ್ರತಿನಿಧಿಗಳು ಇರಲಿದ್ದಾರೆ’ ಎಂದು ಖನ್ನಾ ತಿಳಿಸಿದ್ದಾರೆ.

ಮ್ಯೂಸಿಯಂ ನಿರ್ಮಾಣ ಹಾಗೂ ಜಾಗ ಮಂಜೂರಾತಿ ಕುರಿತಂತೆ 2024ರ ಸೆಪ್ಟೆಂಬರ್ 3ರಂದೇ ಕೇಂದ್ರ, ರಾಜ್ಯ ಸರ್ಕಾರ ಹಾಗೂ ಟಾಟಾ ಸನ್ಸ್‌ನ ಪ್ರತಿನಿಧಿಗಳ ಜೊತೆ ಒಡಂಬಡಿಕೆ ನಡೆದಿತ್ತು. ಇದರಂತೆ, ಅಯೋಧ್ಯೆಯ ಜಮತಾರಾ ಗ್ರಾಮದಲ್ಲಿ 25 ಎಕರೆ ಜಮೀನು ಮಂಜೂರು ಮಾಡಲು ರಾಜ್ಯ ಸರ್ಕಾರ ಒಪ್ಪಿಗೆ ನೀಡಿತ್ತು. ಯೋಜನೆಯ ವಾಸ್ತುಶಿಲ್ಪದ ಭವ್ಯತೆಯನ್ನು ಜಾರಿಗೊಳಿಸಲು ಹೆಚ್ಚುವರಿ ಜಮೀನು ನೀಡುವಂತೆ ಟಾಟಾ ಸನ್ಸ್ ಸಂಸ್ಥೆ ಮನವಿ ಮಾಡಿತ್ತು.

ಅದರ ಅನ್ವಯ, ಹೆಚ್ಚುವರಿಯಾಗಿ 27.102 ಎಕರೆ ಭೂಮಿಯನ್ನು ವಸತಿ ಹಾಗೂ ನಗರಾಭಿವೃದ್ಧಿ ಇಲಾಖೆಯಿಂದ ಉಚಿತವಾಗಿ ನೀಡಲು ನಿರ್ಧರಿಸಲಾಗಿದೆ. 52.102 ಎಕರೆ ಭೂಮಿಯಲ್ಲಿ ಒಟ್ಟು ಯೋಜನೆಯು ಜಾರಿಯಾಗಲಿದೆ’ ಎಂದು ಸಚಿವ ಸುರೇಶ್ ಕುಮಾರ್ ಖನ್ನಾ ತಿಳಿಸಿದ್ದಾರೆ.

ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ದೇವಾಲಯದಲ್ಲಿ ಪ್ರಾಣ-ಪ್ರತಿಷ್ಠೆಯಾದ ಬಳಿಕ ಭಕ್ತರ ಸಂಖ್ಯೆಯು ತೀವ್ರ ಸಂಖ್ಯೆಯಲ್ಲಿ ಏರಿಕೆಯಾಗಿದ್ದು, ನಿತ್ಯವೂ 2 ಲಕ್ಷದಿಂದ 4 ಲಕ್ಷ ಭಕ್ತರು ನಗರಕ್ಕೆ ಭೇಟಿ ನೀಡುತ್ತಿದ್ದಾರೆ.

ಬಿಹಾರ: ಬಿಜೆಪಿಯ ಪ್ರೇಮ್ ಕುಮಾರ್ ಸ್ಪೀಕರ್

ಪ್ರಜಾವಾಣಿ ವಾರ್ತೆ

ಬಿಹಾರ ವಿಧಾನಸಭೆಯ ನೂತನ ಸ್ಪೀಕರ್ ಪ್ರೇಮ್ ಕುಮಾರ್ ಅವರಿಗೆ ವಿಪಕ್ಷ ನಾಯಕ ತೇಜಸ್ವಿ ಯಾದವ್ ಅವರು ಶುಭ ಕೋರಿದರು —ಪಿಟಿಐ ಚಿತ್ರ

ಪಟ್ನಾ: ಗಯಾ ಕ್ಷೇತ್ರದ ಬಿಜೆಪಿಯ ಶಾಸಕ ಪ್ರೇಮ್ ಕುಮಾರ್ ಅವರು ಬಿಹಾರ ವಿಧಾನಸಭೆಯ ಸ್ಪೀಕರ್ ಆಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಸ್ಪೀಕರ್ ಆಗಿ ಆಯ್ಕೆಯಾದ ಅವರನ್ನು ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ವಿಪಕ್ಷ ತೇಜಸ್ವಿ ಯಾದವ್ ಅವರು ಸಂಪ್ರದಾಯದಂತೆ ಸ್ಪೀಕರ್ ಕುರ್ಚಿಗೆ ಕರೆದುಕೊಂಡು ಬಂದರು.

ಈ ವೇಳೆ ಮಾತನಾಡಿದ ತೇಜಸ್ವಿ, ‘ನೀವು ಬುದ್ಧನ ಭೂಮಿಯಿಂದ ಬಂದಿದ್ದೀರಿ. ವಿರೋಧ ಪಕ್ಷದೊಂದಿಗೆ ನ್ಯಾಯಯುತವಾಗಿ ವರ್ತಿಸುತ್ತೀರಿ ಮತ್ತು ವಿಪಕ್ಷಗಳ ಮಾತನ್ನು ತಾಳ್ಮೆಯಿಂದ ಆಲಿಸುವಿರಿ ಎಂದು ಆಶಿಸುತ್ತೇವೆ’ ಎಂದು ಹೇಳಿದರು.

ಪ್ರೇಮ್ ಕುಮಾರ್ ಅವರು ಬರೋಬ್ಬರಿ ಒಂಬತ್ತು ಬಾರಿ ಗಯಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ. 1990ರಲ್ಲಿ ಮೊದಲ ಬಾರಿಗೆ ಶಾಸಕನಾಗಿ ಆಯ್ಕೆಯಾಗಿದ್ದ ಅವರು, ಅಂದಿನಿಂದ ಯಾವುದೇ ಚುನಾವಣೆಗಳಲ್ಲಿ ಸೋತಿಲ್ಲ.

‘ಸರ್ವಾನುಮತದ ಆಯ್ಕೆಯಿಂದ ಸಂತೋಷವಾಗಿದೆ. ಸರ್ಕಾರ ಮತ್ತು ವಿಪಕ್ಷಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಲು ಮತ್ತು ನಿಯಮಗಳ ಪ್ರಕಾರ ಕಲಾಪಗಳನ್ನು ನಡೆಸುತ್ತೇನೆ. ಭವಿಷ್ಯದ ಪೀಳಿಗೆಗೆ ಮಾದರಿಯಾಗುವೆ’ ಎಂದು ಪ್ರೇಮ್ ಕುಮಾರ್ ಹೇಳಿದರು.

ಈ ಹಿಂದೆ ನಿತೀಶ್ ಸಂಪುಟದಲ್ಲಿ ನಗರಾಭಿವೃದ್ಧಿ ಮತ್ತು ಕೃಷಿ ಖಾತೆ ಸಚಿವರಾಗಿ ಕಾರ್ಯನಿರ್ವಹಿಸಿದ್ದ ಅವರು, ಇತಿಹಾಸದಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹೂವಿನಿಂದ ಅಲಂಕರಿಸಲಾದ ವಾಹನವೊಂದರ ಸುತ್ತ ಭಾರಿ ಸಂಖ್ಯೆಯಲ್ಲಿ ಜನರು ಜಮಾಯಿಸಿರುವ ವಿಡಿಯೊ ತುಣುಕೊಂದನ್ನು ಇನ್‌ಸ್ಟಾಗ್ರಾಂನಲ್ಲಿ ಬಳಕೆದಾರರೊಬ್ಬರು ಪೋಸ್ಟ್ ಮಾಡಿದ್ದು, ಇದು ಇತ್ತೀಚೆಗೆ ನಿಧನರಾದ ಬಾಲಿವುಡ್‌ನ ಹಿರಿಯ ನಟ ಧರ್ಮೇಂದ್ರ ಅವರ ಅಂತಿಮಯಾತ್ರೆಯ ವಿಡಿಯೊ ಎಂದು ಪ್ರತಿಪಾದಿಸಲಾಗಿದೆ. ಆದರೆ, ಇದು ಸುಳ್ಳು.



ವಿಡಿಯೊ ತುಣುಕಿನ ಕೀಫ್ರೇಮ್ ಒಂದನ್ನು ರಿವರ್ಸ್ ಇಮೇಜ್ ವಿಧಾನದಲ್ಲಿ ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ, ಇನ್ನೂ ಕೆಲವರು ಇದೇ ವಿಡಿಯೊವನ್ನು ಹಂಚಿಕೊಂಡಿರುವುದು ಕಂಡು ಬಂತು. ಇನ್ನಷ್ಟು ಹುಡುಕಾಟ ನಡೆಸಿದಾಗ, ಇನ್‌ಸ್ಟಾಗ್ರಾಂನಲ್ಲಿ ಸೆಪ್ಟೆಂಬರ್ 21ರಂದು ಪೋಸ್ಟ್ ಮಾಡಲಾದ ಇದೇ ವಿಡಿಯೊ ಸಿಕ್ಕಿತು. ಅದರ ಶೀರ್ಷಿಕೆಯ ಪ್ರಕಾರ, ಅದು ಅಸ್ಸಾಂನ ಗಾಯಕ ಜುಬೀನ್ ಗರ್ಗ್ ಅವರ ಅಂತಿಮಯಾತ್ರೆಯ ವಿಡಿಯೊ. ಹಾಗಾಗಿ, ಈ ವಿಡಿಯೊ ಇತ್ತೀಚಿನದ್ದಲ್ಲ ಮತ್ತು ಧರ್ಮೇಂದ್ರ ಅವರಿಗೆ ಸಂಬಂಧಿಸಿದ್ದಲ್ಲ ಎಂಬುದು ಸ್ಪಷ್ಟವಾಯಿತು. ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಟ ನಡೆಸಿದಾಗ, ಸೆಪ್ಟೆಂಬರ್ 22ರಂದು ಇಂಡಿಯಾ ಟೈಮ್ಸ್ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಕಟವಾದ ವಿಡಿಯೊ ಸಿಕ್ಕಿತು. ಗುವಾಹಟಿಯಲ್ಲಿ ಸಾವಿರಾರು ಜನರು ಜುಬೀನ್ ಗರ್ಗ್ ಅವರಿಗೆ ಭಾವುಕ ವಿದಾಯ ಹೇಳಿದರು ಎಂದು ವಿಡಿಯೊದ ಒಕ್ಕಣೆಯಲ್ಲಿತ್ತು. ಬೇರೆ ಮಾಧ್ಯಮಗಳು ಕೂಡ ಈ ಬಗ್ಗೆ ವರದಿ ಮಾಡಿದ್ದವು. ಧರ್ಮೇಂದ್ರ ಅವರ ನಿಧನ ಕುರಿತಾಗಿ ಇನ್ನಷ್ಟು ವಿವರಗಳನ್ನು ಹುಡುಕಿದಾಗ, ಅವರ ಅಂತ್ಯಸಂಸ್ಕಾರ ಮುಂಬೈನ ಪವನ್ ಹಂಸ ಚಿತಾಗಾರದಲ್ಲಿ ನಡೆದಿರುವ ಬಗ್ಗೆ ವರದಿಗಳು ಸಿಕ್ಕವು. ಹೀಗಾಗಿ, ಇದು ಹಳೆಯ ವಿಡಿಯೊವಾಗಿದ್ದು ಧರ್ಮೇಂದ್ರ ಅವರಿಗೆ ಸಂಬಂಧಿಸಿದ್ದಲ್ಲ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಖಾಲಿ ಕುರ್ಚಿಯ ಕಥೆ

ನುಡಿ ಬೆಳಗು

ವಾಸುದೇವ ನಾಡಿಗ್

ಅಲ್ಲಿ ಗುರು ಶಿಷ್ಯರೆಲ್ಲರೂ ಊಟಕ್ಕೆ ಕುಳಿತುಕೊಳ್ಳುವ ಜಾಗದಲ್ಲಿ ಒಂದು ಖಾಲಿ ಕುರ್ಚಿ ಸದಾ ಇಡಲಾಗುತ್ತಿತ್ತು. ಶಿಷ್ಯ ಸಮೂಹಕ್ಕೆ ತಮ್ಮ ಗುರುಗಳು ಯಾವತ್ತೂ ಆ ಖಾಲಿ ಕುರ್ಚಿಯಲ್ಲಿ ಕೂಡದ ಬಗ್ಗೆ ದಿನವೂ ಕುತೂಹಲ. ಆ ಗುರುಗಳು ಆ ಕುರ್ಚಿಯಲ್ಲಿ ಕೂಡುತ್ತಾರೆಂದೇ ನಿತ್ಯದ ನಿರೀಕ್ಷೆ. ಆದರೆ ಯಾರೊಬ್ಬರೂ ಏಕೆ ಏನು ಎಂದು ಪ್ರಶ್ನೆ ಮಾಡುವ ಧೈರ್ಯ ತೋರುತ್ತಿರಲಿಲ್ಲ. ಗುರುಗಳು ಕೂಡಾ ಎಲ್ಲ ಶಿಷ್ಯಂದಿರ ಜೊತೆಗೆ ತಮಗೆ ಆ ಖಾಲಿ ಕುರ್ಚಿ ಕಾಣುವ ಹಾಗೆ ಅದಕ್ಕೆ ಅಭಿಮುಖವಾಗಿಯೇ ಅದನ್ನು ನೋಡುತ್ತ ಕೂತು ಬಿಡುತ್ತಿದ್ದರೇ ಹೊರತು ಅದರ ಮೇಲೆ ಕೂಡಲು ಮನಸು ಮಾಡಲೇ ಇಲ್ಲ. ಗುರುಗಳು ಬಹಳ ಮೌನಿ. ಅನಗತ್ಯ ಮಾತು ಕಮ್ಮಿ.

ಅಂತೂ ಇಂತೂ ಒಬ್ಬ ವಿದ್ಯಾರ್ಥಿ ಧೈರ್ಯ ಮಾಡೀ ಕೇಳಿಯೇ ಬಿಟ್ಟ. ‘ಗುರುಗಳೇ ಆ ಕುರ್ಚಿ ನಿಮಗಾಗಿಯೇ ಅಲ್ಲವೆ? ನೀವೇಕೆ ಅದರ ಮೇಲೆ ಕೂಡುವುದಿಲ್ಲ’ ಎಂಬ ಪ್ರಶ್ನೆಗೆ ಅವರು ಕೊಟ್ಟ ಉತ್ತರವೇ ಬಹಳ ಭಿನ್ನವಾಗಿತ್ತು. ‘ಅದು ಕೇವಲ ಖಾಲಿ ಕುರ್ಚಿಯಲ್ಲ ಮತ್ತು ಅದರ ಮೇಲೆ ಕೂಡುವುದು ಸುಲಭವಲ್ಲ. ಎಲ್ಲವನ್ನು ಬಿಟ್ಟುಕೊಟ್ಟು ಖಾಲಿಯಾಗಬೇಕು ಎಂದು ಸದಾ ನನ್ನನ್ನು ಎಚ್ಚರಿಸುವ ಜಾಗವದು. ನಾನು ಪ್ರತಿ ನಿತ್ಯ ಏನಾದರೂ ಒಂದು ಕೆಲಸ ಮಾಡುತ್ತಲೇ ಇರುತ್ತೇನೆ. ಬೋಧನೆ, ಸಹಾಯ, ಸಾಂತ್ವನ, ಅಡುಗೆ, ತೋಟಗಾರಿಕೆ, ಪ್ರಾಣಿಗಳಿಗೆ ಊಟ ಹಾಕುವುದು ಇತ್ಯಾದಿ. ಆದರೆ ನಾನು ಏನೇ ಮಾಡಿದರೂ ಅದರ ಒಳಗೆ ಅಹಂಕಾರ ಮನೆ ಮಾಡಿರುತ್ತದೆ. ನಾನು ಮಾಡಿದೆ, ನಾನು ಧನ್ಯ, ನಾನು ಭಿನ್ನ ಹೀಗೇ ಏನಾದರೊಂದು ಭಾವಕ್ಕೆ ಅಂಟಿಕೊಂಡೇ ವ್ಯವಹರಿಸುತ್ತೇನೆ. ಪ್ರತಿ ನಿತ್ಯ ಒಂದು ಸಣ್ಣ ಸ್ವಾರ್ಥ ನನ್ನಲ್ಲಿ ಇದ್ದೇ ಇರುತ್ತದೆ. ಈ ಭಾವಗಳಿಂದ ನಾನು ಯಾವತ್ತೂ ಖಾಲಿ ಆಗುವುದೇ ಇಲ್ಲ. ನನ್ನನ್ನು ನಾನು ಪಕ್ಕಕ್ಕೆ ಇಟ್ಟು ಖಾಲಿಯಾಗಬೇಕು ಎಂಬುದನ್ನು ಆ ಖಾಲಿ ಕುರ್ಚಿ ಸದಾ ನನ್ನನ್ನು ಎಚ್ಚರಿಸುತ್ತದೆ. ನಾನು ಇನ್ನೂ ಮೃದುವಾಗಬೇಕಾಗಿದೆ. ಇನ್ನೂ ಕಲಿಯಬೇಕಾಗಿದೆ. ಇನ್ನೂ ಹಗುರಾಗಬೇಕಿದೆ. ಇನ್ನೂ ಖಾಲಿಯಾಗಬೇಕಾಗಿದೆ’.

ಇದು ಕೇವಲ ಆ ಗುರುವಿನ ಕುರ್ಚಿಯ ಕಥೆಯಲ್ಲ ಅನಿಸುತ್ತದೆ. ಪಾತ್ರ ಗುರುವಿನದು ಅಷ್ಟೇ. ನಾವೆಲ್ಲರೂ ನಮ್ಮ ಪಾತ್ರಕ್ಕಾಗಿ ಒಂದು ಕುರ್ಚಿಯನ್ನು ಆಯ್ಕೆ ಮಾಡಿಕೊಂಡಿರುತ್ತೇವೆ. ಅದನ್ನು ಖಾಲಿ ಬಿಟ್ಟು ದೂರವಿಟ್ಟು ಎಂದೂ ಯೋಚಿಸಲಾರೆವು ನೋಡಿ. ಮಾಡುವ ಕೆಲಸಗಳನ್ನು ಮಾಡುತ್ತ ನಿರ್ವಿಕಾರಗಳನ್ನು ಬಿಟ್ಟು ಕೊಟ್ಟು ಖಾಲಿ ಆಗುವುದಿದೆ ನೋಡಿ, ಅದು ಸುಲಭವಲ್ಲ. ಒಂದಿಲ್ಲೊಂದು ನಿರೀಕ್ಷೆ ಮತ್ತು ಅದು ಮಾಡುವ ಕೊರಗಿನ ಗಾಯವನ್ನು ಹೊತ್ತುಕೊಂಡೇ ನಾವು ವ್ಯವಹರಿಸುತ್ತಿರುತ್ತೇವೆ. ತಂದೆ, ತಾಯಿ, ಅಣ್ಣ, ಅಕ್ಕ, ಯಾವುದೇ ಸಂಬಂಧಗಳು ಇರಬಹುದು. ಅವೆಲ್ಲವೂ ಒಂದು ಸ್ಥಾನವೇ ಆಗಿದೆ. ನಮ್ಮೊಳಗೆ ಇಂಥ ಖಾಲಿ ಕುರ್ಚಿಯೊಂದರ ಅಗತ್ಯ ಇದೆ. ಈ ಕುರ್ಚಿ ಸದಾ ಖಾಲಿಯಾಗುವ ಎಚ್ಚರವನ್ನು ಕಲಿಸುತ್ತಲೇ ಇರುತ್ತದೆ. ನಿರೀಕ್ಷೆ ಮತ್ತು ಲಾಭದ ಜೊತೆಗೇ ಗುದ್ದಾಡುತ್ತಲೇ ಇರುವ ನಮಗೆ ಈ ಖಾಲಿ ಕುರ್ಚಿ ಹೊಸದಾಗಿ ಬಾಳಲು ಪ್ರೇರೇಪಣೆಯಾಗಬಲ್ಲದು.

ಗುಂಡಣ್ಣ



ಪದಬಂಧ 6242

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸ್ವರದಲ್ಲಿರುವ ಸ್ವಂತ ಬರವಣಿಗೆ! (5)
3.ಗೆಲುವನ್ನು ಪಡೆದವನೀತ (3)
5.ಗಾಯಕನಿಗಾದ ಪೆಟ್ಟು! (2)
6.ಬಿಡುವಿಲ್ಲದೆ ನಿರಂತರವಾದುದು (4)
8.ತರಗತಿಯಲ್ಲಿರುವ ಗುಂಪು (2)
10.ನಡುವೆ ಮಜಾ ಇದ್ದಾಗಲೇ ಈ ಸಾಂತ್ವನ! (5)
12.ತೋಳು ಇಲ್ಲಿ ಕಾಣುತ್ತಿದೆ (2)
14.ನಡುವೆ ಕರವನ್ನಿಟ್ಟ ಘಟನೆ (4)
15.ತುರಿಕೆ ಅಥವಾ ಬೊಕ್ಕೆಯೇಳುವ ಚರ್ಮರೋಗ (2)
16.ತಂದೆ ತಾಯಿ ಇರುವ ಊರು (3)
17.ಊಟದ ಸಮಾರಂಭವಿದು (5)

ಮೇಲಿಂದ ಕೆಳಕ್ಕೆ

1.ತಾನೇ ಮಾಡಿದುದು (4)
2.ಚತುರ್ವರ್ಣಗಳಲ್ಲಿ ಎರಡನೆಯ ವರ್ಗ (3)
4.ಭೇದಭಾವ ಹೀಗೆ ಬಂದಿದೆ (4)
7.ಪಾಂಡಿತ್ಯವನ್ನು ಹೊಂದಿದವಳು (3)
9.ನಡುಮನೆ ಇಲ್ಲಿದೆ (3)
10.ಸರ ತಂದವನಿಗೆ ತೋರಿದ ಆದರ (3)
11.ಪ್ರಸ್ತುತಕ್ಕೆ ಸಂಬಂಧಪಡದದು (4)
13.ಕೊನೆಗೆ ಕಾಟವಿದ್ದಾಗ ಅರಸುವುದು (4)
15.ಧಾನ್ಯ ಸಂಗ್ರಹಿಸುವ ಸ್ಥಳ (3)



6241ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕವಿ 4.ವಾಯಸ 6.ಹರಿಹರ 7.ರನ್ನ 8.ಕನ್ನಡದಕಬೀರ 11.ಕೋಟ 13.ಬಲವಂತ 15.ಕನ್ನಡ 16.ಬಕ

ಮೇಲಿಂದ ಕೆಳಕ್ಕೆ:
1.ಕಸ್ತೂರಿ 2.ಪ್ರವಾಹ 3.ಧಾರವಾಡ 5.ಸರದಾರ 6.ಹಟ್ಟಿ 8.ಕರ್ನಾಟಕ 9.ಕಲಾಬತ್ತು 10.ಪ್ಲುತ 12.ಕಡಗ 14.ವಂಚಕ

ಸುಡೊಕು 6626

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4					8	2	
8		9						5
	6					3		7
	8			1			5	
9		3	5	2	8	4		6
	5			3			8	
5		4		8			7	
2	9		1		7	5		4
		6		4			9	

6625 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ತ್ರಯೋದಶಿ ಗಂ. 12-26, **ನಕ್ಷತ್ರ:** ಭರಣಿ ಗಂ. 18-00, **ಯೋಗ:** ಪರಿಘ ಗಂ. 16-57, **ಕರಣ:** ತೈತಿಲ ಗಂ. 12-26 ವೃಶ್ಚಿಕ ಮಾಸದ 17 ನೇ ದಿನ. **ಮಳೆ ನಕ್ಷತ್ರ:** ಜ್ಯೇಷ್ಠ 1 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 - 01-30, **ಸೂರ್ಯೋದಯ:**06-42, **ಸೂರ್ಯಾಸ್ತ:**05-58, **ಮುಸ್ಲಿಂ ದಿನಾಂಕ:** 11 ಜುಮಾದುಸ್ಸಾನಿ, **ಅದೃಷ್ಟ ಸಂಖ್ಯೆ:** 2, 8

ಮೇಷ: ನಿಮ್ಮ ವ್ಯವಹಾರಗಳ ಬಗ್ಗೆ ಹೆಚ್ಚಿನ ಗಮನ ಹರಿಸುವುದು ಸರಿ ಎನಿಸಲಿದೆ. ಧರ್ಮ ವಿರೋಧಿ ಕಾರ್ಯಗಳನ್ನು ಮಾಡದಿರಿ. ಅಜೀರ್ಣ ಸಮಸ್ಯೆಯನ್ನು ಎದುರಿಸಿ ಅಧಿಕವಾಗಿ ಆಯಾಸವಾಗಬಹುದು.

ವೃಷಭ: ಮುಂದಿನ ಗುರಿ ಸಾಧನೆಗೆ ಇಂದು ಅತಿ ಮುಖ್ಯವಾದ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಸಮಾಜದಲ್ಲಿ ಬದಲಾವಣೆ ತರುವ ವಿಚಾರವಾಗಿ ಕ್ರಾಂತಿಕಾರಿ ನಡೆಯೊಂದನ್ನು ಕೈಗೊಳ್ಳುವಿರಿ. ಮಹಾಗಣಪತಿಯನ್ನು ಆರಾಧಿಸಿ.

ಮಿಥುನ: ನಿಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಆಪ್ತರು ತಿಳಿಸಿಕೊಡುವರು. ವಕೀಲರು, ನ್ಯಾಯಾಂಗ ಇಲಾಖೆ ಅಧಿಕಾರಿಗಳಿಗೆ ಹೆಚ್ಚಿನ ಪ್ರಗತಿ. ಭೋಜನದ ಸಮಯವು ಹೆಚ್ಚು ಕಡಿಮೆ ಆಗುವುದು.

ಕರ್ಕಾಟಕ: ನಿಮ್ಮ ತಪ್ಪುಗಳನ್ನು ಸರಿಪಡಿಸುವವರ ಮೇಲೆ ಬೇಸರ ಮಾಡಿಕೊಳ್ಳಬೇಡಿ. ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಲಾಭದ ದಿನವಾಗಿರುತ್ತದೆ. ಸಾಕುಪ್ರಾಣಿಯ ಅನಾರೋಗ್ಯ ನಿದ್ದೆಗೆಡಿಸಲಿದೆ.

ಸಿಂಹ: ಮಧ್ಯವರ್ತಿಗಳ ಅತಿ ಆಸೆಯಿಂದ ರೈತರಿಗೆ ಲಾಭವಿರುವುದಿಲ್ಲ. ಅದಕ್ಕಾಗಿ ನೇರವಾಗಿ ರೈತಮಾರುಕಟ್ಟೆಯಲ್ಲಿ ವ್ಯವಹಾರ ನಡೆಸಿ. ನ್ಯಾಯಾಲಯದ ಕಾರ್ಯ ಕಲಾಪಗಳಲ್ಲಿ ಹೊಸತನ ಕಂಡುಬರಲಿದೆ.

ಕನ್ಯಾ: ಚಕ್ರವ್ಯೂಹದಲ್ಲಿ ಸಿಲುಕಿದ ನಿಮಗೆ ಅದನ್ನು ಭೇದಿಸುವ ಉಪಾಯವು ಮಿತ್ರರಿಂದ ಸಿಗುತ್ತದೆ. ನಿಮ್ಮದೇ ನಿರೀಕ್ಷೆಯಲ್ಲಿರುವ ಕುಟುಂಬದ ವ್ಯಕ್ತಿಗಳಿಗೆ ನಿಮ್ಮ ಬಿಗುವಿನ ದಿನಚರಿಯಿಂದಾಗಿ ಸ್ವಲ್ಪ ಬೇಸರ ಉಂಟಾಗಬಹುದು.

ತುಲಾ: ನಿಮ್ಮೊಳಗಿರುವ ಮಾತನ್ನು ಭಯವಿಲ್ಲದೇ ತಿಳಿಸಿರುವುದರಿಂದ ಹೆಚ್ಚಿನ ವ್ಯಾಪಾರವನ್ನು ಗಿಟ್ಟಿಸಿಕೊಳ್ಳುವಿರಿ. ಮಕ್ಕಳಿಂದ ದುಬಾರಿ ವಸ್ತುಗಳ ಖರೀದಿಯ ಒತ್ತಡ ಬರುವುದು. ಆಫೀಸಿನ ಕೆಲಸ ಕಾರ್ಯಗಳು ಹೆಚ್ಚೆನಿಸುವುದು.

ವೃಶ್ಚಿಕ: ಎಲ್ಲ ಕಾರ್ಯಗಳ ವೈಫಲ್ಯಕ್ಕೆ ಪ್ರಧಾನ ಕಾರಣವಾಗಿ ನಿಮ್ಮ ಅನುಭವದ ಕೊರತೆಯಾಗಿರುತ್ತದೆ. ವೈಫಲ್ಯದಿಂದ ದುಃಖಿತರಾಗದೇ ಪುನಃ ಪ್ರಯತ್ನಿಸಿ. ನೆಂಟರಿಷ್ಟರ ಆಗಮನ ಮನೆಯಲ್ಲಿ ಹಬ್ಬದ ವಾತಾವರಣವನ್ನು ಮೂಡಿಸಲಿದೆ.

ಧನು: ಈ ದಿನ ಉದ್ಯೋಗಾವಕಾಶದ ದೃಷ್ಟಿಯಿಂದ ಬಹಳ ಮಹತ್ವಪೂರ್ಣವಾಗಿರುತ್ತದೆ. ಬಂಗಾರ ಖರೀದಿಸುವ ಬಗ್ಗೆ ಮನೆಯಲ್ಲಿ ಮಾತುಕತೆ ನಡೆಯುವುದು. ಜಗನ್ಮಾತೆಯನ್ನು ಆರಾಧಿಸಿ ಶುಭ ಉಂಟಾಗುವುದು.

ಮಕರ: ಮಹತ್ವಾಕಾಂಕ್ಷೆ ಈಡೇರಿಸಿ ಕೊಳ್ಳುವ ಪ್ರಯತ್ನದಲ್ಲಿ ಸಕಾರಾತ್ಮಕ ದೃಷ್ಟಿಕೋನವಿರಲಿ. ಭಾವನಾತ್ಮಕ ಸಂಬಂಧಗಳನ್ನು ಬೆಳೆಸಲು ಸೂಕ್ತ ಕಾಲವಾಗಿದೆ. ನೀವು ವಹಿಸಿಕೊಂಡ ಜವಾಬ್ದಾರಿ ಎಲ್ಲದಕ್ಕಿಂತ ಮುಖ್ಯವಾಗುತ್ತದೆ.

ಕುಂಭ: ಕೇವಲ ನಿಮ್ಮ ಆಲಸ್ಯತನಕ್ಕೋಸ್ಕರವಾಗಿ ಕೆಲಸ ಕಾರ್ಯಗಳನ್ನು ಮುಂದೂಡುವುದು ಸರಿಯಲ್ಲ. ಕೊಡು ಕೊಳ್ಳುವ ವಿಚಾರದಲ್ಲಿ ಜಾಗರೂಕರಾಗಿರಿ. ಸಂಪಾದನೆಯಲ್ಲಿ ಕಡಿಮೆಯಿರದಿದ್ದರೂ ಆರ್ಥಿಕವಾಗಿ ಚಿಂತೆಯಿರದು.

ಮೀನ: ನಿಮ್ಮ ಒಳ್ಳೆಯ ನಿರ್ಧಾರಗಳಿಗೆ ಪ್ರಭಾವಿಗಳ ಹಸ್ತಕ್ಷೇಪ ಇರಬಹುದು. ನಿಮ್ಮ ಬುದ್ಧಿಯನ್ನು ನಿಮ್ಮ ಕೈಯಲ್ಲಿ ಇಟ್ಟುಕೊಳ್ಳುವುದರಿಂದ ನಿಮ್ಮ ಅಭಿವೃದ್ಧಿಗೆ ಅನುಕೂಲ ಆಗುತ್ತದೆ. ಗೌರವಾನ್ವಿತವಾಗಿ ಬದುಕುವುದನ್ನು ರೂಢಿಸಿಕೊಳ್ಳಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ: ಹಿಂದಿನ ಅಂತ್ಯ: 26,175 | ಇಂದಿನ ಅಂತ್ಯ: 26,032 | ದಿನದ ಕನಿಷ್ಠ: 25,997 | 143

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು: 100 ಕ್ಕೆ ₹675 | 12 ಕ್ಕೆ ₹96 | ಮೈಸೂರು: 100 ಕ್ಕೆ ₹675

ಎಸ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ): ಆರ್‌ಎಸ್‌ಎಸ್-4 ₹180.50 | ಆರ್‌ಎಸ್‌ಎಸ್-5 ₹175.50 | ಗುಡ್ ಲಾಟ್ ₹163

ರಾಮನಗರ ರೇಷ್ಮೆಗೂಡು: ಮಿಶ್ರತಳಿ(ಕಿ.ಜಿ) ₹566-771 | ದ್ವಿತಳಿ (ಕಿ.ಜಿ) ₹355-900

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ): ದೊಡ್ಡ ₹1500-2600 | ಮಧ್ಯಮ ₹1000-1500 | ಸಣ್ಣ ₹200-1000

ಕೇಂದ್ರದಿಂದ ಭಾರತ್ ಟ್ಯಾಕ್ಸಿ ಆ್ಯಪ್

ನವದೆಹಲಿ (ಪಿಟಿಐ): ಸಹಕಾರ ವ್ಯವಸ್ಥೆಯ ಅಡಿಯಲ್ಲಿ ಕೆಲಸ ನಿರ್ವಹಿಸುವ 'ಭಾರತ್ ಟ್ಯಾಕ್ಸಿ' ಆ್ಯಪ್ ಅನ್ನು ಆರಂಭಿಸುವ ಆಲೋಚನೆಯನ್ನು ಸರ್ಕಾರ ಹೊಂದಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

ಈ ಆ್ಯಪ್ ಕಾರ್ಯಾರಂಭಕ್ಕೆ ಬಂದ ನಂತರದಲ್ಲಿ ವಾಣಿಜ್ಯ ಬಳಕೆಯ ವಾಹನಗಳ ಚಾಲಕರು ಖಾಸಗಿ ಕಂಪನಿಗಳ ಮೇಲೆ ಅವಲಂಬಿತರಾಗುವುದು ಇಲ್ಲವಾಗಲಿದೆ ಎಂಬುದು ಸರ್ಕಾರದ ಲೆಕ್ಕಾಚಾರ.

'ಭಾರತ್ ಟ್ಯಾಕ್ಸಿ' ಆ್ಯಪ್‌ಅನ್ನು ಸಹಕಾರ ಟ್ಯಾಕ್ಸಿ ಕೋ-ಆಪರೇಟಿವ್ ಲಿಮಿಟೆಡ್ ನಿರ್ವಹಿಸಲಿದೆ. ಇದು ಬಹುರಾಜ್ಯ ಸಹಕಾರ ಸಂಸ್ಥೆಯಾಗಿದೆ ಎಂದು ಅಮಿತ್ ಶಾ ಅವರು ಲೋಕಸಭೆಗೆ ಮಂಗಳವಾರ ತಿಳಿಸಿದ್ದಾರೆ.

ಟ್ಯಾಕ್ಸಿ ಸೇವೆಯನ್ನು ಈ ಆ್ಯಪ್ ಮೂಲಕ ಪಡೆದುಕೊಳ್ಳುವುದು ಗ್ರಾಹಕಸ್ನೇಹಿ ಆಗಿರಲಿದೆ. ಸೇವೆಗಳಿಗೆ ಬೆಲೆ ನಿಗದಿಯು ಪಾರದರ್ಶಕವಾಗಿ ಇರಲಿದೆ.

ಈ ಆ್ಯಪ್‌ನ ಬಳಕೆಗೆ ಕಮಿಷನ್ ನೀಡುವ ಪ್ರಮೇಯ ಇರುವುದಿಲ್ಲ. ಹೀಗಾಗಿ ಚಾಲಕರಿಗೆ ಪ್ರತಿ ಬಾರಿಯೂ ಪೂರ್ಣ ಮೊತ್ತ ಪಾವತಿ ಆಗುತ್ತದೆ. ಸಹಕಾರ ಸಂಘ ಪಡೆಯುವ ಲಾಭವನ್ನು ಚಾಲಕರಿಗೆ ನೇರವಾಗಿ ಹಂಚಿಕೆ ಮಾಡಲಾಗುತ್ತದೆ. ಪಾರದರ್ಶಕ ಬೆಲೆ ನಿಗದಿ ವ್ಯವಸ್ಥೆಯು ಚಾಲಕರಿಗೆ ಹಾಗೂ ಪ್ರಯಾಣಿಕರಿಗೆ ಲಾಭದಾಯಕ ಆಗಲಿದೆ ಎಂದು ಶಾ ಅವರು ಹೇಳಿದ್ದಾರೆ.

ಭಾರತ್ ಟ್ಯಾಕ್ಸಿ ಆ್ಯಪ್ ತನ್ನ ಪ್ರಾಯೋಗಿಕ ಕಾರ್ಯಾಚರಣೆಯನ್ನು ಮಂಗಳವಾರ ದೆಹಲಿಯಲ್ಲಿ ಆರಂಭಿಸಿದೆ. ಈಗ ಈ ಆ್ಯಪ್‌ನಲ್ಲಿ 51 ಸಾವಿರಕ್ಕೂ ಹೆಚ್ಚು ಚಾಲಕರು ನೋಂದಾಯಿಸಿಕೊಂಡಿದ್ದಾರೆ.

ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ₹

ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಅನಿಶ್ಚಿತತೆಯಿಂದ ಇಳಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 43 ಪೈಸೆಯಷ್ಟು ಕುಸಿದಿದ್ದು, ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಇಳಿದಿದೆ.

ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯವು ₹89.96ಕ್ಕೆ ಇಳಿದಿದೆ. ದೇಶದ ಷೇರುಪೇಟೆಯಿಂದ ವಿದೇಶಿ ಬಂಡವಾಳದ ಹೊರಹರಿವು, ಭಾರತ ಮತ್ತು ಅಮೆರಿಕದ ನಡುವಿನ ವ್ಯಾಪಾರ ಒಪ್ಪಂದ ಬಗ್ಗೆ ಇರುವ ಅನಿಶ್ಚಿತತೆಯು ಹೂಡಿಕೆದಾರರ ಭಾವನೆ ಮೇಲೆ ಪರಿಣಾಮ ಬೀರಿದೆ.

ಮುಖ್ಯಾಂಶಗಳು
- ವಿದೇಶಿ ಬಂಡವಾಳ ಹೊರಹರಿವು ಸಹ ಇಳಿಕೆಗೆ ಕಾರಣ
- ಬ್ರೆಂಟ್ ಕಚ್ಚಾ ತೈಲದ ದರ ಶೇ 0.25ರಷ್ಟು ಇಳಿಕೆ
- ಸೆನ್ಸೆಕ್ಸ್ 503 ಮತ್ತು ನಿಫ್ಟಿ 143 ಅಂಶ ಇಳಿಕೆ

ಇವು ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾಗಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮಂಗಳವಾರ ಬೆಳಿಗ್ಗೆ ರೂಪಾಯಿ ವಿನಿಮಯ ಮೌಲ್ಯವು ಡಾಲರ್ ಎದುರು ₹89.70 ಇತ್ತು. ವಹಿವಾಟಿನ ನಡುವಿನಲ್ಲಿ ಮೌಲ್ಯವು ₹90.00 ಕೂಡ ಆಗಿತ್ತು. ಸೋಮವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ 8 ಪೈಸೆ ಇಳಿಕೆ ಆಗಿ, ₹89.53 ಆಗಿತ್ತು.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.25ರಷ್ಟು ಇಳಿಕೆ ಆಗಿದೆ. ಪ್ರತಿ ಬ್ಯಾರಲ್ ದರ 63.03 ಡಾಲರ್ ಆಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 503 ಅಂಶ ಇಳಿಕೆಯಾಗಿ, 85,138ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 143 ಅಂಶ ಕಡಿಮೆಯಾಗಿ, 26,032ಕ್ಕೆ ಕೊನೆಗೊಂಡಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಸೋಮವಾರದ ವಹಿವಾಟಿನಲ್ಲಿ ₹1,171 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

'ರೂಪಾಯಿ ಮೌಲ್ಯ ಇಳಿಕೆ; ಆರ್ಥಿಕತೆಗೆ ಉತ್ತಮ'

ನವದೆಹಲಿ (ಪಿಟಿಐ): 'ಜಾಗತಿಕ ಮಟ್ಟದ ಪ್ರಮುಖ ಕರೆನ್ಸಿಗಳ ವಿರುದ್ಧ ದೇಶದ ರೂಪಾಯಿ ಮೌಲ್ಯ ಇಳಿಕೆ ಆಗುತ್ತಿರುವುದು ಆರ್ಥಿಕತೆಗೆ ಉತ್ತಮ' ಎಂದು ನೀತಿ ಆಯೋಗದ ಉಪಾಧ್ಯಕ್ಷ ಹಾಗೂ ಅರ್ಥಶಾಸ್ತ್ರಜ್ಞ ರಾಜೀವ್ ಕುಮಾರ್ ಹೇಳಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆ ಆಗುತ್ತಿರುವುದರ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. 'ಸದೃಢವಾದ ರೂಪಾಯಿ' ಎಂದು ಕರೆಯಲ್ಪಡುವ ರೂಪಾಯಿಯನ್ನು ಆರ್ಥಿಕ ಶಕ್ತಿಯ ಸಂಕೇತವಾಗಿ ನೋಡುವ ಸಮಯ ಬಂದಿದೆ ಎಂದು ಹೇಳಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆಯು ದೇಶದ ಕಾರ್ಮಿಕ ಕೇಂದ್ರಿತ ಸರಕುಗಳ ರಫ್ತಿಗೆ ಉತ್ತೇಜನ ನೀಡಲಿದೆ. ಇದು ವಿದೇಶಿ ವಿನಿಮಯ ಸಂಗ್ರಹವನ್ನು ಹೆಚ್ಚಿಸಲಿದೆ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಗಳನ್ನು ಸೃಷ್ಟಿಸಲಿದೆ ಎಂದು 'ಎಕ್ಸ್' ನಲ್ಲಿ ಹೇಳಿದ್ದಾರೆ.

ಅಮೆರಿಕದ ನಿರ್ಬಂಧದಿಂದ ದೇಶದ ಆಮದು ಪ್ರಮಾಣ ಕುಸಿತ

ರಷ್ಯಾದಿಂದ ಕಚ್ಚಾ ತೈಲ ಆಮದು ಇಳಿಕೆ

ನವದೆಹಲಿ (ಪಿಟಿಐ): ಅಮೆರಿಕದ ನಿರ್ಬಂಧಗಳು ಜಾರಿಗೆ ಬಂದ ಬಳಿಕ ರಷ್ಯಾದಿಂದ ಭಾರತವು ಕಚ್ಚಾ ತೈಲ ಆಮದು ಮಾಡಿಕೊಳ್ಳುವ ಪ್ರಮಾಣವು ಮೂರನೇ ಒಂದರಷ್ಟು ಕಡಿಮೆ ಆಗಿದೆ.

ತೈಲ ಮಾರಾಟ ಕಂಪನಿಗಳು ಅಮೆರಿಕ ಹೇರಿರುವ ಈ ನಿರ್ಬಂಧದಿಂದ ತಪ್ಪಿಸಿ ಕೊಳ್ಳಲು ಬೇರೆ ಮೂಲಗಳಿಂದ ತೈಲ ಖರೀದಿಗೆ ಮುಂದಾಗಿವೆ. ಹೀಗಾಗಿ ಡಿಸೆಂಬರ್‌ನಲ್ಲಿ ರಷ್ಯಾದಿಂದ ಕಚ್ಚಾ ತೈಲ ಆಮದು ಮತ್ತಷ್ಟು ಇಳಿಕೆಯಾಗುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ದತ್ತಾಂಶ ವಿಶ್ಲೇಷಣಾ ಸಂಸ್ಥೆ ಕೆಪ್ಲರ್ ಪ್ರಕಾರ, ನವೆಂಬರ್‌ನಲ್ಲಿ ಭಾರತವು ರಷ್ಯಾದಿಂದ ದಿನಕ್ಕೆ ಸರಾಸರಿ 18 ಲಕ್ಷ ಬ್ಯಾರಲ್‌ಗಳಷ್ಟು ಕಚ್ಚಾ ತೈಲ ಆಮದು ಮಾಡಿಕೊಂಡಿದೆ. ಇದು ದೇಶದ ಒಟ್ಟು ಕಚ್ಚಾ ತೈಲ ಆಮದಿನ ಶೇ 35ಕ್ಕಿಂತ ಹೆಚ್ಚು.

ಅಕ್ಟೋಬರ್‌ನಲ್ಲಿ 15 ಲಕ್ಷದಿಂದ 16 ಲಕ್ಷ ಬ್ಯಾರಲ್ ರಷ್ಯಾದ ತೈಲ ಆಮದು ಆಗಿತ್ತು. ನವೆಂಬರ್ 21ರಿಂದ ಅಮೆರಿಕದ ನಿರ್ಬಂಧಗಳು ಜಾರಿಗೆ ಬಂದಿವೆ. ಇದಕ್ಕೂ ಮೊದಲು ಕಂಪನಿಗಳು ಆಮದನ್ನು ಹೆಚ್ಚಿಸಿದ್ದವು.

'ನವೆಂಬರ್ 21ಕ್ಕೆ ಮೊದಲು ತೈಲ ಕಂಪನಿಗಳು ದಿನಕ್ಕೆ 19 ಲಕ್ಷ ಬ್ಯಾರಲ್‌ನಿಂದ 20 ಲಕ್ಷ ಬ್ಯಾರಲ್‌ಗಳಷ್ಟು ತೈಲ ಖರೀದಿಸಿವೆ. ನಿರ್ಬಂಧಗಳಿಗೆ ಮುಂಚಿತವಾಗಿ ತೈಲ ಸಂಸ್ಕರಣಾ ಕಂಪನಿಗಳು ಹೆಚ್ಚು ಕಚ್ಚಾ ತೈಲವನ್ನು ಖರೀದಿಸಿವೆ. ನಿರ್ಬಂಧ ಜಾರಿಯಾದ ನಂತರ ಆಮದನ್ನು ಕಡಿಮೆ ಮಾಡಲು ಮುಂದಾಗಿವೆ' ಎಂದು ಕೆಪ್ಲರ್ ಸಂಸ್ಥೆಯ ಮುಖ್ಯ ಸಂಶೋಧನಾ ವಿಶ್ಲೇಷಕ ಸುಮಿತ್ ರಿತೋಲಿಯಾ ಹೇಳಿದ್ದಾರೆ.

ನಿರ್ಬಂಧ ಜಾರಿಯಾದ ಬಳಿಕ ತೈಲ ಆಮದು 5.70 ಲಕ್ಷ ಬ್ಯಾರಲ್‌ನಷ್ಟು ಕಡಿಮೆ ಆಗಿದ್ದು, 12.70 ಲಕ್ಷ ಬ್ಯಾರಲ್‌ಗೆ ಇಳಿದಿದೆ. ಡಿಸೆಂಬರ್‌ನಲ್ಲಿ ಆಮದು ಪ್ರಮಾಣವು ದಿನಕ್ಕೆ 10 ಲಕ್ಷ ಬ್ಯಾರಲ್‌ಗೆ ಇಳಿಕೆ ಆಗುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ಅಮೆರಿಕ ಹೇರಿರುವ ನಿರ್ಬಂಧಗಳ ಪರಿಣಾಮವಾಗಿ ರಿಲಯನ್ಸ್ ಇಂಡಸ್ಟ್ರೀಸ್, ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್), ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್‌ನಂತಹ ಕಂಪನಿಗಳು ಸದ್ಯಕ್ಕೆ ಆಮದುಗಳನ್ನು ಸ್ಥಗಿತಗೊಳಿಸಿವೆ.

ಒಟ್ಟಾರೆಯಾಗಿ, ನವೆಂಬರ್ ನಂತರ ರಷ್ಯಾದ ನೇರ ಆಮದು ಕಡಿಮೆಯಾಗುವ ನಿರೀಕ್ಷೆಯಿದ್ದರೂ, ಕುಸಿತವು ತಾತ್ಕಾಲಿಕವಾಗಿರಲಿದೆ ಎಂದು ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ



ಶ್ರೀ ಟಿ. ಶ್ರೀನಿವಾಸಮೂರ್ತಿ
ಇಂಜಿನಿಯರ್–ಇನ್–ಛೀಫ್ (ನಿವೃತ್ತಿ)
ಕರ್ನಾಟಕ ಸರ್ಕಾರ
(ಪಿ.ಡಬ್ಲ್ಯೂ.ಡಿ ಮತ್ತು ನೀರಾವರಿ ಇಲಾಖೆ)
ಇವರು ದಿನಾಂಕ 02–12–2025ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ಇವರ ಅಂತಿಮ ಸಂಸ್ಕಾರವನ್ನು ದಿನಾಂಕ 03.12.2025ರಂದು ತೊಂಡೆಗೆರೆ ಗ್ರಾಮ, ಹೆಬ್ಬೂರು ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ–572 120 ಇಲ್ಲಿ ಸಮಯ ಮಧ್ಯಾಹ್ನ 1.30ಕ್ಕೆ ನೆರವೇರಿಸಲಾಗುವುದು.
ದುಃಖತಪ್ತರು–
ಕುಟುಂಬ ವರ್ಗ ಹಾಗೂ ಬಂಧುಗಳು
ಮೊ: 98860 01282, 89048 88281

ಏಕಸ್ ಐಪಿಒ

ಬೆಂಗಳೂರು: ವಿಮಾನದ ಬಿಡಿ ಭಾಗಗಳು ಹಾಗೂ ಗ್ರಾಹಕ ಬಳಕೆ ಉಪಕರಣಗಳ ತಯಾರಿಕೆಯಲ್ಲಿ ತೊಡಗಿರುವ ಏಕಸ್ ಲಿಮಿಟೆಡ್‌ನ ಐಪಿಒ ಭಾಗವಾಗಿ ಸಣ್ಣ ಹೂಡಿಕೆದಾರರು ಬಿಡ್ ಸಲ್ಲಿಸಲು ಬುಧವಾರದಿಂದ ಅವಕಾಶ ಇರಲಿದೆ.

ಷೇರು ಬೆಲೆಯನ್ನು ₹118–₹124 ಎಂದು ನಿಗದಿ ಮಾಡಲಾಗಿದೆ. ಸಣ್ಣ ಹೂಡಿಕೆದಾರರು ಕನಿಷ್ಠ 120 ಷೇರುಗಳಿಗೆ ಬಿಡ್ ಸಲ್ಲಿಸಬೇಕು. ಬಿಡ್ ಸಲ್ಲಿಸಲು ಶುಕ್ರವಾರದವರೆಗೆ ಅವಕಾಶ ಇರಲಿದೆ. ಐಪಿಒ ಮೂಲಕ ಸಂಗ್ರಹ ಆಗುವ ಬಂಡವಾಳವನ್ನು ಕಂಪನಿಯು ತನ್ನ ಸಾಲಗಳನ್ನು ತೀರಿಸಲು ಹೆಚ್ಚಾಗಿ ಬಳಸಲಿದೆ. ಕಂಪನಿಯು ಬೆಳಗಾವಿ, ಕೊಪ್ಪಳ ಮತ್ತು ಹುಬ್ಬಳ್ಳಿಯಲ್ಲಿ ತಯಾರಿಕಾ ಘಟಕಗಳನ್ನು ಹೊಂದಿದೆ.

ಕಂಪನಿಯು ಏರ್‌ಬಸ್‌ಗೆ ಕೆಲವು ಬಿಡಿಭಾಗಗಳನ್ನು ಬೆಳಗಾವಿಯಿಂದ ಪೂರೈಕೆ ಮಾಡುತ್ತಿದೆ ಎಂದು ಕಂಪನಿಯ ಸಿಇಒ ಅರವಿಂದ ಮೆಲ್ಲಿಗೇರಿ ತಿಳಿಸಿದ್ದಾರೆ.

ಸಕ್ಕರೆ ಉತ್ಪಾದನೆ ಶೇ 43ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಸಕ್ಕರೆ ಮಾರುಕಟ್ಟೆ ವರ್ಷದ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ದೇಶದ ಸಕ್ಕರೆ ಉತ್ಪಾದನೆ ಶೇ 43ರಷ್ಟು ಹೆಚ್ಚಳವಾಗಿದೆ ಎಂದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಒಕ್ಕೂಟ (ಐಎಸ್‌ಎಂಎ) ಮಂಗಳವಾರ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ 28.8 ಲಕ್ಷ ಟನ್ ಸಕ್ಕರೆ ಉತ್ಪಾದನೆ ಆಗಿತ್ತು. ಈ ಬಾರಿ 41.1 ಲಕ್ಷ ಟನ್ ಉತ್ಪಾದನೆ ಆಗಿದೆ. ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳಲ್ಲಿನ ಕಬ್ಬು ಇಳುವರಿ ಹೆಚ್ಚಳವೇ ಉತ್ಪಾದನೆ ಹೆಚ್ಚಳಕ್ಕೆ ಕಾರಣ ಎಂದು ಒಕ್ಕೂಟ ತಿಳಿಸಿದೆ. ಅಕ್ಟೋಬರ್‌ನಿಂದ ಸೆಪ್ಟೆಂಬರ್ ವರೆಗಿನ ಅವಧಿಯನ್ನು ಸಕ್ಕರೆ ಮಾರುಕಟ್ಟೆ ವರ್ಷ ಎಂದು ಪರಿಗಣಿಸಲಾಗುತ್ತದೆ.

ಸಕ್ಕರೆ ಉತ್ಪಾದನೆ ಮಾಡುವ ಕಾರ್ಖಾನೆಗಳ ಸಂಖ್ಯೆ ಒಂದು ವರ್ಷದ ಅವಧಿಯಲ್ಲಿ 376ರಿಂದ 428ಕ್ಕೆ ಏರಿಕೆ ಆಗಿದೆ.

ದೇಶದ ಅತಿದೊಡ್ಡ ಸಕ್ಕರೆ ಉತ್ಪಾದಕ ರಾಜ್ಯವಾದ ಉತ್ತರ ಪ್ರದೇಶದಲ್ಲಿ 14 ಲಕ್ಷ ಟನ್ ಸಕ್ಕರೆ ಉತ್ಪಾದನೆ ಆಗಿತ್ತು. ಕಳೆದ ವರ್ಷದ ಇದೇ ಅವಧಿಯಲ್ಲಿ 12.8 ಲಕ್ಷ ಟನ್ ಉತ್ಪಾದನೆಯಾಗಿತ್ತು. ಮಹಾರಾಷ್ಟ್ರದಲ್ಲಿ 4.60 ಲಕ್ಷ ಟನ್‌ನಿಂದ 16.9 ಲಕ್ಷ ಟನ್‌ಗೆ ಹೆಚ್ಚಳವಾಗಿದೆ. ಗುಜರಾತ್‌ನಲ್ಲಿ 92 ಸಾವಿರ ಟನ್ ಮತ್ತು ತಮಿಳುನಾಡಿನಲ್ಲಿ 35 ಸಾವಿರ ಟನ್ ಉತ್ಪಾದನೆ ಆಗಿದೆ.

ಉತ್ತರ ಪ್ರದೇಶ, ಕರ್ನಾಟಕ, ಪಂಜಾಬ್, ಹರಿಯಾಣ ಮತ್ತು ಉತ್ತರಾಖಂಡದಲ್ಲಿ ಕಬ್ಬಿನ ಬೆಲೆ ಹೆಚ್ಚಳವಾಗಿದೆ. ಹೀಗಾಗಿ ದೇಶದಲ್ಲಿ ಸರಾಸರಿ ಸಕ್ಕರೆ ಉತ್ಪಾದನೆ ವೆಚ್ಚ ಕೆ.ಜಿ.ಗೆ ₹41.72 ಇದೆ.

ಪ್ರಸಕ್ತ ಸಕ್ಕರೆ ಮಾರುಕಟ್ಟೆ ವರ್ಷದಲ್ಲಿ 3.09 ಕೋಟಿ ಟನ್ ಸಕ್ಕರೆ ಉತ್ಪಾದನೆ ಮಾಡುವ ಗುರಿಯನ್ನು ಐಎಸ್‌ಎಂಎ ಹೊಂದಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ 2.61 ಕೋಟಿ ಟನ್‌ನಷ್ಟು ಉತ್ಪಾದನೆ ಆಗಿತ್ತು.

ಕರ್ನಾಟಕದಲ್ಲಿ 38 ಸಾವಿರ ಟನ್ ಇಳಿಕೆ

ಕರ್ನಾಟಕದಲ್ಲಿ ಸಕ್ಕರೆ ಉತ್ಪಾದನೆಯು 38 ಸಾವಿರ ಟನ್‌ನಷ್ಟು ಕುಸಿದಿದೆ. ಕಳೆದ ವರ್ಷದ ಅಕ್ಟೋಬರ್–ನವೆಂಬರ್ ತಿಂಗಳಿನಲ್ಲಿ 8.12 ಲಕ್ಷ ಟನ್ ಸಕ್ಕರೆ ಉತ್ಪಾದನೆ ಆಗಿತ್ತು. ಅದು ಈ ಬಾರಿ 7.74 ಲಕ್ಷ ಟನ್‌ಗೆ ಇಳಿದಿದೆ.

ಕಬ್ಬಿನ ದರ ಹೆಚ್ಚಿಸುವಂತೆ ರೈತರು ಪ್ರತಿಭಟನೆ ನಡೆಸುತ್ತಿದ್ದ ಹೊತ್ತಿನಲ್ಲಿ ಕಬ್ಬು ಅರೆಯುವಿಕೆ ವೇಗ ಪಡೆದುಕೊಂಡಿದೆ. ಕರ್ನಾಟಕವು ದೇಶದಲ್ಲಿ ಅತಿ ಹೆಚ್ಚು ಕಬ್ಬು ಉತ್ಪಾದನೆ ಮಾಡುವ ರಾಜ್ಯಗಳಲ್ಲಿ ಮೂರನೇ ಸ್ಥಾನದಲ್ಲಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವೆಂಕಟಶಾಮಪ್ಪ ಎಸ್., ಬೆಂಗಳೂರು

ಪ್ರಶ್ನೆ: 'ನಾನು 71 ವರ್ಷ ವಯಸ್ಸಿನ ನಿವೃತ್ತ ಕಾರ್ಮಿಕ. ನಾನು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಹಾಗೂ ಅದರ ನಂತರ ಆದಾಯ ತೆರಿಗೆ ವಿವರ ಸಲ್ಲಿಸುತ್ತಿದ್ದೇನೆ. ಹಾಗಿದ್ದರೂ 2008-09ನೇ ಸಾಲಿನ ತೆರಿಗೆ ಬಾಕಿ ₹48 ಸಾವಿರ ಇರುವುದಾಗಿ ನನ್ನ ಲೆಕ್ಕಪರಿಶೋಧಕರ ಮೂಲಕ ತಿಳಿಯಿತು. ನಂತರ 2022ರಲ್ಲಿ ಅಂಚೆ ಇಲಾಖೆಯ ಆದಾಯದ ಮೇಲೆ ನನ್ನ ಒಂದಿಷ್ಟು ತೆರಿಗೆಯನ್ನು ಕಡಿತ ಮಾಡಿದ್ದರು ಮತ್ತು ಈ ಮೊತ್ತ ಮರುಪಾವತಿ ಮೂಲಕ ಹಿಂಪಡೆಯುವುದಿತ್ತು. ಆದರೆ ಇದನ್ನು ಪಡೆಯಲು ಹೆಚ್ಚಿನ ಮಾಹಿತಿ ಹಾಗೂ ಹಳೆಯ ಬಾಕಿ ವಿವರ ಕೇಳಿದಾಗ ಯಾವುದೇ ಸ್ಪಷ್ಟ ವಿವರ ಆದಾಯ ತೆರಿಗೆ ಇಲಾಖೆಯಲ್ಲಿ ಸಿಗಲಿಲ್ಲ. ಈ ಬಗ್ಗೆ ಲೆಕ್ಕಪರಿಶೋಧಕರ ಮೂಲಕವೂ ಹೆಚ್ಚಿನ ಮಾಹಿತಿ ಪಡೆಯಲು ಹಲವು ಬಾರಿ ಪ್ರಯತ್ನಿಸಲಾಯಿತು, ಅವರಿಗೂ ಸ್ಪಷ್ಟತೆ ಸಿಗಲಿಲ್ಲ. ಇದಕ್ಕೆ ಪರಿಹಾರವೇನು?

ಉತ್ತರ: ನೀವು ಹಿಂದಿನಿಂದಲೂ ಆದಾಯ ತೆರಿಗೆ ವಿವರ ಸಲ್ಲಿಸುತ್ತ ಬಂದಿದ್ದರೂ 2008-09ನೇ ಸಾಲಿನಲ್ಲಿ ಸುಮಾರು ₹48 ಸಾವಿರ ತೆರಿಗೆ ಬಾಕಿ ಇದೆ ಎಂದು ನೋಟಿಸ್ ಬಂದಿರುವ ಬಗ್ಗೆ ಹಾಗೂ ಈ ವಿಚಾರಕ್ಕೆ ಸಂಬಂಧಿಸಿ ಆಯಾ ಇಲಾಖೆಗಳಿಗೆ ಭೇಟಿ ನೀಡಿದ್ದರೂ ಸಮಸ್ಯೆ ಪರಿಹಾರ ಆಗದಿರುವ ಕುರಿತು ಹೇಳಿದ್ದೀರಿ. ಮೇಲ್ನೋಟಕ್ಕೆ ಇದು ಹಳೆಯ ತೆರಿಗೆ ಮಾಹಿತಿಯ ವ್ಯತ್ಯಾಸದಿಂದ ಆಗಿರಬಹುದು. ಹೀಗಾಗಿ ಇಂತಹ ವಿಚಾರಗಳನ್ನು ಪ್ರಸ್ತುತ ಸನ್ನಿವೇಶದಲ್ಲಿ ಮೊದಲ ಹಂತದಲ್ಲಿ ಆನ್‌ಲೈನ್ ಮಾಹಿತಿಯ ಪರಾಮರ್ಶೆ ಮೂಲಕ ಸಾಧ್ಯವಾದಷ್ಟು ಬಗೆಹರಿಸಿಕೊಳ್ಳುವುದು ಸೂಕ್ತ. ಇದಕ್ಕಾಗಿ ನಿಮ್ಮ ಲಾಗಿನ್ ಮಾಹಿತಿ, ಈಗಾಗಲೇ ಸಲ್ಲಿಸಿರುವ ಹಳೆಯ ವಿವರ, ಸಂಬಂಧಿತ ವರ್ಷದ ನಿಖರವಾದ ನಿಮ್ಮ ಆದಾಯ ತೆರಿಗೆ ಲೆಕ್ಕ ಹಾಗೂ ಫಾರಂ 16 ಇತ್ಯಾದಿ ಹೊಂದಿಸಿಕೊಳ್ಳಿ. ಆ ಅವಧಿಯಲ್ಲಿ ಆನ್‌ಲೈನ್ ಪೋರ್ಟಲ್ ಮೂಲಕ ನೀವು ವಿವರ ಸಲ್ಲಿಸಿರಲಿಕ್ಕಿಲ್ಲ. ಇದು ಕಾಗದಪತ್ರದ ಮೂಲಕ ಸಲ್ಲಿಸಿದ್ದ ಮಾಹಿತಿಯಾಗಿದ್ದರೆ, ಈ ಪೋರ್ಟಲ್‌ಗೆ ಮಾಹಿತಿ ವರ್ಗಾವಣೆ ವೇಳೆ ವ್ಯತ್ಯಾಸ ಆಗಿರುವ ಸಾಧ್ಯತೆ ಇದೆ.

ಸಾಮಾನ್ಯವಾಗಿ ಯಾವುದೇ ಹಳೆ ಬಾಕಿಗಳಿದ್ದಾಗ ಹಾಗೂ ನಂತರದ ಹಂತಗಳಲ್ಲಿ ಮರುಪಾವತಿ ಕೂಡ ಇದ್ದಾಗ, ಹಳೆಯ ಡಿಮಾಂಡ್ ಭರಿಸುವವರೆಗೆ ಬಾಕಿ ಇರುವ ಮರುಪಾವತಿ ಮೊತ್ತವನ್ನು ಅದರೊಡನೆ ಸರಿದೂಗಿಸಲಾಗುತ್ತದೆ. ನಿಮ್ಮ ವಿಚಾರದಲ್ಲೂ ಅದು ನಡೆದಿದೆ. ಆದರೆ ಈ ಕ್ರಮದ ಬಗ್ಗೆ ಸೂಕ್ತ ಮಾಹಿತಿ ಲಿಖಿತ ನೋಟಿಸ್ ಮೂಲಕ ನೀಡುತ್ತಾರೆ.

ನಿಮ್ಮ ಸಮಸ್ಯೆ ಬಗೆಹರಿಸಲು, ಮೊದಲ ಹಂತದಲ್ಲಿ ನಿಮ್ಮ ಡಿಮಾಂಡ್ ನಿಮ್ಮ ಪ್ಯಾನ್ ಖಾತೆಯಲ್ಲಿ ಏನಿದೆ ಹಾಗೂ ನಂತರದ ಹಂತದ ಮರುಪಾವತಿ ಯಾವ ಕಾರಣಕ್ಕಾಗಿ ಸ್ಥಗಿತಗೊಳಿಸಲಾಗಿದೆ ಎಂದು ತಿಳಿದುಕೊಳ್ಳಬೇಕು. ಈ ಸಂಬಂಧ ನಿಮ್ಮ ಅಹವಾಲುಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕಾಗುತ್ತದೆ. ಮೊದಲ ಹಂತದಲ್ಲಿ ಮೇಲೆ ಹೇಳಿರುವ ದಾಖಲೆಗಳನ್ನು ಹೊಂದಿಸಿ, ನುರಿತ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ. ಯಾವುದೇ ಹಂತದಲ್ಲಿ ನಿಮ್ಮ ನಿಜವಾದ ತೆರಿಗೆ ಪಾವತಿ ಸರಿಯಾಗಿ ವರದಿಯಾಗದೆ ಇಂತಹ ಡಿಮ್ಯಾಂಡ್ ಬಂದಿದ್ದಲ್ಲಿ, ನಿಮ್ಮ ಸರಿಯಾದ ದಾಖಲೆಗಳನ್ನು ಸಲ್ಲಿಸುವ ಮೂಲಕ ಪರಿಹರಿಸಿಕೊಳ್ಳಬಹುದು. 2022ರ ಮರುಪಾವತಿ ಬಗ್ಗೆ ನಿಮ್ಮ ಅಹವಾಲು ಸಲ್ಲಿಸುವಾಗ, ಹಳೆಯ ಬಾಕಿ ಡಿಮಾಂಡ್ ಪೋರ್ಟಲ್‌ನಲ್ಲಿ ಇದೆಯೇ ಎಂಬುದನ್ನೂ ಖಚಿತಪಡಿಸಿಕೊಳ್ಳಿ ಹಾಗೂ ಆ ಮಾಹಿತಿಯನ್ನು ಸಲ್ಲಿಸಿ. 2011-12ಕ್ಕಿಂತ ಹಳೆಯ ವಿಚಾರವಾಗಿದ್ದರೆ, ಸಂಬಂಧಿತ ಅಧಿಕಾರಿಗಳ ವಿವರವನ್ನು ಪೋರ್ಟಲ್‌ನಲ್ಲಿ ತಿಳಿದು ಪರಿಹರಿಸಿಕೊಳ್ಳಬೇಕಾಗುತ್ತದೆ. ನಂತರದ ಹಂತದಲ್ಲೂ ಸ್ಪಂದಿಸದಿದ್ದರೆ ಸಂಬಂಧಿತ ಅಧಿಕಾರಿ, ಸೆಂಟ್ರಲ್ ಪ್ರೊಸೆಸಿಂಗ್ ಸಿಸ್ಟಂ ಅಥವಾ ಈ ಫೈಲಿಂಗ್ ಬಗ್ಗೆ ಪ್ರತ್ಯೇಕವಾಗಿ ಅಹವಾಲು ಸಲ್ಲಿಸಬಹುದು.

ಶ್ರೀನಿವಾಸ ಎಸ್, ನಾಗರಬಾವಿ, ಬೆಂಗಳೂರು

ಪ್ರಶ್ನೆ: ನನ್ನ ಮನೆಯ 900 ಚದರ ಅಡಿ ವಾಣಿಜ್ಯ ಉಪಯೋಗದ ಜಾಗವನ್ನು ತಿಂಗಳಿಗೆ ₹55 ಸಾವಿರ ಬಾಡಿಗೆಗೆ ವಾಣಿಜ್ಯ ಉಪಯೋಗಕ್ಕಾಗಿ ಕೊಟ್ಟಿರುತ್ತೇನೆ. ಇದಕ್ಕೆ ಶೇ 18ರಷ್ಟು ಜಿಎಸ್‌ಟಿ ಅನ್ವಯಿಸುತ್ತದೆ ಹಾಗೂ ಈ ಮೊತ್ತವನ್ನು ಕಡಿತಮಾಡಿ ಬಾಡಿಗೆ ಪಾವತಿಸುವುದಾಗಿ ಬಾಡಿಗೆದಾರರು ಹೇಳುತ್ತಿದ್ದಾರೆ. ಇದು ಜಿಎಸ್‌ಟಿ ಕಾಯ್ದೆ ಪ್ರಕಾರ ಸರಿಯೇ? ಹಾಗಿದ್ದಲ್ಲಿ ಜಿಎಸ್‌ಟಿ ಕಾಯ್ದೆಯ ಯಾವ ಭಾಗ ಇದಕ್ಕೆ ಅನ್ವಯಿಸುತ್ತದೆ? ನನಗೆ ಬೇರೆ ಯಾವುದೇ ಬಾಡಿಗೆ ಆದಾಯವಿಲ್ಲ, ಯಾವುದೇ ವಾಣಿಜ್ಯ ವ್ಯವಹಾರವೂ ಇರುವುದಿಲ್ಲ. ಹಾಗಾಗಿ ಜಿಎಸ್‌ಟಿ ನೋಂದಣಿ ನನಗೆ ಇಲ್ಲ. ನನ್ನ ಅರಿವಿನ ಪ್ರಕಾರ ಈ ವಾರ್ಷಿಕ ಬಾಡಿಗೆ ಮೊತ್ತ, ಜಿಎಸ್‌ಟಿ ಅಡಿ ನೋಂದಣಿ ಪಡೆಯಬೇಕಾದ ಮೊತ್ತಕ್ಕಿಂತ ಕಡಿಮೆ ಆಗಿರುವುದರಿಂದ ವಾಣಿಜ್ಯ ಬಾಡಿಗೆ ಆದಾಯಕ್ಕೆ ಜಿಎಸ್‌ಟಿ ಅನ್ವಯಿಸುವುದಿಲ್ಲ. ಇದು ಸರಿಯೇ? ದಯವಿಟ್ಟು ತಿಳಿಸಿ.

ಉತ್ತರ: ನೀವು ನಿಮ್ಮ ಮನೆಯ 900 ಚದರ ಅಡಿ ವಾಣಿಜ್ಯ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಬಾಡಿಗೆಗೆ ನೀಡುತ್ತಿರುವುದರಿಂದ 'ವಾಣಿಜ್ಯ ಆಸ್ತಿಯ ಬಾಡಿಗೆಯ ಸೇವೆ'ಗಳ ಅಡಿ ಇದನ್ನು ಪರಿಗಣಿಸಲಾಗುತ್ತದೆ. ಇದು ಜಿಎಸ್‌ಟಿ ಅಡಿಯಲ್ಲಿ ತೆರಿಗೆಗೆ ಒಳಪಡುವ ಸೇವೆ. ಆದರೆ ಜಿಎಸ್‌ಟಿ ಕಾಯ್ದೆಯ ಪ್ರಮುಖ ಅಂಶವೆಂದರೆ ಸೇವೆಯ ಸರಬರಾಜುದಾರರ (ಇಲ್ಲಿ ನೀವು – ಆಸ್ತಿಯ ಮಾಲೀಕರು) ವಾರ್ಷಿಕ ವ್ಯವಹಾರ ₹20 ಲಕ್ಷ ಮೀರಿದಾಗ ಮಾತ್ರ ಜಿಎಸ್‌ಟಿ ಕಾಯ್ದೆ ಅಡಿ ನೋಂದಣಿ ಕಡ್ಡಾಯ. ನಿಮ್ಮ ವಾರ್ಷಿಕ ವಾಣಿಜ್ಯ ಬಾಡಿಗೆ ಆದಾಯ ಹನ್ನೆರಡು ತಿಂಗಳಿಗೆ ₹6.60 ಲಕ್ಷ ಮಾತ್ರ ಆಗಿರುವುದರಿಂದ ಮತ್ತು ನಿಮಗೆ ಬೇರೆ ಯಾವುದೇ ಆದಾಯ ಇಲ್ಲದ ಕಾರಣ ಜಿಎಸ್‌ಟಿ ನೋಂದಣಿ ಕಡ್ಡಾಯವಾಗುವುದಿಲ್ಲ ಮತ್ತು ನೀವು ಬಾಡಿಗೆಯ ಮೇಲೆ ಜಿಎಸ್‌ಟಿ ವಿಧಿಸುವ ಅಗತ್ಯವೂ ಇರುವುದಿಲ್ಲ.

ಬಾಡಿಗೆದಾರರು ವಾಣಿಜ್ಯ ವ್ಯವಹಾರದಲ್ಲಿ ಇರುವುದರಿಂದ ಅವರಿಗೆ ಜಿಎಸ್‌ಟಿ ಅನ್ವಯಿಸಬಹುದು. ನೀವು ನೋಂದಣಿ ಆಗದಿರುವ ಸೇವಾದಾರ ಆಗಿರುವುದರಿಂದ ಹಾಗೂ ಅವರು ನೋಂದಾಯಿತ ಸೇವೆಯನ್ನು ಅನುಭವಿಸುವವ ಆಗಿರುವುದರಿಂದ ಬಾಡಿಗೆ ಸೇವೆಯ ಮೇಲಿನ ಜಿಎಸ್‌ಟಿಯ ಜವಾಬ್ದಾರಿ ಅವರಿಗೆ ವರ್ಗಾವಣೆ ಆಗುತ್ತದೆ. ಸೇವೆಯನ್ನು ಬಳಸಿಕೊಳ್ಳುವವರು ಶೇ 18ರ ದರದಲ್ಲಿ ತೆರಿಗೆ ಕಟ್ಟಬೇಕಾಗುತ್ತದೆ. ಈ ರೀತಿ ಕಟ್ಟಿರುವ ಮೊತ್ತ ಅವರಿಗೆ ನಷ್ಟವಲ್ಲ. ಅವರು ಈ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಿ, ಅದರ ಜಮಾ ಆಧಾರದ ಮೇಲೆ, ಅವರ ಇತರ ಜಿಎಸ್‌ಟಿ ಪಾವತಿ ಮೊತ್ತದಲ್ಲಿ ವಜಾ ಮಾಡಿಕೊಳ್ಳುವ ಅವಕಾಶ ಕಾನೂನಿನ ಅಡಿ ಇದೆ. ಹೀಗಾಗಿ ಇದು ಸಂಪೂರ್ಣ ಅವರಿಗೆ ಸಂಬಂಧಿಸಿದ ಬಾಧ್ಯತೆ ಆಗಿರುವುದರಿಂದ, ನಿಮ್ಮ ಬಾಡಿಗೆ ಮೊತ್ತದಲ್ಲಿ ಅದನ್ನು ಮತ್ತೆ ಕಡಿತಮಾಡಿ ಅವರು ಲಾಭ ಪಡೆಯುವುದಕ್ಕೆ ಅವಕಾಶ ಇಲ್ಲ. ನೀವು ನಿಗದಿ ಮಾಡಿದ ಬಾಡಿಗೆಗೆ ತೆರಿಗೆ ಇಲ್ಲದ ಕಾರಣ ಪೂರ್ಣ ಮೊತ್ತ ನಿಮಗೆ ಸಿಗಬೇಕು. ಆದರೆ, ಆದಾಯ ತೆರಿಗೆ ಕಾನೂನಿನ ಅಡಿ ಅನ್ವಯಿಸುವ ತೆರಿಗೆ ಕಡಿತ ಶೇ 10ರ ದರದಲ್ಲಿ ಕಡಿತ ಅನ್ವಯಿಸುತ್ತದೆ ಎಂಬುದು ಗಮನದಲ್ಲಿರಲಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಅಡಿಕೆ ಧಾರಣೆ

ಪುತ್ತೂರು		ಸಿದ್ದಾಪುರ			
ಕೋಕ	20000-35000	ಬಿಳಿಗೋಟು	26399-36899	ಕೆಂಪುಗೋಟು	30823-35823
ಹೊಸತು	26000-41000	ಚಾಲಿ	41899-48699	ರಾಶಿ	53199-58999
ಸಾಗರ		ಕೋಕ	20189-28909	**ಯಲ್ಲಾಪುರ**	
ಬಿಳಿಗೋಟು	34299-34599	ಕೆಂಪುಗೋಟು	28000-35600	ಆಪಿ	66899-77175
ಚಾಲಿ	41470-42219	ರಾಶಿ	46099-58600	ಬಿಳಿಗೋಟು	13909-36189
ಕೋಕ	34499-34499	ತಟ್ಟಿಬೆಟ್ಟೆ	27099-36099	ಚಾಲಿ	38119-48899
ಕೆಂಪುಗೋಟು	8169-8169	**ಶಿರಸಿ**		ಕೋಕ	12109-32369
ರಾಶಿ	57270-61970	ಬೆಟ್ಟೆ	38723-52699	ಹೊಸಚಾಲಿ	40815-40815
ಸಿಪ್ಪೆಗೋಟು	22399-22399	ಬಿಳಿಗೋಟು	17104-39099	ಕೆಂಪುಗೋಟು	14899-35690
		ಚಾಲಿ	42119-49261	ರಾಶಿ	52109-65675
				ತಟ್ಟಿಬೆಟ್ಟೆ	36709-51565

'ಸರ್ಕಾರಿ ಬ್ಯಾಂಕ್‌ಗಳಲ್ಲಿ ಎಫ್‌ಡಿಐ ಮಿತಿ ಹೆಚ್ಚಳ ಪ್ರಸ್ತಾವವಿಲ್ಲ'

ನವದೆಹಲಿ (ಪಿಟಿಐ): 'ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ವಿದೇಶಿ ನೇರ ಹೂಡಿಕೆ ಪ್ರಮಾಣವನ್ನು (ಎಫ್‌ಡಿಐ) ಶೇ 49ಕ್ಕೆ ಹೆಚ್ಚಿಸುವ ಯಾವುದೇ ಪ್ರಸ್ತಾವವನ್ನು ಸರ್ಕಾರ ಪರಿಗಣಿಸುತ್ತಿಲ್ಲ' ಎಂದು ಕೇಂದ್ರ ಹಣಕಾಸು ಇಲಾಖೆಯ ರಾಜ್ಯ ಸಚಿವ ಪಂಕಜ್ ಚೌಧರಿ ರಾಜ್ಯಸಭೆಗೆ ತಿಳಿಸಿದ್ದಾರೆ.

ಪ್ರಸ್ತುತ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಎಫ್‌ಡಿಐ ಮಿತಿ ಶೇ 20ರಷ್ಟು ಮತ್ತು ಖಾಸಗಿ ಬ್ಯಾಂಕ್‌ಗಳಲ್ಲಿ ಶೇ 74ರಷ್ಟಿದೆ.

ಖಾಸಗಿ ಬ್ಯಾಂಕ್‌ಗಳಲ್ಲಿ ಶೇ 49ರವರೆಗೆ ವಿದೇಶಿ ನೇರ ಹೂಡಿಕೆಗೆ ಸರ್ಕಾರ ಅಥವಾ ಆರ್‌ಬಿಐನ ಪೂರ್ವಾನುಮೋದನೆ ಅಗತ್ಯವಿಲ್ಲ. ಆದರೆ, ಶೇ 49ಕ್ಕಿಂತ ಹೆಚ್ಚು ಹಾಗೂ ಶೇ 74ರವರೆಗೆ ವಿದೇಶಿ ನೇರ ಹೂಡಿಕೆಗೆ ಸರ್ಕಾರದ ಅನುಮತಿ ಅಗತ್ಯ.

2020ರಿಂದ ಸರ್ಕಾರಿ ಸ್ವಾಮ್ಯದ 12 ಬ್ಯಾಂಕ್‌ಗಳಲ್ಲಿ ಕೇಂದ್ರ ಸರ್ಕಾರದ ಷೇರುಗಳ ಸಂಖ್ಯೆ ಕಡಿಮೆ ಆಗಿಲ್ಲ ಎಂದು ಪ್ರಶ್ನೆಯೊಂದಕ್ಕೆ ಸಚಿವರು ಉತ್ತರಿಸಿದ್ದಾರೆ.

ಕೇಂದ್ರ ಸರ್ಕಾರ ಹೊಂದಿರುವ ಷೇರುಗಳ ಸಂಖ್ಯೆ ಕಡಿಮೆ ಆಗಿಲ್ಲವಾದರೂ, ಬ್ಯಾಂಕುಗಳು ಹೊಸ ಷೇರುಗಳನ್ನು ನೀಡುವ ಮೂಲಕ ಬಂಡವಾಳವನ್ನು ಸಂಗ್ರಹಿಸಿವೆ. ಹೀಗಾಗಿ, ಈ ಬ್ಯಾಂಕ್‌ಗಳ ಪೈಕಿ ಕೆಲವು ಬ್ಯಾಂಕುಗಳಲ್ಲಿ ಕೇಂದ್ರ ಸರ್ಕಾರದ ಷೇರುಗಳ ಶೇಕಡಾವಾರು ಪ್ರಮಾಣ ಕಡಿಮೆಯಾಗಿದೆ ಎಂದು ಹೇಳಿದ್ದಾರೆ.

ರಕ್ಷಣಾ ಒಪ್ಪಂದಕ್ಕೆ ರಷ್ಯಾ ಅನುಮೋದನೆ

ಮಾಸ್ಕೊ (ಪಿಟಿಐ): ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಇದೇ 4 ಮತ್ತು 5ರಂದು ಭಾರತಕ್ಕೆ ಭೇಟಿ ನೀಡಲಿದ್ದು, ಉಭಯ ದೇಶಗಳ ನಡುವಿನ ರಕ್ಷಣಾ ಒಪ್ಪಂದಕ್ಕೆ ರಷ್ಯಾ ಸಂಸತ್‌ನ ಕೆಳಮನೆ (ಡುಮಾ) ಮಂಗಳವಾರ ಅನುಮೋದನೆ ನೀಡಿದೆ.

'ಭಾರತದೊಂದಿಗೆ ರಷ್ಯಾ ಸಮಗ್ರ ದ್ವಿಪಕ್ಷೀಯ ಸಂಬಂಧ ಹೊಂದಿದೆ. ರಕ್ಷಣಾ ಒಪ್ಪಂದಕ್ಕೆ ಅನುಮೋದನೆ ನೀಡಿರುವುದು ಉಭಯ ದೇಶಗಳ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ' ಎಂದು ಡುಮಾ ಸ್ಪೀಕರ್ ವ್ಯಚೆಸ್ಲಾವ್ ವೊಲೊಡಿನ್ ಸದನ ಉದ್ದೇಶಿಸಿ ಹೇಳಿದರು.

ಅಗತ್ಯದ ಸಂದರ್ಭಗಳಲ್ಲಿ, ರಷ್ಯಾ ತನ್ನ ಯುದ್ಧನೌಕೆಗಳು, ಯುದ್ಧವಿಮಾನಗಳು ಸೇರಿ ಶಸ್ತ್ರಾಸ್ತ್ರಗಳನ್ನು ಭಾರತಕ್ಕೆ ಕಳುಹಿಸುವುದು. ಇದೇ ರೀತಿ ಭಾರತ ಕೂಡ ರಷ್ಯಾಕ್ಕೆ ನೆರವು ನೀಡುವ ಅಂಶಗಳನ್ನು ಈ ಒಪ್ಪಂದ ಒಳಗೊಂಡಿದೆ. ಉಭಯ ದೇಶಗಳು ಪರಸ್ಪರ ವಾಯುಪ್ರದೇಶ ಹಾಗೂ ಬಂದರುಗಳನ್ನು ಬಳಸುವುದಕ್ಕೂ ಕೂಡ ಈ ಒಪ್ಪಂದ ಅವಕಾಶ ಒದಗಿಸುತ್ತದೆ ಎಂದು ಡುಮಾ ಜಾಲತಾಣದಲ್ಲಿ ಪ್ರಕಟಿಸಿರುವ ಟಿಪ್ಪಣಿಯಲ್ಲಿ ಹೇಳಲಾಗಿದೆ.

ಮುಂಬೈ ಧಾರಣೆ (ಶೇಂಗಾ)

02-12-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಪಾಮ್ ವಾರದ ಡೆಲಿವರಿ	1248 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1415)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,27,400 (1,28,400)
ಬೆಳ್ಳಿ ಕೆ.ಜಿಗೆ	1,74,750 (1,75,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ
(ಆವರಣದಲ್ಲಿ ಕಳೆದ ವಹಿವಾಟಿನ ದರ)

(10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹1250 (1280)
ಸೂರ್ಯಕಾಂತಿ (ರಿಫೈನ್ಡ್)	₹1480 (1480)
ಪಾಮೋಲಿನ್	₹1250 (1245)

ಕ್ಯಾಂಪ್ಕೊ ಅಧ್ಯಕ್ಷರಾಗಿ ಸತೀಶ್ಚಂದ್ರ

ಪ್ರಜಾವಾಣಿ ವಾರ್ತೆ

ಮಂಗಳೂರು: ಪ್ರಮುಖ ಅಡಿಕೆ ವಹಿವಾಟು ಸಂಸ್ಥೆಯಾದ ಕ್ಯಾಂಪ್ಕೊದ ಅಧ್ಯಕ್ಷರಾಗಿ ಸತೀಶ್ಚಂದ್ರ ಎಸ್.ಆರ್, ಉಪಾಧ್ಯಕ್ಷರಾಗಿ ಪದ್ಮರಾಜ್ ಪಟ್ಟಾಜೆ 2025–30ರ ಅವಧಿಗೆ ಅವಿರೋಧವಾಗಿ ಆಯ್ಕೆಯಾದರು.

ಬಂಟ್ವಾಳ ತಾಲ್ಲೂಕಿನ ಪುಣಚ ಗ್ರಾಮದ ಸತೀಶ್ಚಂದ್ರ, 2015–20ರ ಅವಧಿಯಲ್ಲಿ ಕ್ಯಾಂಪ್ಕೊ ಅಧ್ಯಕ್ಷರಾಗಿ ಅನುಭವ ಹೊಂದಿರುವವರು. ಹಿಂದಿನ ಅವಧಿಯಲ್ಲಿ ಸಂಸ್ಥೆಯ ನಿರ್ದೇಶಕರಾಗಿದ್ದರು.

ಕಾಸರಗೋಡಿನ ಪಟ್ಟಾಜೆ ಬದಿಯಡ್ಕದ ಪ್ರಗತಿಪರ ಕೃಷಿಕ ಪದ್ಮರಾಜ್ ಪಟ್ಟಾಜೆ ಸತತ ಎರಡು ಅವಧಿಗೆ ಕ್ಯಾಂಪ್ಕೊ ಸಂಸ್ಥೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಈ ಆಯ್ಕೆಯು ಕೇಂದ್ರ ಸರ್ಕಾರದ ಸಹಕಾರ ಸಚಿವಾಲಯದ ಅಡಿಯಲ್ಲಿ ಬರುವ ಸಹಕಾರಿ ಚುನಾವಣಾ ಪ್ರಾಧಿಕಾರದ ಅನುಮೋದನೆ ಪಡೆದ ಮೇಲೆ ಅಧಿಕೃತವಾಗಿ ಘೋಷಣೆಯಾಗುತ್ತದೆ ಎಂದು ಕ್ಯಾಂಪ್ಕೊ ಪ್ರಕಟಣೆ ತಿಳಿಸಿದೆ.

ಪದ್ಮರಾಜ್ ಪಟ್ಟಾಜೆ ಹಾಗೂ ಎಸ್.ಆರ್. ಸತೀಶ್ಚಂದ್ರ

ದಿತ್ವಾ: ಮೃತರ ಸಂಖ್ಯೆ 410ಕ್ಕೆ ಏರಿಕೆ

ಕೊಲಂಬೊ/ಅಲವತುಗೋಡ / ಜಕಾರ್ತ (ಶ್ರೀಲಂಕಾ) (ರಾಯಿಟರ್ಸ್/ಪಿಟಿಐ): ದ್ವೀಪ ರಾಷ್ಟ್ರ ಶ್ರೀಲಂಕಾದಲ್ಲಿ 'ದಿತ್ವಾ' ಚಂಡಮಾರುತದಿಂದ ಉಂಟಾದ ಭೂಕುಸಿತ ಹಾಗೂ ಪ್ರವಾಹದಿಂದಾಗಿ ಈವರೆಗೆ 410 ಮಂದಿ ಮೃತಪಟ್ಟಿದ್ದು, 336 ಜನ ನಾಪತ್ತೆಯಾಗಿದ್ದಾರೆ.

4.07 ಲಕ್ಷ ಕುಟುಂಬಗಳ 14.66 ಲಕ್ಷ ಜನರು ಬಾಧಿತರಾಗಿದ್ದಾರೆ. 15 ಪ್ರಮುಖ ಸೇತುವೆಗಳು, 256 ರಸ್ತೆಗಳು ಹಾನಿಗೊಳಗಾಗಿವೆ ಎಂದು ವಿಪತ್ತು ನಿರ್ವಹಣಾ ಕೇಂದ್ರ ತಿಳಿಸಿದೆ.

ಇಂಡೊನೇಷ್ಯಾ: ಮೃತರ ಸಂಖ್ಯೆ 753ಕ್ಕೆ ಏರಿಕೆ: ಇಂಡೊನೇಷ್ಯಾದ ಸುಮಾತ್ರ ದ್ವೀಪದಲ್ಲಿ ಉಂಟಾದ ಪ್ರವಾಹ ಹಾಗೂ ಭೂಕುಸಿತದಿಂದ ಮೃತಪಟ್ಟವರ ಸಂಖ್ಯೆ 753ಕ್ಕೆ ಏರಿಕೆಯಾಗಿದೆ. 504 ಮಂದಿ ನಾಪತ್ತೆಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎಸ್‌ಐಆರ್ ಚರ್ಚೆಗೆ ಒಪ್ಪಿಗೆ

ಒಂದನೇ ಪುಟದಿಂದ...

'ಸ್ಪೀಕರ್ ನೇತೃತ್ವದಲ್ಲಿ ನಡೆದ ಸಭೆ ಯಶಸ್ವಿಯಾಗಿದ್ದು, ವಂದೇ ಮಾತರಂ ಮತ್ತು ಚುನಾವಣಾ ಸುಧಾರಣೆ ಕುರಿತ ಚರ್ಚೆಗೆ ನಾಯಕರು ಸಹಮತ ವ್ಯಕ್ತಪಡಿಸಿದ್ದಾರೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ. 'ಲೋಕಸಭೆಯಲ್ಲಿ ಚರ್ಚೆಗಳು ಮುಗಿದ ಬಳಿಕ, ಅದನ್ನು ರಾಜ್ಯಸಭೆಯಲ್ಲಿ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸುತ್ತೇವೆ' ಎಂದು ಹೇಳಿದ್ದಾರೆ.

ಮೂಲಗಳ ಪ್ರಕಾರ, ರಾಜ್ಯಸಭೆಯಲ್ಲಿ ಇದೇ 9ರಂದು ವಂದೇ ಮಾತರಂ ಕುರಿತು ಹಾಗೂ ಇದೇ 11ರಂದು ಚುನಾವಣಾ ಸುಧಾರಣೆಗಳ ಕುರಿತು ಚರ್ಚೆ ನಡೆಯುವ ಸಾಧ್ಯತೆಗಳಿವೆ.

ವಿರೋಧ ಪಕ್ಷಗಳ ಪ್ರತಿಭಟನೆ: ಇದಕ್ಕೂ ಮುನ್ನ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳ ಹಲವು ನಾಯಕರು ಸಂಸತ್ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿ, ಎಸ್‌ಐಆರ್ ಚರ್ಚೆಗೆ ಒತ್ತಾಯಿಸಿದರು.

ಎಸ್‌ಐಆರ್ ವಿರುದ್ಧದ ಪೋಸ್ಟರ್‌ಗಳು ಮತ್ತು ಫಲಕಗಳನ್ನು ಹಿಡಿದು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. 'ಎಸ್‌ಐಆರ್ ನಿಲ್ಲಿಸಿ–ಮತಗಳ್ಳತನ ನಿಲ್ಲಿಸಿ' ಎಂದು ಬರೆದ ದೊಡ್ಡ ಬ್ಯಾನರ್ ಹಿಡಿದು ಪ್ರತಿಭಟಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಡಿಎಂಕೆಯ ಕನಿಮೊಳಿ, ಟಿ.ಆರ್.ಬಾಲು ಮತ್ತು ಸಿಪಿಎಂನ ಜಾನ್ ಬ್ರಿಟ್ಟಾಸ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಪ್ರಜಾಪ್ರಭುತ್ವದಲ್ಲಿ ಮತದಾನದ ಹಕ್ಕಿಗಿಂತ ದೊಡ್ಡ ವಿಷಯ ಯಾವುದಿರಲು ಸಾಧ್ಯ?' ಎಂದು ರಾಹುಲ್ ಗಾಂಧಿ ಅವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಪ್ರಧಾನಿ ಮೋದಿ ಅವರು, 'ಸಂಸತ್ತು ಈ ದೇಶದ ಜನರಿಗೆ ಸಂಬಂಧಿಸಿದ್ದು' ಎಂದು ಹೇಳುತ್ತಾರೆ. ಆದರೆ, ಜನರ ಕಲ್ಯಾಣಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳ ಚರ್ಚೆಯಿಂದ ಅವರು ವಿಮುಖರಾಗುತ್ತಾರೆ' ಎಂದು ದೂರಿದ್ದಾರೆ.

ಎಸ್‌ಐಆರ್ ವಿರೋಧಿಸಿ ವಿರೋಧ ಪಕ್ಷಗಳ ನಾಯಕರು ಮಂಗಳವಾರ ಸಂಸತ್ ಆವರಣದಲ್ಲಿ ಪ್ರತಿಭಟನೆ ನಡೆಸಿದರು. ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಮತ್ತಿತರರು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

'ಮತದಾನ ಪ್ರತಿಯೊಬ್ಬ ನಾಗರಿಕರ ಹಕ್ಕು. ದೇಶದ ಬಡ ಮತ್ತು ದುರ್ಬಲ ಸಮುದಾಯದ ಜನರ ಹಕ್ಕನ್ನು ಕಸಿಯಲು ಎಸ್‌ಐಆರ್ ಅನ್ನು ಅಸ್ತ್ರವಾಗಿ ಬಳಸಲಾಗುತ್ತಿದೆ. ಈ ಮೂಲಕ ಚುನಾವಣೆಗಳನ್ನು ಏಕಪಕ್ಷೀಯವನ್ನಾಗಿ ಮಾಡಲಾಗುತ್ತಿದೆ' ಎಂದು ಅವರು ಆರೋಪಿಸಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು, 'ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮತ್ತು ಚುನಾವಣಾ ಆಯೋಗವು ಎಸ್‌ಐಆರ್ ಮೂಲಕ ಒಟ್ಟಾಗಿ 'ಮತಕಳ್ಳತನ'ದಲ್ಲಿ ತೊಡಗಿವೆ' ಎಂದು ಆರೋಪಿಸಿದ್ದಾರೆ.

ಸಭಾತ್ಯಾಗ

ಮತದಾರರ ಪಟ್ಟಿಯ ಪರಿಷ್ಕರಣೆ ಕುರಿತು ಕಾಲಮಿತಿಯಲ್ಲಿ ಚರ್ಚೆ ನಡೆಸಬೇಕೆಂಬ ವಿಚಾರವಾಗಿ ಸರ್ಕಾರ ಮತ್ತು ವಿರೋಧ ಪಕ್ಷಗಳ ಮಧ್ಯೆ ರಾಜ್ಯಸಭೆಯಲ್ಲಿ ಮಂಗಳವಾರವೂ ಜಟಾಪಟಿ ಮುಂದುವರಿಯಿತು.

ಆದ್ಯತೆಯ ಮೇರೆಗೆ ಎಸ್‌ಐಆರ್ ಕುರಿತು ಚರ್ಚೆ ನಡೆಸಬೇಕು ಎಂದು ವಿಪಕ್ಷಗಳ ನಾಯಕರು ಆಗ್ರಹಿಸಿದರು. ಆದರೆ 'ವಂದೇ ಮಾತರಂ' ಕುರಿತು ಮೊದಲು ಚರ್ಚೆ ನಡೆಸಬೇಕು ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಒತ್ತಿ ಹೇಳಿದರು.

ಎಸ್‌ಐಆರ್ ಕುರಿತ ಚರ್ಚೆಗೆ ಸರ್ಕಾರ ನಿರಾಕರಿಸುತ್ತಿದ್ದಂತೆಯೇ ವಿಪಕ್ಷಗಳ ಸಂಸದರು ಘೋಷಣೆಗಳನ್ನು ಕೂಗಿ, ಸಭಾತ್ಯಾಗ ಮಾಡಿದರು. ಮಧ್ಯಾಹ್ನ 2 ಗಂಟೆಯ ಬಳಿಕ ಮತ್ತೆ ಕಲಾಪ ಆರಂಭವಾದಾಗಲೂ ಇದೇ ವಿಚಾರವಾಗಿ ವಾಗ್ವಾದ ನಡೆಯಿತು. ಮತ್ತೆ ವಿಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು.

'ವ್ಯಾಪಾರ ಕೊರತೆ ಬಗ್ಗೆ ಭಾರತದ ಕಳವಳ ಪರಿಹರಿಸಲು ಸಿದ್ಧ'

ನವದೆಹಲಿ (ಪಿಟಿಐ): ಬೃಹತ್ ವ್ಯಾಪಾರ ಕೊರತೆಯ ಕುರಿತು ಭಾರತದ ಕಳವಳದ ಬಗ್ಗೆ ರಷ್ಯಾಗೆ ಸಂಪೂರ್ಣವಾಗಿ ತಿಳಿದಿದೆ. ಈ ಸಮಸ್ಯೆಯನ್ನು ಪರಿಹರಿಸಲು ನಾವು ಭಾರತದೊಂದಿಗೆ ಕೆಲಸ ಮಾಡುತ್ತಿದ್ದೇವೆ ಎಂದು ರಷ್ಯಾ ಅಧ್ಯಕ್ಷರ ಕಚೇರಿಯ ವಕ್ತಾರ ಡಿಮಿಟ್ರಿ ಪೆಸ್ಕೋವ್ ಮಂಗಳವಾರ ಹೇಳಿದ್ದಾರೆ.

ಭಾರತದ ಪತ್ರಕರ್ತರೊಂದಿಗೆ ವಿಡಿಯೊ ಸ್ಟ್ರೀಮ್ ಆಧಾರಿತ ಸುದ್ದಿಗೋಷ್ಠಿಯಲ್ಲಿ ಡಿಮಿಟ್ರಿ ಪೆಸ್ಕೋವ್ ಅವರು ಮಾತನಾಡಿದರು. ಉಕ್ರೇನ್‌ನಲ್ಲಿ ಅಮೆರಿಕದ ಶಾಂತಿ ಯೋಜನೆ, ರಷ್ಯಾದ ಕಚ್ಚಾ ತೈಲದ ಮೇಲೆ ಅಮೆರಿಕದ ನಿರ್ಬಂಧಗಳು, ಭಾರತಕ್ಕೆ ರಷ್ಯಾದ ರಕ್ಷಣಾ ಮತ್ತು ತಂತ್ರಜ್ಞಾನ ಪೂರೈಕೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಪ್ರಸ್ತಾಪಿಸಿದರು.

ಜಾಗತಿಕ ವ್ಯಾಪಾರದಲ್ಲಿ ಪಾವತಿ ವ್ಯವಸ್ಥೆಯನ್ನು (ಈಗಿನ ಅಮೆರಿಕದ ಡಾಲರ್ ಆಧಾರಿತ ಪಾವತಿ) 'ರಾಜಕೀಯ ಸಾಧನ'ವಾಗಿ ಬಳಸದ ಹೊಸ ವ್ಯವಸ್ಥೆಗೆ ಕರೆ ನೀಡಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Cook

ಅಡುಗೆಯವರು ಬೇಕಾಗಿದ್ದಾರೆ
ಬೆಂಗಳೂರಿನ ಬಸವನಗುಡಿಯಲ್ಲಿರುವ ದಕ್ಷಿಣ ಭಾರತೀಯ ಕುಟುಂಬಕ್ಕೆ (ಸಸ್ಯಾಹಾರಿ ಮತ್ತು ಮಾಂಸಾಹಾರಿ) ಅಡುಗೆ ತಯಾರಿಸುವ 60 ವರ್ಷಕ್ಕಿಂತ ಕಡಿಮೆ ವಯಸ್ಸಿನ ಪುರುಷರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ:
080 4555 7113

General

ಕರ್ನಾಟಕದಾದ್ಯಂತ ಶೋರೂಮ್‌ಗಳಿಗೆ ಕಂಪನಿಗಳಿಗೆ Cashier, Receptionist, Account ಕೆಲಸಕ್ಕೆ ತಕ್ಷಣ ಯುವಕ,ಯುವತಿಯರು ಬೇಕಾಗಿದ್ದಾರೆ. 20,000, 35,000. SSLC, Degree. 9916788422, 9916744622

ಬೆಂಗಳೂರು ಬೊಮ್ಮನಹಳ್ಳಿಯಲ್ಲಿರುವ ಕಂಪನಿಗೆ ಆಫೀಸ್ ಸಹಾಯಕರು ಬೇಕಾಗಿದ್ದಾರೆ. ಮೊ: 9980140661/ Email: starsilks@gmail.com

Hotel

ಪುರುಷ ಸಹಾಯಕರು (45 ವರ್ಷದೊಳಗಿನವರು) ತಕ್ಷಣ ಬೇಕಾಗಿದ್ದಾರೆ. ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ ವಸತಿಯೊಂದಿಗೆ. ಉತ್ತಮ ಸಂಬಳ. ಸಂಪರ್ಕಿಸಿ: 9945935638

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000, 25,000ಸಂಪಾದಿಸಿ. ಕೋರಿಯರ್ ಸೌಲಭ್ಯವಿದೆ. 9019593297, 8095133188

Wanted

ತನ್ಮಯಿ ಆಯಿಲ್ ಕಂಪನಿಯಲ್ಲಿ ಪ್ಯಾಕಿಂಗ್ ಮಾಡಲು 10 ಜನ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 15 ರಿಂದ 18 ಸಾವಿರ ಸ್ಥಳ: ಶೇಷಾದ್ರಿಪುರಂ ಬೆಂಗಳೂರು 9019626612.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕೌಂತೇಯದಲ್ಲಿ ಖಳನಾದ ಮನೋರಂಜನ್

ಮನೋರಂಜನ್, ಅನನ್ಯ

ಮರ್ಡರ್ ಮಿಸ್ಟ್ರಿ ಕಥಾಹಂದರವಿರುವ 'ಕೌಂತೇಯ' ಚಿತ್ರದಲ್ಲಿ ಮನೋರಂಜನ್ ರವಿಚಂದ್ರನ್ ಖಳನಾಯಕನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಬಿ.ಕೆ.ಚಂದ್ರಹಾಸ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳುತ್ತಿರುವ ಚಿತ್ರದ ಶೇಕಡ 70ರಷ್ಟು ಚಿತ್ರೀಕರಣ ಮುಕ್ತಾಯಗೊಂಡಿದೆ ಎಂದು ಚಿತ್ರತಂಡ ಹೇಳಿದೆ.

ಅಚ್ಯುತ್ ಕುಮಾರ್ ಪ್ರಮುಖ ಪಾತ್ರದಲ್ಲಿರುವ ಚಿತ್ರ ಮೈಸೂರಿನ ಸುತ್ತಮುತ್ತ ಚಿತ್ರೀಕರಣಗೊಳ್ಳುತ್ತಿದೆ. 'ಈ ಸಿನಿಮಾದಲ್ಲಿ ಅಚ್ಯುತ್ ಕುಮಾರ್ ಸಕಾರಾತ್ಮಕ ಪಾತ್ರದಲ್ಲಿ ಕಾಣಿಸಿಕೊಂಡರೆ, ಇದೇ ಮೊದಲ ಬಾರಿಗೆ ಮನೋರಂಜನ್ ಖಳನ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಅವರ ಗೆಟಪ್ ಸಹ ಭಿನ್ನವಾಗಿದ್ದು, ಯಾಕಾಗಿ ಅವರು ಈ ಪಾತ್ರ ನಿಭಾಯಿಸುತ್ತಿದ್ದಾರೆ ಎಂಬುದನ್ನು ಚಿತ್ರದಲ್ಲಿಯೇ ನೋಡಬೇಕು' ಎಂದಿದ್ದಾರೆ ನಿರ್ದೇಶಕ.

ಶರಣ್ಯ ಶೆಟ್ಟಿ ಚಿತ್ರದ ನಾಯಕಿ. ಅಚ್ಯುತ್ ಕುಮಾರ್ ಮಗಳ ಪಾತ್ರದಲ್ಲಿ ಶರಣ್ಯ ಕಾಣಿಸಿಕೊಂಡಿದ್ದಾರೆ. ಮನೋರಂಜನ್‌ಗೆ ಜೋಡಿಯಾಗಿ ಅನನ್ಯ ರಾಜಶೇಖರ್ ನಟಿಸುತ್ತಿದ್ದಾರೆ. ಎಸಿಪಿಯಾಗಿ ಪ್ರಿಯಾಂಕಾ ತಿಮ್ಮೇಶ್ ಕಾಣಿಸಿಕೊಂಡಿದ್ದಾರೆ.

ಸುರೇಶ್ ಕುಮಾರ್ ಬಂಡವಾಳ ಹೂಡಿದ್ದಾರೆ. ಪಿ.ಎಲ್.ರವಿ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.

'ಕೌಂತೇಯ ಅಂದರೆ ಕುಂತಿಪುತ್ರ ಎಂದರ್ಥ. ಈ ಚಿತ್ರದಲ್ಲಿ ಕೌಂತೇಯ ಯಾರು ಎಂಬುದೇ ಕುತೂಹಲದ ಸಂಗತಿ. ಮರ್ಡರ್ ಮಿಸ್ಟ್ರಿ ಕಥೆಯನ್ನು ಕೌತುಕವಾಗಿ ತೆಗೆದುಕೊಂಡು ಹೋಗಿದ್ದೇವೆ. ನಿರೂಪಣೆಯಲ್ಲೂ ಭಿನ್ನತೆ ಇದೆ' ಎಂದಿದೆ ಚಿತ್ರತಂಡ.

ಬಜೆಟ್ ₹ 50 ಲಕ್ಷ ಗಳಿಸಿದ್ದು ₹100 ಕೋಟಿ!

ರೀವಾ ರಚ್ಛ

ಸಣ್ಣ ಬಜೆಟ್‌ನ ಸಿನಿಮಾಗಳು ದೊಡ್ಡಮಟ್ಟದ ಯಶಸ್ಸು ಕಾಣುವುದು ಬಲು ವಿರಳ. ಸ್ಟಾರ್ ನಟರಿಲ್ಲದ, ಪ್ಯಾನ್ ಇಂಡಿಯಾ ಮಟ್ಟದಲ್ಲಿ ಪ್ರಚಾರವಿಲ್ಲದ ಸಿನಿಮಾಗಳು ನೂರು ಕೋಟಿ ಕ್ಲಬ್ ಸೇರುವುದು ಬಹಳ ಅಪರೂಪ. ₹50 ಲಕ್ಷ ಬಜೆಟ್‌ನಲ್ಲಿ ನಿರ್ಮಾಣಗೊಂಡ ಗುಜರಾತಿ ಚಿತ್ರ 'ಲಾಲೋ: ಕೃಷ್ಣ ಸದಾ ಸಹಾಯತೇ' ₹100 ಕೋಟಿ ಗಳಿಕೆ ಕಂಡು ದೇಶದ ಚಿತ್ರರಂಗವೇ ಅಚ್ಚರಿಪಡುವಂತೆ ಮಾಡಿದೆ. ಅ.10ರಂದು ತೆರೆಕಂಡ ಚಿತ್ರ ಈಗಲೂ ಗುಜರಾತ್ ಮತ್ತು ದೇಶದ ಹಲವು ಚಿತ್ರಮಂದಿರಗಳಲ್ಲಿ ಯಶಸ್ವಿ ಪ್ರದರ್ಶನ ಕಾಣುತ್ತಿದೆ.

ಕೃಷ್ಣ ಭಕ್ತಿಯ ಜತೆಗೆ ಇವತ್ತಿನ ಕಾಲದ ಡ್ರಾಮಾ ಕಥಾಹಂದರ ಹೊಂದಿರುವ ಚಿತ್ರಕ್ಕೆ ಅಂಕಿತ್ ಸಾಖಿಯಾ ನಿರ್ದೇಶನವಿದೆ. ಸಂಕಷ್ಟದಲ್ಲಿ ಸಿಲುಕಿಕೊಳ್ಳುವ ರಿಕ್ಷಾ ಚಾಲಕನೊಬ್ಬ ಕೃಷ್ಣನ ಆದೇಶದಂತೆ ಹೇಗೆ ಪಾರಾಗಿ ಬರುತ್ತಾನೆ ಎಂಬುದೇ ಚಿತ್ರಕಥೆ. ನಿರ್ಮಾಣ ಸಂಸ್ಥೆ ಹೊರತುಪಡಿಸಿ ಚಿತ್ರತಂಡದಲ್ಲಿ ಬಹುತೇಕರು ಹೊಸಬರು.

ರೀವಾ ರಚ್ಛ, ಶ್ರುಹದ್ ಗೋಸ್ವಾಮಿ, ಕರಣ್ ಜೋಶಿ ಮತ್ತು ಬೇಬಿ ಮಿಷ್ಟಿ ಕಡೇಚಾ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ. ಮೊದಲ ವಾರ ₹33 ಲಕ್ಷ, ಎರಡನೇ ವಾರ ₹27 ಲಕ್ಷ ಮತ್ತು ಮೂರನೇ ವಾರ ₹62 ಲಕ್ಷ ಗಳಿಕೆ ಮಾಡಿಕೊಂಡಿದ್ದ 'ಲಾಲೋ' ಜನರ ಬಾಯಿ ಮಾತಿನಿಂದಲೇ ಯಶಸ್ಸಾಗುತ್ತ ಹೋಯಿತು.

ಶ್ರೀಕೃಷ್ಣ ಬಹುತೇಕ ಗುಜರಾತಿಗಳ ಮನೆದೇವರು. ಕೃಷ್ಣ ಪವಾಡವನ್ನೇ ಆಧುನಿಕ ಸಂಕಷ್ಟಗಳಿಗೆ ಥಳುಕು ಹಾಕಿ ಕಥೆ ಹೆಣೆಯಲಾಗಿದೆ. ಬಾಲಿವುಡ್‌ನ 'ಓಹ್ ಮೈ ಗಾಡ್', ಕನ್ನಡದ 'ಮುಕುಂದ ಮುರಾರಿ' ಚಿತ್ರದ ರೀತಿಯಲ್ಲೇ ದೇವರಿದ್ದಾನೆಯೇ ಎಂಬ ಪ್ರಶ್ನೆಗೆ ಖುದ್ದು ದೇವರೇ ಬಂದು ಉತ್ತರ ನೀಡುವುದೇ ಚಿತ್ರದ ಒಟ್ಟಾರೆ ಕಥೆ. ಚಿತ್ರಕ್ಕೆ ವಿಮರ್ಶಕ ವಲಯದಿಂದ, ಸಾಮಾಜಿಕ ಜಾಲತಾಣಗಳಲ್ಲಿ ಮಿಶ್ರ ಪ್ರತಿಕ್ರಿಯೆ ಇದ್ದರೂ ಚಿತ್ರಮಂದಿರಗಳಿಗೆ ಲಗ್ಗೆ ಇಡುವ ಪ್ರೇಕ್ಷಕರ ಸಂಖ್ಯೆ ಮಾತ್ರ ಕುಸಿಯುತ್ತಿಲ್ಲ.

ಕನ್ನಡದಲ್ಲಿ ಇತ್ತೀಚೆಗೆ 'ಸು ಫ್ರಂ ಸೋ' ಇಂಥದ್ದೆ ಗೆಲುವು ಕಂಡಿತ್ತು. ಆದರೆ ಚಿತ್ರದ ಬಜೆಟ್ ಈ ಚಿತ್ರಕ್ಕಿಂತ ತುಸು ಹೆಚ್ಚಿತ್ತು. ಹಿಂದಿಯ 'ಸೈಯಾರಾ' ಚಿತ್ರ ಕೂಡ ಸ್ಟಾರ್ ನಟರಿಲ್ಲದೆ ₹500 ಕೋಟಿಗಿಂತ ಹೆಚ್ಚು ಗಳಿಕೆ ಕಂಡಿತ್ತು. 2019ರಲ್ಲಿ ತೆರೆಕಂಡ 'ಚಾಲ್ ಜೀವ ಲೈಯೇ' ₹50 ಕೋಟಿ ಗಳಿಕೆ ಕಂಡು, ಈತನಕ ಗರಿಷ್ಠ ಗಳಿಕೆ ಕಂಡ ಗುಜರಾತಿ ಸಿನಿಮಾ ಎನಿಸಿಕೊಂಡಿತ್ತು. ಅದರ ದಾಖಲೆಯನ್ನು 'ಲಾಲೋ' ಮುರಿದು ಹಾಕಿದೆ.

ಸಿಂಬು

ಕೊನೆಗೂ ಸೆಟ್ಟೇರಲು ಸಜ್ಜಾದ 'ಅರಸನ್'

ತಮಿಳು ನಿರ್ದೇಶಕ ವೆಟ್ರಿಮಾರನ್ ಅವರ ಮುಂದಿನ ಸಿನಿಮಾಗಳು ನಿಂತು ಹೋಗುತ್ತಿವೆ ಎಂಬ ಸುದ್ದಿ ಕೆಲ ದಿನಗಳ ಹಿಂದೆ ಹಬ್ಬಿತ್ತು. ಇದೀಗ ಅವರ ಪ್ರಮುಖ ಸಿನಿಮಾವೊಂದರ ಅಪ್‌ಡೇಟ್ ಸಿಕ್ಕಿದ್ದು, ಸಿಂಬು ಜೊತೆಗಿನ 'ಅರಸನ್' ಚಿತ್ರ ಡಿ.8ರಿಂದ ಸೆಟ್ಟೇರಲಿದೆ. ಸೂರ್ಯ ಜೊತೆಗಿನ 'ವಡಿವಾಸಲ್' ಹಾಗೂ ಧನುಷ್ ಜೊತೆಗಿನ 'ವಡ ಚೆನ್ನೈ 2' ಚಿತ್ರಗಳನ್ನು ವೆಟ್ರಿಮಾರನ್ ಘೋಷಿಸಿದ್ದರು. ಆದರೆ ನಿರ್ಮಾಪಕ ಹಾಗೂ ನಿರ್ದೇಶಕರ ನಡುವಿನ ಗೊಂದಲಗಳಿಂದ ವೆಟ್ರಿಮಾರನ್ ನಿರ್ದೇಶನದ ಮುಂದಿನ ಸಿನಿಮಾಗಳು ಈತನಕ ಸೆಟ್ಟೇರಿರಲಿಲ್ಲ. ನಿರ್ಮಾಪಕರ ಷರತ್ತುಗಳೊಂದಿಗೆ ಸಿಂಬು ನಟನೆಯ 'ಅರಸನ್' ಸೆಟ್ಟೇರುತ್ತಿದೆ ಎಂದು ತಮಿಳು ಮಾಧ್ಯಮಗಳು ವರದಿ ಮಾಡಿವೆ.

ಇದೊಂದು ನೈಜ ಘಟನೆ ಆಧಾರಿತ ಸಿನಿಮಾವಾಗಿದ್ದು, ಇದರ ಟೀಸರ್ ಕೆಲ ದಿನಗಳ ಹಿಂದೆ ಬಿಡುಗಡೆಗೊಂಡಿತ್ತು. ಕೊಲೆ ಆಧಾರಿತ ಕಥೆಯಲ್ಲಿ ನಾಯಕ ಕತ್ತಿ ಹಿಡಿದು ಕೊಲ್ಲಲು ಸಿದ್ಧನಾದ ದೃಶ್ಯವನ್ನು ಟೀಸರ್‌ನಲ್ಲಿ ತೋರಿಸಿ, ತಮ್ಮ ಹಿಂದಿನ ಸಿನಿಮಾಗಳಂತೆ ಇದು ಕೂಡ ಕಲ್ಟ್ ಮಾಸ್ ಆ್ಯಕ್ಷನ್ ಸಿನಿಮಾ ಎಂಬ ಸುಳಿವನ್ನು ವೆಟ್ರಿಮಾರನ್ ನೀಡಿದ್ದರು.

ಜಾತಿರಹಿತ ಧರ್ಮಕ್ಕೆ ಮತಾಂತರ ಎಸ್‌ಸಿ/ಎಸ್‌ಟಿ ಕಾಯ್ದೆ ರಕ್ಷಣೆ ಇಲ್ಲ

ಅಲಹಾಬಾದ್ ಹೈಕೋರ್ಟ್‌ನಿಂದ ಮಹತ್ವದ ಆದೇಶ

ಪ್ರಜಾವಾಣಿ ವಾರ್ತೆ

ಲಖನೌ: ಜಾತಿ ವ್ಯವಸ್ಥೆಗೆ ಮಾನ್ಯತೆ ಇಲ್ಲದ ಧರ್ಮಕ್ಕೆ ಮತಾಂತರಗೊಂಡ ವ್ಯಕ್ತಿಗಳಿಗೆ ಎಸ್‌ಸಿ/ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಯ ರಕ್ಷಣಾ ನಿಬಂಧನೆಗಳನ್ನು ವಿಸ್ತರಿಸಲು ಸಾಧ್ಯವಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಆದೇಶ ನೀಡಿದೆ.

ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿರುವ ಪರಿಶಿಷ್ಟ ಜಾತಿಗೆ(ಎಸ್‌ಸಿ) ಸೇರಿದ ಜಿತೇಂದ್ರ ಕುಮಾರ್ ಸಾಹ್ನಿ ಮೇಲೆ ಹಿಂದೂ ದೇವರನ್ನು ಅವಹೇಳನ ಮಾಡಿದ ಕಾರಣ ನೀಡಿ ವಿವಿಧ ವಿಭಾಗಗಳ ಅಡಿಯಲ್ಲಿ ಮೊಕದ್ದಮೆ ಹೂಡಲಾಗಿದೆ. ಅದನ್ನು ಪ್ರಶ್ನಿಸಿ ಜಿತೇಂದ್ರ ಸಲ್ಲಿಸಿದ ಅರ್ಜಿಯನ್ನು ನ್ಯಾಯಮೂರ್ತಿ ಪ್ರವೀಣ್ ಕುಮಾರ್ ಗಿರಿ ನೇತೃತ್ವದ ಏಕಸದಸ್ಯ ಪೀಠ ವಜಾಗೊಳಿಸಿ, ಈ ಮಹತ್ವದ ತೀರ್ಪು ನೀಡಿದೆ.

ತಾನು ಎಸ್‌ಸಿ ಸಮುದಾಯಕ್ಕೆ ಸೇರಿದ್ದು, ಎಸ್‌ಸಿ/ಎಸ್‌ಟಿ ಕಾಯ್ದೆಯಡಿ ರಕ್ಷಣೆ ನೀಡುವಂತೆ ಜಿತೇಂದ್ರ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ಮನವಿ ಮಾಡಿದ್ದರು.

ಕ್ರಿಶ್ಚಿಯನ್ ಧರ್ಮದಲ್ಲಿ ಜಾತಿ ಆಧಾರಿತ ವ್ಯವಸ್ಥೆ ಇಲ್ಲ. ಆದ್ದರಿಂದ ಪರಿಶಿಷ್ಟ ಜಾತಿಯ ವರ್ಗೀಕರಣದ ಪ್ರಕಾರ ವ್ಯಕ್ತಿಯೊಬ್ಬರು ಆ ಧರ್ಮಕ್ಕೆ ಮತಾಂತರಗೊಂಡ ನಂತರ, ಹಿಂದಿದ್ದ ಜಾತಿ ಪ್ರಮಾಣಪತ್ರ ಮಾನ್ಯವಾಗುವುದಿಲ್ಲ ಎಂದು ಕೋರ್ಟ್ ತೀರ್ಪಿನಲ್ಲಿ ವಿವರಿಸಿದೆ.

'ಜಾತಿ ತಾರತಮ್ಯ ಎದುರಿಸಿದ ಸಮುದಾಯಗಳನ್ನು ರಕ್ಷಿಸುವುದು ಎಸ್‌ಸಿ/ಎಸ್‌ಟಿ(ದೌರ್ಜನ್ಯ ತಡೆ) ಕಾಯ್ದೆ ಉದ್ದೇಶವಾಗಿದೆ. ಹಾಗಾಗಿ ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿಗಳು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ತಕ್ಷಣ ತಮ್ಮ ಎಸ್‌ಸಿ ಸ್ಥಾನಮಾನವನ್ನು ಕಳೆದುಕೊಳ್ಳುತ್ತಾರೆ. ಹಾಗಾಗಿ ಈ ಕಾಯ್ದೆಯಲ್ಲಿನ ರಕ್ಷಣಾತ್ಮಕ ನಿಬಂಧನೆಗಳನ್ನು ವಿಸ್ತರಿಸಲಾಗುವುದಿಲ್ಲ' ಎಂದು ಪೀಠ ತಿಳಿಸಿದೆ.

ಅರ್ಜಿದಾರರ ಧರ್ಮದ ಕುರಿತು 3 ತಿಂಗಳೊಳಗೆ ತನಿಖೆ ನಡೆಸಿ. ನಕಲಿ ದಾಖಲೆ ಸೃಷ್ಟಿಸಿರುವುದು ಸಾಬೀತಾದರೆ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಭವಿಷ್ಯದಲ್ಲಿ ಯಾರೂ ಇಂಥ ಪ್ರಮಾಣ ಪತ್ರಗಳನ್ನು ಸಲ್ಲಿಸಬಾರದು ಎಂದು ನ್ಯಾಯಾಲಯವು ಇದೇ ವೇಳೆ ಮಹಾರಾಜ್‌ಗಂಜ್‌ನ ಜಿಲ್ಲಾಧಿಕಾರಿಗೆ ನಿರ್ದೇಶಿಸಿತು.

'ಕಾನೂನು ಅವಕಾಶ ಗಮನಿಸಿ'

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಕಾನೂನು–ಕಾಯ್ದೆ ಪ್ರಕಾರ ಏನೇನು ಅವಕಾಶಗಳಿವೆ ಎಂಬುದನ್ನು ಗಮನಿಸುವಂತೆ ಕೇಂದ್ರ ಸಂಪುಟ ಕಾರ್ಯದರ್ಶಿ, ಉತ್ತರ ಪ್ರದೇಶ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನ್ಯಾಯಾಲಯ ನಿರ್ದೇಶನ ನೀಡಿದೆ.

ಇಂತಹ ಸಂವಿಧಾನ ವಿರೋಧಿ ಚಟುವಟಿಕೆಗಳು ಇನ್ನು ಮುಂದೆ ನಡೆಯದಂತೆ ನೋಡಿಕೊಳ್ಳಬೇಕು. ಇದಕ್ಕಾಗಿ, ನಾಲ್ಕು ತಿಂಗಳ ಒಳಗಾಗಿ, ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಉತ್ತರ ಪ್ರದೇಶದ ಎಲ್ಲ ಜಿಲ್ಲಾಧಿಕಾರಿಗಳಿಗೆ ಹೈಕೋರ್ಟ್ ಸೂಚನೆ ನೀಡಿದೆ. ಅಲ್ಲದೇ, ಕೈಗೊಂಡ ಕ್ರಮಗಳ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಅಥವಾ ಹೆಚ್ಚುವರಿ ಕಾರ್ಯದರ್ಶಿಗಳಿಗೆ ಮಾಹಿತಿ ನೀಡಬೇಕು ಎಂದು ಸೂಚಿಸಿದೆ.

'ಎಸ್‌ಐಟಿ ತನಿಖೆಗೆ ಅವಕಾಶ ನೀಡಿ'

ನವದೆಹಲಿ (ಪಿಟಿಐ): ಕರೂರಿನಲ್ಲಿ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ರ‍್ಯಾಲಿಯಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 41 ಮಂದಿ ಸಾವಿಗೀಡಾದ ಪ್ರಕರಣವನ್ನು ಸಿಬಿಐ ತನಿಖೆಯಿಂದ ಹಿಂದಕ್ಕೆ ಪಡೆದು ಮದ್ರಾಸ್ ಹೈಕೋರ್ಟ್ ರಚಿಸಿರುವ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ತನಿಖೆ ನಡೆಸಲು ಅವಕಾಶ ಮಾಡಿಕೊಡಬೇಕು ಎಂದು ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

'ಸ್ಥಳೀಯ ಪೊಲೀಸರು ಹಾಗೂ ವಿಶೇಷ ತನಿಖಾ ತಂಡದ ಅಧಿಕಾರಿಗಳು ಸಂಪೂರ್ಣವಾಗಿ ಸಮರ್ಥರಾಗಿದ್ದಾರೆ. ನ್ಯಾಯಯುತ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಲಿದ್ದಾರೆ. ಸಿಬಿಐ ಮಧ್ಯ ಪ್ರವೇಶಿಸಲು ಯಾವುದೇ ಅಸಾಧಾರಣ ಪರಿಸ್ಥಿತಿ ಸೃಷ್ಟಿಯಾಗಿಲ್ಲ' ಎಂದು ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದೆ.

'ಆರೋಪಪಟ್ಟಿ ಸಲ್ಲಿಸುವಾಗ ಜಾಗರೂಕರಾಗಿರಿ'

ನವದೆಹಲಿ (ಪಿಟಿಐ): ಬಾಕಿ ಉಳಿದಿರುವ ಸಿವಿಲ್ ವ್ಯಾಜ್ಯಗಳಲ್ಲಿ ಪೊಲೀಸರು ಮತ್ತು ಕ್ರಿಮಿನಲ್ ನ್ಯಾಯಾಲಯಗಳು ಆರೋಪ ನಿಗದಿಪಡಿಸುವಾಗ ಜಾಗರೂಕರಾಗಿರಬೇಕು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ತಿಳಿಸಿದೆ.

'ಸಂಗ್ರಹಿಸಿದ ಸಾಕ್ಷ್ಯಗಳು ಶಿಕ್ಷೆಗೆ ಪೂರಕವಾಗಿವೆಯೇ ಎಂಬ ತನಿಖಾಧಿಕಾರಿಯ ನಿರ್ಣಯದ ಆಧಾರದ ಮೇಲೆ ದೋಷಾರೋಪ ಪಟ್ಟಿ ಸಲ್ಲಿಸುವ ನಿರ್ಧಾರ ಕೈಗೊಳ್ಳಬೇಕು' ಎಂದು ನ್ಯಾಯಮೂರ್ತಿಗಳಾದ ಎಂ.ಎಂ.ಸುಂದರೇಶ್ ನೋಂಗ್ಮಿಕಾಪಂ ಕೋಟೀಶ್ವರ ಸಿಂಗ್ ಮತ್ತು ಮನಮೋಹನ್ ಅವರ ಪೀಠ ತಿಳಿಸಿದೆ.

'ನ್ಯಾಯಾಂಗ ವ್ಯವಸ್ಥೆಯ ದಕ್ಷತೆ ಮತ್ತು ಸಮಗ್ರತೆ ಕಾಪಾಡಿಕೊಳ್ಳುವುದಕ್ಕಾಗಿ, ಪೊಲೀಸರು ಆರೋಪಪಟ್ಟಿ ಸಲ್ಲಿಸುವಾಗ ಮತ್ತು ಕ್ರಿಮಿನಲ್ ನ್ಯಾಯಾಲಯಗಳು ಆರೋಪ ನಿಗದಿಪಡಿಸುವಾಗ ಬಲವಾದ ಶಂಕೆ ಇರುವ ಪ್ರಕರಣಗಳನ್ನು ಮಾತ್ರ ಔಪಚಾರಿಕ ವಿಚಾರಣೆಯ ಹಂತದವರೆಗೆ ಮುಂದುವರಿಸಬೇಕು' ಎಂದು ಪೀಠ ಹೇಳಿದೆ.

ಬಲವಾದ ಶಂಕೆ ವ್ಯಕ್ತವಾಗದ ಪ್ರಕರಣಗಳಲ್ಲಿ ಆರೋಪಪಟ್ಟಿ ಸಲ್ಲಿಸುವುದರಿಂದ ನ್ಯಾಯಾಂಗ ವ್ಯವಸ್ಥೆಗೆ ಅಡ್ಡಿಯುಂಟಾಗುತ್ತದೆ. ಅಲ್ಲದೇ, ಖುಲಾಸೆ ಸಾಧ್ಯತೆಯಿರುವ ಪ್ರಕರಣಗಳಲ್ಲಿ ನ್ಯಾಯಾಲಯದ ಸಮಯ ವ್ಯರ್ಥವಾಗಿಸಲು ಕಾರಣವಾಗುತ್ತದೆ' ಎಂದು ಪೀಠ ಹೇಳಿದೆ.

'ಎರಡು ಹಂತದಲ್ಲಿ ಜನಗಣತಿ– 2027'

ಪ್ರಜಾವಾಣಿ ವಾರ್ತೆ

ನವದೆಹಲಿ: 2027ರ ಜನಗಣತಿಗೆ ಸಂಬಂಧಿಸಿದಂತೆ ಪ್ರಶ್ನಾವಳಿ ರಚಿಸಲಾಗುತ್ತಿದ್ದು, ರಿಜಿಸ್ಟ್ರಾರ್ ಜನರಲ್ ಹಾಗೂ ಜನಗಣತಿ ಆಯುಕ್ತರು ಆ ಪ್ರಶ್ನೆಗಳನ್ನು ಅಂತಿಮಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಜನಗಣತಿ ಸಂದರ್ಭದಲ್ಲೇ ಜಾತಿಗಣತಿಯನ್ನೂ ನಡೆಸಲಾಗುತ್ತದೆ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ಮಂಗಳವಾರ ಮಾಹಿತಿ ನೀಡಿದೆ.

ಜನಗಣತಿಗೆ ಸಂಬಂಧಿಸಿದಂತೆ ಲೋಕಸಭಾ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿ ಹಲವು ಸಂಸದರು ಕೇಳಿದ್ದ ಪ್ರಶ್ನೆಗಳಿಗೆ ಕೇಂದ್ರ ಗೃಹ ಖಾತೆ ಸಹಾಯಕ ಸಚಿವ ನಿತ್ಯಾನಂದ ರಾಯ್ ಅವರು ಲಿಖಿತ ಉತ್ತರ ನೀಡಿದ್ದಾರೆ.

ಪ್ರಶ್ನಾವಳಿಯ ಕರಡು ಪ್ರತಿಯನ್ನು ಪ್ರಕಟಗೊಳಿಸಿ ಸಾರ್ವಜನಿಕರು ಅಥವಾ ಸಾರ್ವಜನಿಕ ಪ್ರತಿನಿಧಿಗಳ ಸಲಹೆ ಪಡೆಯುವಿರೇ ಎಂಬ ಪ್ರಶ್ನೆಗೆ ಉತ್ತರಿಸಿರುವ ರಾಯ್,'ವಿವಿಧ ಸಚಿವಾಲಯಗಳು, ಇಲಾಖೆಗಳು, ಸಂಸ್ಥೆಗಳು, ಜನಗಣತಿ ದತ್ತಾಂಶ ಬಳಕೆದಾರರು ಸೇರಿದಂತೆ ಹಲವು ಪಾಲುದಾರರ ಸಲಹೆಗಳ ಆಧಾರದ ಮೇಲೆ ಪ್ರಶ್ನಾವಳಿಯನ್ನು ಅಂತಿಮಗೊಳಿಸಲಾಗುತ್ತದೆ' ಎಂದು ಹೇಳಿದ್ದಾರೆ.

ಪ್ರಶ್ನಾವಳಿ ಅಂತಿಮಗೊಳಿಸುವ ಮೊದಲು ಅವುಗಳ ಕಾರ್ಯಸಾಧ್ಯತೆಯನ್ನು ಖಾತರಿಪಡಿಸಿಕೊಳ್ಳಲು ಪ್ರಾಯೋಗಿಕ ಗಣತಿ ನಡೆಸಲಾಗಿದೆ ಎಂದೂ ಮಾಹಿತಿ ನೀಡಿದ್ದಾರೆ.

ಇದಲ್ಲದೇ, ಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುತ್ತಿದೆ ಎಂದಿರುವ ಅವರು, ಮನೆಗಣತಿಯನ್ನು 2026ರ ಏಪ್ರಿಲ್ 1ರಿಂದ ಸೆಪ್ಟೆಂಬರ್ 30ರ ಅವಧಿಯಲ್ಲಿ ನಡೆಯಲಿದೆ. ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಅನುಕೂಲವಾಗುವಂತೆ 30 ದಿನಗಳೊಳಗೆ ಈ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ ಎಂದಿದ್ದಾರೆ. ಜತೆಗೆ ಎರಡನೇ ಹಂತದಲ್ಲಿ 2027ರ ಫೆಬ್ರುವರಿಯಲ್ಲಿ ಜನಗಣತಿಯನ್ನು ಆರಂಭಿಸಲಾಗುತ್ತದೆ ಎಂದೂ ತಿಳಿಸಿದ್ದಾರೆ.

ರಣವೀರ್ ಸಿಂಗ್ ವಿರುದ್ಧ ದೂರು

ಮುಂಬೈ: ಇತ್ತೀಚೆಗೆ ನಡೆದ ಗೋವಾ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ 'ಕಾಂತಾರಾ: ಚಾಪ್ಟರ್ 1' ಸಿನಿಮಾದ ಪಾತ್ರವನ್ನು ಅನುಕರಿಸುವ ಮೂಲಕ ಚಾಮುಂಡಿ ದೈವಕ್ಕೆ ಅವಮಾನವೆಸಗಿದ್ದಾರೆ ಎಂದು ಹಿಂದೂ ಜನಜಾಗೃತಿ ಸಮಿತಿಯು ಪಣಜಿ ಪೊಲೀಸ್ ಠಾಣೆಗೆ ದೂರು ನೀಡಿದೆ.

ದೈವಗಳನ್ನು ಅವಮಾನಿಸುವ ಮೂಲಕ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ತಂದಿದ್ದಾರೆ ಎಂದು ಸಮಿತಿ ದೂರಿನಲ್ಲಿ ತಿಳಿಸಿದೆ. ಪ್ರಕರಣವು ವಿವಾದದ ಸ್ವರೂಪ ಪಡೆದ ಬೆನ್ನಲ್ಲೇ, ರಣವೀರ್ ಕ್ಷಮೆಯಾಚಿಸಿದ್ದಾರೆ. 'ಸಿನಿಮಾದಲ್ಲಿ ರಿಷಭ್ ನಟನೆಯನ್ನು ಉಲ್ಲೇಖಿಸುವ ಉದ್ದೇಶವಿತ್ತೇ ಹೊರತು ಅವಮಾನಿಸುವುದಲ್ಲ. ನನ್ನಿಂದ ಬೇರೆಯವರ ನಂಬಿಕೆಗೆ ಧಕ್ಕೆ ಉಂಟಾಗಿದ್ದರೆ, ಕ್ಷಮೆಯಾಚಿಸುತ್ತೇನೆ' ಎಂದಿದ್ದಾರೆ.

'ಇಮ್ರಾನ್‌ಗೆ ಮಾನಸಿಕ ಚಿತ್ರಹಿಂಸೆ'

ಇಸ್ಲಾಮಾಬಾದ್/ಲಾಹೋರ್ (ಪಿಟಿಐ): 'ಜೈಲಿನಲ್ಲಿರುವ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ದೈಹಿಕ ಆರೋಗ್ಯ ಚೆನ್ನಾಗಿದೆ. ಆದರೆ ಅವರನ್ನು ಒಂಟಿಯಾಗಿ ಸೆರೆಯಲ್ಲಿಡುವ ಮೂಲಕ ಮಾನಸಿಕ ಚಿತ್ರಹಿಂಸೆಗೆ ಒಳಪಡಿಸಲಾಗುತ್ತಿದೆ' ಎಂದು ಅವರ ಸಹೋದರಿ ಡಾ. ಉಜ್ಮಾ ಖಾನ್ ಅವರು ಮಂಗಳವಾರ ತಿಳಿಸಿದ್ದಾರೆ.



ಇಮ್ರಾನ್ ಖಾನ್

ರಾವಲ್ಪಿಂಡಿಯ ಅಡಿಯಾಲಾ ಜೈಲಿನಲ್ಲಿ ಇಮ್ರಾನ್ ಖಾನ್ ಅವರನ್ನು ಉಜ್ಮಾ ಖಾನ್ ಭೇಟಿಯಾದ ನಂತರ ಪಾಕಿಸ್ತಾನ್ ತೆಹ್ರೀಕ್ ಇ ಇನ್ಸಾಫ್ (ಪಿಟಿಐ) ಪಕ್ಷವು ಪ್ರಕಟಣೆ ಮೂಲಕ ಈ ವಿಷಯವನ್ನು ತಿಳಿಸಿದೆ.

ಜೈಲಿನಲ್ಲಿರುವ ಮಾಜಿ ಪ್ರಧಾನಿಯನ್ನು ಭೇಟಿಯಾಗಲು ಅವರ ಕುಟುಂಬಸ್ಥರಿಗೆ ಒಂದು ತಿಂಗಳಿನಿಂದ ಅವಕಾಶ ಕೊಡದಿದ್ದರಿಂದ, ಸಾಮಾಜಿಕ ಮಾಧ್ಯಮದಲ್ಲಿ ವಿಭಿನ್ನ ಸ್ವರೂಪದ ಸುದ್ದಿಗಳು ಬಿತ್ತರಗೊಂಡಿದ್ದವು.

'ಇಮ್ರಾನ್ ಖಾನ್ ಅವರನ್ನು ಭೇಟಿಯಾದಾಗ ಕೋಪದಲ್ಲಿದ್ದರು. ಬಹುತೇಕ ಅವಧಿ ನನ್ನನ್ನು ಒಂಟಿಯಾಗಿ ಸೆರೆಯಲ್ಲಿಡುವ ಮೂಲಕ ಮಾನಸಿಕ ಚಿತ್ರಹಿಂಸೆಗೆ ಒಳಪಡಿಸುತ್ತಿದ್ದಾರೆ. ಯಾರೊಂದಿಗೂ ಸಂವಹನ ನಡೆಸಲು ಅವಕಾಶ ನೀಡುತ್ತಿಲ್ಲ ಎಂದು ದೂರಿದರು' ಎಂದು ಉಜ್ಮಾ ಹೇಳಿದ್ದಾರೆ.

'ಕಣ್ಗಾವಲು ಆ್ಯಪ್' ವಿರುದ್ಧ ಕಿಡಿ

ಒಂದನೇ ಪುಟದಿಂದ...

'ಸರ್ಕಾರ ಎಲ್ಲದರ ಮೇಲೂ ನಿಗಾ ಇಡಲಾರಂಭಿಸಿದರೆ ಜನರ ಖಾಸಗಿತನ ಎಲ್ಲಿ ಉಳಿಯುತ್ತದೆ?' ಎಂದು ಅವರು ಆಕ್ಷೇಪಿಸಿದ್ದಾರೆ.

ಕಾಂಗ್ರೆಸ್‌ನ ಹಿರಿಯ ಸಂಸದ ಶಶಿ ತರೂರ್ ಅವರೂ ಸರ್ಕಾರದ ನಡೆಗೆ ಆಕ್ಷೇಪ ವ್ಯಕ್ತಪಡಿಸಿದ್ದು, 'ಪ್ರಜಾಪ್ರಭುತ್ವದಲ್ಲಿ ಯಾವುದೇ ವಿಷಯವನ್ನು ಕಡ್ಡಾಯಗೊಳಿಸುವುದು ಸರಿಯಲ್ಲ. ಅಪ್ಲಿಕೇಷನ್‌ಗಳ ಡೌನ್‌ಲೋಡ್ ವಿಷಯವು ಬಳಕೆದಾರರ ಆಯ್ಕೆಗೆ ಬಿಡುವುದು ಸೂಕ್ತ' ಎಂದು ಅಭಿಪ್ರಾಯಪಟ್ಟಿದ್ದಾರೆ.

'ಇದೇನು ಕಣ್ಗಾವಲು ರಾಜ್ಯವೇ?': 'ಸಂಚಾರ ಸಾಥಿ ಅಳವಡಿಕೆ ವಿಚಾರವು, ಪ್ರತಿ ಮೊಬೈಲ್‌ನಲ್ಲಿ ಅಧಿಕೃತವಾಗಿ 'ಪೆಗಾಸಸ್' ಅಥವಾ ಉತ್ತರ ಕೊರಿಯಾದ 'ರೆಡ್‌ಫ್ಲ್ಯಾಗ್' ಅಪ್ಲಿಕೇಷನ್ ಅಳವಡಿಸಿದಂತೆ ಆಗುತ್ತದೆಯೇ? ಭಾರತ ಈಗ ಕಣ್ಗಾವಲು ಅಥವಾ ಪೊಲೀಸ್ ರಾಜ್ಯವಾಗಿ ಬದಲಾಗಿದೆಯೇ? ಖಾಸಗಿತನ, ಗೋಪ್ಯತೆ ಮತ್ತು ವೈಯಕ್ತಿಕ ಹಕ್ಕುಗಳು ಅಧಿಕೃತವಾಗಿ ಸತ್ತಿವೆಯೇ?' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಪ್ರಶ್ನಿಸಿದ್ದಾರೆ.

'ಖಾಸಗಿತನವು ಜನರ ಜೀವನ ಮತ್ತು ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ಭಾಗವಾಗಿದೆ. ಇದಕ್ಕೆ ಚ್ಯುತಿ ಬಾರದಂತೆ ಸರ್ಕಾರ ನಡೆದುಕೊಳ್ಳಬೇಕು' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಆಗ್ರಹಿಸಿದ್ದಾರೆ.

'ಲಜ್ಜೆಗೆಟ್ಟ ದಾಳಿ– ಎಎಪಿ ಕಿಡಿ': 'ಸರ್ಕಾರದ ಈ ನಡೆಯು ವೈಯಕ್ತಿಕ, ಖಾಸಗಿತನ ಮತ್ತು ಸ್ವಾತಂತ್ರ್ಯದ ಮೇಲಿನ ಲಜ್ಜೆಗೆಟ್ಟ ದಾಳಿಯಾಗಿದೆ' ಎಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಹರಿಹಾಯ್ದಿದ್ದಾರೆ.

'ಸರ್ಕಾರ ಹೊರಡಿಸಿರುವ ಅಧಿಸೂಚನೆಯಲ್ಲಿ ಅಪ್ಲಿಕೇಷನ್ ಅನ್ನು ಅಳಿಸುವ ಕುರಿತು ಯಾವುದೇ ಉಲ್ಲೇಖವಿಲ್ಲ' ಎಂದಿದ್ದಾರೆ.

ಈ ಕುರಿತು ಸಿಪಿಐ(ಎಂ) ರಾಜ್ಯಸಭಾ ಸದಸ್ಯ ಜಾನ್ ಬ್ರಿಟ್ಟಾಸ್ ಅವರು ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರಿಗೆ ಪತ್ರ ಬರೆದಿದ್ದು, 'ಆ್ಯಪ್ ಅನ್ನು ಕಡ್ಡಾಯವಾಗಿ ಅಳವಡಿಸಿದ ಬಳಿಕ, ಅದನ್ನು ಅಳಿಸಲು ಅನುಮತಿ ನೀಡಿದರೂ, ಮೊಬೈಲ್ ಫೋನ್ ನಿರಂತರ ಡಿಜಿಟಲ್ ಮೇಲ್ವಿಚಾರಣೆಯ ಸಂಭಾವ್ಯ ಸಾಧನವಾಗಿ ಪರಿವರ್ತನೆಯಾಗಿರುತ್ತದೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಆ್ಯಪ್ ಅಳವಡಿಕೆಗೆ ಒಪ್ಪದ ಆ್ಯಪಲ್ ಚರ್ಚೆಗೆ ಮುಂದಾದ ಸ್ಯಾಮ್ಸಂಗ್

ಒಂದನೇ ಪುಟದಿಂದ...

'ಸಂಚಾರ ಸಾಥಿ ಆ್ಯಪ್ ಅಳವಡಿಸುವುದಕ್ಕೆ ಸಂಬಂಧಿಸಿದ ಆದೇಶದ ಬಗ್ಗೆ ಆ್ಯಪಲ್ ಕಂಪನಿಯು ತನ್ನ ನಿಲುವನ್ನು ತಿಳಿಸಲಿದೆ. ಸರ್ಕಾರದ ಆದೇಶವನ್ನು ಈಗಿನ ರೂಪದಲ್ಲಿ ಜಾರಿಗೆ ತರಲು ಕಂಪನಿಗೆ ಸಾಧ್ಯವಾಗಲಿಕ್ಕಿಲ್ಲ' ಎಂದು ಮೂಲವೊಂದು ತಿಳಿಸಿದೆ.

ಸರ್ಕಾರದ ಆದೇಶದ ಪ್ರಕಾರ, ಆದೇಶ ಬಂದ 90 ದಿನಗಳ ನಂತರದಲ್ಲಿ ಭಾರತದಲ್ಲಿ ತಯಾರಾಗುವ ಹಾಗೂ ಭಾರತಕ್ಕೆ ಆಮದಾಗುವ ಎಲ್ಲ ಫೋನ್‌ಗಳು ಈ ಆ್ಯಪ್ ಹೊಂದಿರಬೇಕು. ಆದೇಶವನ್ನು ಪಾಲಿಸಿರುವ ಬಗ್ಗೆ ಎಲ್ಲ ಮೊಬೈಲ್ ತಯಾರಿಕಾ ಕಂಪನಿಗಳು ದೂರಸಂಪರ್ಕ ಇಲಾಖೆಗೆ 120 ದಿನಗಳ ಒಳಗೆ ವರದಿ ಮಾಡಿಕೊಳ್ಳಬೇಕು.

ಸ್ಯಾಮ್ಸಂಗ್ ಕಂಪನಿಯು ಆದೇಶದ ಬಗ್ಗೆ ಪರಿಶೀಲನೆ ನಡೆಸುತ್ತಿದೆ, ಅದು ಕೂಡ ಆದೇಶದ ಪಾಲನೆಗೆ ಮೊದಲು ಅದರ ಬಗ್ಗೆ ಸರ್ಕಾರದ ಜೊತೆ ಚರ್ಚಿಸಬಹುದು ಎಂದು ಮೂಲಗಳು ತಿಳಿಸಿವೆ.

ಮೊಬೈಲ್ ಫೋನ್‌ಗಳನ್ನು ಬಳಸಿ ನಡೆಸುವ ವಂಚನೆ ಕೃತ್ಯಗಳನ್ನು ತಡೆಯಲು ಸಂಚಾರ ಸಾಥಿ ಆ್ಯಪ್ ಅಳವಡಿಕೆಯು ಸರಿಯಾದ ಕ್ರಮ ಎಂದು ಬಿಎಸ್‌ಎನ್‌ಎಲ್ ಕಂಪನಿಯ ಮಾಜಿ ಸಿಎಂಡಿ ಹಾಗೂ ಲಾವಾ ಇಂಟರ್‌ನ್ಯಾಷನಲ್ ಕಂಪನಿಯ ಸ್ವತಂತ್ರ ನಿರ್ದೇಶಕ ಅನುಪಮ್ ಶ್ರೀವಾಸ್ತವ ಹೇಳಿದ್ದಾರೆ.

ಗೃಹ ವ್ಯವಹಾರಗಳ ರಾಜ್ಯ ಸಚಿವ ನಿತ್ಯಾನಂದ ರಾಯ್ ಲಿಖಿತ ಉತ್ತರ

'ಎನ್‌ಐಎ, ಐಐಆರ್‌ಸಿ ಈಗ ಸಿಟಿಆರ್‌ಸಿ'

ನವದೆಹಲಿ (ಪಿಟಿಐ): 'ಕೇಂದ್ರ ಸರ್ಕಾರವು ರಾಷ್ಟ್ರೀಯ ತನಿಖಾ ಸಂಸ್ಥೆಯಲ್ಲಿರುವ (ಎನ್‌ಐಎ) ಐಎಸ್ ತನಿಖಾ ಸಂಶೋಧನಾ ಘಟಕದ (ಐಐಆರ್‌ಸಿ) ವ್ಯಾಪ್ತಿಯನ್ನು ಇತರ ಭಯೋತ್ಪಾದನಾ ಕ್ಷೇತ್ರಕ್ಕೂ ವಿಸ್ತರಿಸಿದೆ. ಅದನ್ನು ಭಯೋತ್ಪಾದನಾ ನಿಗ್ರಹ ಸಂಶೋಧನಾ ಘಟಕ (ಸಿಟಿಆರ್‌ಸಿ) ಎಂದು ಮರುನಾಮಕರಣ ಮಾಡಿದೆ' ಎಂದು ಗೃಹ ವ್ಯವಹಾರಗಳ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ಸಂಸತ್‌ಗೆ ಮಂಗಳವಾರ ತಿಳಿಸಿದರು.

ನಿತ್ಯಾನಂದ

ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಸಚಿವರು, 'ಎನ್‌ಐಎನಲ್ಲಿ ಮಾನವ ಕಳ್ಳಸಾಗಣೆ ವಿರೋಧಿ ವಿಭಾಗ (ಎಎಚ್‌ಟಿಡಿ), ಸೈಬರ್ ಭಯೋತ್ಪಾದನಾ ವಿರೋಧಿ ವಿಭಾಗ (ಎಸಿಟಿಡಿ), ಹಣಕಾಸು ಕ್ರಿಯಾ ಕಾರ್ಯಪಡೆ (ಎಫ್‌ಎಟಿಎಫ್), ಹಣಕಾಸು ವಿಶ್ಲೇಷಣಾ ಘಟಕ (ಎಫ್‌ಎಯು) ಮತ್ತು ಕಾನೂನು ತಜ್ಞರನ್ನು ಒಳಗೊಂಡ ವಿಶೇಷ ವಿಭಾಗಗಳನ್ನು ರಚಿಸಲಾಗಿದೆ' ಎಂದು ಹೇಳಿದರು.

'ದೊಡ್ಡ ದತ್ತಾಂಶ ವಿಶ್ಲೇಷಣೆಯನ್ನು ಸಕ್ರಿಯಗೊಳಿಸಲು, ಮೇಲ್ವಿಚಾರಣೆಯನ್ನು ಬಲಪಡಿಸಲು, ವಿವಿಧ ತನಿಖಾ ಪ್ರಕ್ರಿಯೆಗಳು ಮತ್ತು ಕಾರ್ಯವಿಧಾನಗಳ ಯಾಂತ್ರೀಕೃತಗೊಳಿಸುವಿಕೆ, ಡಿಜಿಟಲೀಕರಣವನ್ನು ಸುಗಮಗೊಳಿಸಲು ಎನ್‌ಐಎನಲ್ಲಿ ರಾಷ್ಟ್ರೀಯ ಭಯೋತ್ಪಾದನಾ ದತ್ತಾಂಶ ಕ್ರೋಡೀಕರಣ ಮತ್ತು ವಿಶ್ಲೇಷಣಾ ಕೇಂದ್ರವನ್ನು ಸ್ಥಾಪಿಸಲಾಗಿದೆ' ಎಂದು ಹೇಳಿದರು.

'ಸರ್ಕಾರವು 2018ರ ಜನವರಿಯಲ್ಲಿ ಎನ್‌ಐಎನಲ್ಲಿ ಐಎಸ್ ತನಿಖಾ ಸಂಶೋಧನಾ ಘಟಕವನ್ನು ರಚಿಸಿತ್ತು. ಅದರ ವ್ಯಾಪ್ತಿಯನ್ನು ಇತರ ಭಯೋತ್ಪಾದನಾ ಕ್ಷೇತ್ರಗಳಿಗೆ ವಿಸ್ತರಿಸಿದೆ' ಎಂದು ರಾಯ್ ತಿಳಿಸಿದರು.

ಎನ್‌ಐಎಯನ್ನು ಬಲಪಡಿಸಲು ತೆಗೆದುಕೊಂಡ ಕ್ರಮಗಳ ವಿವರಗಳನ್ನು ನೀಡಿದ ಅವರು, 'ಸಂಸ್ಥೆಯು ಪ್ರಸ್ತುತ ಒಟ್ಟು 1,901 ಮಂಜೂರಾದ ಹುದ್ದೆಗಳನ್ನು ಹೊಂದಿದ್ದು, ಅವುಗಳಲ್ಲಿ 769 ಹುದ್ದೆಗಳನ್ನು ಕಳೆದ ಐದು ವರ್ಷಗಳಲ್ಲಿ ಭರ್ತಿ ಮಾಡಲಾಗಿದೆ' ಎಂದು ಹೇಳಿದರು.

'ಸ್ವದೇಶಿ ಜಿಪಿಎಸ್ ವ್ಯವಸ್ಥೆ ಇಂದಿನ ತುರ್ತು'

ನವದೆಹಲಿ: ಭಾರತದ ವಿಮಾನ ನಿಲ್ದಾಣಗಳಲ್ಲಿ ಜಿಪಿಎಸ್ ವಂಚನೆಯ ಘಟನೆಗಳ ಹಿನ್ನೆಲೆಯಲ್ಲಿ, ಅಮೆರಿಕದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ಸ್ವದೇಶಿ ನಿರ್ಮಿತ ಜಿಪಿಎಸ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದು ಇಸ್ರೊದ ರಾಷ್ಟ್ರೀಯ ದೂರ ಸಂವೇದಿ ಕೇಂದ್ರದ ನಿರ್ದೇಶಕ ಪ್ರಕಾಶ್ ಚೌಹಾಣ್ ಬಲವಾಗಿ ಪ್ರತಿಪಾದಿಸಿದ್ದಾರೆ.

'ಜಿಯೋಸ್ಮಾರ್ಟ್ ಇಂಡಿಯಾ ಸಮ್ಮೇಳನ ಮತ್ತು ಎಕ್ಸ್‌ಪೋ'ದಲ್ಲಿ ನಡೆದ ಸಂವಾದದಲ್ಲಿ ಮಾತನಾಡಿದ ಅವರು, 'ಪ್ರಸ್ತುತ ಭೌಗೋಳಿಕ ರಾಜಕೀಯ ಸನ್ನಿವೇಶದಲ್ಲಿ ಸ್ಥಳಗಳು, ದಿಕ್ಕುಗಳು ಮತ್ತು ನೈಜ ಸಮಯಗಳ ಸೇವೆಗಾಗಿ ನಮ್ಮದೇ ಆದ ಉಪಗ್ರಹಗಳ ವ್ಯವಸ್ಥೆಯನ್ನು ಹೊಂದಿರುವುದು ಇಂದಿನ ತುರ್ತು' ಎಂದು ಹೇಳಿದ್ದಾರೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ನೋಂದಣಿ ಕಚೇರಿ: 30/1, 1ನೇ ಮತ್ತು 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತ ನಗರ, ಬೆಂಗಳೂರು– 560051.
ಇ–ಮೇಲ್: dgm3bswml@gmail.com

ಸಂಖ್ಯೆ: :ಬೆಂ.ಘ.ನಿ.ನಿ/DGM-3/ಪಿಆರ್/687/2025–26 ದಿನಾಂಕ: 02.12.2025

ಆಸಕ್ತಿ ಅಭಿವ್ಯಕ್ತಿ ಆಹ್ವಾನಿಸಲು ಪ್ರಕಟಣೆ

ಕೇಂದ್ರ ಸರ್ಕಾರದ ವಸತಿ ಮತ್ತು ನಗರ ಸಚಿವಾಲಯ ವತಿಯಿಂದ ನಿರ್ವಹಿಸಲಾಗುತ್ತಿರುವ ಸ್ವಚ್ಛ ಭಾರತ ಅಭಿಯಾನ 2.0 ರಡಿಯಲ್ಲಿ ಸಮರ್ಪಕ ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿ ಬರುವ 5 ನಗರ ಪಾಲಿಕೆಗಳಲ್ಲಿ 03 ವರ್ಷಗಳ ಅವಧಿಗೆ ಪೂರ್ಣ ಸಮಯದ ಪಾತ್ರದ ಅಡಿಯಲ್ಲಿ IEC ಚಟುವಟಿಕೆಗಳನ್ನು ಕೈಗೊಳ್ಳಲು Day-NULM ಯೋಜನೆಯಡಿ ನೊಂದಾಯಿತ SHG ಸದಸ್ಯರಿಂದ 'ಆಸಕ್ತಿ ಅಭಿವ್ಯಕ್ತ' ಯನ್ನು ದಿನಾಂಕ: ರಂದು ಆಹ್ವಾನಿಸಿದ್ದು, Day-NULM ನಲ್ಲಿ ನೋಂದಾಯಿಸಿಕೊಂಡಿರುವ ಆಸಕ್ತ SHG ಸದಸ್ಯರು ತಮ್ಮ ಆಸಕ್ತಿಯ ಅಭಿವ್ಯಕ್ತಿಯನ್ನು **https://www.bbmp.gov.in** ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ ದಿನಾಂಕ: 16.12.2025 ರ ಸಂಜೆ 5:00 ಗಂಟೆಯ ಒಳಗಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ ಕಛೇರಿ ವಿಳಾಸ: # 30/1, 3rd Floor, BBMP Building, Thimmaiah Road, Millers Tank Bund Area, VasanthNagar, Bengaluru- 560051 ಇಲ್ಲಿಗೆ ಸಲ್ಲಿಸಲು ಅವಧಿಯನ್ನು ವಿಸ್ತರಿಸಿದೆ. Terms of Reference (TOR), Template for submission of TOR, Endorsement Form, ಮತ್ತಿತರೆ ವಿವರಗಳನ್ನು **https://www.bbmp.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಆಸಕ್ತ SHG ಸದಸ್ಯರು 1) ಗುರುತಿನ ಪುರಾವೆ, 2) ವಿಳಾಸದ ಪುರಾವೆ, 3) ಅರ್ಹತಾ ಪಟ್ಟಿಯಲ್ಲಿ ನೋಂದಾಯಿಸಿಕೊಂಡಿರುವುದಕ್ಕೆ ದಾಖಲೆಗಳು, 4) ಶೈಕ್ಷಣಿಕ ಅರ್ಹತೆ & 5) Day-NULM ಹಿಂಬರಹ / ದೃಢೀಕರಣ ಪತ್ರದ ನಮೂನೆಯನ್ನು ಸಹ ಲಗತ್ತಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳನ್ನು ಅವರ ಕೌಶಲ್ಯವನ್ನು ನಿರ್ಣಯಿಸಲು ವಿಷಯದ ಬಗ್ಗೆ ತಿಳುವಳಿಕೆಗಾಗಿ ಸಂದರ್ಶನಕ್ಕೆ ಕರೆಯಲಾಗುವುದು.

ಕ್ರ. ಸಂ.	ವಿವರ	ಅರ್ಜಿ ಸಲ್ಲಿಸಲು ಅರ್ಹತೆ
1	ಸಮುದಾಯ ಸಂಚಾಲಕರು (COMMUNITY MOBILIZER)	(1) ಎಸ್.ಎಸ್.ಎಲ್.ಸಿ. / 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಕಡ್ಡಾಯವಾಗಿ ಕನ್ನಡ ಭಾಷಾ ಜ್ಞಾನದ ಜೊತೆಗೆ ಕೆಲಸ ನಿರ್ವಹಿಸುವವರಿಗೆ ಆದ್ಯತೆ. (2) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ Day-NULM ಶಾಖೆಯಲ್ಲಿ ನೋಂದಾಯಿತ ಸ್ವ–ಸಹಾಯ ಗುಂಪಿನ ಸದಸ್ಯರಾಗಿರಬೇಕು (SHG) (3) ಅರ್ಜಿದಾರರು MS Office ಮತ್ತು MS Excel ಕಂಪ್ಯೂಟರ್ ಸಾಕ್ಷರತೆಯನ್ನು ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಹೊಂದಿರಬೇಕು. (4) ಐ.ಇ.ಸಿ. ಕ್ಷೇತ್ರದಲ್ಲಿ ಅನುಭವವಿರುವ ಅರ್ಜಿದಾರರಿಗೆ ಅಥವಾ ಕರ್ನಾಟಕದಲ್ಲಿನ ನಗರ ಸ್ಥಳೀಯ ಸಂಸ್ಥೆಗಳು ಅಥವಾ ಗ್ರಾಮ ಪಂಚಾಯತ್‌ಗಳೊಂದಿಗೆ ಸಂವಹನ ಕಾರ್ಯಗಳಲ್ಲಿ ತೊಡಗಿಸಿಕೊಂಡ ಅನುಭವ ಇರುವವರಿಗೆ ಆದ್ಯತೆ ನೀಡಲಾಗುವುದು. (5) ಸಂಬಂಧಿಸಿದ ವಾರ್ಡ್ ವ್ಯಾಪ್ತಿಯಲ್ಲಿ ವಾಸವಿರುವ ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–3,
ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು.

ವಾಸಾಸಂಇ/ವಾ.ಪ್ರ/4164/ಶಿರಡಿ ಸಾಯಿ/2025–26

ಭಾರತಕ್ಕೆ ಸರಣಿ ಗೆಲುವಿನ ತವಕ

ದಕ್ಷಿಣ ಆಫ್ರಿಕಾ ವಿರುದ್ಧ 2ನೇ ಪಂದ್ಯ ಇಂದು
● ರೋ–ಕೊ ಮೇಲೆ ಹೆಚ್ಚಿದ ಅವಲಂಬನೆ

ರಾಯಪುರ (ಪಿಟಿಐ): ಭಾರತದ ಡ್ರೆಸಿಂಗ್ ರೂಮ್ ವಾತಾವರಣ ಹಿತಕರವಾಗಿಲ್ಲ ಎಂಬ ಮಾತುಗಳು ಈಗ ಬಲವಾಗಿ ಕೇಳಿಬರುತ್ತಿವೆ. ಅವೇನೇ ಇರಲಿ, ವೀರೋಚಿತ ಆಟವಾಡುವ ದಕ್ಷಿಣ ಆಫ್ರಿಕಾ ತಂಡವನ್ನು ಬುಧವಾರ ನಡೆಯಲಿರುವ ಎರಡನೇ ಏಕದಿನ ಪಂದ್ಯದಲ್ಲಿ ಸೋಲಿಸಿ ಸರಣಿ ಗೆಲ್ಲಲು ತಂಡವು ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಆಟವನ್ನು ಅವಲಂಬಿಸಿದೆ.

ತೆಂಬಾ ಬವುಮಾ

ಉತ್ತಮ ಫಾರ್ಮಿನಲ್ಲಿರುವ ಕೊಹ್ಲಿ ಅವರು ರಾಂಚಿಯಲ್ಲಿ ನಡೆದ ಮೊದಲ ಪಂದ್ಯದಲ್ಲಿ 52ನೇ ಏಕದಿನ ಶತಕ ಬಾರಿಸಿದ್ದರು. ರೋಹಿತ್ ಅಧಿಕಾರಯುತ 57 ರನ್ ಬಾರಿಸಿ ಆ ಪಂದ್ಯದಲ್ಲಿ ಭಾರತ ಗೆಲ್ಲಲು ಮಹತ್ವದ ಕಾಣಿಕೆ ನೀಡಿದ್ದರು. ಹರಿಣಗಳ ಪಡೆ ಕೊನೆಯಲ್ಲಿ ತೋರಿದ ಹೋರಾಟವನ್ನು ಅಡಗಿಸಲು ಆತಿಥೇಯ ತಂಡದ ಬೌಲರ್‌ಗಳು ಸಾಹಸ ಪಡಬೇಕಾಯಿತು.

2027ರ ಏಕದಿನ ವಿಶ್ವಕಪ್‌ಗೆ ಎರಡು ವರ್ಷಗಳಿದ್ದು, ಕೊಹ್ಲಿ ಮತ್ತು ರೋಹಿತ್ ಅವರು ಪ್ರತಿಯೊಂದು ಪಂದ್ಯದಲ್ಲೂ ತಮ್ಮ ಫಿಟ್ನೆಸ್ ಮತ್ತು ಫಾರ್ಮ್ ಪ್ರದರ್ಶಿಸುತ್ತಿದ್ದಾರೆ. ಈ ಸವಾಲಿನ ಜತೆಗೆ ಈ ಅನುಭವಿಗಳು, ಮುಖ್ಯ ತರಬೇತುದಾರ ಗೌತಮ್ ಗಂಭೀರ್ ಜೊತೆಗೆ ಹೆಚ್ಚುತ್ತಿದೆ ಎನ್ನಲಾಗಿರುವ ಅಸಮಾಧಾನವನ್ನೂ ಹೋಗಲಾಡಿಸಬೇಕಿದೆ.

ಕ್ರೀಡಾಂಗಣದಾಚೆ ಈ ಬಗ್ಗೆಯೇ ಚರ್ಚೆಗಳು ಜೋರಾಗಿವೆ. ಈ ಬಿಸಿಯನ್ನು ತಣಿಸಲು ಬಿಸಿಸಿಐ ಯಾವುದೇ ಸಂದರ್ಭದಲ್ಲಿ ಮಧ್ಯ ಪ್ರವೇಶಿಸುವ ನಿರೀಕ್ಷೆಯಿದೆ.

ಆಸ್ಟ್ರೇಲಿಯಾ ವಿರುದ್ಧ ಸರಣಿಯ ಕೊನೆಯ ಪಂದ್ಯ ಸೇರಿ ಸತತ ಎರಡು ಪಂದ್ಯಗಳಲ್ಲಿ ಕೊಹ್ಲಿ ಮತ್ತು ರೋಹಿತ್ ಅವರು ಚೆನ್ನಾಗಿಯೇ ಆಡಿದ್ದಾರೆ. ಇದನ್ನು ನೋಡಿದರೆ ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್‌ನಲ್ಲಿ ಈ ಇಬ್ಬರೂ ದಿಗ್ಗಜರು ಆಡಲು ಪ್ರಯತ್ನಿಸುತ್ತಿರುವುದು ಸ್ಪಷ್ಟ.

ವಿಶ್ವಕಪ್‌ನಲ್ಲಿ ಈ ಪ್ರಮುಖ ಆಟಗಾರರಿಬ್ಬರು ಆಡುವ ಬಗ್ಗೆ ಆಯ್ಕೆ ಸಮಿತಿಯ ಮುಖ್ಯಸ್ಥ ಅಜಿತ್ ಅಗರಕರ್ ಮತ್ತು ಗೌತಮ್ ಗಂಭೀರ್ ಅವರು ಖಾತರಿ ನೀಡಿಲ್ಲ. ಬಹುಶಃ ಇದೇ ವಿಷಯ ಈ ಅನುಭವಿ ಆಟಗಾರರ ಮತ್ತು ಗಂಭೀರ್ ನಡುವೆ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿರುವ ಸಂಭವವಿದೆ.

ಭಾರತ ತಂಡದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಪಿಟಿಐ ಚಿತ್ರ

ಆದರೆ ಮೊದಲ ಪಂದ್ಯದಲ್ಲಿ ಗೆಲುವಿನ ಹೊರತಾಗಿಯೂ ಭಾರತಕ್ಕೆ ಯೋಚಿಸಬೇಕಾದ ವಿಷಯಗಳು ಇವೆ. ತಂಡ ಸಂಯೋಜನೆ ಇವುಗಳಲ್ಲಿ ಪ್ರಮುಖ. ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಬಹಳಷ್ಟು ಯಶಸ್ಸು ಪಡೆದಿರುವ ಋತುರಾಜ್ ಗಾಯಕವಾಡ ಅವರನ್ನು ರಾಂಚಿಯ ಪಂದ್ಯದಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಆಡಿಸಲಾಯಿತು. ಅವರು ಆ ಸ್ಥಾನಕ್ಕೆ ಹೊಂದಿಕೊಳ್ಳುವಂತೆ ಕಾಣಲಿಲ್ಲ.

ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರಿಗೆ ಇಂಥ ಬದಲಾವಣೆಗಳು ಹೊಸದಲ್ಲ. ಟೆಸ್ಟ್ ಸರಣಿಯಲ್ಲಿ ಅವರಿಗೆ ಇದರ ಅನುಭವವಾಗಿದೆ. ಆದರೆ ಮೊದಲ ಏಕದಿನ ಪಂದ್ಯದಲ್ಲಿ ಐದನೇ ಕ್ರಮಾಂಕದಲ್ಲಿ ಆಡಲಿಳಿದ ಅವರು ರನ್‌ವೇಗ ಹೆಚ್ಚಿಸಬೇಕಾದ ವೇಳೆ ನಿರ್ಗಮಿಸಿದರು. ಬೌಲಿಂಗ್‌ನಲ್ಲೂ ಅವರು ಮಾಡಿದ್ದು ಮೂರೇ ಓವರುಗಳನ್ನು.

ಹರ್ಷಿತ್ ರಾಣಾ ಅವರು ಎರಡು ವಿಕೆಟ್‌ಗಳನ್ನು ಗಳಿಸಿ ಉತ್ತಮ ಆರಂಭ ಪಡೆದರೂ, ನಂತರ ಸಾಕಷ್ಟು ರನ್ ನೀಡಿದರು. ಬೌಲಿಂಗ್‌ನಲ್ಲಿ ಅವರು ಹೆಚ್ಚಿನ ನಿಯಂತ್ರಣ ಸಾಧಿಸಬೇಕಾಗಿದೆ.

ಕುಲದೀಪ್ ಯಾದವ್ ನಾಲ್ಕು ವಿಕೆಟ್‌ಗಳನ್ನು ಪಡೆದರೂ, 68 ರನ್ ಬಿಟ್ಟುಕೊಟ್ಟು ಧಾರಾಳಿ ಎನಿಸಿದರು. ಆದರೆ ಅವರ ವೈವಿಧ್ಯಮಯ ಬೌಲಿಂಗ್ ನಿರ್ಣಾಯಕ ಪಾತ್ರವಹಿಸಿತು.

ದಕ್ಷಿಣ ಆಫ್ರಿಕಾ ಮೊದಲ ಪಂದ್ಯದಲ್ಲಿ ಸೋತರೂ ಹೋರಾಟ ತೋರಿದ ರೀತಿ ಆ ತಂಡದಲ್ಲಿ ಸಾಕಷ್ಟು ವಿಶ್ವಾಸ ತುಂಬಿರಬಹುದು.

349 ರನ್ ಬೆನ್ನಟ್ಟುವಾಗ ಒಂದು ಹಂತದಲ್ಲಿ ಕೇವಲ 11 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡ ತಂಡ ಅಂತಿಮವಾಗಿ ಸೋತಿದ್ದು 17 ರನ್‌ಗಳಿಂದಷ್ಟೇ. ಟೆಸ್ಟ್ ಪಂದ್ಯದ ರೀತಿ, ಏಕದಿನದಲ್ಲೂ ಮಾರ್ಕೊ ಯಾನ್ಸೆನ್ (70, 39ಎ) ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಕಾರ್ಬಿನ್ ಬಾಷ್ (67, 51ಎ) ಅವರೂ ಭಾರತಕ್ಕೆ ಆತಂಕ ಮೂಡಿಸಿದರು. ಮ್ಯಾಥ್ಯೂ ಬ್ರೀಟ್ಝ್‌ಕೆ ಪದಾರ್ಪಣೆ ಪಂದ್ಯದಲ್ಲೇ ಆಕರ್ಷಕ 72 ರನ್ ಬಾರಿಸಿದರು.

ಮೊದಲ ಪಂದ್ಯಕ್ಕೆ ವಿಶ್ರಾಂತಿ ಪಡೆದಿದ್ದ ಪೂರ್ಣಾವಧಿ ನಾಯಕ ತೆಂಬಾ ಬವುಮಾ ಮತ್ತು ಸ್ಪಿನ್ನರ್ ಕೇಶವ ಮಹಾರಾಜ್ ಅವರು ಎರಡನೇ ಪಂದ್ಯಕ್ಕೆ ಹಿಂತಿರುಗುತ್ತಿರುವುದು ತಂಡಕ್ಕೆ ಬಲ ತುಂಬಬಹುದು.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಎಫ್‌ಐಎಚ್ ಜೂನಿಯರ್ ಪುರುಷರ ಹಾಕಿ ವಿಶ್ವಕಪ್
ಕ್ವಾರ್ಟರ್ ಫೈನಲ್‌ಗೆ ಭಾರತ ತಂಡ

ಮದುರೈ (ಪಿಟಿಐ): ಮನ್‌ದೀಪ್ ಸಿಂಗ್ ಮತ್ತು ಶಾರದಾನಂದ ತಿವಾರಿ ಅವರ ಅಮೋಘ ಆಟದ ನೆರವಿನಿಂದ ಭಾರತ ತಂಡವು ಮಂಗಳವಾರ ಎಫ್‌ಐಎಚ್ ಜೂನಿಯರ್ ಪುರುಷರ ಹಾಕಿ ವಿಶ್ವಕಪ್‌ನ ಪಂದ್ಯದಲ್ಲಿ 5–0ರಿಂದ ಸ್ವಿಟ್ಜರ್ಲೆಂಡ್ ತಂಡವನ್ನು ಮಣಿಸಿ, ಅಜೇಯವಾಗಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಹಾಕಿತು.

ಆಡಿರುವ ಮೂರೂ ಪಂದ್ಯಗಳನ್ನು ಗೆದ್ದು 9 ಅಂಕಗಳೊಂದಿಗೆ ಆತಿಥೇಯ ತಂಡವು ಬಿ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು. 20ನೇ ವರ್ಷದ ಜನ್ಮದಿನದ ಸಂಭ್ರಮದಲ್ಲಿದ್ದ ಮನ್‌ದೀಪ್ ಅವರು ಎರಡು ಫೀಲ್ಡ್ ಗೋಲುಗಳ ಕಾಣಿಕೆ ನೀಡಿದರೆ, ತಿವಾರಿ ಅವರು ಎರಡು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗೋಲಾಗಿ ಪರಿವರ್ತಿಸಿದರು. ಮತ್ತೊಂದು ಗೋಲು ಅರ್ಷದೀಪ್ ಸಿಂಗ್ ಅವರಿಂದ ದಾಖಲಾಯಿತು.

ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ತಂಡದ ಆಟಗಾರರು ಎಕ್ಸ್ ಚಿತ್ರ

ಸ್ವಿಟ್ಜರ್ಲೆಂಡ್ ತಂಡವು ಉತ್ತಮ ಆರಂಭ ಪಡೆದು, ಮೊದಲ ನಿಮಿಷದಲ್ಲೇ ಎರಡು ಪೆನಾಲ್ಟಿ ಕಾರ್ನರ್ ಪಡೆಯಿತು. ಆದರೆ, ಭಾರತದ ಆಟಗಾರರು ಗೋಲು ಅವಕಾಶಗಳನ್ನು ವಿಫಲಗೊಳಿಸಿದರು. ಮರು ನಿಮಿಷದಲ್ಲೇ ದಿಲ್‌ರಾಜ್ ಅವರಿಂದ ಪಾಸ್ ಪಡೆದ ಮನ್‌ಪ್ರೀತ್, ಭಾರತ ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು.

ಮನ್‌ಪ್ರೀತ್ ಅವರು 11ನೇ ನಿಮಿಷದಲ್ಲಿ ಮತ್ತೊಮ್ಮೆ ಅಮೋಘವಾಗಿ ಚೆಂಡನ್ನು ಗುರಿ ಸೇರಿಸಿ ಭಾರತದ ಮುನ್ನಡೆಯನ್ನು ದ್ವಿಗುಣಗೊಳಿಸಿದರು. ಅದಾದ ಎರಡನೇ ನಿಮಿಷದಲ್ಲಿ ತಿವಾರಿ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲು ದಾಖಲಿಸಿದರು. ಹೀಗಾಗಿ, ಮೊದಲ ಕ್ವಾರ್ಟರ್‌ನಲ್ಲೇ 3–0 ಮುನ್ನಡೆ ಪಡೆದ ಭಾರತ ತಂಡವು ನಂತರದಲ್ಲಿ ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿತು. ಅರ್ಷದೀಪ್ 28ನೇ ನಿಮಿಷದಲ್ಲಿ ಆಕರ್ಷಕ ರಿವರ್ಸ್ ಸ್ಲ್ಯಾಪ್ ಶಾಟ್ ಮೂಲಕ ಗೋಲು ಗಳಿಸಿ ಭಾರತದ ಮುನ್ನಡೆಯನ್ನು ಹೆಚ್ಚಿಸಿದರು.

ಮೂರನೇ ಕ್ವಾರ್ಟರ್‌ನಲ್ಲಿ ಯಾವುದೇ ತಂಡಕ್ಕೆ ಗೋಲು ಲಭಿಸಲಿಲ್ಲ. ಕೊನೆಯ ಕ್ವಾರ್ಟರ್‌ನಲ್ಲಿ ಭಾರತಕ್ಕೆ ಲಭಿಸಿದ ಐದು ಪೆನಾಲ್ಟಿ ಕಾರ್ನರ್‌ಗಳ ಪೈಕಿ ಒಂದರಲ್ಲಿ ಮಾತ್ರ ಗೋಲು ದಾಖಲಿಸಲು ಸಾಧ್ಯವಾಯಿತು. 54ನೇ ನಿಮಿಷದಲ್ಲಿ ತಿವಾರಿ, ಚೆಂಡನ್ನು ಗುರಿ ಸೇರಿಸಿದರು. ಭಾರತವು ಒಟ್ಟು ಎಂಟು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಕೈಚೆಲ್ಲಿತು.

ರೋಹಿತ್ ನಾಯಕತ್ವ ಭಾರತ ತಂಡ ಕ್ವಾರ್ಟರ್ ಫೈನಲ್‌ನಲ್ಲಿ ಶುಕ್ರವಾರ ಬೆಲ್ಜಿಯಂ ತಂಡವನ್ನು ಎದುರಿಸಲಿದೆ.

ಸ್ಪೇನ್, ಬೆಲ್ಜಿಯಂ ಕಾರ್ಟರ್‌ಗೆ: ಸ್ಪೇನ್ ತಂಡವು 13–0 ಗೋಲುಗಳಿಂದ ನಮೀಬಿಯಾ ತಂಡವನ್ನು ಮಣಿಸಿ ಡಿ ಗುಂಪಿನಲ್ಲಿ ಅಗ್ರಸ್ಥಾನದೊಂದಿಗೆ ಕಾರ್ಟರ್ ಫೈನಲ್‌ಗೆ ಮುನ್ನಡೆಯಿತು.

ಇದೇ ಗುಂಪಿನ ಮತ್ತೊಂದು ಪಂದ್ಯದಲ್ಲಿ ಬೆಲ್ಜಿಯಂ 10-0 ಅಂತರದಿಂದ ಈಜಿಪ್ಟ್ ತಂಡವನ್ನು ಸೋಲಿಸಿ, ಎರಡನೇ ಅತ್ಯುತ್ತಮ ಸ್ಥಾನದೊಂದಿಗೆ ನಾಕೌಟ್‌ಗೆ ಅರ್ಹತೆ ಪಡೆಯಿತು.

ನೆದರ್ಲೆಂಡ್ಸ್ ತಂಡವು 11–0 ಗೋಲುಗಳಿಂದ ಆಸ್ಟ್ರಿಯಾ ತಂಡವನ್ನು ಮಣಿಸಿ ಇ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಕ್ವಾರ್ಟರ್ ಫೈನಲ್‌ಗೆ ಟಿಕೆಟ್ ಪಡೆಯಿತು.

ಜಯದ ಹಾದಿಗೆ ಮರಳಿದ ಕರ್ನಾಟಕ

ಸೈಯದ್ ಮುಷ್ತಾಕ್ ಅಲಿ ಟ್ರೋಫಿ: ದೇವದತ್ತ ಸಿಡಿಲಬ್ಬರ; ಕುಸಿದ ತಮಿಳುನಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವದತ್ತ ಪಡಿಕ್ಕಲ್ ಅವರ ಸಿಡಿಲಬ್ಬರದ ಬ್ಯಾಟಿಂಗ್ ಮುಂದೆ ತಮಿಳುನಾಡು ತಂಡ ದೂಳೀಪಟವಾಯಿತು.

ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ದೇವದತ್ತ 46 ಎಸೆತಗಳಲ್ಲಿ 102 ರನ್ ಗಳಿಸಿದರು. 10 ಬೌಂಡರಿ ಮತ್ತು 6 ಸಿಕ್ಸ್‌ರ್‌ಗಳನ್ನು ಸಿಡಿಸಿದರು. ಅವರ ಬ್ಯಾಟಿಂಗ್ ಭರಾಟೆಯಿಂದಾಗಿ ಕರ್ನಾಟಕ ತಂಡವು 145 ರನ್‌ಗಳ ಭರ್ಜರಿ ಜಯ ಗಳಿಸಿತು. ಡಿ ಗುಂಪಿನಲ್ಲಿ ಕಳೆದೆರಡು ಪಂದ್ಯಗಳಲ್ಲಿ ಸೋತಿದ್ದ ತಂಡವು ಮತ್ತೆ ಗೆಲುವಿನ ಹಾದಿಗೆ ಮರಳಿತು. ಒಟ್ಟು ಎಂಟು ಅಂಕಗಳೊಂದಿಗೆ 3ನೇ ಸ್ಥಾನಕ್ಕೇರಿತು.

ಟಾಸ್ ಗೆದ್ದ ತಮಿಳುನಾಡು ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕರ್ನಾಟಕ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 245 ರನ್ ಗಳಿಸಿತು. ಅದಕ್ಕುತ್ತರವಾಗಿ ತಮಿಳುನಾಡು ತಂಡವು 14.2 ಓವರ್‌ಗಳಲ್ಲಿ 100 ರನ್ ಗಳಿಸಿ ಆಲೌಟ್ ಆಯಿತು. ಸ್ಪಿನ್ನರ್ ಶ್ರೇಯಸ್ ಗೋಪಾಲ್ (21ಕ್ಕೆ3), ವೈಶಾಖ ವಿಜಯಕುಮಾರ್ (7ಕ್ಕೆ2), ಪ್ರವೀಣ ದುಬೆ (15ಕ್ಕೆ3) ಮತ್ತು ಶುಭಾಂಗ್ ಹೆಗ್ಡೆ (19ಕ್ಕೆ2) ಅಮೋಘ ಬೌಲಿಂಗ್ ಮಾಡಿದರು.

ದೇವದತ್ತ ಅಬ್ಬರ: ಆರಂಭಿಕ ಬ್ಯಾಟರ್ ಬಿ.ಆರ್. ಶರತ್ (53; 23ಎ, 4X4, 6X4) ಮತ್ತು ನಾಯಕ ಮಯಂಕ್ ಅಗರವಾಲ್ (24; 15ಎ, 4X4) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 69 ರನ್‌ಗಳು ಹರಿದುಬಂದವು. ಟಿ. ನಟರಾಜನ್ ಎಸೆತದಲ್ಲಿ ಮಯಂಕ್ ಅವರು ಜಗದೀಶನ್‌ಗೆ ಕ್ಯಾಚಿತ್ತು ನಿರ್ಗಮಿಸಿದರು. ಆದರೆ ತಮಿಳುನಾಡು ತಂಡದ ಸಂತಸ ಹೆಚ್ಚು ಸಮಯ ಉಳಿಯಲಿಲ್ಲ. ಕ್ರೀಸ್‌ಗೆ ಬಂದ ಪಡಿಕ್ಕಲ್ ಅವರ ಆಟ ಶುರುವಾಯಿತು. ಒಂದು ಕಡೆ ಶರತ್ ಮತ್ತು ಇನ್ನೊಂದೆಡೆ ದೇವದತ್ತ ಅವರ ಆಟಕ್ಕೆ ಬೌಲರ್‌ಗಳು ಬಸವಳಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 16 ಎಸೆತಗಳಲ್ಲಿ 39 ರನ್ ಸೇರಿದವು. 9ನೇ ಓವರ್‌ನಲ್ಲಿ ಶರತ್ ವಿಕೆಟ್ ಗಳಿಸಿದ ಸೋನು ಯಾದವ್ ಅವರು ಜೊತೆಯಾಟ ಮುರಿದರು.

ದೇವದತ್ತ ಪಡಿಕ್ಕಲ್ ಬ್ಯಾಟಿಂಗ್ ‘ಎಕ್ಸ್’ ಚಿತ್ರ

ಕರುಣ್ ನಾಯರ್ (4 ರನ್) ಬೇಗನೆ ನಿರ್ಗಮಿಸಿದರು. ದೇವದತ್ತ ಅವರೊಂದಿಗೆ ಸೇರಿಕೊಂಡ ಆರ್. ಸ್ಮರಣ್ (46; 29ಎ, 4X3, 6X3) ಕೂಡ ತಂಡದ ಮೊತ್ತ ಬೆಳೆಯಲು ಕಾಣಿಕೆ ನೀಡಿದರು.

ತಮಿಳುನಾಡು ತಂಡದಲ್ಲಿರುವ ಅನುಭವಿ ಬ್ಯಾಟರ್‌ಗಳಾದ ಸಾಯಿ ಸುದರ್ಶನ್, ಎನ್. ಜಗದೀಶನ್ ಹಾಗೂ ಶಾರೂಕ್ ಖಾನ್ ಅವರು ಯಶಸ್ಸು ಕಾಣಲಿಲ್ಲ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 245 (ಬಿ. ಆರ್. ಶರತ್ 53, ಮಯಂಕ್ ಅಗರವಾಲ್ 24, ದೇವದತ್ತ ಪಡಿಕ್ಕಲ್ ಔಟಾಗದೇ 102, ಸ್ಮರಣ್ ರವಿಚಂದ್ರನ್ ಔಟಾಗದೇ 46, ಸೋನು ಯಾದವ್ 34ಕ್ಕೆ2) ತಮಿಳುನಾಡು: 14.2 ಓವರ್‌ಗಳಲ್ಲಿ100 (ತುಷಾರ್ ರಹೇಜಾ 29, ಎನ್. ಜಗದೀಶನ್ 21, ಆರ್. ರಾಜಕುಮಾರ್ 16, ಶ್ರೇಯಸ್ ಗೋಪಾಲ್ 21ಕ್ಕೆ3, ವೈಶಾಖ ವಿಜಯಕುಮಾರ್ 7ಕ್ಕೆ2, ಪ್ರವೀಣ ದುಬೆ 15ಕ್ಕೆ3, ಶುಭಾಂಗ್ ಹೆಗ್ಡೆ 19ಕ್ಕೆ2) ಫಲಿತಾಂಶ: ಕರ್ನಾಟಕ ತಂಡಕ್ಕೆ 145 ರನ್‌ಗಳ ಜಯ. ಪಂದ್ಯಶ್ರೇಷ್ಠ: ದೇವದತ್ತ ಪಡಿಕ್ಕಲ್.

ದೆಹಲಿ ತಂಡಕ್ಕೆ ತ್ರಿಪುರ ಆಘಾತ

ಅಹಮದಾಬಾದ್ (ಪಿಟಿಐ): ದೇಶೀಯ ಕ್ರಿಕೆಟ್‌ನಲ್ಲಿ ದೆಹಲಿ ತಂಡದ ನಿರಾಶಾದಾಯಕ ಪ್ರದರ್ಶನ ಮುಂದುವರಿದಿದೆ. ತ್ರಿಪುರ ತಂಡವು ಮಂಗಳವಾರ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯ ಡಿ ಗುಂಪಿನ ಪಂದ್ಯದಲ್ಲಿ ದೆಹಲಿ ತಂಡಕ್ಕೆ ಆಘಾತ ನೀಡಿತು.

ಈ ಹಿಂದೆ ದೆಹಲಿ ತಂಡವು ರಣಜಿ ಟ್ರೋಫಿಯಲ್ಲಿ ಜಮ್ಮು ಮತ್ತು ಕಾಶ್ಮೀರ ವಿರುದ್ಧ ಆಘಾತಕಾರಿ ಸೋಲು ಅನುಭವಿಸಿತ್ತು. ಇದೀಗ ಸೈಯದ್ ಮುಷ್ತಾಕ್ ಅಲಿ ಟೂರ್ನಿಯಲ್ಲಿ ಐಪಿಎಲ್ ತಾರೆಯರನ್ನು ಒಳಗೊಂಡ ದೆಹಲಿ ತಂಡವು 12 ರನ್‌ಗಳಿಂದ ತ್ರಿಪುರ ವಿರುದ್ಧ ಮುಗ್ಗರಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ತ್ರಿಪುರ ತಂಡವು 5 ವಿಕೆಟ್‌ಗೆ 157 ರನ್ ಗಳಿಸಿತು. ಗುರಿ ಬೆನ್ನಟ್ಟಿದ ದೆಹಲಿ ತಂಡವು 8 ವಿಕೆಟ್‌ಗೆ 145 ರನ್ ಗಳಿಸಲಷ್ಟೇ ಶಕ್ತವಾಯಿತು. ನಾಲ್ಕು ಪಂದ್ಯಗಳ ಪೈಕಿ ಎರಡರಲ್ಲಿ ಗೆದ್ದು, ಮತ್ತೆರಡರಲ್ಲಿ ಸೋತಿರುವ ದೆಹಲಿ ತಂಡವು ಗುಂಪಿನಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ನಾಕೌಟ್ ಹಾದಿಯೂ ಅನಿಶ್ಚಿತತೆಯಿಂದ ಕೂಡಿದೆ.

ವೈಭವ್ ಮತ್ತೊಂದು ಮೈಲಿಗಲ್ಲು

ಕೋಲ್ಕತ್ತ (ಪಿಟಿಐ): 14 ವರ್ಷದ ವೈಭವ್ ಸೂರ್ಯವಂಶಿ ಅವರು ಸೈಯದ್ ಮುಷ್ತಾಕ್ ಅಲಿ ಟೂರ್ನಿಯಲ್ಲಿ ಶತಕ ದಾಖಲಿಸಿದ ಅತಿ ಕಿರಿಯ ಬ್ಯಾಟರ್ ಎಂಬ ಹಿರಿಮೆಗೆ ಪಾತ್ರವಾದರು.

ಸೂರ್ಯವಂಶಿ ಅವರ ಅಮೋಘ ಶತಕದ ಹೊರತಾಗಿಯೂ ಬಿಹಾರ ತಂಡವು ಮಂಗಳವಾರ ಎಲೀಟ್ ಬಿ ಗುಂಪಿನ ಪಂದ್ಯದಲ್ಲಿ ಮಹಾರಾಷ್ಟ್ರ ವಿರುದ್ಧ ಮೂರು ವಿಕೆಟ್‌ಗಳಿಂದ ಪರಾಭವಗೊಂಡಿತು.

ಸೂರ್ಯವಂಶಿ ಅವರು 61 ಎಸೆತಗಳಲ್ಲಿ 108 ರನ್ ಬಾರಿಸಿದರು. ಅವರ ಇನಿಂಗ್ಸ್‌ನಲ್ಲಿ ತಲಾ 7 ಬೌಂಡರಿ ಮತ್ತು ಸಿಕ್ಸರ್‌ಗಳು ಸೇರಿದ್ದವು. ಅವರು 2013ರಲ್ಲಿ ಮಹಾರಾಷ್ಟ್ರದ ವಿಜಯ್ ಜೋಲ್ (18 ವರ್ಷ 111 ದಿನ) ನಿರ್ಮಿಸಿದ್ದ ದಾಖಲೆಯನ್ನು ಮುರಿದರು.

ಮೊದಲು ಬ್ಯಾಟಿಂಗ್ ಮಾಡಿದ ಬಿಹಾರ ತಂಡವು 3 ವಿಕೆಟ್‌ಗೆ 176 ರನ್ ಗಳಿಸಿತ್ತು. ಮಹಾರಾಷ್ಟ್ರ ಇನ್ನೂ ಐದು ಎಸೆತಗಳು ಬಾಕಿ ಇರುವಂತೆ 7 ವಿಕೆಟ್‌ಗೆ 182 ರನ್ ಗಳಿಸಿ ಜಯ ಸಾಧಿಸಿತು.

ಮಿಂಚಿದ ಪಾಂಡ್ಯ

ಹೈದರಾಬಾದ್ (ಪಿಟಿಐ): ಎರಡೂವರೆ ತಿಂಗಳ ನಂತರ ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮರಳಿರುವ ಭಾರತದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಮಂಗಳವಾರ ನಡೆದ ಸೈಯದ್ ಮುಷ್ತಾಕ್ ಅಲಿ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಅಜೇಯ 77 ರನ್ (42ಎ, 7x4, 4x6) ಗಳಿಸಿದರು. ಅವರ ಬ್ಯಾಟಿಂಗ್ ನೆರವಿನಿಂದ ಬರೋಡಾ ತಂಡವು ಏಳು ವಿಕೆಟ್‌ಗಳ ಜಯ ಸಾಧಿಸಿತು.



ಅಭಿಷೇಕ್ ಶರ್ಮಾ (50; 19ಎ) ಮತ್ತು ಅನ್ಮೋಲ್ ಪ್ರೀತ್ ಸಿಂಗ್ (69;32ಎ) ಅವರ ಮಿಂಚಿನ ಅರ್ಧಶತಕಗಳ ನೆರವಿನಿಂದ ಪಂಜಾಬ್ ತಂಡವು ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗೆ 222 ರನ್ ಕಲೆಹಾಕಿತು. ಗುರಿ ಬೆನ್ನಟ್ಟಿದ ಬರೋಡಾ ತಂಡವು 5 ಎಸೆತ ಬಾಕಿ ಇರುವಂತೆ ಮೂರು ವಿಕೆಟ್‌ಗೆ 244 ರನ್ ಗಳಿಸಿ ಜಯ ಗಳಿಸಿತು.

ವಿಜಯ್ ಹಜಾರೆ ಟ್ರೋಫಿ: ವಿರಾಟ್ ಕೊಹ್ಲಿ ಲಭ್ಯ

ನವದೆಹಲಿ (ಪಿಟಿಐ): ಡಿಸೆಂಬರ್ 24ರಂದು ಆರಂಭವಾಗುವ ವಿಜಯ್ ಹಜಾರೆ ಟ್ರೋಫಿಗೆ ಭಾರತದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಲಭ್ಯತೆಯನ್ನು ಖಚಿತಪಡಿಸಿದ್ದಾರೆ ಎಂದು ಡೆಲ್ಲಿ ಮತ್ತು ಜಿಲ್ಲಾ ಕ್ರಿಕೆಟ್ ಸಂಸ್ಥೆ (ಡಿಡಿಸಿಎ) ಅಧ್ಯಕ್ಷ ರೋಹನ್ ಜೇಟ್ಲಿ ತಿಳಿಸಿದ್ದಾರೆ.

37 ವರ್ಷ ವಯಸ್ಸಿನ ಕೊಹ್ಲಿ 2010ರಲ್ಲಿ ಸರ್ವಿಸಸ್ ವಿರುದ್ಧ ಕೊನೆಯ ಬಾರಿ ವಿಜಯ್ ಹಜಾರೆ ಟ್ರೋಫಿ ಪಂದ್ಯ ಆಡಿದ್ದರು. 2024ರಲ್ಲಿ ಟಿ20 ವಿಶ್ವಕಪ್ ಗೆದ್ದ ನಂತರ ಚುಟುಕು ಮಾದರಿಗೆ ವಿದಾಯ ಹೇಳಿದ್ದ ಕೊಹ್ಲಿ ಈ ವರ್ಷದ ಆರಂಭದಲ್ಲಿ ಟೆಸ್ಟ್ ಕ್ರಿಕೆಟ್‌ಗೂ ನಿವೃತ್ತಿ ಪ್ರಕಟಿಸಿದ್ದರು.

ಡೆಲ್ಲಿ ತಂಡವು ಡಿಸೆಂಬರ್ 24ರಂದು ಬೆಂಗಳೂರಿನಲ್ಲಿ ಆಂಧ್ರ ವಿರುದ್ಧ ಆಡುವ ಮೂಲಕ ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಯಲ್ಲಿ ಅಭಿಯಾನ ಆರಂಭಿಸಲಿದೆ.

ಡೆಲ್ಲಿ ತಂಡವು ಆರು ಪಂದ್ಯಗಳನ್ನು ಆಡಲಿದೆ.

ಕೇಂದ್ರೀಯ ಗುತ್ತಿಗೆಯಲ್ಲಿರುವ ಆಟಗಾರರು ದೇಶಿ ಕ್ರಿಕೆಟ್‌ನಲ್ಲಿ ಆಡುವುದನ್ನು ಬಿಸಿಸಿಐ ಕಡ್ಡಾಯಗೊಳಿಸಿದೆ. ಗಾಯಾಳಾದಲ್ಲಿ ಅಥವಾ ರಾಷ್ಟ್ರೀಯ ತಂಡಕ್ಕೆ ಆಡುತ್ತಿದ್ದರೆ ಮಾತ್ರ ವಿನಾಯಿತಿ ಸಿಗುತ್ತದೆ. ರೋಹಿತ್ ಶರ್ಮಾ ಅವರು ಮುಂಬೈ ಪರ ವಿಜಯ್ ಹಜಾರೆ ಟ್ರೋಫಿಯಲ್ಲಿ ಆಡುವ ನಿರೀಕ್ಷೆಯಿದೆ.

ಕೂಚ್ ಬಿಹಾರ್ ಟ್ರೋಫಿ: ರಾಜ್ಯ ತಂಡದ ವಿರುದ್ಧ ಆಂಧ್ರಪ್ರದೇಶ ಹಿಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರ ಪ್ರದೇಶ ತಂಡವು ಕೂಚ್ ಬಿಹಾರ್ ಟ್ರೋಫಿ ಎಲೀಟ್ ಸಿ ಗುಂಪಿನ ಪಂದ್ಯದ ಎರಡನೇ ದಿನವಾದ ಮಂಗಳವಾರ ಮೊದಲ ಇನಿಂಗ್ಸ್‌ನಲ್ಲಿ 122 ಓವರ್‌ಗಳಲ್ಲಿ 415 ರನ್‌ಗಳಿಗೆ ಆಲೌಟ್ ಆಯಿತು. ಇನಿಂಗ್ಸ್ ಆರಂಭಿಸಿದ ಕರ್ನಾಟಕ ತಂಡವು ದಿನದಾಟದ ಅಂತ್ಯಕ್ಕೆ 5 ವಿಕೆಟ್‌ಗಳಿಗೆ 176 ರನ್ ಗಳಿಸಿದ್ದು, ಮೊದಲ ಇನಿಂಗ್ಸ್ ಬಾಕಿ ಚುಕ್ತಾ ಮಾಡಲು ಇನ್ನೂ 239 ರನ್ ಗಳಿಸಬೇಕಿದೆ.

ಆಂಧ್ರಪ್ರದೇಶದ ಅನಂತಪುರದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಮೊದಲ ದಿನ 5 ವಿಕೆಟ್‌ಗಳಿಗೆ 300 ರನ್ ಗಳಿಸಿದ್ದ ಆತಿಥೇಯ ತಂಡವು, ಎ.ಲೋಹಿತ್ (74) ಹಾಗೂ ಪರಮವೀರ್ ಸಿಂಗ್ (70) ಅವರ ಬ್ಯಾಟಿಂಗ್ ಬಲದಿಂದ 400ಕ್ಕೂ ಅಧಿಕ ರನ್ ಗಳಿಸುವಲ್ಲಿ ಯಶಸ್ವಿಯಾಯಿತು. ರತನ್ ಬಿ.ಆರ್. (80ಕ್ಕೆ4) ಹಾಗೂ ಧ್ಯಾನ್ ಎಂ. ಹಿರೇಮಠ (120ಕ್ಕೆ3) ಕರ್ನಾಟಕ ಪರ ಯಶಸ್ವಿ ಬೌಲರ್‌ಗಳೆನಿಸಿದರು.

ಬಳಿಕ, ಪರಿಣಾಮಕಾರಿ ಬೌಲಿಂಗ್ ದಾಳಿ ನಡೆಸಿದ ಆಂಧ್ರ ತಂಡವು ಅನ್ವಯ್ ದ್ರಾವಿಡ್ ಪಡೆಯ ಅಗ್ರಕ್ರಮಾಂಕವನ್ನು ಕಟ್ಟಿಹಾಕಿತು. ಎನ್. ರಾಜೇಶ್ 2 ವಿಕೆಟ್ ಪಡೆದರೆ, ಸಿದ್ದು ಕೆ. ರೆಡ್ಡಿ ಹಾಗೂ ಎ.ಲೋಹಿತ್ ತಲಾ ಒಂದು ವಿಕೆಟ್ ಕಿತ್ತರು. ಕುಸಿತದತ್ತ ಸಾಗುತ್ತಿದ್ದ ರಾಜ್ಯ ತಂಡಕ್ಕೆ ಮಣಿಕಂಠ ಶಿವಾನಂದ (56) ಹಾಗೂ ಸಿದ್ಧಾರ್ಥ್ ಅಖಿಲ್ (ಔಟಾಗದೇ 60) ಆಸರೆಯಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಂಧ್ರ ಪ್ರದೇಶ: 122 ಓವರ್‌ಗಳಲ್ಲಿ 415 (ಹನೀಶ್ ರೆಡ್ಡಿ 104, ಕೆ.ಎಲ್.ಶ್ರೀನಿವಾಸ್ 98, ಪರಮವೀರ್ ಸಿಂಗ್ 70, ಎ.ಲೋಹಿತ್ 74; ರತನ್ ಬಿ.ಆರ್. 80ಕ್ಕೆ4, ಧ್ಯಾನ್ ಎಂ. ಹಿರೇಮಠ 120ಕ್ಕೆ3). ಕರ್ನಾಟಕ: 62 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 176 (ಮಣಿಕಂಠ ಶಿವಾನಂದ 56, ಸಿದ್ಧಾರ್ಥ್ ಅಖಿಲ್ ಔಟಾಗದೇ 60; ಎನ್.ರಾಜೇಶ್ 50ಕ್ಕೆ2).

ಬಜರಂಗ್, ವಿನೇಶ್ ಸಲ್ಲಿಸಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್‌ಗೆ (ಡಬ್ಲ್ಯುಎಫ್‌ಐ) 2023ರಲ್ಲಿ ನಡೆದ ಚುನಾವಣೆಯನ್ನು ನಿಷ್ಪಕ್ಷಪಾತ ಹಾಗೂ ಪಾರದರ್ಶಕವಾಗಿ ನಡೆಸಿಲ್ಲವೆಂದು ಆರೋಪಿಸಿ ಕುಸ್ತಿಪಟುಗಳಾದ ಬಜರಂಗ್ ಪೂನಿಯಾ, ವಿನೇಶ್ ಫೋಗಟ್, ಸಾಕ್ಷಿ ಮಲಿಕ್ ಮತ್ತು ಅವರ ಪತಿ ಸತ್ಯವ್ರತ ಕಾದಿಯಾನ್ ಅವರು ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ವಜಾಗೊಳಿಸಿದೆ.

ವಿಚಾರಣೆಗೆ ಹಾಜರಾಗುವಂತೆ ಪೀಠವು ಹಲವು ಬಾರಿ ಸೂಚಿಸಿದ್ದರೂ, ಅರ್ಜಿದಾರರು ಅದನ್ನು ಉಲ್ಲಂಘಿಸಿದ್ದಾರೆ. ಹೀಗಾಗಿ, ವಿಚಾರಣೆಯನ್ನು ಮುಂದುವರಿಸಲು ಅರ್ಜಿದಾರರಿಗೆ ಆಸಕ್ತಿ ಇದ್ದಂತಿಲ್ಲ ಎಂದು ಅಭಿಪ್ರಾಯಪಟ್ಟ ನ್ಯಾಯಮೂರ್ತಿ ಮಿನೀ ಪುಷ್ಕರಣ ಅವರಿದ್ದ ಪೀಠವು ಅರ್ಜಿಯನ್ನು ವಜಾಗೊಳಿಸಿದೆ.

ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ಆಪ್ತ ಸಂಜಯ್ ಸಿಂಗ್ ಅವರು 2023ರ ಡಿಸೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಡಬ್ಲ್ಯುಎಫ್‌ಐನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಟೇಬಲ್ ಟೆನಿಸ್: ಅಥರ್ವ, ಕೈರಾ ಚಾಂಪಿಯನ್

ಬೆಂಗಳೂರು: ಅಥರ್ವ ನವರಂಗೆ ಹಾಗೂ ಕೈರಾ ಬಾಳಿಗಾ ಅವರು ಡಾ.ಎಂ.ಎಸ್. ರಾಮಯ್ಯ ಸ್ಮರಣಾರ್ಥ ನಡೆಯುತ್ತಿರುವ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 17 ವರ್ಷದೊಳಗಿವರ ವಿಭಾಗದಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯ 17 ವರ್ಷದೊಳಗಿನ ಬಾಲಕರ ವಿಭಾಗದ ಫೈನಲ್‌ನಲ್ಲಿ ಅಥರ್ವ ಅವರು 3–2ರಿಂದ (3–11, 9–11, 11–6, 11–5, 11–6) ಗೌರವ್ ಗೌಡ ವಿರುದ್ಧ ರೋಚಕ ಜಯ ಸಾಧಿಸಿದರು. ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು ಪ್ರಶಸ್ತಿ ಎತ್ತಿಹಿಡಿದರು.

ಕೈರಾ ಬಾಳಿಗಾ (ಎಡ) ಹಾಗೂ ಅಥರ್ವ ನವರಂಗೆ

ಇದಕ್ಕೆ ಮೊದಲು ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ಗೌರವ್ ಅವರು 1–8, 5–11, 11–4, 11–6ರಿಂದ ಆರ್ಯ ಎ. ಜೈನ್ ವಿರುದ್ಧ ಹಾಗೂ ಅಥರ್ವ ಅವರು 11–9, 11–9, 15–13ರಿಂದ ಶುಭಂ ತ್ರಿವೇದಿ ವಿರುದ್ಧ ಗೆಲುವು ಸಾಧಿಸಿದ್ದರು.

ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಕೈರಾ ಅವರು 11–5, 11–9, 6–11, 11–9ರಿಂದ ಹಿಮಾಂಶಿ ಚೌಧರಿ ಅವರನ್ನು ಮಣಿಸಿದರು.

ಐಪಿಎಲ್ ಮಿನಿ ಹರಾಜು: ಹಿಂದೆ ಸರಿದ ಮ್ಯಾಕ್ಸ್‌ವೆಲ್

ಸಿಡ್ನಿ (ಪಿಟಿಐ): ಆಸ್ಟ್ರೇಲಿಯಾದ ಸ್ಟಾರ್ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಇದೇ 16ರಂದು ನಡೆಯಲಿರುವ ಐಪಿಎಲ್ ಮಿನಿ ಹರಾಜಿನಿಂದ ಹಿಂದೆ ಸರಿದಿದ್ದಾರೆ. ಫ್ರ್ಯಾಂಚೈಸಿಗಳು ದುಬಾರಿ ಮೊತ್ತ ನೀಡಿ ಖರೀದಿಸಿದರೂ, ನಿರೀಕ್ಷೆಗೆ ತಕ್ಕಂತೆ ಆಡುವಲ್ಲಿ ಅವರು ವಿಫಲರಾಗಿರುವುದು ಈ ನಿರ್ಧಾರಕ್ಕೆ ಕಾರಣ ಎನ್ನಲಾಗುತ್ತಿದೆ.

‘ಐಪಿಎಲ್ ನನಗೆ ಮರೆಯಲಾಗದ ಹಲವು ನೆನಪುಗಳನ್ನು ಕೊಟ್ಟಿದೆ. ಈ ಟೂರ್ನಿಯು ಒಬ್ಬ ಆಟಗಾರ ಮತ್ತು ವ್ಯಕ್ತಿಯಾಗಿ ನನ್ನನ್ನು ರೂಪಿಸಿದೆ. ಆದರೂ, ಮುಂಬರುವ ಆವೃತ್ತಿಯ ಐಪಿಎಲ್ ಹರಾಜು ಪ್ರಕ್ರಿಯೆಯಿಂದ ಹೊರಗುಳಿಯುವ ‘ದೊಡ್ಡ ನಿರ್ಧಾರ’ ತೆಗೆದುಕೊಂಡಿದ್ದೇನೆ’ ಎಂದು ಮ್ಯಾಕ್ಸ್‌ವೆಲ್ ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಮಂಗಳವಾರ ಬರೆದುಕೊಂಡಿದ್ದಾರೆ.

37 ವರ್ಷ ವಯಸ್ಸಿನ ಮ್ಯಾಕ್ಸ್‌ವೆಲ್ ಅವರು 2012ರ ಆವೃತ್ತಿಯಿಂದಲೂ (2019ರ ಆವೃತ್ತಿಯೊಂದನ್ನು ಹೊರತುಪಡಿಸಿ) ಐಪಿಎಲ್‌ನಲ್ಲಿ ಆಡುತ್ತಿದ್ದಾರೆ. ಈ 13 ಆವೃತ್ತಿಗಳಲ್ಲಿ 141 ಪಂದ್ಯಗಳನ್ನು ಆಡಿದ್ದು 23.89ರ ಸರಾಸರಿಯಲ್ಲಿ 2,189 ರನ್ ಗಳಿಸಿದ್ದಾರೆ. 8.30 ಎಕಾನಮಿಯೊಂದಿಗೆ 41 ವಿಕೆಟ್ ಪಡೆದಿದ್ದಾರೆ.

ಎರಡು ಆವೃತ್ತಿಗಳಲ್ಲಿ ಮಾತ್ರ (2014ರಲ್ಲಿ ಕಿಂಗ್ಸ್ ಇಲೆವೆನ್ ಪಂಜಾಬ್ ಪರ 552 ಹಾಗೂ 2021ರಲ್ಲಿ ಆರ್‌ಸಿಬಿ ಪರ 513) 500ಕ್ಕೂ ಅಧಿಕ ರನ್ ಗಳಿಸಿದ್ದಾರೆ.

ಆದರೆ, 2024 ಮತ್ತು 2025ರ ಆವೃತ್ತಿಗಳಲ್ಲಿ ಕಳಪೆ ಪ್ರದರ್ಶನ ನೀಡಿದ್ದರು. ಆ ಆವೃತ್ತಿಗಳಲ್ಲಿ ಕ್ರಮವಾಗಿ 52 ಮತ್ತು 48 ರನ್ ಮಾತ್ರ ಗಳಿಸಿದ್ದರು.

ಇಂಗ್ಲೆಂಡ್ ಮಾಜಿ ಬ್ಯಾಟರ್ ರಾಬಿನ್ ಸ್ಮಿತ್ ನಿಧನ

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ತಂಡದ ಮಾಜಿ ಬ್ಯಾಟರ್ ರಾಬಿನ್ ಸ್ಮಿತ್ (62) ಅವರು ನಿಧನರಾಗಿದ್ದಾರೆ ಎಂದು ಕೌಂಟಿ ತಂಡ ಹ್ಯಾಂಪ್‌ಶೈರ್ ಮಂಗಳವಾರ ಪ್ರಕಟಿಸಿದೆ.

ದಕ್ಷಿಣ ಆಫ್ರಿಕಾದಲ್ಲಿ ಜನಿಸಿದ್ದ ಸ್ಮಿತ್ ಅವರು 1988 ರಿಂದ 1996ರ ಅವಧಿಯಲ್ಲಿ ಇಂಗ್ಲೆಂಡ್ ಪರ 62 ಟೆಸ್ಟ್ ಪಂದ್ಯಗಳನ್ನು ಆಡಿದ್ದರು. ಆಸ್ಟ್ರೇಲಿಯಾದ ದಕ್ಷಿಣ ಪರ್ತ್‌ನಲ್ಲಿ ನೆಲಸಿರುವ ಅವರು ಸೋಮವಾರ ನಿಧನರಾಗಿದ್ದಾರೆ ಎಂದು ಅವರ ಕುಟುಂಬ ತಿಳಿಸಿದೆ. ಆದರೆ ಸಾವಿಗೆ ಕಾರಣ ಸ್ಪಷ್ಟಪಡಿಸಿಲ್ಲ.

ಮೊದಲ ಆ್ಯಷಸ್ ಟೆಸ್ಟ್‌ಗೆ ಪೂರ್ವಭಾವಿಯಾಗಿ, ಕೋಚ್ ಆ್ಯಂಡ್ರ್ಯೂ ಫ್ಲಿಂಟಾಫ್ ಅವರ ಆಹ್ವಾನದ ಮೇರೆಗೆ ಸ್ಮಿತ್ ಅವರು ಇಂಗ್ಲೆಂಡ್ ಕ್ರಿಕೆಟ್‌ನ ಎರಡನೇ ಸ್ತರದ ತಂಡವಾದ ಇಂಗ್ಲೆಂಡ್ ಲಯನ್ಸ್ ತಂಡವನ್ನು ಭೇಟಿಯಾಗಿದ್ದರು.

ಸ್ಮಿತ್ ಅವರು ಟೆಸ್ಟ್ ಪಂದ್ಯಗಳಲ್ಲಿ ಒಂಬತ್ತು ಶತಕ ಸೇರಿದಂತೆ 43.67ರ ಸರಾಸರಿಯಲ್ಲಿ 4,236 ರನ್ ಗಳಿಸಿದ್ದಾರೆ. 71 ಏಕದಿನ ಪಂದ್ಯಗಳಲ್ಲಿ 39.01ರ ಸರಾಸರಿಯಲ್ಲಿ 24,19 ರನ್ ಗಳಿಸಿದ್ದಾರೆ.

‘ಇಂಗ್ಲೆಂಡ್ ವಿರುದ್ಧ ಎಜ್ಬಾಸ್ಟನ್‌ನಲ್ಲಿ 1993ರಲ್ಲಿ ನಡೆದ ಪಂದ್ಯದಲ್ಲಿ ಅವರು 163 ಎಸೆತಗಳಲ್ಲಿ ಗಳಿಸಿದ ಅಜೇಯ 167 ರನ್‌ಗಳ ಇನಿಂಗ್ಸ್ ಅವಿಸ್ಮರಣೀಯ’ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಮುಖ್ಯಸ್ಥ ರಿಚರ್ಡ್ ಥಾಮ್ಸನ್ ಅವರು ಸ್ಮರಿಸಿದ್ದಾರೆ.

ಉದ್ಯೋಗ ವಾಣಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ನಿರ್ದೇಶಕರು ಕಛೇರಿ, ಪಿಡಬ್ಲ್ಯೂಡಿ ಕಟ್ಟಡ, ಆನಂದ ರಾವ್ ವೃತ್ತ, ಬೆಂಗಳೂರು–560009.

ಸಂ: WCD/ICDS/OTHR/56/2021(602234) ದಿನಾಂಕ: 01-12-2025

ಅಧಿಸೂಚನೆ
ಪೋಷಣ್ ಅಭಿಯಾನ ಯೋಜನೆಯಡಿ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನಿಸುವ ಕುರಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಪೋಷಣ್ ಅಭಿಯಾನ ಯೋಜನೆಯಡಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಹುದ್ದೆಗಳಿಗೆ ನೇಮಿಸಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.
ಅರ್ಜಿ ಸಲ್ಲಿಸಬಯಸುವವರು ಸ್ವವಿವರ (Resume)ದ ಪ್ರತಿ ಹಾಗೂ ಅಗತ್ಯ ದಾಖಲೆಗಳೊಂದಿಗೆ **ದಿನಾಂಕ: 23–12–2025ರ ಸಂಜೆ 5.30ಗಂಟೆಯೊಳಗೆ** ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪಿಡಬ್ಲ್ಯೂಡಿ ಕಟ್ಟಡ, ಆನಂದ ರಾವ್ ವೃತ್ತ, ಬೆಂಗಳೂರು–560009 ಇಲ್ಲಿ ಖುದ್ದಾಗಿ / ಅಂಚೆ ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಇಲಾಖೆಯ **website:https://dwcd.karnataka.gov.in** ನಲ್ಲಿ **(what is new)** ವಿಭಾಗದಲ್ಲಿ ನೋಡಬಹುದು.
ಹೆಚ್ಚಿನ ಮಾಹಿತಿಗಾಗಿ **ದೂರವಾಣಿ : 080–22353780** ನ್ನು ಸಂಪರ್ಕಿಸಬಹುದು.

ಕ್ರ ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ಮಾಸಿಕ ಗೌರವ ಧನ	ವಿದ್ಯಾರ್ಹತೆ / ಅನುಭವ	ವಯಸ್ಸಿನ ಮಿತಿ
1.	ಸಲಹೆಗಾರರು (Capacity Building & BCC)	01	ರೂ. 60,000/–	ವೆಬ್‌ಸೈಟ್‌ನಲ್ಲಿ ಅಳವಡಿಸಿದಂತೆ	60 ವರ್ಷದ ಒಳಗೆ
2.	ಪ್ರಾಜೆಕ್ಟ್ ಅಸೋಸಿಯೇಟ್	01	ರೂ. 25,000/–		
3.	ಸೆಕ್ರೆಟೇರಿಯಲ್ ಅಸಿಸ್ಟೆಂಟ್ (ಡೇಟಾ ಎಂಟ್ರಿ ಆಪರೇಟರ್)	01	ರೂ. 15,000/–		
4.	ಆಫೀಸ್ ಮೆಸೆಂಜರ್	01	ರೂ. 8,000/–		

ಸಹಿ/–
ಜಂಟಿ ನಿರ್ದೇಶಕರು(ಐಸಿಡಿಎಸ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
ವಾಸಾಸಂಇ/ವಾಪ್ರ/ಜಿಎ/4149/2025–26

Bharat Electronics Ltd, Ghaziabad a Navaratna Defence Public Sector Undertaking and India's Premier Professional Electronics Company requires **Fixed Term Engineers for a period of 5 years** as follows:

Designation/ Pay Scale	Qualification/ Discipline	Min. Post Qualfn work exp.	No.of Posts	Reservation of post	Upper age limit for UR as on 01.12.2025	Location of posting
Senior Engineer (E-III) Rs.50,000 –3% - Rs.1,60,000	BE/B.Tech (Electronics)	4 years	02	UR-01 ST-01	35 years	Bangalore
Deputy Engineer (E-II) Rs.40,000 -3%- Rs.1,40,000	BE/B.Tech (Mechanical)	NIL	01	UR-1	28 years	Delhi-NCR
	BE/B.Tech (Electrical)		01	OBC-NCL-1		Odisha (Chandipur)
	BE/B.Tech (Electronics)		03	UR-2 ST-1		Tamil Nadu, Shillong, Delhi-NCR

Last date of Application is 22 Dec 2025. For further details and authentic information on recruitment in BEL, please visit CAREERS link on the official BEL website http://www.bel-india.in only.
DGM (HR&A)

GSSS | GEETHA SHISHU SHIKSHANA SANGHA (R)
INSTITUTE OF ENGINEERING AND TECHNOLOGY FOR WOMEN
KRS Road, Metagalli, Mysuru – 570016
APPOINTMENT NOTIFICATION

Position	Department	Qual.&Exp.
Professor & HoD	MBA	As per AICTE Norms
Associate Professor	CSE/ AI & ML / AI & DS	
Assistant Professor	CSE / AI & ML / AI & DS / EEE	

NON - TEACHING

Position	Dept.	Qualification & Experience
Asst. Lab Instructor	CSE & EEE	Diploma in CSE / ISE / EEE or B.Sc - CS / IT, Experience in Engineering College.
Maintenance Engineer	Electrical	Diploma/B.E in EEE, Experience in Engineering College.

- **Salary:** Based on credentials & experience.
- **Accommodation will be provided for the post of Professor & Associate Professor.**
- Application with latest colour photo and copies of qualification and experience must be sent on or before **10-12-2025** to: **The Secretary, GSSS(R), KRS Road, Metagalli, Mysuru - 570 016.**

Dr. M. Jagannatha Shenoi, President
www.geethashishu.in
Smt. Anupama B. Pandit, Secretary